ಶುಕ್ರವಾರ, ನವೆಂಬರ್ 5, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 307 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಹಂ ವಿಸರ್ಜನೆಯ ಸಂದೇಶ 8

ಸಿನಿಮಾ ಪುರವಣಿ

ಸಕಾರಾತ್ಮಕ ಜಗತ್ತಿಗೆ ತೆರೆದುಕೊಳ್ಳಿ, ತಂತ್ರಜ್ಞಾನದ ಬಳಕೆಯಲ್ಲಿ ಎಚ್ಚರವಿರಲಿ ಎಂದು '100' ಬಾರಿ ಹೇಳಿದ್ದಾರೆ ರಮೇಶ್ ಅರವಿಂದ್



ಇಂದು ಬಿಡುವು

ಆತ್ಮೀಯ ಓದುಗರು, ಏಜೆಂಟರು ಮತ್ತು ಜಾಹೀರಾತುದಾರರಿಗೆ

ದೀಪಾವಳಿ ಹಬ್ಬದ ಶುಭಾಶಯಗಳು

ಬಲಿಪಾಡ್ಯಮಿ ಪ್ರಯುಕ್ತ ಶುಕ್ರವಾರ ನಮ್ಮ ಕಚೇರಿಗೆ ಬಿಡುವು. ಹೀಗಾಗಿ, ಶನಿವಾರದ (6-11-2021) ಸಂಚಿಕೆ ಪ್ರಕಟವಾಗುವುದಿಲ್ಲ.

-ಸಂ.

www.prajavani.net

ಅಂಗನವಾಡಿ ಆರಂಭಿಸಲು ತೀರ್ಮಾನಿಸಿದ ಬೆನ್ನಲ್ಲೆ ಶಿಕ್ಷಣ ಇಲಾಖೆ ಸುತ್ತೋಲೆ

8ರಿಂದ ಎಲ್‌ಕೆಜಿ, ಯುಕೆಜಿ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಾಥಮಿಕ ಹಾಗೂ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಇದೇ 8ರಿಂದ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಆರಂಭಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ರಾಜ್ಯದಾದ್ಯಂತ ಅಂಗನವಾಡಿ ಕೇಂದ್ರಗಳನ್ನು ಇದೇ 8 ರಿಂದ ಆರಂಭಿಸಲು ನಿರ್ಧರಿಸಿದ ಬೆನ್ನಲ್ಲೇ, ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಆರಂಭಿಸುವುದಕ್ಕೆ ಸಂಬಂಧಿಸಿ ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕೊರೊನಾ ಸೋಂಕು ದೃಢ ಪ್ರಮಾಣ ಶೇ 2ಕ್ಕಿಂತ ಕಡಿಮೆ ಇರುವ ತಾಲ್ಲೂಕುಗಳಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 9.30 ರಿಂದ ಅಪರಾಹ್ನ 3.30 ರವರೆಗೆ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ನಡೆಸಲು ವೇಳಾಪಟ್ಟಿ ನಿಗದಿಪಡಿಸಿಕೊಳ್ಳಬೇಕು ಎಂದು ಸುತ್ತೋಲೆಯಲ್ಲಿ ಆಯುಕ್ತರು ತಿಳಿಸಿದ್ದಾರೆ.

ರಾಜ್ಯದಲ್ಲಿ ಕೋವಿಡ್ ದೃಢ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಿದೆ. ಹೀಗಾಗಿ, ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2020-21) 9 ಮತ್ತು 10ನೇ ತರಗತಿಯನ್ನು ಆಗಸ್ಟ್ 23 ರಿಂದ, 6 ರಿಂದ 8ರವರೆಗಿನ ತರಗತಿಗಳನ್ನು ಸೆ. 6ರಿಂದ ಆರಂಭಿಸಲಾಗಿದೆ. ಅ.4ರಿಂದ 6 ರಿಂದ 10ರವರೆಗಿನ ತರಗತಿಗಳು ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿವೆ. 1ರಿಂದ 5ರವರೆಗಿನ ತರಗತಿಯನ್ನು ಅ.25 ರಿಂದ ಆರಂಭಿಸಿ, ಮೊದಲ ಒಂದು ವಾರ ಅರ್ಧ ದಿನ, ನ. 2ರಿಂದ ಪೂರ್ಣ ಪ್ರಮಾಣದಲ್ಲಿ ನಡೆಸಲಾಗುತ್ತಿದೆ.

ಇದೀಗ ಅಂಗನವಾಡಿ ಕೇಂದ್ರಗಳನ್ನು ಮತ್ತು ಪೂರ್ವ ಪ್ರಾಥಮಿಕ ತರಗತಿಗಳನ್ನು ಆರಂಭಿಸಲು ಸರ್ಕಾರ ತೀರ್ಮಾನಿಸಿದ್ದರಿಂದ, ಶೈಕ್ಷಣಿಕ ಚಟುವಟಿಕೆ ಸಂಪೂರ್ಣವಾಗಿ ಆರಂಭಗೊಂಡಂತಾಗಿದೆ.

ಎಲ್‌ಕೆಜಿ, ಯುಕೆಜಿ: ಮಕ್ಕಳಿಗೆ ಮನೆಯಿಂದಲೇ ಉಪಾಹಾರ ಮತ್ತು ಶುದ್ಧ ಕುಡಿಯುವ ನೀರು ಕಳುಹಿಸುವಂತೆ ಪೋಷಕರಿಗೆ ತಿಳಿಸಬೇಕು. ಅವಶ್ಯಕತೆಗೆ ಅನುಸಾರವಾಗಿ ಎಲ್ಲ ಶಾಲೆಗಳಲ್ಲಿ ಶುದ್ಧ ಬಿಸಿನೀರಿನ ವ್ಯವಸ್ಥೆ ಮಾಡಬೇಕು. ಮಕ್ಕಳ ಹಾಜರಾತಿ ಆಧರಿಸಿ ಪ್ರತಿ ತರಗತಿಯಲ್ಲಿ ಪ್ರತ್ಯೇಕವಾಗಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡುವ ಮೂಲಕ ವೈಯಕ್ತಿಕ ಅಂತರ ಕಾಪಾಡಬೇಕು. ಪರಸ್ಪರ ಒಂದು ಮೀಟರ್ ಅಂತರ ಪಾಲಿಸುವಂತೆಯೂ ಎಚ್ಚರ ವಹಿಸಬೇಕು. ಯಾವುದೇ ವಿದ್ಯಾರ್ಥಿಗೆ ಕೆಮ್ಮು, ಜ್ವರ, ನೆಗಡಿ, ಮೂಗು ಸೋರುವುದು, ಮೈ ಕೈ ನೋವು, ಉಸಿರಾಟ ತೊಂದರೆ, ರುಚಿ ಮತ್ತು ವಾಸನೆ ಕಳೆದುಕೊಳ್ಳುವ ಲಕ್ಷಣಗಳು ಇದ್ದರೆ ಅಂಥವರನ್ನು ಪ್ರತ್ಯೇಕವಾಗಿ ಕೊಠಡಿಯಲ್ಲಿ ಇರಿಸಿ, ಪೋಷಕರನ್ನು ಸಂಪರ್ಕಿಸಿ ಮನೆಗೆ ಕಳುಹಿಸಬೇಕು ಎಂದೂ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಮಕ್ಕಳು ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಬಾಯಿ, ಮೂಗು ಮುಚ್ಚಿಕೊಳ್ಳಲು ತಿಳಿಸಬೇಕು. ಯಾವುದಾದರೂ ಮಕ್ಕಳ ಕುಟುಂಬದ ಸದಸ್ಯರು ಕೋವಿಡ್ ಲಕ್ಷಣಗಳಾದ ಜ್ವರ, ಕೆಮ್ಮು, ನೆಗಡಿ, ಗಂಟಲು ನೋವು ಅಥವಾ ಉಸಿರಾಟ ತೊಂದರೆಗಳಿಂದ ಬಳಲುತ್ತಿದ್ದರೆ ಅಂಥ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರದಂತೆ ನೋಡಿಕೊಳ್ಳಬೇಕು. ಯಾವುದಾದರೂ ಮಗುವಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟರೆ ಶಾಲೆಯ ಉಳಿದ ಮಕ್ಕಳಿಗೂ ಕೋವಿಡ್ ಪರೀಕ್ಷೆ ಕಡ್ಡಾಯವಾಗಿ ಮಾಡಿಸಿ, ದೃಢೀಕರಿಸಿಕೊಳ್ಳಬೇಕು. ಕೋವಿಡ್ ರೋಗ ದೃಢಪಟ್ಟರೆ ಶಾಲೆಯನ್ನು ಮುಚ್ಚಿ, ಸ್ಯಾನಿಟೈಸ್ ಮಾಡಿ, ಸ್ಥಳೀಯ ಆರೋಗ್ಯಾಧಿಕಾರಿಗಳ ಮಾರ್ಗದರ್ಶನ ಪಡೆಯಬೇಕು ಎಂದೂ ಸೂಚಿಸಲಾಗಿದೆ.

ಷರತ್ತುಗಳು ಏನೇನು?

- ಪೋಷಕರ ಅನುಮತಿ ಪತ್ರ ಕಡ್ಡಾಯ
- ಶಾಲೆಯ ಪ್ರವೇಶದ್ವಾರದಲ್ಲಿ ಕೋವಿಡ್ ಲಕ್ಷಣ ತಪಾಸಣೆ
- ಸೋಂಕು ಲಕ್ಷಣಗಳಿಲ್ಲದ ಶಿಕ್ಷಕ, ಮಕ್ಕಳಿಗೆ ಮಾತ್ರ ಅವಕಾಶ
- ಶಿಕ್ಷಕರು, ಸಿಬ್ಬಂದಿ ಎರಡು ಡೋಸ್ ಕೋವಿಡ್ ಲಸಿಕೆ ಹಾಕಿಸಿರಬೇಕು
- ಮಕ್ಕಳು, ಶಿಕ್ಷಕರು, ಸಿಬ್ಬಂದಿ ಮಾಸ್ಕ್ ಧರಿಸಬೇಕು
- 50 ವರ್ಷ ದಾಟಿದ ಶಿಕ್ಷಕರು ಹೆಚ್ಚುವರಿಯಾಗಿ ಫೇಸ್ ಶೀಲ್ಡ್ ಧರಿಸಬೇಕು



ಕೋವಿಡ್ ದೃಢ ಪ್ರಮಾಣ ಶೇ 2ಕ್ಕಿಂತ ಕಡಿಮೆ ಇರುವ ತಾಲ್ಲೂಕುಗಳಲ್ಲಿ ಸುರಕ್ಷತಾ ಕ್ರಮಗಳನ್ನು ಪಾಲಿಸಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಆರಂಭಿಸಲು ಅನುಮತಿ ನೀಡಲಾಗಿದೆ

ಬಿ.ಸಿ. ನಾಗೇಶ್
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

ಪುನೀತ್‌ಗೆ 'ಬಸವಶ್ರೀ' ಪ್ರಶಸ್ತಿ



ಚಿತ್ರದುರ್ಗ: ಈಚೆಗೆ ನಿಧನರಾದ ನಟ ಪುನೀತ್ ರಾಜ್‌ಕುಮಾರ್ ಅವರನ್ನು ಪ್ರತಿಷ್ಠಿತ 'ಬಸವಶ್ರೀ' ಪ್ರಶಸ್ತಿಗೆ ಮುರುಘಾಮಠ ಆಯ್ಕೆ ಮಾಡಿದೆ. ಬಸವ ಜಯಂತಿ ದಿನ ಮರಣೋತ್ತರವಾಗಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

'ಬಾಲನಟ, ನಾಯಕ ನಟ, ಹಿನ್ನೆಲೆ ಗಾಯಕ ಹಾಗೂ ನಿರ್ಮಾಪಕರಾಗಿ ಪುನೀತ್ ರಾಜ್‌ಕುಮಾರ್ ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸಾಮಾಜಿಕ ಜಾಗೃತಿಯ ಪ್ರಚಾರಕರಾಗಿಯೂ ಸಮಾಜ ಸೇವೆ ಸಲ್ಲಿಸಿದ್ದಾರೆ. ಮಾನವೀಯ ಮೌಲ್ಯಗಳನ್ನು ಹೊಂದಿದ್ದ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ' ಎಂದು ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪ್ರಶಸ್ತಿಯು ₹ 5 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ. ಶರಣರು ನ.10ರಂದು ಪುನೀತ್ ರಾಜ್‌ಕುಮಾರ್ ಅವರ ಮನೆಗೆ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಲಿದ್ದಾರೆ.

ವಿಶ್ವ ಬಾಕ್ಸಿಂಗ್: ಆಕಾಶ್‌ಗೆ ಕಂಚು



ಬೆಲ್‌ಗ್ರೇಡ್ (ಪಿಟಿಐ): ಭಾರತದ ಆಕಾಶ್ ಕುಮಾರ್ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದರು. ಇದೇ ಮೊದಲ ಬಾರಿ ಅವರು ವಿಶ್ವ ಬಾಕ್ಸಿಂಗ್‌ನಲ್ಲಿ ಸ್ಪರ್ಧಿಸಿದ್ದರು. ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಅವರು ಕಜಕಸ್ತಾನದ ಯುವ ಬಾಕ್ಸರ್ ಮಖಮುದ್ ಸಬೀರ್‌ಖಾನ್ ಎದುರು ಸೋತರು.

14

ಪೆಟ್ರೋಲ್ ₹100.63, ಡೀಸೆಲ್ ₹85.03

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಕೇಂದ್ರ ಸರ್ಕಾರ ಅಬಕಾರಿ ತೆರಿಗೆ ಮತ್ತು ರಾಜ್ಯ ಸರ್ಕಾರ ಮಾರಾಟ ತೆರಿಗೆಯನ್ನು ಇಳಿಕೆ ಮಾಡಿರುವುದರಿಂದ ಪೆಟ್ರೋಲ್ ದರ ಪ್ರತಿ ಲೀಟರ್‌ಗೆ ₹100.63 ಮತ್ತು ಡೀಸೆಲ್ ₹85.03ಕ್ಕೆ ತಗ್ಗಲಿದೆ.

ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಪ್ರತಿ ಲೀಟರ್ ಮೇಲೆ ತಲಾ ₹ 7 ಇಳಿಕೆ ಮಾಡಿ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರ ಪೆಟ್ರೋಲ್ ಮೇಲಿನ ಮಾರಾಟ ತೆರಿಗೆಯನ್ನು ಶೇ 35 ರಿಂದ ಶೇ 25.92ಕ್ಕೂ, ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಶೇ 24 ರಿಂದ ಶೇ 14.34 ಕ್ಕೆ ಇಳಿಸಿದೆ. ಇದರಿಂದ ಪೆಟ್ರೋಲ್ ದರ ಪ್ರತಿ ಲೀಟರ್‌ಗೆ ₹113.93 (ಬುಧವಾರದ ದರ) ರಿಂದ ₹100.63 ಕ್ಕೆ ತಗ್ಗಲಿದ್ದು, ಒಟ್ಟು ₹13.30 ಕಡಿತ ಆದಂತಾಗಿದೆ. ಅದೇ ರೀತಿ ಡೀಸೆಲ್ ಪ್ರತಿ ಲೀಟರ್‌ಗೆ ಇದ್ದ ದರ ₹104.50 ರಿಂದ ₹85.03 ಕ್ಕೆ ಇಳಿದಿದೆ. ಒಟ್ಟು ₹19.47 ಕಡಿತ ಆದಂತಾಗಿದೆ.

ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಕ್ರಮವಾಗಿ ₹10 ಮತ್ತು ₹5 ಕ್ಕೆ ಇಳಿಸಿದ ಬೆನ್ನಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯದಲ್ಲಿಯೂ ತೆರಿಗೆ ಕಡಿಮೆ ಮಾಡುವ ನಿರ್ಧಾರ ಪ್ರಕಟಿಸಿದರು. ಬುಧವಾರ ಈ ಸಂಬಂಧ ಟ್ವೀಟ್ ಮಾಡಿದ್ದ ಬೊಮ್ಮಾಯಿ, 'ರಾಜ್ಯದಲ್ಲಿ ಪೆಟ್ರೋಲ್ ಲೀಟರ್‌ಗೆ ₹95.50 ಮತ್ತು ಡೀಸೆಲ್ ₹81.50 ಆಗುವ ನಿರೀಕ್ಷೆ ಇದೆ. ಇದರಿಂದ ಬೊಕ್ಕಸಕ್ಕೆ ₹2,100 ಕೋಟಿ ನಷ್ಟ ಆಗಲಿದೆ' ಎಂದು ಹೇಳಿದ್ದರು.

'ಹೋರಾಟ ಮುಂದುವರಿಯಲಿದೆ'




'ಅಡುಗೆ ಅನಿಲ ಸೇರಿ ಎಲ್ಲ ವಸ್ತುಗಳ ಬೆಲೆ ಇಳಿಸುವವರೆಗೂ ಕಾಂಗ್ರೆಸ್ ಹೋರಾಟ ಮುಂದುವರಿಸಲಿದೆ. ಇದೇ 14ರಿಂದ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರನ ತೀರ್ಪಿಗೆ ಎಷ್ಟು ಬೆಲೆ ಇದೆ, ಸರ್ಕಾರಗಳು ಹೇಗೆ ಹೆದರುತ್ತವೆ ಎಂಬುದಕ್ಕೆ ಉಪ ಚುನಾವಣೆ ಫಲಿತಾಂಶದ ನಂತರ ಇಂಧನ ದರ ಇಳಿಕೆಯೇ ಸಾಕ್ಷಿ' ಎಂದರು. 'ಕಬ್ಬಿಣ, ಸೀಮೆಂಟ್ ಸೇರಿದಂತೆ ದಿನಬಳಕೆ ವಸ್ತುಗಳ ಬೆಲೆಯೂ ಇಳಿಯಬೇಕು. ಯುವಕರಿಗೆ ಉದ್ಯೋಗ ಸಿಗಬೇಕು. ಇಂಧನ ಬೆಲೆ ಇಳಿಸಿದ ಸರ್ಕಾರದ ತೀರ್ಮಾನ ಸ್ವಾಗತಾರ್ಹ. ಆದರೆ ತೆರಿಗೆ ಹೆಸರಲ್ಲಿ ಲೂಟಿ ಮಾಡಿರುವ ಹಣ ಜನರಿಗೆ ತಲುಪಬೇಕು. ಈ ಆಡಳಿತ ವಿರುದ್ಧ ಜನ ಬೇಸತ್ತಿದ್ದಾರೆ ಎಂಬುದು ಎಲ್ಲರಿಗೂ ಮನದಟ್ಟಾಗಿದೆ' ಎಂದರು.

ಒಳ ಪುಟಗಳು

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ನಾರಾಯಣಪ್ಪನವರು, M.Sc (Ag)

ನಿವೃತ್ತ ತೋಟಗಾರಿಕೆ ಅಧಿಕಾರಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರು
(ಗೋವಾ ವಿಮೋಚನಾ)

ಜನನ: 20-2-1936 – ನಿಧನ: 04-11-2021

ಅಂತಿಮ ಕ್ರಿಯೆ: ಸ್ಥಳ: ವಡಗೂರು, ಕೋಲಾರ ತಾಲ್ಲೂಕು
ದಿನಾಂಕ: 05-11-2021 ಸಮಯ: ಮಧ್ಯಾಹ್ನ: 3:00 ಘಂಟೆ

ಬೆಂಗಳೂರು ಸಹಕಾರನಗರದ ಮನೆಯಲ್ಲಿ ಬೆಳಿಗ್ಗೆ 10 ರಿಂದ 12 ಘಂಟೆ ಸಮಯದಲ್ಲಿ 05-11-2021 ರಂದು ಸಾರ್ವಜನಿಕರ ದರ್ಶನಕ್ಕೆ ಅವಕಾಶವಿದೆ.

ಇಂತಿ ದುಃಖತಪ್ತರು: ಪತ್ನಿ ಸುಮಿತ್ರಮ್ಮ, ಮಕ್ಕಳಾದ ಪ್ರೇಮ ಚಂದ್ರ, ರವಿ ಚಂದ್ರ, ಸವಿತ, ವಿಜಯಲಕ್ಷ್ಮೀ ಮತ್ತು ಭರತ್ ಚಂದ್ರ ಹಾಗೂ ಬಂಧು-ಮಿತ್ರರು.

'ಗ್ರಾ.ಪಂ ಮಟ್ಟದಲ್ಲಿ ಮಹಿಳೆಗೆ ಸಮಾನ ಅವಕಾಶ ಸಿಕ್ಕಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನದ 73ನೇ ತಿದ್ದುಪಡಿ ಮೂಲಕ ಗ್ರಾಮ ಮಟ್ಟದ ಆಡಳಿತದತ್ತ ಹೆಜ್ಜೆ ಇಟ್ಟಿದ್ದರೂ, ಅಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಸಮಾನ ಹಕ್ಕು ಇನ್ನೂ ಸಿಕ್ಕಿಲ್ಲ ಎಂದು ಹೈಕೋರ್ಟ್ ಹೇಳಿದೆ.

ಮಂಗಳೂರು ತಾಲ್ಲೂಕಿನ ಕೊಣಾಜೆ ಗ್ರಾಮ ಪಂಚಾಯಿತಿಗೆ ಪರಿಶಿಷ್ಟ ಜಾತಿ ಮಹಿಳೆಯನ್ನು ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಪ್ರಶ್ನಿಸಿ ಪರಿಶಿಷ್ಟ ಜಾತಿಯ ಪುರುಷ ಸದಸ್ಯರು ಸಲ್ಲಿಸಿದ್ದ ಅರ್ಜಿಗಳನ್ನು ವಜಾಗೊಳಿಸಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರಿದ್ದ ಪೀಠ, ಈ ಅಭಿಪ್ರಾಯಪಟ್ಟಿತು.

4ನೇ ಪುಟ ನೋಡಿ

ಚರ್ಚೆ

ಕನ್ನಡದಲ್ಲಿ ಎಂಜಿನಿಯರಿಂಗ್ ಶಿಕ್ಷಣ ಕಾರ್ಯಸಾಧ್ಯವೇ? 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ಐ.ಟಿ ಕಂಪನಿಗಳು ಬೆಳೆದಷ್ಟು ವೇಗದಲ್ಲಿ ಅಭಿವೃದ್ಧಿ ಕಾಣದ ಮೂಲಸೌಕರ್ಯ • ಗಂಟೆಗಟ್ಟಲೆ ರಸ್ತೆಯಲ್ಲಿ ಸಿಲುಕಿ ಪರದಾಡುವ ವಾಹನ ಸವಾರರು

ಮಹದೇವಪುರ: ಅಂಕೆಗೆ ಸಿಗುತ್ತಿಲ್ಲ ಸಂಚಾರ ದಟ್ಟಣೆ

• ವಿಜಯಕುಮಾರ್ ಎಸ್.ಕೆ.

ಹೊರ ವಲಯ ಒಳ ಬೇಗುದಿ

ಬೆಂಗಳೂರು: ಮಾಹಿತಿ ತಂತ್ರಜ್ಞಾನ (ಐ.ಟಿ) ಕ್ಷೇತ್ರದ ಕಂಪನಿಗಳು ಬೆಳೆದಂತೆ ಬೆಂಗಳೂರಿನ ಹೊರ ವಲಯ, ಅದರಲ್ಲೂ ಮಹಾದೇವಪುರ ಸುತ್ತಮುತ್ತಲ ಪ್ರದೇಶ ಅಂಕೆಗೆ ಸಿಗದೆ ಬೆಳೆಯುತ್ತಿದೆ. ಆದರೆ, ಅಲ್ಲಿನ ಮೂಲಸೌಕರ್ಯ ಮಾತ್ರ ಹಿಂದೆ ಇದ್ದಷ್ಟೇ ಇದೆ. ಈ ಅಸಮತೋಲನದಿಂದಾಗಿ ಈ ಪ್ರದೇಶದಲ್ಲಿ ಸಂಚಾರ ದಟ್ಟಣೆ ಸಮಸ್ಯೆ ದಿನದಿಂದ ದಿನಕ್ಕೆ ರಕ್ಕಸ ರೂಪದಲ್ಲಿ ಬೆಳೆಯುತ್ತಿದೆ.

ಐ.ಟಿ ಕಂಪನಿಗಳು ನೆಲೆಯೂರಿದ ಆರಂಭದಲ್ಲಿ ಬೆಳ್ಳಂದೂರು, ಮಾರತಹಳ್ಳಿ, ವರ್ತೂರು ಭಾಗದ ಜನ ಈ ಪ್ರದೇಶವೂ ಅಭಿವೃದ್ಧಿಯಾದೀತು ಎಂಬ ಕನಸು ಕಂಡಿದ್ದರು. ಐ.ಟಿ ಕಂಪನಿಗಳು ನೆಲೆಯೂರಿದಷ್ಟು ವೇಗದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾಣಲಿಲ್ಲ. ರಸ್ತೆಗಳು ಹಿಗ್ಗಲಿಲ್ಲ, ಸಂಚಾರಕ್ಕೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲಿಲ್ಲ. ಪರಿಣಾಮವಾಗಿ ಐ.ಟಿ ಕಂಪನಿ ಉದ್ಯೋಗಿಗಳ ಜೊತೆಗೆ ಸುತ್ತಮುತ್ತಲ ಜನರೂ ಈಗ ತೊಂದರೆ ಅನುಭವಿಸುತ್ತಿದ್ದಾರೆ.

ಅಂಕಿ-ಅಂಶಗಳು

11 ನಗರದ ಹೊರ ವಲಯದಲ್ಲಿರುವ ಐ.ಟಿ ಎಸ್‌ಇಜೆಡ್‌ಗಳು

7 ಬೆಳ್ಳಂದೂರು ವಾರ್ಡ್‌ವೊಂದರಲ್ಲೇ ಇರುವ ಐ.ಟಿ ಎಸ್‌ಇಜೆಡ್‌ಗಳು

10 ಹೊರ ವರ್ತುಲ ರಸ್ತೆಯಲ್ಲಿ ನಿತ್ಯ ಜನ ಸಂಚಾರ

ಬೆಳ್ಳಂದೂರು, ವರ್ತೂರು, ಮಾರತಹಳ್ಳಿ ವಾರ್ಡ್‌ಗಳು ಬೆಂಗಳೂರಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವಾರ್ಡ್‌ಗಳು ಎಂದು ಬಿಬಿಎಂಪಿ ಅಧಿಕಾರಿಗಳೇ ಗುರುತಿಸಿದ್ದಾರೆ. ಬೇರೆ ವಾರ್ಡ್‌ಗಳಿಗೆ ಹೋಲಿಸಿದರೆ ಶೇ 130ರಷ್ಟು ವೇಗದಲ್ಲಿ ಬೆಳೆಯುತ್ತಿರುವ ವಾರ್ಡ್‌ಗಳಿವು.

ಮಾಹಿತಿ ತಂತ್ರಜ್ಞಾನದ 11 ವಿಶೇಷ ಆರ್ಥಿಕ ವಲಯಗಳನ್ನು ಈ ವಾರ್ಡ್‌ಗಳು ಹೊಂದಿವೆ. ಅದರಲ್ಲಿ 7 ವಿಶೇಷ ಆರ್ಥಿಕ ವಲಯಗಳು (ಎಸ್‌ಇಜೆಡ್) ಬೆಳ್ಳಂದೂರು ವಾರ್ಡ್ ಒಂದರಲ್ಲೇ ಇವೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶದಲ್ಲೇ ಗುರುತಿಸಿಕೊಂಡಿರುವ ಪ್ರದೇಶವಿದು. ಐ.ಟಿ ಉತ್ಪನ್ನಗಳ ರಫ್ತಿನಿಂದ ದೇಶಕ್ಕೆ ಬರುವ ವರಮಾನದಲ್ಲಿ ಶೇ 30ರಷ್ಟು ಪಾಲು ಈ ಪ್ರದೇಶದ ಕಂಪನಿಗಳದ್ದು.

ಇಲ್ಲಿನ ಐ.ಟಿ ಕಂಪನಿಗಳಲ್ಲಿ ದೇಶ, ವಿದೇಶಗಳಿಂದ ಉದ್ಯೋಗಿಗಳು ಬಂದು ಈ ಪರಿಸರದಲ್ಲಿ ನೆಲೆಸಿದ್ದಾರೆ. ಆದ್ದರಿಂದ ಈ ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ವಸತಿ ಬಡಾವಣೆಗಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳು ತಲೆ ಎತ್ತಿವೆ. ಆದರೆ ಅದಕ್ಕೆ ತಕ್ಕಂತೆ ಮೂಲ ಸೌಕರ್ಯ ಇಲ್ಲ. ಇಲ್ಲಿನ ಜನರನ್ನು ಪ್ರಮುಖವಾಗಿ ಕಾಡುತ್ತಿರುವುದು ಸಂಚಾರ ದಟ್ಟಣೆಯ ಸಮಸ್ಯೆ. ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್.ಪುರದವರೆಗೆ ಹೊರ ವರ್ತುಲ ರಸ್ತೆ, ಸರ್ಜಾಪುರ ರಸ್ತೆ, ವೈಟ್‌ಫೀಲ್ಡ್ ರಸ್ತೆಗಳಲ್ಲಿ ಸಂಚಾರ ದಟ್ಟಣೆ ನಿವಾರಿಸಿಕೊಂಡು ಮುಂದಕ್ಕೆ ಸಾಗುವ ವಾಹನ ಸವಾರರಿಗೆ ನರಕದ ನೆನಪಾಗುತ್ತದೆ.


ಹೊರ ವರ್ತುಲ ರಸ್ತೆಯಲ್ಲಿನ ಸಂಚಾರ ದಟ್ಟಣೆ

ಅದರಲ್ಲೂ ಯಾವುದೇ ಐ.ಟಿ ಕಂಪನಿಯ ಕಚೇರಿ ತಲುಪಬೇಕಾದರೂ ಹೊರ ವರ್ತುಲ ರಸ್ತೆಯನ್ನೇ ಬಳಸಬೇಕು. ಈ ರಸ್ತೆಯಲ್ಲಿ ಬೆಳಿಗ್ಗೆ ಮತ್ತು ಸಂಜೆ ವೇಳೆ 10 ಲಕ್ಷಕ್ಕೂ ಹೆಚ್ಚು ಜನ ಹಾದು ಹೋಗುತ್ತಾರೆ.

ಕೋವಿಡ್ ಸಂದರ್ಭದಲ್ಲಿ ಐ.ಟಿ ಕಂಪನಿಗಳ ಉದ್ಯೋಗಿಗಳು ಬಹುತೇಕ ಮನೆಯಿಂದಲೇ ಕೆಲಸ ಮಾಡುತ್ತಿದ್ದರಿಂದ ಸಂಚಾರ ದಟ್ಟಣೆ ಕೊಂಚ ಕಡಿಮೆಯಾಗಿತ್ತು.

ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾದ ಬಳಿಕ ಐ.ಟಿ ಕಂಪನಿಗಳು ಕ್ರಮೇಣ ಕಚೇರಿಯಿಂದಲೇ ಕೆಲಸ ಆರಂಭಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಮತ್ತೆ ದಿನದಿಂದ ದಿನಕ್ಕೆ ಸಂಚಾರ ದಟ್ಟಣೆ ಹೆಚ್ಚಾಗುತ್ತಲೇ ಇದೆ. ವಾಹನ ಸವಾರರು ನಿತ್ಯ ಗಂಟೆಗಟ್ಟಲೆ ಈ ರಸ್ತೆಯಲ್ಲಿ ಸಿಲುಕಿ ನರಳುತ್ತಿದ್ದಾರೆ.

‘ಈ ಭಾಗದಿಂದ ಬರುತ್ತಿರುವ ವರಮಾನಕ್ಕೆ ತಕ್ಕಂತೆ ಮೂಲ ಸೌಕರ್ಯವನ್ನು ಸರ್ಕಾರ ಒದಗಿಸದೆ ಇರುವುದು ಇಷ್ಟೆಲ್ಲಾ ಅವಾಂತರಗಳಿಗೆ ಕಾರಣ. ನವಿ ಮುಂಬೈ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಮುನ್ನೋಟ ಹೊಂದಿರುವುದಾಗಿ ಅಧಿಕಾರಿಗಳು ಬಾಯಿ ಮಾತಿನಲ್ಲಷ್ಟೇ ಹೇಳುತ್ತಿದ್ದಾರೆ. ಆದರೆ, ವಾಸ್ತವದ ಸ್ಥಿತಿ ಬೇರೆಯೇ ಇದೆ’ ಎಂದು ಕಸವನಹಳ್ಳಿ ನಿವಾಸಿ ವಿಷ್ಣುಪ್ರಸಾದ್ ಹೇಳುತ್ತಾರೆ.

ಮೆಟ್ರೊ ಕಾಮಗಾರಿ: ಮತ್ತಷ್ಟು ಸಮಸ್ಯೆ

ಹೊರ ವರ್ತುಲ ರಸ್ತೆಯಲ್ಲಿ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಆರಂಭವಾಗಿದೆ. ರಸ್ತೆ ವಿಭಜಕದಿಂದ ಎರಡೂ ಕಡೆಗೆ ತಲಾ ಒಂದೊಂದು ಪಥದಲ್ಲಿ ಕಾಮಗಾರಿಗಾಗಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಉಳಿದ ಎರಡು ಪಥದಲ್ಲಿ ಒಂದರಲ್ಲಿ ಬಸ್ ಆದ್ಯತಾ ಪಥವಿದೆ. ಮಧ್ಯದಲ್ಲಿ ಉಳಿದಿರುವ ಒಂದೇ ಒಂದು ಪಥದಲ್ಲಿ ಉಳಿದ ವಾಹನಗಳು ಸಾಲುಗಟ್ಟಿ ಸಾಗಬೇಕಾಗಿದೆ.

ಬಸ್ ಆದ್ಯತಾ ಪಥ ನಿರ್ಮಿಸಿರುವ ಬಿಬಿಎಂಪಿ ಅಧಿಕಾರಿಗಳು ಅಗತ್ಯಕ್ಕೆ ತಕ್ಕಷ್ಟು ಬಸ್‌ಗಳ ವ್ಯವಸ್ಥೆ ಮಾಡಿಲ್ಲ. ಅಲ್ಲದೇ ಈ ಆದ್ಯತಾ ಪಥಕ್ಕೆ ಬರಲು ಸಾರ್ವಜನಿಕ ಸಂಚಾರ ವ್ಯವಸ್ಥೆ ಇಲ್ಲ. ಸದ್ಯಕ್ಕೆ ಐ.ಟಿ ಕಂಪನಿಗಳ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಆದರೆ, ಕೋವಿಡ್ ಕಾರಣಕ್ಕೆ ಸಮೂಹ ಸಾರಿಗೆ ಬಳಸಲು ಜನ ಹಿಂದೇಟು ಹಾಕುತ್ತಿದ್ದಾರೆ. ಆದ್ದರಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಲೇ ಇದೆ.

‘ಮೆಟ್ರೊ ರೈಲು ಮಾರ್ಗದ ಕಾಮಗಾರಿ ಮುಗಿಯುವ ತನಕ ಐ.ಟಿ ಕಂಪನಿಗಳ ಉದ್ಯೋಗಿಗಳಿಗೆ ಮನೆಯಿಂದಲೇ ಕೆಲಸ ಮಾಡಿಸಬೇಕು ಎಂದು ಅಧಿಕಾರಿಗಳೇ ಮನವಿ ಮಾಡುತ್ತಿದ್ದಾರೆ. ಮೂಲ ಸೌಕರ್ಯ ಒದಗಿಸಲಾಗದೆ ಈ ರೀತಿ ಅಸಹಾಯಕತೆ ವ್ಯಕ್ತಪಡಿಸುವುದು ಎಷ್ಟು ಸರಿ’ ಎನ್ನುತ್ತಾರೆ ಸ್ಥಳೀಯರು.

ಎಲೆಕ್ಟ್ರಾನಿಕ್ ಸಿಟಿಯಿಂದ ಸರ್ಜಾಪುರ ರಸ್ತೆಯಲ್ಲಿನ ಕೊಡತಿ ಬಳಿಗೆ 50 ಸಾವಿರ ಉದ್ಯೋಗಿಗಳನ್ನು ಸ್ಥಳಾಂತರಿಸಲು ವಿಪ್ರೊ ಕಂಪನಿ ಸಜ್ಜಾಗಿದೆ. ಅಷ್ಟೂ ಉದ್ಯೋಗಗಳು ಈ ಭಾಗಕ್ಕೆ ಬಂದರೆ ಸಂಚಾರ ದಟ್ಟಣೆ ಸಮಸ್ಯೆ ಹೇಳ ತೀರದಾಗಲಿದೆ ಎಂದು ವಿಷ್ಣಪ್ರಸಾದ್ ಆತಂಕ ವ್ಯಕ್ತಪಡಿಸಿದರು.

ಹೃದಯಾಘಾತ: ಹೆಚ್ಚು ಜನ ಸೇರುವ ಸ್ಥಳಗಳಲ್ಲಿ ಸಿಗಬೇಕು ತುರ್ತು ಚಿಕಿತ್ಸೆ

ನಿಂತ ಎದೆಬಡಿತದ ಮರುಚಾಲನೆಗೆ ಲಭ್ಯವಿರಲಿ ಎಇಡಿ

• ಪ್ರವೀಣ್ ಕುಮಾರ್ ಪಿ.ವಿ

ಬೆಂಗಳೂರು: ಚಿತ್ರನಟ ಪುನೀತ್ ರಾಜ್ ಕುಮಾರ್ ಅವರ ನಿಧನದ ಬೆನ್ನಲ್ಲೇ, ಹೃದಯಾಘಾತ ಸಂಭವಿಸಿದಾಗ ತುರ್ತು ಚಿಕಿತ್ಸೆ ನೀಡಲು ವ್ಯವಸ್ಥೆ ಎಷ್ಟು ಸಜ್ಜಾಗಿದೆ ಎಂಬ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ನಿಂತು ಹೋದ ಎದೆಬಡಿತವನ್ನು ಮತ್ತೆ ಆರಂಭಿಸಲು ಬಳಸುವ ‘ಆಟೊಮೇಟೆಡ್ ಎಕ್ಸ್‌ಟರ್ನಲ್ ಡಿಫೈಬ್ರಿಲ್ಲೇಟರ್ಸ್’ (ಎಇಡಿ) ಸಾಧನಗಳು ಸಾರ್ವಜನಿಕ ಬಳಕೆಗೆ ಅಲ್ಲಲ್ಲಿ ಲಭ್ಯವಿರಬೇಕು ಎಂಬ ಒತ್ತಾಯವೂ ಕೇಳಿಬಂದಿದೆ.

ನಗರದ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಬಸ್ ಟರ್ಮಿನಲ್, ಮೆಟ್ರೊ ನಿಲ್ದಾಣ, ರೈಲು ನಿಲ್ದಾಣ, ದೊಡ್ಡ ಉದ್ಯಾನ, ಮಾರುಕಟ್ಟೆ, ಬಿಬಿಎಂಪಿ, ವಿಧಾನಸೌಧ ಮುಂತಾದ ಪ್ರಮುಖ ಸರ್ಕಾರಿ ಕಚೇರಿಗಳಲ್ಲಿ ಇಂತಹ ಸಾಧನ ಹೊಂದಿರಬೇಕು. ತರಬೇತಿ ನೀಡಿದರೆ ಪುಟ್ಟ ಮಕ್ಕಳಿಂದ ಹಿಡಿದು ವಯಸ್ಕರವರೆಗೆ ಯಾರು ಬೇಕಾದರೂ ಈ ಸಾಧನವನ್ನು ಸುಲಭವಾಗಿ ಬಳಸಬಹುದು. ಹೃದಯಾಘಾತಕ್ಕೆ ಒಳಗಾಗುವವರ ಜೀವ ಉಳಿಸಬಹುದು ಎನ್ನುತ್ತಾರೆ ತಜ್ಞರು.


ಎಇಡಿ ಸಾಧನ

‘ಹೃದಯಾಘಾತದಿಂದ ಕುಸಿದುಬಿದ್ದವರಿಗೆ ಐದು ನಿಮಿಷಗಳೊಳಗೆ ತುರ್ತು ಚಿಕಿತ್ಸೆ ಲಭಿಸಬೇಕು. ಕುಸಿದ ತಕ್ಷಣವೇ ಅವರ ಎದೆಗೆ ಲಘು ಒತ್ತಡ ಹಾಕಿ ಪ್ರಥಮ ಚಿಕಿತ್ಸೆ ನೀಡಬೇಕು. ಎದೆಬಡಿತ ನಿಂತಿದ್ದರೆ ಎಇಡಿ ಮೂಲಕ ಅದನ್ನು ಮತ್ತೆ ಆರಂಭಿಸಬಹುದು’ ಎಂದು ವೈಟಲ್ ಹೆಲ್ತ್ ಕೇರ್‌ನ ನಿರ್ದೇಶಕ ಡಾ.ಡಿ.ದಿನಕರ್ ತಿಳಿಸಿದರು. ತುರ್ತು ಚಿಕಿತ್ಸೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಅವರು ಏರ್ಪಡಿಸುತ್ತಿದ್ದಾರೆ.

‘ಕಾರ್ಪೊರೇಟ್ ಕಂಪನಿಗಳ ಕಚೇರಿಗಳು, ಮಾಲ್‌ಗಳು, ಐಷಾರಾಮಿ ಹೋಟೆಲ್‌ಗಳು ಸಾಮಾನ್ಯವಾಗಿ ಎಇಡಿಗಳನ್ನು ಹೊಂದಿರುತ್ತವೆ. ಅಲ್ಲಿನ ಸಿಬ್ಬಂದಿಯೂ ಇದರ ಬಳಕೆಯ ತರಬೇತಿ ಪಡೆದಿರುತ್ತಾರೆ. ಆದರೆ, ಹೆಚ್ಚು ಜನ ಸೇರುವ ಇತರ ಸಾರ್ವಜನಿಕ ತಾಣಗಳಲ್ಲೂ ಇದರ ಅಗತ್ಯ ತುಂಬಾ ಇದೆ’ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಜಾವಾಣಿ ವಿಶೇಷ

‘ಎಇಡಿಗೆ ಹೆಚ್ಚೆಂದರೆ ₹1.5 ಲಕ್ಷದಿಂದ ₹ 2.5 ಲಕ್ಷ ದರ ಇರಬಹುದು. ಇದನ್ನು ಹತ್ತಾರು ವರ್ಷ ಬಳಸಬಹುದು. ಒಮ್ಮೆ ಬಳಸಿದ ಪ್ಯಾಡ್ ಬದಲಾಯಿಸಬೇಕಾಗುತ್ತದೆ. ಇವುಗಳಿಗೆ ₹2 ಸಾವಿರದಿಂದ ₹3 ಸಾವಿರ ದರ ಇದೆ. ಎಇಡಿಯಿಂದ ಉಳಿಯಬಹುದಾದ ಅಮೂಲ್ಯ ಜೀವಗಳಿಗೆ ಹೋಲಿಸಿದರೆ ಈ ಮೊತ್ತ ಏನೇನೂ ಅಲ್ಲ’ ಎಂದು ಅವರು ಹೇಳಿದರು.

ಬಿಬಿಎಂಪಿಯ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಜನ ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಕಡೆಗಳಲ್ಲಿ ಎಇಡಿಗಳು ಲಭ್ಯವಿರಬೇಕು. ಈ ಬಗ್ಗೆ ಜನರಿಗೂ ಮಾಹಿತಿ ಇರಬೇಕು. ಇದರ ಬಳಕೆ ಬಗ್ಗೆ ಜನರಿಗೆ ತರಬೇತಿ ಒದಗಿಸಬೇಕು ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಘಟನೆಯು 2020ರ ಜನವರಿಯಲ್ಲಿ ಬಿಬಿಎಂಪಿಗೆ ಮನವಿ ಸಲ್ಲಿಸಿತ್ತು.

‘ನಮ್ಮ ಕೋರಿಕೆಗೆ ಆಗಿನ ಮೇಯರ್ ಗೌತಮ್ ಕುಮಾರ್ ಸಕಾರಾತ್ಮಕವಾಗಿಯೇ ಸ್ಪಂದಿಸಿದ್ದರು. ಆದರೆ, ಆ ಬಳಿಕ ಬಿಬಿಎಂಪಿ ಅಷ್ಟಾಗಿ ಆಸಕ್ತಿ ತೋರಿಸಲಿಲ್ಲ’ ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಘಟನೆಯ ರಾಜ್‌ಕುಮಾರ್ ದುಗರ್ ‘ಪ್ರಜಾವಾಣಿ’ಗೆ ತಿಳಿಸಿದರು. ಪುನೀತ್ ರಾಜ್‌ಕುಮಾರ್ ಸಾವಿನ ಬಳಿಕ ಈ ವಿಚಾರವನ್ನು ಹಾಗೂ ಮನವಿಯ ಪ್ರತಿಯನ್ನು ಅವರು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದಾರೆ.

‘ಸರ್ಕಾರ ಈಗಲಾದರೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಕಡೆ ಎಇಡಿ ಲಭ್ಯವಿರುವಂತೆ ನೋಡಿಕೊಳ್ಳಬೇಕು. ಆಸಕ್ತರಿಗೆ ಇದರ ಬಳಕೆ ಬಗ್ಗೆ ತಿಳಿಸಿಕೊಡಬೇಕು’ ಎಂದು ಒತ್ತಾಯಿಸಿದರು.

‘ಎಇಡಿ ಬಳಕೆಗೆ ಸೂಕ್ತ ತರಬೇತಿ ಅಗತ್ಯ’



ಹೃದಯಾಘಾತಕ್ಕೊಳಗಾದವರ ಜೀವ ಉಳಿಸುವಲ್ಲಿ ಎಇಡಿ ನೆರವಾಗುತ್ತದೆ. ಹೆಚ್ಚು ಜನ ಸೇರುವ ಕಡೆಗಳಲ್ಲಿ ಈ ಸಾಧನವನ್ನು ಹೊಂದಿರುವುದು ಒಳ್ಳೆಯದೇ. ಆದರೆ, ಇದರ ಬಳಕೆಗೆ ಸೂಕ್ತ ತರಬೇತಿಯೂ ಅಗತ್ಯ. ಹೃದಯಾಘಾತಕ್ಕೊಳಗಾದವರಿಗೆ ಪ್ರಥಮ ಚಿಕಿತ್ಸೆ ನೀಡುವ ಹಾಗೂ ಎಇಡಿ ಬಳಕೆಯ ಕುರಿತಾದ ವಿಡಿಯೊಗಳನ್ನು ಇಂತಹ ಕಡೆ ಪ್ರಸಾರ ಮಾಡಬಹುದು. ಗೃಹರಕ್ಷಕ ದಳ, ಭದ್ರತಾ ಸಿಬ್ಬಂದಿ, ಪೊಲೀಸ್ ಸಿಬ್ಬಂದಿಗೂ ಇದರ ಬಳಕೆ ಬಗ್ಗೆ ತರಬೇತಿ ನೀಡಬಹುದು’ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.



ಬೆಂಗಳೂರು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡ ನಗರವೆಂದು ಹೆಮ್ಮೆ ಪಡುತ್ತೇವೆ. ಆದರೆ ತುರ್ತು ಚಿಕಿತ್ಸೆ ಲಭ್ಯತೆ ವಿಚಾರದಲ್ಲಿ ನಗರ ಬಹಳಷ್ಟು ಹಿಂದುಳಿದಿದೆ

ರಾಜ್ ಕುಮಾರ್ ದುಗರ್, ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಚಾಲಕ



ಹೃದಯಾಘಾತದಿಂದ ಕುಸಿದುಬಿದ್ದವರಿಗೆ ತುರ್ತು ಚಿಕಿತ್ಸೆ ನೀಡುವ ಕುರಿತು ಜನರಲ್ಲಿ ತಿಳಿವಳಿಕೆ ಕೊರತೆ ಇದೆ. ಜನ ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಕಡೆ ಎಇಡಿಯಂತಹ ಸಾಧನ ಲಭ್ಯ ಇಲ್ಲ.

ಡಾ.ಡಿ.ದಿನಕರ್
ತುರ್ತು ಚಿಕಿತ್ಸೆ ತರಬೇತುದಾರ

ನಗರದಲ್ಲಿ ಇಂದು

ಡಾ.ನಾ.ದಾಮೋದರಶೆಟ್ಟಿ ವಿರಚಿತ ‘ಮೇಲೋಗರ’ ಮತ್ತು ‘ರಂಗಚಿತ್ರರಂಗ’ ಕೃತಿಗಳ ಬಿಡುಗಡೆ: ಭಾಗವಹಿಸುವವರು: ಕಾದಂಬರಿಕಾರ ಕಾ.ತ. ಚಿಕ್ಕಣ್ಣ, ಹಾಸ್ಯ ಬರಹಗಾರ ಎನ್. ರಾಮನಾಥ್, ರಂಗ ಕಲಾವಿದ ಶಂಕರ್ ಬಿಲ್ಲೇಮನೆ, ವಿಮರ್ಶಕ ದೀಪಕ್ ಜಿ.ಕೆ., ಪ್ರಕಾಶಕ ರವೀಂದ್ರನಾಥ ಸಿರಿವರ, ಆಯೋಜನೆ: ತಿಂಮಸೇನೆ ಬೆಂಗಳೂರು, ಸಿರಿವರ ಪ್ರಕಾಶನ, ಸಿವಿಜಿ ಪ್ರಕಾಶನ, ಸ್ಥಳ: ಕಪ್ಪಣ್ಣ ಅಂಗಳ, 32ನೇ ಎ ಕ್ರಾಸ್, ಜೆ.ಪಿ.ನಗರ. ಸಂಜೆ -4.30

ಮಾಸ್ತಿ ಪ್ರಶಸ್ತಿ ಪ್ರದಾನ ಮತ್ತು ಮಾಸ್ತಿ ಕಾದಂಬರಿ-ಕಥಾ ಪುರಸ್ಕಾರ: ಅಧ್ಯಕ್ಷತೆ: ಡಾ. ಎಚ್. ಎಸ್. ವೆಂಕಟೇಶಮೂರ್ತಿ, ಭಾಗವಹಿಸುವವರು: ಬಿ.ಎ. ವಿವೇಕ ರೈ, ಜಯಂತ ಕಾಯ್ಕಿಣಿ, ಪ್ರೊ. ಮಾಧವ ಕುಲಕರ್ಣಿ, ಆರ್. ವಿಜಯ ರಾಘವನ್, ಡಾ.ಎಂ.ಎಸ್. ಆಶಾದೇವಿ, ಡಾ. ವಸುಮತಿ ಉಡುಪ, ಡಾ. ಎಚ್.ಎಲ್. ಪುಷ್ಪಾ, ಆಯೋಜನೆ: ಡಾ.ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ -10.00

ಶಾಂತಿ ಅಪ್ಪಣ್ಣಗೆ ಸರಳಾ ರಂಗನಾಥ ರಾವ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನವು ಲೇಖಕಿಯರಿಗೆ ಮುಡುಪಿಟ್ಟಿರುವ ಸರಳಾ ರಂಗನಾಥ ರಾವ್ ಸಾಹಿತ್ಯ ಪ್ರಶಸ್ತಿಗೆ ಕೊಡಗಿನ ಕಥೆಗಾರ್ತಿ ಶ್ರೀಮತಿ ಶಾಂತಿ ಕೆ. ಅಪ್ಪಣ್ಣ ಅವರು ಭಾಜನರಾಗಿದ್ದಾರೆ.

2020ನೇ ಸಾಲಿನ ಈ ಪ್ರಶಸ್ತಿಯನ್ನು ಶಾಂತಿ ಕೆ.ಅಪ್ಪಣ್ಣ ಅವರ, ‘ಒಂದು ಬಾಗಿಲು ಮತ್ತು ಮೂರೂ ಚಿಲ್ಲರೆ ವರ್ಷಗಳು’ ಕಥಾ ಸಂಕಲನಕ್ಕೆ ನೀಡಲಾಗಿದೆ. ಪ್ರಶಸ್ತಿಯು ₹10 ಸಾವಿರ ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ.



ಕವಿಗಳಾದ ಡಾ.ಎಚ್.ಎಸ್. ವೆಂಕಟೇಶ ಮೂರ್ತಿ, ಚಿಂತಾಮಣಿ ಕೊಡ್ಲೆಕೆರೆ ಹಾಗೂ ಪತ್ರಕರ್ತ ಮತ್ತು ವಿಮರ್ಶಕ ಜಿ.ಎನ್. ರಂಗನಾಥ ರಾವ್ ತೀರ್ಪುಗಾರರಾಗಿದ್ದರು.

2022ರ ಜನವರಿಯಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಕಾರ್ಯದರ್ಶಿ ತೀರ್ಥ ಜಿ.ಆರ್.ಆರ್. ತಿಳಿಸಿದ್ದಾರೆ.

ಕೋವಿಡ್: ಸಕ್ರಿಯ ಪ್ರಕರಣ ಸಂಖ್ಯೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಿದ್ದು, 8,267ಮಂದಿ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಒಂದು ದಿನದಲ್ಲಿ 296 ಮಂದಿ ಗುಣಮುಖರಾಗಿದ್ದು, ಈವರೆಗೆ ಒಟ್ಟು 29.42 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ರಾಜ್ಯದಲ್ಲಿ ಕೋವಿಡ್‌ನಿಂದ ಐವರು ಸಾವಿಗೀಡಾಗಿದ್ದಾರೆ. ಬೆಂಗಳೂರು, ದಕ್ಷಿಣ ಕನ್ನಡ, ಗದಗದಲ್ಲಿ ತಲಾ ಒಬ್ಬರು ಹಾಗೂ ಮೈಸೂರಿನಲ್ಲಿ ಇಬ್ಬರು ಅಸುನೀಗಿದ್ದಾರೆ.

ಇದರಿಂದ, ಇದುವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 38,095ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಮರಣ ಪ್ರಮಾಣದ ದರ ಮತ್ತೆ ಹೆಚ್ಚಾಗಿದ್ದು, ಶೇ 1.91ರಷ್ಟು ವರದಿಯಾಗಿದೆ.

ಹೊಸದಾಗಿ 261 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 157 ಜನರಿಗೆ ಹೊಸದಾಗಿ ಸೋಂಕು ತಗುಲಿರುವುದು ಖಾತರಿಯಾಗಿದೆ. ದಕ್ಷಿಣ ಕನ್ನಡ (16), ಮೈಸೂರು (13), ತುಮಕೂರಿನಲ್ಲಿ (15) ಎರಡಂಕಿಯಷ್ಟು ಪ್ರಕರಣಗಳು ವರದಿಯಾಗಿವೆ. 16 ಜಿಲ್ಲೆಗಳಲ್ಲಿ ಪ್ರಕರಣಗಳು ಒಂದಂಕಿಗೆ ಇಳಿದಿವೆ.

ಕೋವಿಡ್ ಅಂಕಿ-ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	24.91 ಕೋಟಿ ▲	3.43 ಕೋಟಿ
ಸಕ್ರಿಯ ಪ್ರಕರಣ	1.84 ಕೋಟಿ	1.48 ಲಕ್ಷ ▼
ಗುಣಮುಖ	22.56 ಕೋಟಿ ▲	3.37 ಕೋಟಿ ▲
ಸಾವು	50.41 ಲಕ್ಷ ▲	4.59 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.85 ಲಕ್ಷ ▲	12,907 ▲
ಗುಣಮುಖ	4.42 ಲಕ್ಷ ▲	13,152 ▲
ಸಾವು	7,830 ▲	251 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): ಅಮೆರಿಕ 75,639 ▲; ಬ್ರಿಟನ್ 41,299 ▲; ರಷ್ಯಾ 40,443 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): ಅಮೆರಿಕ 92.18 ▼; ಬ್ರಿಟನ್ 15.68 ▲; ರಷ್ಯಾ 9.46 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.40 ಲಕ್ಷ ಮಹಾರಾಷ್ಟ್ರ; 36,176 ತಮಿಳುನಾಡು ▲; 32,598 ಕೇರಳ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.14 ಮಹಾರಾಷ್ಟ್ರ ▲; 49.87 ಕೇರಳ ▲; 27.05 ತಮಿಳುನಾಡು ▲

ಇದುವರೆಗೆ ರಾಜ್ಯದಲ್ಲಿ ಸೋಂಕಿತರಾದವರ ಒಟ್ಟು ಸಂಖ್ಯೆ 29.89 ಲಕ್ಷ ದಾಟಿದೆ. ಸೋಂಕು ದೃಢ ಪ್ರಮಾಣವು ಶೇ 0.48ರಷ್ಟು ವರದಿಯಾಗಿದೆ. ಗುರುವಾರ 53,488 ಮಾದರಿಗಳನ್ನಷ್ಟೇ ಪರೀಕ್ಷೆ ಮಾಡಲಾಗಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ-ಅಂಶ

12,52,414 ▲ ಒಟ್ಟು ಸೋಂಕಿತರು
12,52,106 ನಿನ್ನೆಯ ವಿವರ

6,381 ▼	12,29,740 ▲	16,292 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	157 ▲
ಗುಣಮುಖ	171 ▼
ಸಾವು	01 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಎಸ್‌ಡಿಪಿಐ ರಾಜ್ಯ ಪ್ರತಿನಿಧಿಗಳ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ರಾಜ್ಯ ಪ್ರತಿನಿಧಿಗಳ ಸಭೆ ನ. 6 ಮತ್ತು 7ರಂದು ನಗರದಲ್ಲಿ ನಡೆಯಲಿದೆ ಎಂದು ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಹನ್ನಾನ್ ತಿಳಿಸಿದ್ದಾರೆ.

ರಾಷ್ಟ್ರೀಯ ಅಧ್ಯಕ್ಷ ಎಂ.ಕೆ. ಫೈಝಿ ಮತ್ತು ಕೇಂದ್ರ ನಾಯಕರು ಆಂತರಿಕ ಚುನಾವಣೆಯ ಪ್ರಕ್ರಿಯೆಯ ಉಸ್ತುವಾರಿ ವಹಿಸಲಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳ ಪದಾಧಿಕಾರಿಗಳು, ವಿಶೇಷ ಅಹ್ವಾನಿತರು ಮತ್ತು ಆಯ್ಕೆಯಾಗಿರುವ ಪಕ್ಷದ ಜನಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಜಿಲ್ಲಾ ನಾಯಕರು ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಿದ್ದಾರೆ. ನೂತನ ರಾಜ್ಯ ಸಮಿತಿ ಪ್ರತ್ಯೇಕ ಸಭೆ ನಡೆಸಿ ರಾಜ್ಯ ಘಟಕದ ಅಧ್ಯಕ್ಷ ಮತ್ತು ಇತರ ಪದಾಧಿಕಾರಿಗಳಿಗೆ ಮತ ಹಾಕಿ ಆಯ್ಕೆ ಮಾಡಲಿದೆ. ಈ ಬಾರಿ ರಾಜ್ಯ ಸಮಿತಿಗೆ 27 ಮಂದಿಯನ್ನು ಆಯ್ಕೆ ಮಾಡಬಹುದೆಂದು ರಾಷ್ಟ್ರೀಯ ಸಮಿತಿ ಅನುಮೋದನೆ ನೀಡಿದೆ. ನ.7 ರಂದು ರಾಜ್ಯದ ಪದಾಧಿಕಾರಿಗಳ ಪದಗ್ರಹಣ ನಡೆಯಲಿದೆ.


ನಗರದ ರಾಜಾಜಿನಗರದಲ್ಲಿರುವ ಇಸ್ಕಾನ್ ದೇವಾಲಯದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ಆಯೋಜಿಸಿದ್ದ ದೀಪೋತ್ಸವ ಕಾರ್ಯಕ್ರಮದಲ್ಲಿ ಗುರುವಾರ ಭಕ್ತಾದಿಗಳು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್


ದೀಪಾವಳಿ ಹಬ್ಬದ ಅಂಗವಾಗಿ ಗುರುವಾರ ರಾಜರಾಜೇಶ್ವರಿ ನಗರದಲ್ಲಿ ಮಕ್ಕಳು ಪಟಾಕಿ ಸಿಡಿಸಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ ಅನೂಪ್ ರಾಘ್ ಟಿ.

ಸೌರ ವಿದ್ಯಮಾನದ ಸಮಯ, ವೇಗ ನಿಖರವಾಗಿ ಅಂದಾಜು ಮಾಡಿದ್ದ ಭಾರತೀಯ ವಿಜ್ಞಾನಿಗಳು

ದೀಪಾವಳಿಗೆ ಧ್ರುವಪ್ರಭೆಯ ಮೆರುಗು

ಪ್ರಜಾವಾಣಿ ವಾರ್ತೆ

ನವದೆಹಲಿ: ಸೂರ್ಯನಲ್ಲಿ ಉಂಟಾಗಿದ್ದ ಸೌರಚಾಚಿಕೆಗಳಿಂದ ಭೂಮಿಯ ಉತ್ತರ ಧ್ರುವದ ಆಗಸದಲ್ಲಿ ‘ಧ್ರುವ ಪ್ರಭೆ’ ಉಂಟಾಗುವ ಸಮಯವನ್ನು ಭಾರತದ ವಿಜ್ಞಾನಿಗಳು ನಿಖರವಾಗಿ ಗುರುತಿಸಿದ್ದಾರೆ. ಆದರೆ ಅಮೆರಿಕದ ವಿಜ್ಞಾನಿಗಳು ಗುರುತಿಸಿದ್ದ ಸಮಯ ಮತ್ತು ಸೌರ ಮಾರುತದ ವೇಗವು ಭಾರಿ ವ್ಯತ್ಯಾಸವಾಗಿತ್ತು.

ಸೂರ್ಯನ ಮೇಲ್ಮೈನಲ್ಲಿ ಈಚೆಗೆ ಭಾರಿ ಪ್ರಬಲವಾದ ಸೌರ ಚಾಚಿಕೆ ಉಂಟಾಗಿತ್ತು. ಅದರ ಬೆನ್ನಲ್ಲೇ ಸೌರ ಮಾರುತ ಉಂಟಾಗಿತ್ತು. ಆ ಸೌರ ಮಾರುತವು ಭೂಮಿಯನ್ನು ತಲುಪುವುದು ಖಚಿತವಾಗಿತ್ತು. ಹೀಗಾಗಿ ವಿಶ್ವದಾದ್ಯಂತ ಖಗೋಳವಿಜ್ಞಾನಿಗಳು ಆ ಸೌರ ಮಾರುತವು ಭೂಮಿಯನ್ನು ತಲುಪುವ ಸಮಯವನ್ನು ಅಂದಾಜು ಮಾಡಿದ್ದರು.

ನವೆಂಬರ್ 4ರ ತಡರಾತ್ರಿ 2ರ ವೇಳೆಗೆ ಈ ಸೌರ ಮಾರುತವು ಭೂಮಿಯನ್ನು ತಲುಪಬಹುದು ಎಂದು ಕೋಲ್ಕತ್ತಾದ ಭಾರತೀಯ ವಿಜ್ಞಾನ, ಶೈಕ್ಷಣಿಕ ಸಂಶೋಧನಾ ಸಂಸ್ಥೆಯ (ಐಐಎಸ್‌ಇಆರ್) ವಿಜ್ಞಾನಿಗಳು ಅಂದಾಜು ಮಾಡಿದ್ದರು. ಸೌರ ಮಾರುತದ ವೇಗವು ಪ್ರತಿ ಸೆಕೆಂಡ್‌ಗೆ 768 ಕಿ.ಮೀ. ಇರಲಿದೆ ಎಂದೂ ಅಂದಾಜಿಸಿದ್ದರು.


ಅಮೆರಿಕದ ಅಲಾಸ್ಕಾದ ಗ್ಲೇಸಿಯರ್ ಬೇ ಬಳಿ ಗೋಚರಿಸಿದ ಧ್ರುವ ಪ್ರಭೆ – ರಾಯಿಟರ್ಸ್ ಚಿತ್ರ

ನವೆಂಬರ್ 4ರ ಬೆಳಿಗ್ಗೆ 4.30ರ ವೇಳೆಗೆ, ಪ್ರತಿ ಸೆಕೆಂಡ್‌ಗೆ ಸುಮಾರು 700 ಕಿ.ಮೀ. ವೇಗದಲ್ಲಿ ಸೌರ ಮಾರುತವು ಭೂಮಿಯನ್ನು ತಲುಪಲಿದೆ ಎಂದು ಅಮೆರಿಕದ ವಿಜ್ಞಾನಿಗಳು ಅಂದಾಜಿಸಿದ್ದರು.

ಆದರೆ, ವಾಸ್ತವದಲ್ಲಿ ಸೌರ ಮಾರುತವು ನವೆಂಬರ್ 4ರ ತಡರಾತ್ರಿ 1ರ ವೇಳೆಗೆ ಭೂಮಿಯನ್ನು ತಲುಪಿತು. ಪ್ರತಿ ಸೆಕೆಂಡ್‌ಗೆ 750-800 ಕಿ.ಮೀ. ವೇಗದಲ್ಲಿತ್ತು. ಭಾರತದ ವಿಜ್ಞಾನಿಗಳ ಅಂದಾಜು ವಾಸ್ತವಕ್ಕೆ ಹತ್ತಿರವಾಗಿತ್ತು.

ಸೌರಚಾಚಿಕೆ, ಸೌರಮಾರುತ ಮತ್ತು ಧ್ರುವಪ್ರಭೆಗಳು ಅತ್ಯಂತ ಸಂಕೀರ್ಣವಾದ ವಿದ್ಯಮಾನಗಳಾಗಿವೆ. ಕೃತಕ ಉಪಗ್ರಹಗಳು, ಸಾಗರದಾಳದ ಕೇಬಲ್‌ಗಳು, ವಿದ್ಯುತ್ ಗ್ರಿಡ್‌ಗಳು ಮತ್ತು ಮೊಬೈಲ್ ಗೋಪುರಗಳಿಗೆ ಪ್ರಬಲ ಸೌರ ಮಾರುತಗಳಿಂದ ಹಾನಿಯಾಗುತ್ತದೆ. ಹೀಗಾಗಿ ಸೌರ ಮಾರುತವು ಯಾವಾಗ ಭೂಮಿಯನ್ನು ತಲುಪುತ್ತದೆ ಎಂಬುದನ್ನು ಅಂದಾಜಿಸುವುದು ಅತ್ಯಂತ ಮಹತ್ವದ್ದು.

ದೀಪಾವಳಿ ಮಾರುತ: ಈ ರೀತಿಯ ಸೌರ ಮಾರುತಗಳಿಗೆ ಒಂದೊಂದು ಹೆಸರು ನೀಡಲಾಗುತ್ತದೆ. ಗುರುವಾರದ ಸೌರ ಮಾರುತಕ್ಕೆ ‘ದೀಪಾವಳಿ ಮಾರುತ’ ಎಂದು ನಾಮಕರಣ ಮಾಡಲಾಗಿದೆ.

2000ರಲ್ಲಿ ಸಂಭವಿಸಿದ್ದ ಸೌರ ಮಾರುತಕ್ಕೆ ‘ಬ್ಯಾಸ್ಟಿಲ್ ಡೇ ಸ್ಟಾರ್ಮ್’, 2003ರ ಸೌರ ಮಾರುತಕ್ಕೆ ‘ಹಾಲೋವಿನ್ ಡೇ ಸ್ಟಾರ್ಮ್’ ಮತ್ತು 2015ರ ಸೌರ ಮಾರುತಕ್ಕೆ ‘ಪ್ಯಾಟ್ರಿಕ್ಸ್ ಡೇ ಸ್ಟಾರ್ಮ್’ ಎಂದು ನಾಮಕರಣ ಮಾಡಲಾಗಿತ್ತು.

ಧ್ರುವ ಪ್ರದೇಶ ಬೆಳಗಿದ ಪ್ರಭೆ

ಸೌರ ಮಾರುತವು ಭೂಮಿಯನ್ನು ತಲುಪಿದಾಗ ಈ ಬಾರಿ ಧ್ರುವ ಪ್ರಭೆ ಕಾಣಿಸಿದೆ. ಭೂಮಿಯ ಉತ್ತರ ಧ್ರುವ ಮತ್ತು ಉತ್ತರ ಧ್ರುವಕ್ಕೆ ಸಮೀಪವಿರುವ ಅತಿ ಎತ್ತರದ ಪ್ರದೇಶಗಳಲ್ಲಿ ಧ್ರುವ ಪ್ರಭೆ ಗೋಚರಿಸಿದೆ.

ಸ್ಕಾಟ್‌ಲೆಂಡ್, ಐರ್ಲೆಂಡ್, ಕೆನಡಾ ಮತ್ತು ಅಮೆರಿಕದ ಉತ್ತರದ ರಾಜ್ಯಗಳಲ್ಲಿ ಧ್ರುವ ಪ್ರಭೆ ಗೋಚರಿಸಿದೆ. ಧ್ರುವ ಪ್ರಭೆಯ ಚಿತ್ರಗಳನ್ನು ಸೆರೆಹಿಡಿದಿರುವ ಜನರು, ಅವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.



ಬೆಂಗಳೂರು ನಗರದಲ್ಲಿ ಗುರುವಾರ ಸಂಜೆ ಭಾರಿ ಮಳೆ ಸುರಿದಿದ್ದು, ನೀರು ತುಂಬಿದ್ದ ಮೈಸೂರು ರಸ್ತೆಯಲ್ಲಿ ವಾಹನಗಳು ಸಂಚರಿಸಿದವು



ರಾಜರಾಜೇಶ್ವರಿ ನಗರದ ಮುಖ್ಯ ರಸ್ತೆಯಲ್ಲಿ ಭಾರಿ ಮಳೆಯಲ್ಲೇ ದ್ವಿಚಕ್ರ ವಾಹನ ಸವಾರರು ಸಂಚರಿಸಿದರು ಪ್ರಜಾವಾಣಿ ಚಿತ್ರಗಳು : ಅನೂಪ್ ರಾಘ.ಟಿ.

ಮಳೆ ಅಬ್ಬರ: ಹೊಳೆಯಂತಾದ ರಸ್ತೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ರಾತ್ರಿ ಜೋರು ಮಳೆ ಸುರಿದಿದ್ದು, ಬಹುತೇಕ ಕಡೆ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ಕಾಟನ್‌ಪೇಟೆಯ ಛಲವಾದಿ ಪಾಳ್ಯದ ಕೆಲ ಮನೆಗಳಿಗೆ ನೀರು ನುಗ್ಗಿತ್ತು.

ಕೆಲ ದಿನಗಳಿಂದ ಬಿಡುವು ನೀಡಿದ್ದ ಮಳೆ, ಮೋಡ ಕವಿದ ವಾತಾವರಣದಿಂದಾಗಿ ಆಗಾಗ ಮುನ್ಸೂಚನೆ ನೀಡುತ್ತಿತ್ತು. ಗುರುವಾರವೂ ಬೆಳಿಗ್ಗೆಯಿಂದ ನಗರದ ಹಲವೆಡೆ ಬಿಸಿಲು ಇತ್ತು. ನಂತರ, ಮೋಡ ಕವಿದ ವಾತಾವರಣವೂ ಕಾಣಿಸಿಕೊಂಡಿತ್ತು.

ನಗರದ ಹಲವೆಡೆ ಸಂಜೆಯಿಂದಲೇ ಜಿಟಿ ಜಿಟಿ ಮಳೆ ಸುರಿಯಲಾರಂಭಿಸಿತ್ತು. ಬಹುತೇಕ ಕಡೆ ರಾತ್ರಿ ಮಳೆ ಅಬ್ಬರಿಸಿ ಸುರಿಯಿತು, ಎರಡು ಗಂಟೆ ನಿರಂತರವಾಗಿ ಸುರಿದ ಮಳೆಯಿಂದಾಗಿ ನಗರದ ರಸ್ತೆಗಳಲ್ಲಿ ನೀರು ಧಾರಾಕಾರವಾಗಿ ಹರಿಯಿತು.

ರಾಜಾಜಿನಗರ, ವಿಜಯನಗರ, ದೀಪಾಂಜಲಿನಗರ, ರಾಜರಾಜೇಶ್ವರಿ ನಗರ, ಕೆಂಗೇರಿ, ಗಿರಿನಗರ, ಹೊಸಕೆರೆಹಳ್ಳಿ, ಹನುಮಂತನಗರ, ಚಾಮರಾಜಪೇಟೆ, ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ಶೇಷಾದ್ರಿಪುರ, ಮಲ್ಲೇಶ್ವರ, ಯಶವಂತಪುರ, ಪೀಣ್ಯ, ದಾಸರಹಳ್ಳಿ, ಗೊರಗುಂಟೆಪಾಳ್ಯ ಹಾಗೂ ಸುತ್ತಮುತ್ತ ಮಳೆ ಅಬ್ಬರ ಹೆಚ್ಚಿತ್ತು.

ಎಂ.ಜಿ. ರಸ್ತೆ, ಅಶೋಕನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಕೋರಮಂಗಲ, ವಿವೇಕನಗರ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಉತ್ತಮ ಮಳೆ ಆಯಿತು.

ದೀಪಾವಳಿ ಹಬ್ಬದ ಆಚರಣೆಯಲ್ಲಿದ್ದ ಜನ, ಅಗತ್ಯ ವಸ್ತುಗಳ ಖರೀದಿಗಾಗಿ ಮಾರುಕಟ್ಟೆಗಳಿಗೆ ಬಂದಿದ್ದರು. ಇದೇ ಸಂದರ್ಭದಲ್ಲೇ ಮಳೆ ಸುರಿಯಲಾರಂಭಿಸಿತ್ತು. ಪ್ರತಿಯೊಂದು ಅಂಗಡಿ ಹಾಗೂ ಮಳಿಗೆಗಳಲ್ಲಿ ಜನರು ಆಶ್ರಯ ಪಡೆದಿತ್ತು ಕಂಡುಬಂತು.

ರಸ್ತೆಯ ಅಕ್ಕ-ಪಕ್ಕದಲ್ಲಿ ವಾಹನ ನಿಲ್ಲಿಸಿದ್ದ ಸವಾರರು ಸಹ ಮಳಿಗೆಗಳಲ್ಲಿ ಆಶ್ರಯ ಪಡೆದಿದ್ದರು. ಸುರಿವ ಮಳೆಯಲ್ಲೇ ಕಾರು, ಬಸ್ ಹಾಗೂ ಇತರೆ ವಾಹನಗಳು ಸಂಚರಿಸಿದವು. ಕೆಲ ವಾಹನಗಳು ಕೆಟ್ಟು ನಿಂತಿದ್ದವು.

ಶಿವಾನಂದ ವೃತ್ತದ ಕೆಳ ಸೇತುವೆ ಹಾಗೂ ಮೆಜೆಸ್ಟಿಕ್ ಕೆಳ ಸೇತುವೆಯಲ್ಲಿ ನೀರು ಹರಿಯುವಿಕೆ ಹೆಚ್ಚಿತ್ತು. ಅದರಲ್ಲೇ ವಾಹನಗಳು ಸಂಚರಿಸಿದವು. ಕೆಲ ವಾಹನಗಳು ಕೆಟ್ಟು ನಿಂತಿದ್ದ ದೃಶ್ಯಗಳೂ ಕಾಣಿಸಿದವು.

ಛಲವಾದಿಪಾಳ್ಯದ ಕೆಲವೆಡೆ ಒಳರಸ್ತೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯಿತು. ಅದೇ ನೀರು ಮನೆಗಳಿಗೆ ನುಗ್ಗಿತ್ತು. ನಿವಾಸಿಗಳು, ರಾತ್ರಿಯೀಡಿ ನೀರು ಹೊರಹಾಕಿದರು.

'ಗುರುವಾರ ಸಂಜೆಯಿಂದ ರಾತ್ರಿಯವರೆಗೂ ನಗರದಲ್ಲಿ ಉತ್ತಮ ಮಳೆ ಆಗಿದೆ. ರಸ್ತೆಯಲ್ಲಿ ನೀರು ಹರಿಯುತ್ತಿದ್ದ ಹಾಗೂ ಮರದ ಕೊಂಬೆಗಳು ಬಿದ್ದಿದ್ದ ದೂರುಗಳು ಬಂದಿದ್ದವು. ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸಿ ಸಮಸ್ಯೆ ಸರಿಪಡಿಸಲಾಗಿದೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಮೈದಾನಕ್ಕೆ ನೀರು: ರಾಜಾಜಿನಗರದ ರಾಮಮಂದಿರ ಮೈದಾನದಲ್ಲಿ ನೀರು ನುಗ್ಗಿತ್ತು. ದೀಪಾವಳಿ ಹಬ್ಬಕ್ಕೆಂದು ಮೈದಾನದಲ್ಲಿ ಪಟಾಕಿ ಮಳಿಗೆ ತೆರೆಯಲಾಗಿತ್ತು. ಮಳಿಗೆಗಳಿಗೆ ನೀರು ನುಗ್ಗಿ, ಪಟಾಕಿಗಳು ತೊಯ್ದವು.

2022ರ ಆಗಸ್ಟ್‌ಗೆ ಕಾಮಗಾರಿ ಮುಗಿಯುವ ನಿರೀಕ್ಷೆ

ನೆಲದಡಿ ವಿದ್ಯುತ್ ಮಾರ್ಗ: ವಿಳಂಬ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಅನಿಯಮಿತ ಮತ್ತು ಸುರಕ್ಷಿತ ವಿದ್ಯುತ್ ಪೂರೈಕೆಗಾಗಿ ಬೆಸ್ಕಾಂ ಕೈಗೊಂಡಿರುವ ನೆಲದಡಿ ವಿದ್ಯುತ್ ಮಾರ್ಗದ ಕಾಮಗಾರಿ ಪೂರ್ಣಗೊಳ್ಳಲು ಮುಂದಿನ ವರ್ಷದ ಆಗಸ್ಟ್‌ವರೆಗೂ ಕಾಯಬೇಕಾಗಿದೆ.

ನೆಲದಡಿ ವಿದ್ಯುತ್ ಕೇಬಲ್ ಅಳವಡಿಕೆ ಕಾಮಗಾರಿಯನ್ನು ಪ್ರತಿ ದಿನವೂ ವಿವಿಧೆಡೆ ಕೈಗೊಳ್ಳಲಾಗುತ್ತಿದೆ. ಇದರಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುವುದು ಸಾಮಾನ್ಯವಾಗಿದ್ದು, ಈ ಸಮಸ್ಯೆಯನ್ನು ಆಗಸ್ಟ್‌ವರೆಗೂ ಜನ ಸಹಿಸಿಕೊಳ್ಳಬೇಕಾಗುತ್ತದೆ.

ಬೆಂಗಳೂರು ಮಹಾನಗರ (ಮೆಟ್ರೊಪಾಲಿಟನ್) ಪ್ರದೇಶ ವಲಯದಲ್ಲಿರುವ (ಬಿಎಂಎಜೆಡ್) 11 ಕೆವಿ ಸಾಮರ್ಥ್ಯದ ವಿದ್ಯುತ್ ಕೇಬಲ್‌ಗಳನ್ನು ಪರಿವರ್ತಿಸಿ ನೆಲದಡಿಯಲ್ಲಿ ಕೇಬಲ್‌ಗಳನ್ನು ಅಳವಡಿಸಲಾಗುತ್ತಿದೆ. 2018–19ರ ಬಜೆಟ್‌ನಲ್ಲಿಯೇ ಈ ಬಗ್ಗೆ ಘೋಷಣೆ ಮಾಡಲಾಗಿದ್ದು, 2019ರ ಸೆಪ್ಟೆಂಬರ್‌ನಿಂದ ಕಾಮಗಾರಿ ಆರಂಭವಾಗಿದೆ.

ನೆಲದ ಅಡಿಯಲ್ಲಿ ವಿದ್ಯುತ್ ಕೇಬಲ್ ಅಳವಡಿಸುವ ಕಾಮಗಾರಿಗಳನ್ನು ನಾಲ್ಕು ಹಂತಗಳಲ್ಲಿ ಕೈಗೊಳ್ಳಲಾಗಿದೆ. ಒಟ್ಟು 7085.01 ಕಿಲೋ ಮೀಟರ್ ಉದ್ದದ ಕಾಮಗಾರಿ ಇದಾಗಿದ್ದು, ಇದುವರೆಗೆ 4245.02 ಕಿಲೋ ಮೀಟರ್‌ನಷ್ಟು ಪೂರ್ಣಗೊಂಡಿದೆ. ಅಂದರೆ, ಶೇಕಡ 60ರಷ್ಟು ಕಾಮಗಾರಿ ಮಾತ್ರ ಸಂಪನ್ನವಾಗಿದೆ.

ಬಾಕಿ ಉಳಿದಿರುವ 2839.98 ಕಿಲೋ ಮೀಟರ್‌ನಷ್ಟು ಕಾಮಗಾರಿಯಲು ಇನ್ನೂ ಕನಿಷ್ಠ ಹತ್ತು ತಿಂಗಳು ಕಾಯಬೇಕು ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದರು.

ಮೊದಲ ಹಂತದಲ್ಲಿ ಎಚ್‌ಎಸ್‌ಆರ್, ಇಂದಿರಾನಗರ, ಪೀಣ್ಯ, ಮಲ್ಲೇಶ್ವರ, ರಾಜಾಜಿನಗರದ ವಿಭಾಗಗಳಲ್ಲಿ ಕಾಮಗಾರಿ ಕೈಗೊಳ್ಳಲಾಗಿದ್ದು, ಶೇಕಡ 71.49ರಷ್ಟು ಪೂರ್ಣಗೊಂಡಿದೆ.

ಎರಡನೇ ಹಂತದಲ್ಲಿ ಜಯನಗರ, ಆರ್.ಆರ್. ನಗರ, ಶಿವಾಜಿನಗರ, ಇಂದಿರಾನಗರ, ಹೆಬ್ಬಾಳ ಪ್ರದೇಶಗಳಲ್ಲಿ ಕೈಗೊಳ್ಳಲಾಗಿದ್ದು, ಶೇಕಡ 87.76ರಷ್ಟು ಪ್ರಗತಿ ಸಾಧಿಸಲಾಗಿದೆ.

ಮೂರನೇ ಹಂತದಲ್ಲಿ ಜಯನಗರ, ಕೆಂಗೇರಿ, ಹೆಬ್ಬಾಳ, ಜಾಲಹಳ್ಳಿ, ಶಿವಾಜಿನಗರದಲ್ಲಿನ ಕಾಮಗಾರಿಯು ಶೇಕಡ 67.32ರಷ್ಟು ಮುಗಿದಿದೆ.

ಅತಿ ಹೆಚ್ಚು ಮಾಹಿತಿ ತಂತ್ರಜ್ಞಾನ ಕಂಪನಿಗಳಿರುವ ಪ್ರದೇಶದಲ್ಲೇ ನಾಲ್ಕನೇ ಹಂತದ ಕಾಮಗಾರಿ ನಡೆಯುತ್ತಿದ್ದು, ಇದು ನಿಧಾನಗತಿಯಲ್ಲಿ ಸಾಗಿದೆ. ವೈಟ್‌ಫೀಲ್ಡ್, ಬೊಮ್ಮನಹಳ್ಳಿ, ಮಹದೇವಪುರ, ಜಾಲಹಳ್ಳಿ, ಕೋರಮಂಗಲ, ಮಡಿವಾಳ, ಬೆಳ್ಳಂದೂರು ಮತ್ತು ಕೆ.ಆರ್.ಪುರ ಪ್ರದೇಶಗಳಲ್ಲಿ ಕೈಗೊಂಡಿರುವ ಕಾಮಗಾರಿಯಲ್ಲಿ ಶೇಕಡ 24.42ರಷ್ಟು ಮಾತ್ರ ಪ್ರಗತಿ ಸಾಧಿಸಲಾಗಿದೆ. ಹೀಗಾಗಿ, ಈ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಮುಂದಿನ ದಿನಗಳಲ್ಲಿ ಹೆಚ್ಚಾಗುವ ಸಾಧ್ಯತೆ ಇದೆ.

'ವಿದ್ಯುತ್ ಕೇಬಲ್ ಅಳವಡಿಕೆಯ ಕಾರ್ಯ ಆರಂಭದಲ್ಲಿ ವೇಗವಾಗಿ ಸಾಗಿತ್ತು. ಆದರೆ, ಕೋವಿಡ್ ಕಾರಣದಿಂದ ಕೆಲ ತಿಂಗಳುಗಳ ಕಾಲ ಬಹುತೇಕ ಸ್ಥಗಿತಗೊಂಡಿತ್ತು. ಮತ್ತೆ ಈಗ ಸಹಜ ಸ್ಥಿತಿಗೆ ಮರಳಿರುವುದರಿಂದ ತ್ವರಿತಗತಿಯಲ್ಲಿ ಮುಗಿಸುವ ಪ್ರಯತ್ನ ಮಾಡಲಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ನೆಲದಡಿ ವಿದ್ಯುತ್ ಕೇಬಲ್ ಅಳವಡಿಕೆ– ಕಾಮಗಾರಿ ವಿವರ

ಹಂತ	ಕೇಬಲ್ ಅಳವಡಿಸುವ ಗುರಿ	ಪ್ರಗತಿ (ಕಿ.ಮೀ.ಗಳಲ್ಲಿ)
1	1284.40	918.26
2	1697.75	1490.01
3	1945.91	1309.95
4	2156.95	526.81

ಪ್ರಜಾವಾಣಿ ವಿಶೇಷ

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 5ರಿಂದ 9ರವರೆಗೆ ನಗರದ ವಿವಿಧ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ನಗರದ ವಿದ್ಯುತ್ ಪೂರೈಕೆ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ನ.5: ವಾಜರಹಳ್ಳಿ, ಬೇಗಿಹಳ್ಳಿ, ಮಲ್ಲಸಂದ್ರ, ರಾಮಸಂದ್ರ, ವಡ್ಡರಪಾಳ್ಯ, ಅಣ್ಣಯ್ಯನದೊಡ್ಡಿ, ರಾಗಿಹಳ್ಳಿ, ಓಡಿಮಾರನದೊಡ್ಡಿ, ಶಿವನಹಳ್ಳಿ, ಮೂಡಲಯ್ಯನದೊಡ್ಡಿ, ಮಂಟಪ.

ನ.6: ಬ್ರಾಡ್ ವೇ ರಸ್ತೆ, ಕಾರ್ಪೊರೇಷನ್ ರಸ್ತೆ, ಸ್ಟೇಷನ್ ರಸ್ತೆ, ಕ್ವೀನ್ಸ್ ರಸ್ತೆ, ಮಿಲ್ಲರ್ಸ್ ರಸ್ತೆ, ಕನ್ನಿಂಗ್ ಹ್ಯಾಮ್ ರಸ್ತೆ, ಅಲಿ ಅಸ್ಕರ್ ರಸ್ತೆ, ವೆಂಕಟಪ್ಪ ರಸ್ತೆ, ಮುನಿಸ್ವಾಮಿ ರಸ್ತೆ, ಪಾಯಿಸ್ ಗಾರ್ಡನ್, ಚಾಂದನಿ ಚೌಕ್, ಬಂಬೂಬಜಾರ್, ನೆಹರೂಪುರ, ಮಕಾನ್ ಕಾಂಪೌಂಡ್ ರಸ್ತೆ, ಎಸ್. ಪಿ. ಸ್ಟ್ರೀಟ್, ಸೆಪ್ಪಿಂಗ್ ರಸ್ತೆ, ಹೊಸ ಮಾರ್ಕೆಟ್ ರಸ್ತೆ, ಚೈನ ದೇವಸ್ಥಾನದ ರಸ್ತೆ, ಚಿಕ್ಕ ಬಜಾರ್ ರಸ್ತೆ, ಇನ್ಫೆಂಟ್ರಿ ರಸ್ತೆ, ವಿಶ್ವೇಶ್ವರಯ್ಯ ಟವರ್, ಪೊಲೀಸ್ ಕಮಿಷನರ್ ಕಚೇರಿ, ಎಂ.ಎಸ್. ಬಿಲ್ಡಿಂಗ್, ವಸಂತನಗರ, ದಾಬಸ್‌ಪೇಟೆ, ಎಂಇಜಿ ಸೆಂಟರ್ ಹಾಗೂ ಎಲೆಕ್ಟ್ರಾನಿಕ್ ಸಿಟಿ ಎರಡನೇ ಹಂತ, ವೀರಸಂದ್ರ, ಗೊಲ್ಲಹಳ್ಳಿ, ದೊಡ್ಡನಾಗಮಂಗಲ, ಅನಂತನಗರ, ಇಂಪೀರಿಯ ಬಯೋಕಾನ್, ಇನ್ಫೋಸಿಸ್, ಟೆಕ್‌ಮಹೀಂದ್ರ, ಚೊಕ್ಕಸಂದ್ರ, ಶ್ರೀನಗರ, ಬ್ಯಾಂಕ್ ಕಾಲೋನಿ, ಗಿರಿನಗರ, ಶ್ರೀನಿಂಗ್ ಅಪಾರ್ಟ್‌ಮೆಂಟ್, ನ್ಯೂ ಟಿಂಬರ್ ಯಾರ್ಡ್ ಲೇಔಟ್, ಹನುಮಂತನಗರ, ಮುನೇಶ್ವರ ಬ್ಲಾಕ್, ಬನಶಂಕರಿ ಎರಡನೇ ಹಂತ, ವಿದ್ಯಾಪೀಠ ವೃತ್ತ, ಸೀತಾ ಸರ್ಕಲ್, ನಾಗೇಂದ್ರ ಬ್ಲಾಕ್, ಬುಲ್ ಟೆಂಪಲ್ ರೋಡ್, ಪ್ರಮೋದ್ ಲೇಔಟ್, ಪಿಇಎಸ್ ಎಂಜಿನಿಯರಿಂಗ್ ಕಾಲೇಜು, ಕತ್ರಿಗುಪ್ಪೆ, ಅವಲಹಳ್ಳಿ, ವೀರಭದ್ರ ನಗರ, ತ್ಯಾಗರಾಜ ನಗರ, ಬಸವನಗುಡಿ, ಬನಶಂಕರಿ ಮೂರನೇ ಹಂತ, ಬೊಮ್ಮನಹಳ್ಳಿ ಮತ್ತು ಹೊಂಗಸಂದ್ರ.

ನಗರದ ಪಶ್ಚಿಮ ವೃತ್ತದ ವಿಪ್ರೊ ಲೇಔಟ್, ಸಪ್ತಗಿರಿ ಲೇಔಟ್, ಗೋಪಾಲನಗರ, ಟಿ.ಜಿ. ಪಾಳ್ಯ, ಅಂದಾನಪ್ಪ ಲೇಔಟ್, ರಂಗನಾಥ ಕಾಲೋನಿ, ವಿಜಯನಗರ, ಹೊಸಹಳ್ಳಿ, ಹಂಪಿನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ಸುಬ್ಬಣ್ಣ ಗಾರ್ಡನ್, ಮೂಡಲಪಾಳ್ಯ, ಚಂದ್ರಾ ಲೇಔಟ್, ಮಾರುತಿನಗರ, ಲಕ್ಷ್ಮಣ ನಗರ, ಸಂಜೀವಿನಿ ನಗರ, ಹೆಗ್ಗನಹಳ್ಳಿ, ಸುಂಕದಕಟ್ಟೆ, ನರಸಾಪುರ ಸುತ್ತಮುತ್ತ ಪ್ರದೇಶ, ಜಯನಗರ, ಇಸ್ರೊ ಲೇಔಟ್, ಪದ್ಮನಾಭನಗರ, ಆರ್‌ಬಿಐ, ಅರೇಹಳ್ಳಿ.

ನ.8: ಅವಲಹಳ್ಳಿ, ಜೆ.ಪಿ. ನಗರ 8ನೇ ಫೇಸ್, ರಾಯಲ್ ಲೇಕ್ ಫ್ರಂಟ್ ಮೂರನೇ ಹಂತ, ರಾಘವನಪಾಳ್ಯ.

ನ.9: ರಾಯಲ್ ಕೌಂಟಿ, ವಡ್ಡರ ಪಾಳ್ಯ, ಪ್ಲಾಟಿನಂ ಸಿಟಿ ಅಪಾರ್ಟ್‌ಮೆಂಟ್, ಜೆ.ಆರ್.ಹೈಟ್ ಅಪಾರ್ಟ್‌ಮೆಂಟ್, ಜೆ.ಪಿ.ನಗರ ಒಂಬತ್ತನೇ ಹಂತ, ಆರ್ಯ ಹಂಸ ಅಪಾರ್ಟ್‌ಮೆಂಟ್, ಗೌರವ ನಗರ, ದಿಗ್‌ಬಜಾರ್, ಶ್ರೇಯಸ್ ಕಾಲೋನಿ, ಅನ್ನಪೂರ್ಣೇಶ್ವರಿ ಬಡಾವಣೆ, ನವೋದಯ ನಗರ, ಕೊತ್ತನೂರು, ಕೃಷ್ಣ ನಗರ, ಆರ್.ಎಲ್.ಎಫ್ ಮೊದಲ ಹಂತ, ಎರಡನೇ ಹಂತ, ಕನಕನಹಳ್ಳಿ, ಲಕಾಸ ಹೋಟೆಲ್, ಆಸ್ಟರ್ ಗ್ರಾಂಡ್ ಅಪಾರ್ಟ್‌ಮೆಂಟ್, ಜೆ.ಪಿ ಪಾಳ್ಯ, ಎರಡನೇ ಮುಖ್ಯ ರಸ್ತೆ, ವಿಜಯಲಕ್ಷ್ಮಿ ಟಿಂಬರ್, ವಿವರ್ಸ್ ಕಾಲೋನಿ, ಗುಟ್ಟಗೆರೆ, ರಾಗಿಹಳ್ಳಿ, ಕಸರಗುಪ್ಪೆ, ನ್ಯಾಷನಲ್ ಪಾರ್ಕ್, ಬಸವನಪುರ, ಮೈಲಸಂದ್ರ, ಬೈತರಾಯನದೊಡ್ಡಿ, ಲಕ್ಷ್ಮೀಪುರ, ಶಿವನಹಳ್ಳಿ.



ಜಕ್ಕೂರಿನ ಭಾರತ್ ಸೇವಾಶ್ರಮ ಸಂಘದ ವತಿಯಿಂದ ದೀಪಾವಳಿ ಪ್ರಯುಕ್ತ ಬಡವರಿಗೆ ಕಂಬಳಿ, ವಸ್ತ್ರ ಹಾಗೂ ವಿದ್ಯುದ್ದೀಪಗಳನ್ನು ವಿತರಿಸಲಾಯಿತು. ಸಂಘದ ಜಕ್ಕೂರು ಶಾಖೆಯ ಮುಖ್ಯಸ್ಥ ಶಿವಪ್ರೇಮಾನಂದ ಸ್ವಾಮೀಜಿ, ಕೋಲ್ಕತ್ತ ಶಾಖೆಯ ಮುಖ್ಯಸ್ಥ ಪದ್ಮನಾಭಾನಂದ ಸ್ವಾಮೀಜಿ, ಡಾ.ಜಯಂತಕುಮಾರ್ ಜಾನ, ಸಪನ್‌ಸೇನ್ ಗುಪ್ತ ಇದ್ದರು.

ದೀಪಾವಳಿ: ಕಂಬಳಿ, ವಸ್ತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಜಕ್ಕೂರಿನ ಭಾರತ್ ಸೇವಾಶ್ರಮ ಸಂಘದ ಕಚೇರಿಯಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ 500ಕ್ಕೂ ಹೆಚ್ಚುಮಂದಿ ಬಡವರಿಗೆ ಕಂಬಳಿ, ವಸ್ತ್ರ ಹಾಗೂ ವಿದ್ಯುದ್ದೀಪಗಳನ್ನು ವಿತರಿಸಲಾಯಿತು.

ಸಂಘದ ಜಕ್ಕೂರು ಶಾಖೆಯ ಮುಖ್ಯಸ್ಥ ಶಿವಪ್ರೇಮಾನಂದ ಸ್ವಾಮೀಜಿ, '15 ವರ್ಷಗಳಿಂದ ದೀಪಾವಳಿ ಪ್ರಯುಕ್ತ ಸಮಾರಂಭವನ್ನು ಆಯೋಜಿಸಲಾಗುತ್ತಿದೆ. ಬೆಂಗಳೂರು ಹಾಗೂ ಇತರೆ ಜಿಲ್ಲೆಗಳಲ್ಲಿ ನೆಲೆಸಿರುವ ಸಾವಿರಾರು ಮಂದಿ ಬೆಂಗಾಲಿ ಭಾಷಿಕರು ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು.

ರಾಜ್ಯೋತ್ಸವ ಪ್ರಶಸ್ತಿ– ಪಾರಂಪರಿಕ ಕಲೆಗಳ ಕಡೆಗಣನೆ: ದೂರು

ಬೆಂಗಳೂರು: ಸಾಂಸ್ಕೃತಿಕವಾಗಿ ಭವ್ಯ ಪರಂಪರೆ ಹೊಂದಿರುವ ಕಲಾ ಪ್ರಕಾರಗಳನ್ನು ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ರಾಜ್ಯ ಸರ್ಕಾರ ಪರಿಗಣಿಸಿಲ್ಲ ಎಂದು ಕರ್ನಾಟಕ ಶಾಸ್ತ್ರೀಯ ನೃತ್ಯಗಾರರ ಒಕ್ಕೂಟದ ಅಧ್ಯಕ್ಷ ಸಾಯಿ ವೆಂಕಟೇಶ್ ಬೇಸರ ವ್ಯಕ್ತಪಡಿಸಿದರು.

'ಶಾಸ್ತ್ರೀಯ ನೃತ್ಯದ ಪರಂಪರೆ ಹೊಯ್ಸಳರ ಕಾಲದಿಂದಲೂ ಬಂದಿದೆ. ಈ ಕಲೆಯನ್ನು ಪ್ರತಿನಿಧಿಸುವ ಐತಿಹ್ಯ ಬೇಲೂರಿನಲ್ಲಿದೆ. ಈ ಕಲೆ ಪಸರಿಸಲು ಹಲವರು ಕೊಡುಗೆ ನೀಡಿದ್ದಾರೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸುಗಮ ಸಂಗೀತ, ಹಿಂದೂಸ್ತಾನಿ ಗಾಯನ ಸೇರಿ ಮತ್ತಿತರ ಕ್ಷೇತ್ರಗಳನ್ನು ಕಡೆಗಣಿಸಿರುವುದು ಕಲಾವಿದರಲ್ಲಿ ನೋವುಂಟು ಮಾಡಿದೆ. ಸಾಂಸ್ಕೃತಿಕ ಉತ್ಸವಗಳಲ್ಲೂ ಸರ್ಕಾರ, ಸಂಘ ಸಂಸ್ಥೆಗಳು ಶಾಸ್ತ್ರೀಯ ನೃತ್ಯ ಕ್ಷೇತ್ರವನ್ನು ಕಡೆಗಣಿಸುವ ಮೂಲಕ ಅಪಮಾನ ಮಾಡುತ್ತಿವೆ. ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ಸರ್ಕಾರ ನೋಡಿಕೊಳ್ಳಬೇಕು. ಈ ಸಂಬಂಧ ಸರ್ಕಾರಕ್ಕೂ ಮನವಿ ಸಲ್ಲಿಸಲಿದ್ದೇವೆ' ಎಂದು ತಿಳಿಸಿದರು.

ವೀಣೆ ಕಲಾವಿದೆ ಡಾ.ಸುಮಾ ಸುಧೀಂದ್ರ, ನೃತ್ಯ ಕಲಾವಿದೆ ಶೋಭಾ ಧನಂಜಯ್, ಹಿಂದುಸ್ತಾನಿ ಗಾಯಕ ವಿಶ್ವನಾಥ್, ಸುಗಮ ಸಂಗೀತ ಕಲಾವಿದ ಕೆ.ಎಲ್. ಕೃಷ್ಣಮೂರ್ತಿ, ಗಾಯಕ ಶ್ರೀನಿವಾಸ ಉಡುಪ, ಹಿರಿಯ ಕಲಾವಿದ ಭವಾನಿ ಶಂಕರ್ ಇದ್ದರು.

ಹೋಟೆಲ್ ಊಟ, ತಿಂಡಿ ದರ ಶೀಘ್ರವೇ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ, ಅಡುಗೆ ಅನಿಲ, ದಿನಸಿ ಪದಾರ್ಥಗಳ ಸೇರಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಹೋಟೆಲ್ ಉದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದು, ಊಟ, ತಿಂಡಿ ತಿನಿಸುಗಳ ದರ ಏರಿಕೆಗೆ ಬೆಂಗಳೂರಿನ ಹೋಟೆಲ್ ಮಾಲೀಕರು ಸಿದ್ಧತೆ ನಡೆಸಿದ್ದಾರೆ.

'ವಾಣಿಜ್ಯ ಬಳಕೆಯ 19 ಕೆ.ಜಿ ತೂಕದ ಅಡುಗೆ ಅನಿಲದ ಸಿಲಿಂಡರ್ ದರ ₹2 ಸಾವಿರ ದಾಟಿದೆ. ಗೃಹ ಬಳಕೆ ಅಡುಗೆ ಅನಿಲಕ್ಕೆ ಜಿಎಸ್‌ಟಿ ದರ ಶೇ 5ರಷ್ಟಿದ್ದರೆ, ವಾಣಿಜ್ಯ ಬಳಕೆ ಅಡುಗೆ ಅನಿಲಕ್ಕೆ ಶೇ 18ರಷ್ಟು ಜಿಎಸ್‌ಟಿ ದರ ನಿಗದಿ ಮಾಡಲಾಗಿದೆ. ಅಡುಗೆ ಎಣ್ಣೆ ಬೆಲೆ ಲಾಕ್‌ಡೌನ್‌ಗೂ ಮುನ್ನ 15 ಕೆ.ಜಿ ಡಬ್ಬಕ್ಕೆ ₹1,350 ಇತ್ತು. ಈಗ ಅದು ₹2,500 ತನಕ ಏರಿಕೆಯಾಗಿದೆ. ಸರಾಸರಿ ಶೇ 60ರಿಂದ ಶೇ 70ರಷ್ಟು ದರ ಏರಿಕೆಯಾಗಿದೆ. ಬೇಳೆಕಾಳುಗಳು ಮತ್ತು ತರಕಾರಿ ದರಗಳೂ ಲಂಗುಲಗಾಮಿಲ್ಲದೇ ಏರಿಕೆಯಾಗುತ್ತಿದೆ. ಹಾಗಾಗಿ ಊಟ, ತಿಂಡಿ ತಿನಿಸುಗಳ ದರ ಏರಿಕೆ ಅನಿವಾರ್ಯ' ಎನ್ನುತ್ತಾರೆ ಬೆಂಗಳೂರು ಹೋಟೆಲುಗಳ ಸಂಘದ ಗೌರವ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್.

'ಅಡುಗೆ ಎಣ್ಣೆ ದರ ಹೆಚ್ಚಾಗಿದೆ ಎಂಬ ಕಾರಣಕ್ಕೆ ಒಂದು ಪ್ಲೇಟ್ ಬಜ್ಜಿ ದರವನ್ನು ₹40ಕ್ಕೆ ಏರಿಕೆ ಮಾಡಿದರೆ ಜನ ಒಪ್ಪುವುದಿಲ್ಲ. ಬೆಂಗಳೂರಿನಲ್ಲಿ ₹20 ರೂಪಾಯಿ ಒಳಗೆ ಊಟ ತಿಂಡಿ ನೀಡುವ ಹೋಟೆಲ್‌ಗಳಿಂದ ₹2 ಸಾವಿರ ತನಕ ಊಟದ ದರ ಇರುವ ಹೋಟೆಲ್‌ಗಳಿವೆ. ದರ ಏರಿಕೆ ಎಷ್ಟಿರಬೇಕು ಎಂಬುದನ್ನು ಸಂಘ ನಿರ್ಧರಿಸುವುದಿಲ್ಲ. ಸಾಮರ್ಥ್ಯಕ್ಕೆ ತಕ್ಕಂತೆ ದರ ಏರಿಕೆ ಮಾಡಿಕೊಳ್ಳುವ ಜವಾಬ್ದಾರಿಯನ್ನು ಸದಸ್ಯರಿಗೆ ಬಿಟ್ಟಿದ್ದೇವೆ' ಎಂದರು.

'ದರ ಏರಿಕೆ ಮಾಡದಿದ್ದರೆ ಮಾಲೀಕರು ಸಾಲ ಮಾಡಿಕೊಂಡು ಹೋಟೆಲ್‌ಗಳನ್ನು ಮುಚ್ಚಬೇಕಾದ ಸ್ಥಿತಿಗೆ ತಲುಪಬೇಕಾಗುತ್ತದೆ. ಬಹುತೇಕ ಶೇ 10ರಷ್ಟು ದರ ಏರಿಕೆ ಆಗಲಿದೆ. ಡಿಸೆಂಬರ್‌ನಲ್ಲಿ ಹೆಚ್ಚಳವಾಗಲಿದೆ' ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಹೇಳಿದರು.

ಡೀಸೆಲ್ ದರ ಕಡಿಮೆ ಆಗಿರುವುದರಿಂದ ಮತ್ತೊಂದು ಸುತ್ತಿನ ಸಭೆ ನಡೆಸಿ ದರ ಏರಿಕೆ ಪ್ರಮಾಣ ಎಷ್ಟಿರಬೇಕು ಎಂಬುದನ್ನು ತೀರ್ಮಾನಿಸಲಾಗುವುದು. ಆದರೂ, ದರ ಏರಿಕೆ ಅನಿವಾರ್ಯ ಎಂದರು.

ಪಿರಮಿಡ್ ಸಂಗೀತ ಧ್ಯಾನ ಉತ್ಸವ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿರಮಿಡ್ ಮ್ಯೂಸಿಕ್ ಮೆಡಿಟೇಷನ್ ಅಕಾಡೆಮಿಯು ಪಿರಮಿಡ್ ವ್ಯಾಲಿ ಇಂಟರ್ ನ್ಯಾಷನಲ್ ಸಹಯೋಗದೊಂದಿಗೆ ಇದೇ 5ರಿಂದ 8ರವರೆಗೆ 'ಪಿರಮಿಡ್ ಸಂಗೀತ ಧ್ಯಾನ ಉತ್ಸವ' ಏರ್ಪಡಿಸಿದೆ. ಪ್ರತಿ ದಿನವೂ ಬೆಳಿಗ್ಗೆ 5ರಿಂದ ರಾತ್ರಿ 8.30ರವರೆಗೆ ಸಂಗೀತ ದಿಗ್ಗಜರ ಕಛೇರಿಗಳು ಹಾಗೂ ಉಪನ್ಯಾಸ ಕಾರ್ಯಕ್ರಮಗಳು ನಡೆಯಲಿವೆ.

ಇದೇ 5ರಂದು ಪಂ. ಸಿದ್ಧಾರ್ಥ ಬೆಳ್ಮಣ್ಣು ಅವರಿಂದ ಹಿಂದೂಸ್ಥಾನಿ ಸಂಗೀತ, ವಿದುಷಿ ಯು.ವಿ.ನಾಗಲಕ್ಷ್ಮಿ ಅವರಿಂದ ಕರ್ನಾಟಕ ಸಂಗೀತ ಹಾಗೂ ವಿಪುಲ್ ರಿಖಿ ಬಳಗದಿಂದ ಕಬೀರರ ದೋಹಾ ಕಛೇರಿಗಳು ಇರಲಿವೆ. ಬ್ರಹ್ಮರ್ಷಿ ಪತ್ರಿಜಿ ಸಂದೇಶ, ಈಶ್ವರ ದೈದೋಟ ಮತ್ತು ವಿದ್ವಾನ್ ಆರ್. ಸತ್ಯಕುಮಾರ್ ಅವರು ಭಾಗವಹಿಸಲಿದ್ದಾರೆ.

ಇದೇ 6ರಂದು ಡಾ.ಸಂಜಯ್ ಕಿಂಗಿ ಅವರ ಸಿತಾರ್ ಕಛೇರಿ, ಡಾ.ಟಿ.ಎಸ್. ಸತ್ಯವತಿ ಅವರಿಂದ ಕರ್ನಾಟಕ ಸಂಗೀತ ಹಾಡುಗಾರಿಕೆ, ಸಂಗೀತ ವಿದ್ವಾನ್ ಎಸ್.ಕೆ.ಪದ್ಮನಾಭ ಆಚಾರ್ಯ ಹಾಗೂ ಸಂಗೀತ ವಿದ್ವಾನ್ ಕೆ.ಎಸ್.ವಾಸುಕಿ (ವಾಯೊಲಿನ್) ಕಛೇರಿ, ವಿದುಷಿ ಸ್ವಪ್ನಾ ಅಶೋಕ್ ಹಾಡುಗಾರಿಕೆ, ಪಂ.ಚಿಂತನ್ ಮತ್ತು ದವಾಯ್ ಮಿಸ್ತ್ರಿ ಅವರಿಂದ ಹಿಂದೂಸ್ಥಾನಿ ಕಛೇರಿಗಳು ಇರಲಿವೆ. ಅಯ್ಯಪ್ಪ ಪಿಂಡಿ ಅವರು ಆತ್ಮಗಳ ಧ್ವನಿ ಕುರಿತು ಆಧ್ಯಾತ್ಮಿಕ ಉಪನ್ಯಾಸ ನೀಡಲಿದ್ದಾರೆ.

ಇದೇ 7ರಂದು ವಿದ್ವಾನ್ ಡಿ.ಅರುಣ್ ಕುಮಾರ್ ಮತ್ತು ಬಳಗದಿಂದ ತಾಳವಾದ್ಯ ಮೇಳ, ವಿದ್ವಾನ್ ವಿನಯ ಶರ್ವ ಮತ್ತು ಬಳಗದಿಂದ ಕರ್ನಾಟಕ ಸಂಗೀತ ಕಛೇರಿ, ಡಾ.ಸೂರ್ಯ ಪ್ರಸಾದ್, ಕಲ್ಯೆಮಾಮನಿ ಪರೂರ್ ಎಂ.ಎ.ಕೃಷ್ಣ ಸ್ವಾಮಿ ಅವರ ಉಪನ್ಯಾಸ, ಮಾಸ್ಟರ್ ಅಚ್ಚುತ್ ಎಂ.ಆತ್ರೇಯ ಮತ್ತು ಬಳಗದಿಂದ ಕೊಳಲು ವಾದನ, ಎಂ.ಎ.ಕೃಷ್ಣಸ್ವಾಮಿ, ವಿದುಷಿ ಎಂ.ಕೆ. ಅನಂತಲಕ್ಷ್ಮೀ ಮತ್ತು ಮಾಸ್ಟರ್ ಪರೂರ್ ಎಂ.ಕೆ.ಅನಂತಬಾಲಸುಬ್ರಹ್ಮಣ್ಯಂ ಅವರಿಂದ ವಯೋಲಿನ್ ಕಾರ್ಯಕ್ರಮವಿರಲಿದೆ.

ಇದೇ 8ರಂದು ವಿದ್ವಾನ್ ಎಸ್.ಪಿ..ಗಣೇಶ್ ಕುಮಾರ್ ಅವರಿಂದ ವಯೋಲಿನ್, ಕಾಂಚನ ಸೋದರಿಯರಿಂದ ಕರ್ನಾಟಕ ಹಾಡುಗಾರಿಕೆ, ಸಂಗೀತ ವಿದ್ವಾನ್ ಡಿ.ವಿ.ನಾಗರಾಜ್ (ವಯೋಲಿನ್) ಮತ್ತು ಸಂಗೀತ ವಿದ್ವಾನ್ ಎ.ಪಿ. ರಾವ್ ಅವರಿಂದ ಕಛೇರಿ, ಖ್ಯಾತ ಸಂಗೀತಗಾರರಿಂದ ಪಂಚರತ್ನ ಕೀರ್ತನೆಗಳು ಹಾಗೂ ಕರ್ನಾಟಕ ಕಲಾಸಿರಿ ಆನೂರು ಅನಂತಕೃಷ್ಣಶರ್ಮ ಮತ್ತು ಬಳಗದಿಂದ ಲಯ ಲಾವಣ್ಯ ಕಾರ್ಯಕ್ರಮಗಳು ನಡೆಯಲಿವೆ. ಧ್ಯಾನದ ಮೇಲೆ ಸಂಗೀತದ ಪರಿಣಾಮದ ಕುರಿತು ಗಿರಿಜಾ ರಾಜನ್ ಅವರಿಂದ ಉಪನ್ಯಾಸ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ https://www.pyramidvalley.org/pmmfest ನೋಡಬಹುದು.

ಕೆಎಸ್‌ಆರ್‌ಟಿಸಿ: 7ರಂದು ಜಂಟಿ ಸಮಾವೇಶ

ಮೈಸೂರು: ಕೆಎಸ್‌ಆರ್‌ಟಿಸಿಯ ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್‌ನ ನಾಲ್ಕು ವಿಭಾಗಗಳ ಜಂಟಿ ಸಮಾವೇಶ ನ. 7ರಂದು ಮಧ್ಯಾಹ್ನ 11.30ಕ್ಕೆ ಇಲ್ಲಿನ ಬನ್ನಿಮಂಟಪದ ಹೋಟೆಲ್ ಶೃಂಗಾರ್ ಸಭಾಂಗಣದಲ್ಲಿ ನಡೆಯಲಿದೆ.

'ಯೂನಿಯನ್‌ನ ರಾಜ್ಯಮಟ್ಟದ ನಾಯಕರಾದ ಎಚ್.ವಿ.ಅನಂತ ಸುಬ್ಬರಾವ್, ಡಿ.ಎ.ವಿಜಯಭಾಸ್ಕರ್ ಸೇರಿದಂತೆ ಹಲವು ನಾಯಕರು ಸಾರಿಗೆ ಸಂಸ್ಥೆ ಹಾಗೂ ಕಾರ್ಮಿಕರ ಮುಂದಿರುವ ಸಮಸ್ಯೆಗಳನ್ನು ಕುರಿತು ಚರ್ಚಿಸಿ ತೀರ್ಮಾನ ಕೈಗೊಳ್ಳುವರು' ಎಂದು ಯೂನಿಯನ್‌ನ ಕಾನೂನು ಸಲಹೆಗಾರ ಬಿ.ಎಸ್.ಸುರೇಶ್ ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕೆಎಸ್‌ಆರ್‌ಟಿಸಿ ನೌಕರರನ್ನು ಸರ್ಕಾರಿ ನೌಕರರು ಎಂದು ಪರಿಗಣಿಸುವುದೇ ಮೊದಲ ತಪ್ಪು. ಕೈಗಾರಿಕಾ ನ್ಯಾಯಾಧಿಕರಣದ ತೀರ್ಪನ್ನು ಯಥಾವತ್ತಾಗಿ ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.

'ಸರ್ಕಾರಿ ನೌಕರರೆಂದು ಪರಿಗಣಿಸಲು ಒತ್ತಾಯಿಸಿ ಈಚೆಗೆ ನೌಕರರು ನಡೆಸಿದ ಮುಷ್ಕರಕ್ಕೆ ಅಧಿಕಾರಿಗಳೇ ಕುಮ್ಮಕ್ಕು ನೀಡಿದರು. ಮುಷ್ಕರಕ್ಕೆ ಕರೆ ಕೊಟ್ಟಿದ್ದ ಕೋಡಿಹಳ್ಳಿ ಚಂದ್ರಶೇಖರ್ ಈಗ ಎಲ್ಲಿದ್ದಾರೆ' ಎಂದು ಪ್ರಶ್ನಿಸಿದರು.

ಪ್ರವೇಶ ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ 6ರವರೆಗೂ ವಿಸ್ತರಿಸಲಾಗಿದೆ.

ನ.10ರವರೆಗೆ ₹100 ದಂಡದ ಜತೆ ಅರ್ಜಿ ಸಲ್ಲಿಸಬಹುದು ಎಂದು ಕುಲಸಚಿವರು ತಿಳಿಸಿದ್ದಾರೆ.

ರಾಜ್ಯದ 25 ಜಿಲ್ಲೆಗಳಲ್ಲಿ ಸಂಚಾರ

ಬೆಂಗಳೂರಿಗೆ ತಲುಪಿದ ಜ್ಞಾನ ಭಿಕ್ಷಾ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಮಾನವೀಯ ಮೌಲ್ಯಗಳ ಪುನರುತ್ಥಾನದ ಉದ್ದೇಶದಿಂದ ರಾಜ್ಯದ 25 ಜಿಲ್ಲೆಗಳಲ್ಲಿ ಜ್ಞಾನ ಭಿಕ್ಷಾ ಪಾದಯಾತ್ರೆಯನ್ನು ಕೈಗೊಂಡಿದ್ದೇನೆ. ಈ ಪಾದಯಾತ್ರೆ ಆರಂಭವಾದ 368ನೇ ದಿನವಾದ ಬುಧವಾರ ಬೆಂಗಳೂರಿಗೆ ಬಂದಿದ್ದೇನೆ' ಎಂದು ಎಚ್.ಕೆ. ವಿವೇಕಾನಂದ ತಿಳಿಸಿದರು.

ರುಕ್ಮಿಣಿ ನಗರದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಪಾದಯಾತ್ರೆಯ ಉದ್ದೇಶ ಹಾಗೂ ಅನುಭವಗಳನ್ನು ಹಂಚಿಕೊಂಡರು.

'ಬೀದರ್ ಜಿಲ್ಲೆ ಔರಾದ ತಾಲ್ಲೂಕಿನ ವನಮಾರನಪಳ್ಳಿಯಿಂದ ಕಳೆದ ವರ್ಷ ನ.1ರಂದು ಪಾದಯಾತ್ರೆ ಪ್ರಾರಂಭಿಸಿದ್ದೆ. ಅಂದಿನಿಂದ ಇಂದಿನವರೆಗೆ 11,000 ಕಿಲೋಮೀಟರ್ ದೂರವನ್ನು ನಡಿಗೆಯಲ್ಲೇ ಕ್ರಮಿಸಿದ್ದೇನೆ. ಉತ್ತರ ಕರ್ನಾಟಕದಲ್ಲಿ ಬಿಸಿಲಾದರೆ, ಕರಾವಳಿಯಲ್ಲಿ ಎಡೆಬಿಡದ ಮಳೆ. ವಿಭಿನ್ನ ಹವಾಮಾನಗಳ ನಡುವೆ ಯಾತ್ರೆ ಸಾಗಿತ್ತು' ಎಂದರು.

'ದಾಖಲೆ ನಿರ್ಮಿಸುವ ಉದ್ದೇಶಕ್ಕಾಗಿ ಪಾದಯಾತ್ರೆ ಕೈಗೊಂಡಿಲ್ಲ. ಇದು ಮನುಷ್ಯನಲ್ಲಿರುವ ಮಾನವೀಯ ಮೌಲ್ಯಗಳನ್ನು 15 ವರ್ಷಗಳಲ್ಲಿ ಪುನರುತ್ಥಾನ ಮಾಡುವ ಉದ್ದೇಶ ನನ್ನದು. ನಮ್ಮ ಅಪ್ಪ ಅಮ್ಮನವರ ಕಾಲದಲ್ಲಿದ್ದ ಮಾನವೀಯ ಮೌಲ್ಯಗಳು ನಮ್ಮ ಮಕ್ಕಳ ಕಾಲಕ್ಕೂ ಮುಂದುವರಿಯಬೇಕು. ಎಲ್ಲಾ ಕಡೆ ಲಂಚಾವತಾರ, ಭ್ರಷ್ಟತೆ ತಾಂಡವವಾಡುತ್ತಿದೆ. ಆಹಾರ ವಿಷಮಯವಾಗಿದೆ. ಆಡಳಿತ ನಡೆಸುವ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಮಾನವೀಯ ಮೌಲ್ಯಗಳನ್ನು ನಾಶ ಮಾಡುತ್ತಿದ್ದಾರೆ. ಇವುಗಳೆಲ್ಲವೂ ಸರಿಯಾಗಬೇಕಿದೆ' ಎಂದು ಅಭಿಪ್ರಾಯಪಟ್ಟರು.

'ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿನಿಲಯವೊಂದಕ್ಕೆ ಭೇಟಿ ನೀಡಿದಾಗ, ಅಲ್ಲಿನ ಮಕ್ಕಳಿಗೆ ಊಟಕ್ಕೆ ತಟ್ಟೆಯೂ ಇರಲಿಲ್ಲ. ಎಂತಹ ವ್ಯವಸ್ಥೆಯಲ್ಲಿ ನಾವು ಬದುಕುತ್ತಿದ್ದೇವೆ ಎಂದು ಬೇಸರವಾಗಿತ್ತು' ಎಂದರು.

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಕಾರ್ಯದರ್ಶಿ ಬಸವರಾಜು, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಕಾರ್ಯದರ್ಶಿ ಶ್ರೀಕಂಠೇಶ್ವರ ಸ್ವಾಮಿ, ಚೊಕ್ಕಸಂದ್ರ ವಾರ್ಡ್ ಜೆಡಿಎಸ್ ಘಟಕದ ಅಧ್ಯಕ್ಷ ಟಿ. ಗೋವಿಂದಯ್ಯ ಮುಂತಾದವರಿದ್ದರು.



ಜ್ಞಾನ ಭಿಕ್ಷಾ ಯಾತ್ರೆ ಸಂವಾದದಲ್ಲಿ (ಎಡದಿಂದ) ಟಿ. ಗೋವಿಂದಯ್ಯ, ಬಸವರಾಜು ಹಾಗೂ ವಿವೇಕಾನಂದ ಭಾಗವಹಿಸಿದರು

ಉಪಚುನಾವಣೆ ಫಲಿತಾಂಶ ಬಿಜೆಪಿಗೆ ಎಚ್ಚರಿಕೆ ಗಂಟೆಯೇ?

'ಅಲ್ಪಸಂಖ್ಯಾತರು ರಾಜಕೀಯ ದಾಳವಾಗದಿರಲಿ'

ಬೆಂಗಳೂರು: ರಾಜ್ಯದಲ್ಲಿ ಇತ್ತೀಚೆಗೆ ನಡೆದ ಹಾನಗಲ್ ಮತ್ತು ಸಿಂದಗಿ ವಿಧಾನಸಭೆ ಕ್ಷೇತ್ರದ ಉಪಚುನಾವಣೆಯ ಫಲಿತಾಂಶ ರಾಜ್ಯದ ಗಮನಸೆಳೆದಿದ್ದವು. ಪಕ್ಷಗಳ ನಡುವಣ ವಾಕ್ಸಮರ ತಾರಕಕ್ಕೇರಿತ್ತು. ಅಲ್ಪಸಂಖ್ಯಾತರ ಮತಗಳನ್ನು ಸೆಳೆಯಲು ನಡೆಸಿದ ಯತ್ನಗಳು ಚರ್ಚೆಗೆ ಗ್ರಾಸವಾಗಿದ್ದವು. ಉಪಚುನಾವಣೆಯ ಫಲಿತಾಂಶ ಬಿಜೆಪಿಗೆ ಎಚ್ಚರಿಕೆ ಗಂಟೆಯೇ? ಎನ್ನುವ ಕುರಿತು 'ಪ್ರಜಾವಾಣಿ' ಗುರುವಾರ ಆಯೋಜಿಸಿದ್ದ ಫೇಸ್ ಬುಕ್ ಲೈವ್ ಸಂವಾದದಲ್ಲಿ ಅತಿಥಿಗಳು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಪೂರ್ಣ ಸಂವಾದ ವೀಕ್ಷಿಸಲು: www.facebook.com/prajavani.net

'ಫಲಿತಾಂಶದಿಂದ ಕಾಂಗ್ರೆಸ್ ಬೀಗುತ್ತಿಲ್ಲ'



ಹಾನಗಲ್ ಫಲಿತಾಂಶದಿಂದ ಕಾಂಗ್ರೆಸ್ ಬೀಗುತ್ತಿಲ್ಲ. ಆದರೆ, ಇದು ಬಿಜೆಪಿ ಸರ್ಕಾರದ ಆಡಳಿತದ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಹಾನಗಲ್ ಸೇರಿದಂತೆ ಕಳೆದ ಆರು ತಿಂಗಳಲ್ಲಿ ನಡೆದ ಉಪಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಜನರು ಮತ ನೀಡಿದ್ದಾರೆ. ಪಕ್ಷ ಸಂಘಟನೆಯಲ್ಲಿ ಸ್ವಲ್ಪ ಸುಧಾರಣೆಯಾಗಿದೆ. ಹಾನಗಲ್‌ನಲ್ಲಿ ಮೊದಲಿನಿಂದಲೂ ಕಾಂಗ್ರೆಸ್ ಬಲಿಷ್ಠವಾಗಿದೆ. ಮನೋಹರ್ ತಹಸೀಲ್ದಾರ್ ಅವರು ಈ ಕ್ಷೇತ್ರದಲ್ಲಿ ನಾಲ್ಕು ಬಾರಿ ಗೆದ್ದಿದ್ದರು. ವಿಧಾನಸಭೆಯ ಹಿಂದಿನ ಚುನಾವಣೆಯಲ್ಲಿ ಶ್ರೀನಿವಾಸ್ ಮಾನೆ ಅಲ್ಪಮತಗಳಿಂದ ಪರಾಭವಗೊಂಡಿದ್ದರು. ವ್ಯಕ್ತಿ ಮತ್ತು ಪಕ್ಷ ಎರಡೂ ಅಂಶಗಳು ಇಲ್ಲಿ ಮುಖ್ಯವಾಗಿವೆ.

ಸಿಂದಗಿಯಲ್ಲಿ ಪೂರ್ವ ತಯಾರಿ ಕೊರತೆಯಿಂದ ಕಾಂಗ್ರೆಸ್ ಸೋಲು ಅನುಭವಿಸಿದೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಮೂರನೇ ಸ್ಥಾನದಲ್ಲಿತ್ತು. ಈ ಬಾರಿ ನಾಲ್ಕು ಪಟ್ಟು ಮತಗಳು ಹೆಚ್ಚಾಗಿವೆ.

ಜೆಡಿಎಸ್‌ನವರು ಮುಸ್ಲಿಮರನ್ನು ಗುರುತಿಸಿ ಟಿಕೆಟ್ ಕೊಡುತ್ತಾರೆ ಎಂದು ಬಿಜೆಪಿಯವರು ಹೇಳಿದೆ. ಇದು ಆ ಪಕ್ಷದ ಜತೆಗಿನ ಒಳಒಪ್ಪಂದ ಇತ್ತು. ಅಧಿಕಾರ ಇಲ್ಲದಿದ್ದಾಗ ಮಾತ್ರ ಜೆಡಿಎಸ್ ಅಲ್ಪಸಂಖ್ಯಾತರ ಬಗ್ಗೆ ಅಪಾರ ಪ್ರೀತಿ ತೋರಿಸುತ್ತದೆ. ಅಲ್ಪಸಂಖ್ಯಾತರನ್ನು ಕಾಂಗ್ರೆಸ್ ಎಂದಿಗೂ ಕಡೆಗಣಿಸಿಲ್ಲ. ಕಾಂಗ್ರೆಸ್ ಮುಸ್ಲಿಮರನ್ನು ಎಂದಿಗೂ ಆಸಾಧಾರವಾಗಿ ಮಾಡಿಲ್ಲ. ಅಲ್ಪಸಂಖ್ಯಾತರಿಗೆ ಉತ್ತಮ ಸ್ಥಾನಮಾನಗಳನ್ನು ಕಾಂಗ್ರೆಸ್ ನೀಡಿದೆ.

ಆರ್.ಧ್ರುವನಾರಾಯಣ
ಕೆಪಿಸಿಸಿ ಕಾರ್ಯಾಧ್ಯಕ್ಷ

'ಫಲಿತಾಂಶವನ್ನು ಗಂಭೀರವಾಗಿ ಪರಿಗಣಿಸುತ್ತೇವೆ'



ಉಪಚುನಾವಣೆಯ ಫಲಿತಾಂಶ ಎಚ್ಚರಿಕೆ ಗಂಟೆ ಅಲ್ಲ. ಆದರೆ, ಫಲಿತಾಂಶವನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ಈ ಫಲಿತಾಂಶವು 2023ರ ವಿಧಾನಸಭೆ ಚುನಾವಣೆಗೆ ಮಾನದಂಡವಲ್ಲ. ಹಾನಗಲ್ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು ನಿಜ. ಈ ಫಲಿತಾಂಶದಿಂದ ತಮ್ಮ ಪರ ಅಲೆ ಆರಂಭವಾಗಿದೆ ಎಂದು ಕಾಂಗ್ರೆಸ್ ಬೀಗುತ್ತಿರುವುದು ಹಾಸ್ಯಾಸ್ಪದ.

ಹಾನಗಲ್‌ನಲ್ಲಿ ಅಭಿವೃದ್ಧಿ ವಿಷಯಗಳು ಮುನ್ನಲೆಗೆ ಬರಲಿಲ್ಲ. ಶ್ರೀನಿವಾಸ್ ಮಾನೆ ಪರ ಅನುಕಂಪವೂ ಇತ್ತು. ಕೆಲವು ಸಂದರ್ಭಗಳಲ್ಲಿ ಅಭ್ಯರ್ಥಿಯ ವ್ಯಕ್ತಿತ್ವವೂ ಪ್ರಮುಖವಾಗುತ್ತದೆ.

ಸಿಂದಗಿಯಲ್ಲಿ ಕಾಂಗ್ರೆಸ್‌ಗೆ ಅನುಕಂಪದ ಮತಗಳ ಸಹ ದೊರೆತಿಲ್ಲ. ಕಾಂಗ್ರೆಸ್ ಪಕ್ಷ ಮುಸ್ಲಿಂ ಮತದಾರರ ಫಲಾನುಭವಿ. ಆದರೆ, ಆ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡುವಲ್ಲಿ ವಿಫಲವಾಗಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಹಿಂದುಳಿದ ವರ್ಗ ಅಥವಾ ಅಲ್ಪಸಂಖ್ಯಾತರನ್ನು ಉಪಮುಖ್ಯಮಂತ್ರಿಯನ್ನಾಗಿ ಏಕೆ ಮಾಡಲಿಲ್ಲ. ಜಾಫರ್ ಷರೀಫ್ ನಂತರ ಎಷ್ಟು ಅಲ್ಪಸಂಖ್ಯಾತರನ್ನು ಕಾಂಗ್ರೆಸ್‌ನವರು ಗುರುತಿಸಿಕೊಂಡಿದ್ದಾರೆ. ಕಾಂಗ್ರೆಸ್ ಸೋಲಿಸಲು ಯತ್ನಿಸಿದ ಜೆಡಿಎಸ್ ಸಹ ನಮಗೆ ಒಂದು ರೀತಿಯ ಮಗ್ಗುಲ ಮುಳ್ಳು. ಜೆಡಿಎಸ್ ನಡವಳಿಕೆಯಿಂದ ಮುಸ್ಲಿಂ ಮತದಾರರು ಧ್ರುವೀಕರಣಗೊಳ್ಳುತ್ತಿದ್ದಾರೆ. ತ್ರಿಕೋನ ಸ್ಪರ್ಧೆಯ ವಾತಾವರಣವೇ ಸೃಷ್ಟಿಯಾಗುವುದಿಲ್ಲ.

ಅಶ್ವತ್ಥ ನಾರಾಯಣಗೌಡ
ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ಪ್ರಜಾವಾಣಿ ಸಂವಾದ

'ಪ್ರಚಾರಕ್ಕಿಂತ ಅಪಪ್ರಚಾರ ಹೆಚ್ಚಾಯಿತು'



ಉಪಚುನಾವಣೆಯು ಮನೋವಿಕಾರಗಳ ಪ್ರದರ್ಶನವಾಗಿತ್ತು. ಪ್ರಚಾರಕ್ಕಿಂತ ಅಪಪ್ರಚಾರ ನಡೆಯಿತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಿಜೆಪಿಗೂ, ಕರ್ನಾಟಕದ ಬಿಜೆಪಿಗೂ ಸಂಬಂಧ ಇಲ್ಲದಂತಾಗಿದೆ. 'ಸಬ್‌ಕಾ ವಿಶ್ವಾಸ' ಎನ್ನುವುದು ಇಲ್ಲಿಯ ಬಿಜೆಪಿಗೆ ಕೇಳಿಸುತ್ತಿಲ್ಲ.

ಹಾನಗಲ್ ಕ್ಷೇತ್ರಕ್ಕೆ ಸಂಬಂಧಿಸಿ ಅಭ್ಯರ್ಥಿಯ ಆಯ್ಕೆಯಲ್ಲೇ ಗೊಂದಲ ಉಂಟಾಗಿತ್ತು. ಕ್ಷೇತ್ರವು ಆತ್ಮಪ್ತರ ಅಖಾಡವಾಗಿತ್ತು. ಬಸವರಾಜ ಬೊಮ್ಮಾಯಿ ಅವರು ಉರುಳಿಸಿದ ದಾಳಗಳು ಪ್ರಯೋಜನವಾಗಲಿಲ್ಲ. ಸಿಂದಗಿಯಲ್ಲಿ ರಮೇಶ ಭೂಸನೂರ ಅವರು ಜನರ ಸಂಪರ್ಕದಲ್ಲಿದ್ದರು. ಸಚಿವ ಗೋವಿಂದ ಕಾರಜೋಳ ಅವರು ತಳಸಮುದಾಯಗಳನ್ನು ಕ್ರೋಡೀಕರಿಸಿದ್ದರು. ಇದು ಬಿಜೆಪಿಗೆ ಬೋನಸ್ ಆಯಿತು.

ಒಟ್ಟಾರೆಯಾಗಿ ಮುಸ್ಲಿಂ ಮತದಾರರು, ರಾಜಕೀಯ ನಾಯಕರ ಕೈಯಲ್ಲಿ ಒತ್ತೆಯಾಳುಗಳಾಗಿದ್ದಾರೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಮುಸ್ಲಿಮರು ಪರ್ಯಾಯ ಆಯ್ಕೆಗಳು ಇರಬೇಕು. ಕಾಂಗ್ರೆಸ್, ಬಿಜೆಪಿ ಸಹ ಆತ್ಮಾವಲೋಕನ ಮಾಡಿಕೊಳ್ಳಬೇಕು. ಅಲ್ಪಸಂಖ್ಯಾತ ಸಮುದಾಯವನ್ನು 'ವೋಟ್ ಬ್ಯಾಂಕ್' ಎಂದು ಪರಿಗಣಿಸುವುದೇ ಅಪಮಾನ. ಅಹಿಂದ ಎನ್ನುವುದೇ ಅಪಾಯಕಾರಿ ತಂತ್ರ. ಅಹಿಂದ ಅಲ್ಲದ ಸಮುದಾಯದರಲ್ಲಿರುವವರ ಮನುಷ್ಯರಲ್ಲವೇ? ಈ ಬಗ್ಗೆ ಪ್ರಶ್ನೆಗಳನ್ನು ಎತ್ತಬೇಕಾಗಿದೆ.

ರವೀಂದ್ರ ರೇಷ್ಮೆ
ಪತ್ರಕರ್ತ

'ಬಿಜೆಪಿ -ಕಾಂಗ್ರೆಸ್ ಪಿತೂರಿ: ಜೆಡಿಎಸ್‌ಗೆ ಸೋಲು'



ಜೆಡಿಎಸ್‌ಗೆ ಭ್ರಮನಿರಸನವಾಗಿರುವುದು ನಿಜ. ಬಿಜೆಪಿ ಮತ್ತು ಕಾಂಗ್ರೆಸ್ ಪಿತೂರಿಯಿಂದ ಜೆಡಿಎಸ್ ಉಪಚುನಾವಣೆಯಲ್ಲಿ ಸೋಲು ಅನುಭವಿಸಿದೆ. ಸಿಂದಗಿಯಲ್ಲಿ ಜೆಡಿಎಸ್ ಕಾರ್ಯಕರ್ತರ ಒಗ್ಗಟ್ಟು ಮುರಿದು ಹಾಕುವ ಯತ್ನವನ್ನು ಕಾಂಗ್ರೆಸ್ ಮಾಡಿತು. ಇನ್ನು ಬಿಜೆಪಿ ಹಣದ ಹೊಳೆ ಹರಿಸಿತು. ಈ ಫಲಿತಾಂಶಗಳು ಜೆಡಿಎಸ್‌ಗಿಂತಲೂ ಮುಸ್ಲಿಂ ಸಮುದಾಯಕ್ಕೆ ಅಪಾರ ಹೊಡೆತ ನೀಡಿವೆ. ಮುಂದೆ ಮುಸ್ಲಿಂ ಸಮುದಾಯದವರ ಮೂಲ ಕ್ಷೇತ್ರ ಹೊರತುಪಡಿಸಿ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸುವುದು ಗೆಲ್ಲುವುದು ಕಷ್ಟ ಎನ್ನುವ ಸಂದೇಶ ನೀಡಿದೆ.

ಕಾಂಗ್ರೆಸ್‌ಗೆ ಕೋಮುವಾದಿ ಶಕ್ತಿಯನ್ನು ಸೋಲಿಸುವುದೇ ನಿಜವಾದ ಉದ್ದೇಶವಾಗಿದ್ದರೆ ಅಶೋಕ್ ಮನಗೂಳಿ ಅವರನ್ನು ಜೆಡಿಎಸ್‌ನಲ್ಲೇ ಉಳಿಯಲು ಸೂಚಿಸಬೇಕಾಗಿತ್ತು. ಆದರೆ, ಜೆಡಿಎಸ್ ಅನ್ನು ನಿರ್ನಾಮ ಮಾಡಬೇಕು ಎನ್ನುವುದು ಕಾಂಗ್ರೆಸ್ ಗುರಿಯಾಗಿದೆ. ಮುಸ್ಲಿಂ ನಾಯಕತ್ವ ಮತ್ತು ಜೆಡಿಎಸ್ ಕಾರ್ಯಕರ್ತರು ಬೆಳೆಯಬಾರದು ಎನ್ನುವುದೇ ಕಾಂಗ್ರೆಸ್ ಉದ್ದೇಶವಾಗಿದೆ. ನಿಮ್ಮ ಹಣೆಬರಹ ಇಷ್ಟೇ ಎನ್ನುವ ಸಂದೇಶವನ್ನು ಮುಸ್ಲಿಂ ಸಮುದಾಯಕ್ಕೆ ಕಾಂಗ್ರೆಸ್ ರವಾನೆ ಮಾಡಿದೆ.

ಅವಮಾನಿತರಾಗಿ ಬದುಕುತ್ತಿರುವ ಮುಸ್ಲಿಮರನ್ನು ವೋಟ್ ಬ್ಯಾಂಕ್ ರೀತಿಯಲ್ಲಿ ಬಳಸಿಕೊಳ್ಳದೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು. ಕಾಂಗ್ರೆಸ್‌ಗೆ ಅಲ್ಪಸಂಖ್ಯಾತರ ಬಗ್ಗೆ ನಿಜವಾದ ಕಾಳಜಿ ಇದ್ದರೆ ಪರಿಶಿಷ್ಟ ಜಾತಿಯವರ ರೀತಿಯ ರಾಜಕೀಯ ಮೀಸಲಾತಿ ನೀಡಬೇಕಾಗಿತ್ತು.

ನಜ್ಮಾ ನಜೀರ್ ಚಿಕ್ಕನೇರಳೆ
ಜೆಡಿಎಸ್ ರಾಜ್ಯ ಸಮಿತಿ ವೀಕ್ಷಕಿ

ಸುದ್ದಿ 2 ನಿಮಿಷ

ಪುನೀತ್ ರಾಜ್‌ಕುಮಾರ್ ಪ್ರೇರಣೆ ನೇತ್ರದಾನಕ್ಕೆ ಹೆಚ್ಚಿದ ನೋಂದಣಿ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರು ಅಕಾಲಿಕ ನಿಧನದ ಬಳಿಕ ನೇತ್ರದಾನ ಮಾಡಿದ್ದು, ಜನರಲ್ಲಿ ಅಪಾರ ಪ್ರೇರಣೆ ಮೂಡಿಸಿದೆ. ಇದರಿಂದ, ಈಗ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ನೇತ್ರದಾನದ ನೋಂದಣಿಗೆ ಮುಂದಾಗಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಯುವಕರೇ ನೇತ್ರದಾನಕ್ಕೆ ಆಸಕ್ತಿ ತೋರಿದ್ದಾರೆ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಈ ಬಗ್ಗೆ ವಿಚಾರಿಸಿ ಹೆಸರು ನೋಂದಣಿ ಮಾಡಿಕೊಳ್ಳುತ್ತಿದ್ದಾರೆ.

ಕೋವಿಡ್ ಕಾಣಿಸಿಕೊಂಡ ನಂತರ ನೇತ್ರದಾನ ಮಾಡುವವರ ಸಂಖ್ಯೆ ಕ್ಷೀಣಿಸಿತ್ತು. ನೇತ್ರದಾನ ಮಾಡಲು ಯಾರೂ ಮುಂದೆ ಬರುತ್ತಿರಲಿಲ್ಲ. ಆದರೆ, ಮತ್ತೆ ಈಗ ಪರಿಸ್ಥಿತಿ ದಿಢೀರ್ ಬದಲಾಗಿದೆ. ಇದೊಂದು ಒಳ್ಳೆಯ ಬೆಳವಣಿಗೆ. 20 ರಿಂದ 40 ವರ್ಷದ ಒಳಗಿನ ಯುವಕರು ಸಹ ನೇತ್ರದಾನಕ್ಕೆ ಆಸಕ್ತಿ ತೋರಿಸುತ್ತಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಕಳೆದ ಐದು ದಿನಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಂದಿ ನಾರಾಯಣ ನೇತ್ರಾಲಯದಲ್ಲೇ ನೋಂದಣಿ ಮಾಡಿಸಿಕೊಂಡಿದ್ದಾರೆ.

'ಮೊದಲು ವಾರದಲ್ಲಿ ಐದಾರು ಮಂದಿ ಮಾತ್ರ ನೋಂದಣಿ ಮಾಡಿಸಿಕೊಳ್ಳುತ್ತಿದ್ದರು. ಈಗ ಸಂಖ್ಯೆ ಹೆಚ್ಚಾಗಿದೆ. ಈ ಬಗ್ಗೆ ಜನರಿಗೆ ಅರಿವು ಮೂಡಿದೆ. ಐದು ದಿನಗಳಲ್ಲಿ ಸಾವಿಗೀಡಾದ 15 ಮಂದಿಯ 30 ಕಣ್ಣುಗಳನ್ನು ದಾನ ಪಡೆಯಲಾಗಿದೆ' ಎಂದು ನಾರಾಯಣ ನೇತ್ರಾಲಯದ ಮುಖ್ಯಸ್ಥ ಡಾ. ಭುಜಂಗ ಶೆಟ್ಟಿ ತಿಳಿಸಿದ್ದಾರೆ.

'ನೇತ್ರದಾನಕ್ಕೆ ಆನ್‌ಲೈನ್ ಮೂಲಕವೂ ನೋಂದಣಿ ಮಾಡಿಕೊಳ್ಳಬಹುದು' ಎಂದು ಹೇಳಿದ್ದಾರೆ.



'ನನ್ನ ಇಷ್ಟು ವರ್ಷಗಳ ಸೇವಾ ಅವಧಿಯಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಜನರು ನೇತ್ರದಾನ ಮಾಡಲು ಬಂದಿದ್ದು ನೋಡಿರಲಿಲ್ಲ. ನನಗೆ ಸಂತಸವಾಗಿದೆ. ಇದು ಮತ್ತಷ್ಟು ಜನರಿಗೆ ಪ್ರೇರಣೆಯಾಗಲಿ' ಎಂದರು.

'ಪುನೀತ್ ನಮನ' 16ರಂದು

ಬೆಂಗಳೂರು: ಪುನೀತ್ ರಾಜಕುಮಾರ್ ಸ್ಮರಣಾರ್ಥ ಅರಮನೆ ಮೈದಾನದಲ್ಲಿರುವ ನಲಪಾಡ್ ಪ್ಯಾಲೇಸ್ ಸಭಾಂಗಣದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಇದೇ 16 ರಂದು 'ಪುನೀತ ನಮನ' ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಅಂದು ಅಪರಾಹ್ನ 3.30 ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರು, ಭಾರತೀಯ ಸಿನಿಮಾ ರಂಗದ ಹಲವು ಪ್ರಮುಖರು ಭಾಗವಹಿಸಲಿದ್ದಾರೆ. ಪುನೀತ್ ಅವರು ನಟಿಸಿದ ಸಿನಿಮಾಗಳ ಹಾಡುಗಳನ್ನು ಸಂಗೀತ ನಿರ್ದೇಶಕ ಗುರುಕಿರಣ್ ಹಾಡಲಿದ್ದಾರೆ.

ಪ್ರಾಥಮಿಕ ಶಾಲೆಗೆ 18 ಸಾವಿರ, ಪ್ರೌಢ ಶಾಲೆಗೆ 5,078 ಅತಿಥಿ ಶಿಕ್ಷಕರ ನೇಮಕ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021-22) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 18 ಸಾವಿರ ಹಾಗೂ ಪ್ರೌಢ ಶಾಲೆಗಳಲ್ಲಿ 5,078 ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಪ್ರಾಥಮಿಕ ಶಾಲೆಗಳ ಅತಿಥಿ ಶಿಕ್ಷಕರಿಗೆ ಮಾಸಿಕ ₹ 7,500, ಪ್ರೌಢಶಾಲೆಗಳ ಅತಿಥಿ ಶಿಕ್ಷಕರಿಗೆ ಮಾಸಿಕ ₹ 8,000 ಗೌರವ ಸಂಭಾವನೆ ಸಿಗಲಿದೆ. ಖಾಲಿ ಇರುವ ಹುದ್ದೆಗಳಿಗೆ ನೇಮಕ ನಡೆಯಲಿದೆ ಎಂದು ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ಪ್ರೌಢಶಾಲೆಗಳಿಗೆ ಈಗಾಗಲೇ 3253 (ಶೇ 64ರಷ್ಟು ಹುದ್ದೆಗಳಿಗೆ) ಅತಿಥಿ ಶಿಕ್ಷಕರ ನೇಮಕಕ್ಕೆ ಸೂಚಿಸಲಾಗಿದೆ. ಉಳಿದ 1,825 ಶಿಕ್ಷಕರ ನೇಮಕಕ್ಕೆ ಸುತ್ತೋಲೆ ಹೊರಡಿಸಲಾಗಿದೆ. ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಜಾರಿಯಲ್ಲಿದೆ. ಖಾಲಿ ಹುದ್ದೆಗೆ ವರ್ಗಾವಣೆಗೊಂಡ ಶಿಕ್ಷಕರು ಕರ್ತವ್ಯಕ್ಕೆ ಹಾಜರಾದ ಕೂಡಲೇ ಅತಿಥಿ ಶಿಕ್ಷಕರನ್ನು ಬಿಡುಗಡೆ ಮಾಡಬೇಕು. ಅದೇ ತಾಲ್ಲೂಕಿನ ಒಳಗೆ ಅಗತ್ಯವಿರುವ ಶಾಲೆಯಲ್ಲಿ ಮುಂದುವರಿಸಲು ಬಿಇಒಗಳು ಕ್ರಮವಹಿಸಬೇಕು ಎಂದು ತಿಳಿಸಲಾಗಿದೆ.

ಅತಿಥಿ ಶಿಕ್ಷಕರ ನೇಮಕಾತಿ ಹೊಣೆಯನ್ನು ಆಯಾ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕರಿಗೆ ನೀಡಲಾಗಿದೆ. ಮೆರಿಟ್ ಆಧಾರದಲ್ಲಿ ನೇಮಕಾತಿ ಮಾಡಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಖಾಲಿ ಹುದ್ದೆಗಳು, ಶಿಕ್ಷಕರಹಿತ ಶಾಲೆಗಳಿಗೆ ಆದ್ಯತೆ ನೀಡಬೇಕು ಎಂದಿದ್ದಾರೆ.



ದೀಪಾವಳಿ — ದೀಪಾವಳಿ ಹಬ್ಬದ ಪ್ರಯುಕ್ತ ಗುರುವಾರ ಕಲಬುರಗಿಯಲ್ಲಿ ಸುರಸುರ ಬತ್ತಿ ಹಚ್ಚಿ ಸಂಭ್ರಮಿಸಿದ ಬಗೆ ಇದು.

ಮಲೆನಾಡಿನಲ್ಲಿ ಉತ್ತಮ ಮಳೆ

ಮಂಗಳೂರು: ಕರಾವಳಿ, ಮಲೆನಾಡಿನಲ್ಲಿ ಉತ್ತಮ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕೆಲವೆಡೆ ಮಳೆಯಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ಕಳಸ –ಬಾಳೆಹೊನ್ನೂರು ಮಾರ್ಗದಲ್ಲಿ ಮಹಲ್‌ಗೋಡು ಸೇತುವೆ ಮೇಲೆ ನೀರು ಹರಿದು ಸಂಚಾರಕ್ಕೆ ಅಡಚಣೆಯಾಗಿದೆ.

ಕಳಸ, ಎನ್.ಆರ್.ಪುರ, ಬಾಳೆಹೊನ್ನೂರು, ಕೊಪ್ಪ, ಶೃಂಗೇರಿ ಭಾಗದಲ್ಲಿ ಬಿರುಸಾಗಿ ಮಳೆ ಸುರಿದಿದೆ.

ಉಡುಪಿ ಜಿಲ್ಲೆಯಾದ್ಯಂತ ಗುಡುಗು ಸಿಡಿಲು ಸಹಿತ ಮಳೆ ಸುರಿಯಿತು. ಬ್ರಹ್ಮಾವರ ತಾಲ್ಲೂಕಿನ ನಾಲ್ಕೂರು ಗ್ರಾಮದಲ್ಲಿ ಸಿಡಿಲು ಬಡಿದು ಎರಡು ಹಸು ಸತ್ತಿವೆ. ಕುಂದಾಪುರ ತಾಲ್ಲೂಕಿನ ವಿವಿಧೆಡೆ ಮನೆಗಳಿಗೆ ಹಾನಿಯಾಗಿದೆ.

ಕಾರ್ಕಳ ತಾಲ್ಲೂಕಿನ ಕಡ್ತಲದಲ್ಲಿ 4.3 ಸೆಂ.ಮೀ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧಾರಣ ಮಳೆ ಸುರಿದಿದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಗರಿಷ್ಠ 1.7 ಸೆಂ.ಮೀ. ಮಳೆ ದಾಖಲಾಗಿದೆ.

ದಾಂಡೇಲಿಯಲ್ಲಿ ಜೋರು ಮಳೆ (ಕಾರವಾರ ವರದಿ): ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಯಿತು. ದಾಂಡೇಲಿಯಲ್ಲಿ ಮಧ್ಯಾಹ್ನ ತಾಸಿಗೂ ಅಧಿಕ ಕಾಲ ಸುರಿಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	6,240	6,283
ಹಾರಂಗಿ	2,859	2,857.15	350	800
ಕಬಿನಿ	2284.00	2,283.99	2,630	2,000
ಹೇಮಾವತಿ	2,922	2,909.33	2,889	3,606
ಲಿಂಗನಮಕ್ಕಿ	1,819	1,814.30	2,967	-
ಸೂಪಾ (ಮೀ)	564	555.97	510	4,026
ಮಾಣಿ	594	586.88	329	-
ತುಂಗಭದ್ರಾ	1,633	1,632.65	7,609	10,549
ಮಲಪ್ರಭಾ	2079.5	2,077.95	-	1,944
ಘಟಪ್ರಭಾ	2175	2,171.56	-	2,957
ಭದ್ರಾ	186	185.8	2,576	3,791
ಆಲಮಟ್ಟಿ (ಮೀ)	519.6	518.89	-	13,101
ನಾರಾಯಣಪುರ (ಮೀ)	492.25	491.42	10,370	11,690

* ನೆಲಮಟ್ಟದಿಂದ

ಮದ್ಯ, ಡ್ರಗ್ಸ್ ಪಾರ್ಟಿಯಲ್ಲಿ ಶ್ರೀಕೃಷ್ಣ ಪರಿಚಯ • ಬಿಟ್ ಕಾಯಿನ್ ವ್ಯವಹಾರಕ್ಕೆ ಪಾಲುದಾರಿಕೆ

ಹ್ಯಾಕಿಂಗ್‌ಗೆ ಎಂ.ಎಸ್ಸಿ, ಎಲ್‌ಎಲ್‌ಬಿ ಪದವೀಧರರ ಸಹಕಾರ!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಹಣ ವಿನಿಮಯ ಏಜೆನ್ಸಿಗಳ ಸರ್ವರ್, ಆನ್‌ಲೈನ್ ಗೇಮಿಂಗ್ ಜಾಲತಾಣಗಳನ್ನು ಹ್ಯಾಕ್ ಮಾಡಿ ಕೋಟ್ಯಂತರ ರೂಪಾಯಿ ಮೌಲ್ಯದ ಬಿಟ್ ಕಾಯಿನ್ ಗಳಿಸುತ್ತಿದ್ದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಗೆ (26), ಎಂ.ಎಸ್ಸಿ ಹಾಗೂ ಎಲ್‌ಎಲ್‌ಬಿ ಪದವೀಧರರು ಸಹಕಾರ ನೀಡುತ್ತಿದ್ದ ಸಂಗತಿ ಬಯಲಾಗಿದೆ.



ಶ್ರೀಕೃಷ್ಣ

ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿರುವ ಸಿಸಿಬಿ ಪೊಲೀಸರು, ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣನಿಗೆ ಸಹಕಾರ ನೀಡಿದ್ದವರ ವಿವರಗಳನ್ನೂ ಉಲ್ಲೇಖಿಸಿದ್ದಾರೆ.

'ಎಂ.ಎಸ್ಸಿ ಪದವೀಧರ ಪ್ರಸೀದ್ ಶೆಟ್ಟಿ ಅಲಿಯಾಸ್ ಚಿಕ್ಕು (25), ಎಲ್‌ಎಲ್‌ಬಿ ಪದವೀಧರ ಸುಜಯ್‌ರಾಜ್ (29), ಶ್ರೀಕೃಷ್ಣನಿಗೆ ಸಹಕಾರ ನೀಡುತ್ತಿದ್ದರು. ಅವರಿಬ್ಬರು ಪ್ರಕರಣದ ನಾಲ್ಕು, ಐದನೇ ಆರೋಪಿಗಳು. ಶ್ರೀಕೃಷ್ಣ ಜೊತೆಗಿನ ಒಡನಾಟದ ಬಗ್ಗೆ ಅವರಿಬ್ಬರು ಹೇಳಿಕೆ ನೀಡಿದ್ದಾರೆ' ಎಂಬುದಾಗಿ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ನಗರದ ಐಷಾರಾಮಿ ಹೋಟೆಲ್‌ಗಳು ಹಾಗೂ ಸ್ವಂತ ಫ್ಲಾಟ್‌ನಲ್ಲಿ ಆರೋಪಿಗಳು ಆಗಾಗ್ಗೆ ಡ್ರಗ್ಸ್ ಪಾರ್ಟಿ ಮಾಡುತ್ತಿದ್ದರು. ಅಗತ್ಯವಿದ್ದ ಡ್ರಗ್ಸ್‌ನ್ನು ಶ್ರೀಕೃಷ್ಣನೇ ಡಾರ್ಕ್‌ನೆಟ್ ಮೂಲಕ ತರಿಸಿಕೊಡುತ್ತಿದ್ದ. ಪಾರ್ಟಿ ವೇಳೆಯೇ ಎಲ್ಲರೂ ಪರಸ್ಪರ ಪರಿಚಯವಾಗಿದ್ದರು. ಶ್ರೀಕೃಷ್ಣ ಹ್ಯಾಕರ್ ಎಂಬುದು ತಿಳಿಯುತ್ತಿದ್ದಂತೆ, ಎಲ್ಲರೂ ಆತನಿಗೆ ಸಹಕಾರ ನೀಡಲಾರಂಭಿಸಿದ್ದರು. ಹ್ಯಾಕಿಂಗ್‌ನಿಂದ ಬಂದ ಹಣದಲ್ಲಿ ಪಾಲುದಾರಿಕೆ ಹೊಂದಿದ್ದರು' ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

ಲಂಡನ್‌ನಲ್ಲಿ ವ್ಯಾಸಂಗ: 'ಸದಾಶಿವನಗರದ ಆರ್‌ಎಂವಿ ಎಕ್ಸ್‌ಟೆನ್ಷನ್ ನಿವಾಸಿ ಪ್ರಸೀದ್ ಶೆಟ್ಟಿ, ನಗರದ ಕಾಲೇಜೊಂದರಲ್ಲಿ ಬಿಬಿಎ ಮುಗಿಸಿದ್ದ. 2019ರಲ್ಲಿ ಲಂಡನ್‌ಗೆ ಹೋಗಿದ್ದ ಆತ, ಅಲ್ಲಿಯ ವೆಸ್ಟ್ ಮಿನಿಸ್ಟರ್ ವಿಶ್ವವಿದ್ಯಾಲಯದಲ್ಲಿ ಎಂಎಸ್ಸಿ ಮುಗಿಸಿದ್ದ. 2020ರ ಅ. 5ರಂದು ಭಾರತಕ್ಕೆ ವಾಪಸು ಬಂದಿದ್ದ. ಈತ, ಪ್ರಕರಣದ ಎರಡನೇ ಆರೋಪಿ ಸುನೀಶ್ ಹೆಗ್ಡೆ ಸಂಬಂಧಿ' ಎಂಬ ಸಂಗತಿ ಪಟ್ಟಿಯಲ್ಲಿದೆ.

'ಸ್ನೇಹಿತರೊಬ್ಬರ ಮೂಲಕ ಪ್ರಸೀದ್‌ಗೆ ಶ್ರೀಕೃಷ್ಣನ ಪರಿಚಯವಾಗಿತ್ತು. ಸರ್ವರ್ ಹಾಗೂ ಜಾಲತಾಣ ಹ್ಯಾಕ್ ಮಾಡುವುದರಿಂದ ಕೋಟ್ಯಂತರ ರೂಪಾಯಿ ಮೌಲ್ಯದ ಬಿಟ್ ಕಾಯಿನ್ ಸಂಪಾದಿಸುವುದಾಗಿ ಹೇಳಿದ್ದ ಶ್ರೀಕೃಷ್ಣ, ಅದರಲ್ಲಿ ಪಾಲು ನೀಡುವುದಾಗಿ ತಿಳಿಸುತ್ತಿದ್ದ'.

ಹವಾಲಾ ದಂಧೆಯಲ್ಲೂ ಭಾಗಿ

'ಶ್ರೀಕೃಷ್ಣ ನೀಡುತ್ತಿದ್ದ ಬಿಟ್ ಕಾಯಿನ್‌ಗಳನ್ನು ಮಾರಿ ಕೊಡುತ್ತಿದ್ದ ರಾಬಿನ್ ಖಂಡೇಲ್‌ವಾಲಾ, ಹವಾಲಾ ದಂಧೆಯಲ್ಲಿ ಭಾಗಿಯಾಗಿದ್ದ. ಬಿಟ್ ಕಾಯಿನ್‌ಗಳನ್ನು ಮಾರುತ್ತಿದ್ದ ಆತ, ಹವಾಲಾ ಮೂಲಕವೇ ಶ್ರೀಕೃಷ್ಣ ಹೇಳುತ್ತಿದ್ದ ಖಾತೆಗಳಿಗೆ ಹಣ ಪಾವತಿ ಮಾಡುತ್ತಿದ್ದ' ಎಂಬ ಮಾಹಿತಿ ಆರೋಪ ಪಟ್ಟಿಯಲ್ಲಿದೆ.

'ಆನ್‌ಲೈನ್ ಗೇಮಿಂಗ್ ಜಾಲತಾಣಗಳನ್ನು ಹ್ಯಾಕ್ ಮಾಡುತ್ತಿದ್ದ ಶ್ರೀಕೃಷ್ಣ, ಎದುರಾಳಿ ತಂಡದವರ ಮಾಹಿತಿ ತಿಳಿದುಕೊಂಡು ಪ್ರಸೀದ್ ಶೆಟ್ಟಿ, ಸುಜಯ್ ಹಾಗೂ ಇತರರಿಗೆ ಹೇಳುತ್ತಿದ್ದ. ಅದರಿಂದಲೇ ಗೇಮ್ ಗೆಲುತ್ತಿದ್ದ ಆರೋಪಿಗಳು, ರಾಬಿನ್‌ನಿಂದ ಹವಾಲಾ ಮೂಲಕ ಹಣ ಪಡೆಯುತ್ತಿದ್ದರು.

ಈ ಬಗ್ಗೆ ಆರೋಪಿಗಳು ಹೇಳಿಕೆ ನೀಡಿದ್ದಾರೆ' ಎಂಬ ಸಂಗತಿಯನ್ನೂ ಪಟ್ಟಿಯಲ್ಲಿ ವಿವರಿಸಲಾಗಿದೆ.

'ಬಿಟ್ ಕಾಯಿನ್ ಯಾರಿಗೆಷ್ಟು ಪಾಲು'



'ಸ್ಪಾಟ್ ಅಂಡ್ ಪೋಕರ್, ಪೋಕರ್ ಬಾಜಿ ಸೇರಿದಂತೆ ಇತರೆ ಗೇಮಿಂಗ್ ಸರ್ವರ್‌ಗಳನ್ನು ಹ್ಯಾಕ್ ಮಾಡುತ್ತಿದ್ದ ಶ್ರೀಕೃಷ್ಣ, ಇಸ್ಪೀಟ್ ಎಲೆಗಳ ಮಾಹಿತಿಯನ್ನು ಪ್ರಸೀದ್ ಹಾಗೂ ಇತರರಿಗೆ ಮುಂಗಡವಾಗಿ ತಿಳಿಸುತ್ತಿದ್ದ. ಅದರ ಮೂಲಕವೇ ಆರೋಪಿಗಳು ಗೇಮ್ ಆಡಿ ಹಣ ಗಳಿಸುತ್ತಿದ್ದರು. ಎಲ್ಲಿಯೂ ಕೆಲಸಕ್ಕೆ ಹೋಗದ ಪ್ರಸೀದ್, ಶ್ರೀಕೃಷ್ಣನಿಂದಲೇ ಹಣ ಸಂಪಾದಿಸಬಹುದೆಂದು ಆತನ ಕೆಲಸಕ್ಕೆ ಸಹಕಾರ ನೀಡಲಾರಂಭಿಸಿದ್ದ' ಎಂಬ ಮಾಹಿತಿಯನ್ನು ಉಲ್ಲೇಖಿಸಲಾಗಿದೆ.

'ಶ್ರೀಕೃಷ್ಣನ ಮೂಲಕ ಪ್ರಸೀದ್‌ಗೆ ರಾಬಿನ್ ಖಂಡೇಲ್‌ವಾಲಾ ಪರಿಚಯವಾಗಿತ್ತು. ಬಿಟ್ ಕಾಯಿನ್ ವ್ಯವಹಾರ ಮಾಡಲಾರಂಭಿಸಿದ್ದ. ಶ್ರೀಕೃಷ್ಣ ಹಾಗೂ ಇತರೆ ಆರೋಪಿಗಳ ಸುತ್ತಾಟಕ್ಕಾಗಿ ಪ್ರಸೀದ್ ತನ್ನ ಕಾರು (ಕೆಎ 53 ಎಂಎಫ್ 0799) ನೀಡಿದ್ದ' ಎಂಬ ಸಂಗತಿಯೂ ಪಟ್ಟಿಯಲ್ಲಿದೆ.

ಕೃತ್ಯಕ್ಕೆ ಪ್ರಚೋದನೆ: 'ಇನ್ನೊಬ್ಬ ಆರೋಪಿ ಸುಜಯ್ ರಾಜ್, ಸದಾಶಿವನಗರ ನಿವಾಸಿ. ಜಯನಗರದ ಕಾಲೇಜೊಂದರಲ್ಲಿ ಎಲ್‌ಎಲ್‌ಬಿ ಮುಗಿಸಿದ್ದ ಆತ, ಯಾವುದೇ ವೃತ್ತಿ ಕೈಗೊಂಡಿರಲಿಲ್ಲ. ಸ್ನೇಹಿತರ ಮೂಲಕ ಆತನಿಗೆ ಶ್ರೀಕೃಷ್ಣ ಪರಿಚಯವಾಗಿತ್ತು' ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ಐಟಿಸಿ ಗಾರ್ಡೆನಿಯಾ, ಶಾಂಗ್ರಿಲಾ, ಗೋಕುಲಂ ಗ್ರ್ಯಾಂಡ್ , 4 ಸೀಜನ್ ಹೋಟೆಲ್, ಕೂರ್ಗ್‌ನ ತಾಜ್ ಹೋಟೆಲ್, ಗೋವಾದ ತಾಜ್ ಎಕ್ಸಾಟಿಕಾ, ತಾಜ್ ಆಗ್ವಾಡಾ, ಲೀಲಾ ಗೋವಾ ವಿಲ್ಲಾ ಹಾಗೂ ಇತರ ಕಡೆಗಳಲ್ಲಿ ಆರೋಪಿಗಳು ತಂಗುತ್ತಿದ್ದರು. ಅಲ್ಲಿಯೇ ಆರೋಪಿ ಶ್ರೀಕೃಷ್ಣ, ಸರ್ವರ್, ಜಾಲತಾಣಗಳನ್ನು ಹ್ಯಾಕ್ ಮಾಡುತ್ತಿದ್ದ. ಅದಕ್ಕೆ ಉಳಿದವರು ಪ್ರಚೋದಿಸುತ್ತಿದ್ದರು. ಪೋಕರ್ ಬಾಜಿ ಗೇಮಿಂಗ್ ಜಾಲತಾಣ ಹ್ಯಾಕ್ ಪ್ರಕರಣದಲ್ಲೂ ಸುಜಯ್ ರಾಜ್ ಭಾಗಿಯಾಗಿದ್ದ' ಎಂಬ ಅಂಶ ದೋಷಾರೋಪ ಪಟ್ಟಿಯಲ್ಲಿದೆ.

'2019 ರಲ್ಲಿ ಗೋಕುಲಂ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಾಲ್ಕು ತಿಂಗಳು ತಂಗಿದ್ದ ಶ್ರೀಕೃಷ್ಣ, ಸಾಕಷ್ಟು ಸರ್ವರ್ ಹಾಗೂ ಜಾಲತಾಣಗಳನ್ನು ಹ್ಯಾಕ್ ಮಾಡಿದ್ದ. ಇದರಲ್ಲೂ ಇತರೆ ಆರೋಪಿಗಳು ಪಾಲು ಪಡೆದಿದ್ದರು' ಎಂಬ ಮಾಹಿತಿಯನ್ನೂ ದಾಖಲಿಸಲಾಗಿದೆ.

ಸರ್ಕಾರಕ್ಕೆ ನೂರು ದಿನ: ಜನರ ಆದಾಯ ಏರಿಕೆಗೆ ಒತ್ತು

ಜನಪರ ನಡೆಯ ದಿಕ್ಸೂಚಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ತಮ್ಮ ನೇತೃತ್ವದ ರಾಜ್ಯ ಸರ್ಕಾರ ನೂರು ದಿನದ ಆಡಳಿತ ಪೂರೈಸಿರುವುದು ದೊಡ್ಡ ಮೈಲಿಗಲ್ಲು ಅಲ್ಲದಿದ್ದರೂ ಮುಂದಿನ ದಿನಗಳಲ್ಲಿ ಜನಪರ ನಡೆ ಹೇಗಿರಲಿದೆ ಎಂಬುದರ ದಿಕ್ಸೂಚಿಯಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನೂರು ದಿನಗಳಲ್ಲಿ ರೈತರ ಮಕ್ಕಳಿಗೆ ವಿದ್ಯಾರ್ಥಿವೇತನ, ಅಮೃತ ಯೋಜನೆ, ಸಂಧ್ಯಾ ಸುರಕ್ಷಾ, ವಿಧವಾ ವೇತನ ಹೆಚ್ಚಳ ಸೇರಿಹಲವು ಯೋಜನೆಗಳು ಜಾರಿಯಾಗಿವೆ. ಆರ್ಥಿಕ ವ್ಯವಸ್ಥೆ ಚೇತರಿಸಿಕೊಳ್ಳುತ್ತಿದ್ದು, ಮುಂದೆ ಮತ್ತಷ್ಟು ಯೋಜನೆಗಳನ್ನು ಜಾರಿಗೆ ತರಲಾಗುವುದು' ಎಂದರು.



ಹೈಕಮಾಂಡ್‌ನಿಂದ ನನಗೆ ಬುಲಾವ್ ಬಂದಿಲ್ಲ. ರಾಷ್ಟ್ರೀಯ ಕಾರ್ಯಕಾರಿಣಿಗೆ ಬೆಂಗಳೂರಿನಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ಪಾಲ್ಗೊಳ್ಳುವೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

'ಈ ಅವಧಿಯಲ್ಲಿ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಆಡಳಿತವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವುದಕ್ಕೆ ಬೇಕಾದ ನಿರ್ಣಯಗಳನ್ನು ಕೈಗೊಂಡಿರುವ ತೃಪ್ತಿ ಇದೆ' ಎಂದರು.

'ವ್ಯವಸ್ಥೆಯ ಸುಧಾರಣೆ ಜೊತೆಗೆ, ಜನರ ಬಳಿಗೇ ಸರ್ಕಾರ ಹಾಗೂ ಯೋಜನೆಗಳು ಹೋಗಬೇಕಿವೆ. ಆರ್ಥಿಕ ಬೆಳವಣಿಗೆಗೆ ಮಾನವ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಿದೆ. ತಲಾ ಆದಾಯ ಏರಿಕೆಗಾಗಿ ಪರಿಶಿಷ್ಟರು, ಹಿಂದುಳಿದ ವರ್ಗದವರು, ಬಡವರು ಹಾಗೂ ಮಹಿಳೆಯರನ್ನು ಒಳಗೊಳ್ಳಬೇಕಿದೆ. ಅದಕ್ಕಾಗಿ, ಆರ್ಥಿಕ ನೆರವು ನೀಡುವ ವಿಶೇಷ ಯೋಜನೆಗಳನ್ನು ರೂಪಿಸಲಾಗುತ್ತಿದೆ' ಎಂದು ತಿಳಿಸಿದರು.

ಜ. 26ರಿಂದ ಜನಸೇವಕ ಜಾರಿ: '2022 ಜ. 26ರಿಂದ ಜನಸೇವಕ ಯೋಜನೆಯನ್ನು ರಾಜ್ಯದಾದ್ಯಂತ ಹಂತಹಂತವಾಗಿ ಜಾರಿಗೆ ತರಲಾಗುವುದು' ಎಂದರು.

ಸುಕ್ರಜ್ಜಿ ಆರೋಗ್ಯದಲ್ಲಿ ಚೇತರಿಕೆ

ಅಂಕೋಲಾ: ಕಾರವಾರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಕ್ರಿಮ್ಸ್) ಚಿಕಿತ್ಸೆ ಪಡೆಯುತ್ತಿದ್ದ ಜಾನಪದ ಗಾಯಕಿ ಸುಕ್ರಿ ಬೊಮ್ಮು ಗೌಡ ಅವರ ಒತ್ತಾಯದ ಮೇರೆಗೆ, ಅಂಕೋಲಾದ ಬಡಗೇರಿಯ ಅವರ ಮನೆಗೆ ಗುರುವಾರ ಕರೆದುಕೊಂಡು ಬರಲಾಗಿದೆ. ಮನೆಯಲ್ಲಿಯೇ ಕೃತಕ ಉಸಿರಾಟದ ವ್ಯವಸ್ಥೆ ಕಲ್ಪಿಸಲಾಗಿದೆ.

ದೀಪಾವಳಿ ಹಬ್ಬಕ್ಕೆ ಮನೆಗೆ ಹೋಗಲು ಅವಕಾಶ ಕೊಡುವಂತೆ ಅವರು ವೈದ್ಯರಿಗೆ ಒತ್ತಾಯಿಸಿದ್ದರು. ಉಸಿರಾಟದ ಸಮಸ್ಯೆ ಚಿಕಿತ್ಸೆಗಾಗಿ ಅವರನ್ನು ಅ.27ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಗ್ಯದಲ್ಲಿ ತುಸು ಚೇತರಿಕೆ ಕಾಣಿಸಿದ್ದರಿಂದ ಅವರನ್ನು ಜನಶಕ್ತಿ ವೇದಿಕೆ ಅಧ್ಯಕ್ಷ ಮಾಧವ ನಾಯಕ, 'ಕ್ರಿಮ್ಸ್' ನಿರ್ದೇಶಕ ಡಾ.ಗಜಾನನ ನಾಯಕ ಹಾಗೂ ಇತರ ವೈದ್ಯರ ನೆರವಿನೊಂದಿಗೆ ಮನೆಗೆ ಕರೆದುಕೊಂಡು ಬರಲಾಯಿತು.

'ಸುಕ್ರಿ ಬೊಮ್ಮು ಗೌಡ ಅವರ ಆರೋಗ್ಯದಲ್ಲಿ ಚೇತರಿಕೆಯಾಗಿದೆ. ಆದರೂ ದಿನದಲ್ಲಿ 16ರಿಂದ 18 ಗಂಟೆ ಆಮ್ಲಜನಕ ನೀಡಬೇಕಿದೆ. ಅವರ ಇಚ್ಛೆಯಂತೆ ಮನೆಗೆ ಕರೆತರಲಾಗಿದೆ. ವಿದ್ಯುತ್ ಸಂಪರ್ಕ ಕಡಿತಗೊಂಡರೆ ಆಮ್ಲಜನಕ ನೀಡಲು ಕಷ್ಟವಾಗಬಹುದು. ಹೆಸ್ಕಾಂ ಅಧಿಕಾರಿಗಳಿಗೆ ಈ ಭಾಗದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸದಂತೆ ಕೋರಲಾಗಿದೆ. ಅಗತ್ಯವಿದ್ದಲ್ಲಿ ಸಂಪರ್ಕಿಸುವಂತೆ ಕುಟುಂಬದವರಿಗೆ ಸೂಚಿಸಲಾಗಿದೆ' ಎಂದು ಡಾ.ಗಜಾನನ ನಾಯಕ ತಿಳಿಸಿದರು. 'ಹಬ್ಬದ ಆಚರಣೆಗೆ ಮನೆಗೆ ಬರುವ ಆಸೆಯಾಗಿತ್ತು. ಎಲ್ಲರೂ ಹೆಚ್ಚಿನ ಮುತುವರ್ಜಿ ವಹಿಸಿದ್ದಾರೆ' ಎಂದು ಸುಕ್ರಿ ಗೌಡ ಪ್ರತಿಕ್ರಿಯಿಸಿದರು.



ಜಾನಪದ ಗಾಯಕಿ ಸುಕ್ರಿ ಬೊಮ್ಮು ಗೌಡ ಅವರಿಗೆ ಅಂಕೋಲಾದ ಬಡಗೇರಿಯ ಮನೆಯಲ್ಲಿ ಕೃತಕ ಉಸಿರಾಟದ ವ್ಯವಸ್ಥೆ ಕಲ್ಪಿಸಲಾಗಿದೆ

ಮೂಲತ್ವ ಪ್ರಶಸ್ತಿ

ಮಂಗಳೂರು: 'ಮೂಲತ್ವ ಫೌಂಡೇಷನ್ ಚಾರಿಟಬಲ್ ಟ್ರಸ್ಟ್ ನೀಡುವ 'ಮೂಲತ್ವ ಪ್ರಶಸ್ತಿ'ಗೆ ಪ್ರಸಕ್ತ ಸಾಲಿಗೆ ಜಾನಪದ ಗಾಯಕಿ ಸುಕ್ರಿ ಬೊಮ್ಮುಗೌಡ ಆಯ್ಕೆಯಾಗಿದ್ದಾರೆ. ಅಂಕೋಲ ತಾಲ್ಲೂಕಿನ ಅಲಗೇರಿ, ಬಡಗೇರಿಯ ಅವರ ಮನೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಟ್ರಸ್ಟ್‌ನ ಸ್ಥಾಪಕ ಪ್ರಕಾಶ್ ಮೂಲತ್ವ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದು 7ನೇ ವರ್ಷದ ಪ್ರಶಸ್ತಿಯಾಗಿದ್ದು, ಪ್ರಶಸ್ತಿಯು ಫಲಕ ಮತ್ತು ₹50 ಸಾವಿರ ನಗದು ಒಳಗೊಂಡಿದೆ. ಸುಕ್ರಿ ಅವರ ಆರೋಗ್ಯ ಸ್ಥಿತಿ ಗಮನದಲ್ಲಿಟ್ಟುಕೊಂಡು ಸ್ವಗ್ರಾಮದಲ್ಲೇ ಸರಳ ಕಾರ್ಯಕ್ರಮದಲ್ಲಿ ನ. 7ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದರು.

ಪಿಲ್ಲರ್ ಕುಸಿತ: 3 ಮಂದಿ ಸಾವು

ದಾವಣಗೆರೆ: ತಾಲ್ಲೂಕಿನ ಕುಕ್ಕವಾಡದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಪುತ್ರ ಎಸ್.ಎಸ್.ಗಣೇಶ ಮಾಲೀಕತ್ವದ, ನಿರ್ಮಾಣ ಹಂತದ ಎಥೆನಾಲ್ ಘಟಕ ಕಟ್ಟಡದ ಪಿಲ್ಲರ್ ಕುಸಿದು ಗುರುವಾರ ಮೂವರು ಕಾರ್ಮಿಕರು ಮೃತಪಟ್ಟಿದ್ದಾರೆ. 12 ಮಂದಿ ಗಾಯಗೊಂಡಿದ್ದು, ಐವರ ಸ್ಥಿತಿ ಗಂಭೀರವಾಗಿದೆ.

ರಾಯಚೂರು ಜಿಲ್ಲೆಯ ಮಾನಪ್ಪ (35), ಬಸಪ್ಪ (40), ಪಶ್ಚಿಮ ಬಂಗಾಳದ ಮಜೀದ್ (28) ಮೃತಪಟ್ಟವರು.

'ಗುತ್ತಿಗೆದಾರರ ಜತೆಗೆ ಮಾತನಾಡಿ ಎಲ್ಲರಿಗೂ ಪರಿಹಾರ ನೀಡಲು ಕ್ರಮಕೈಗೊಳ್ಳುತ್ತೇನೆ' ಎಂದು ಎಸ್.ಎಸ್.ಗಣೇಶ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಗ್ರಾ.ಪಂ ಮಟ್ಟದಲ್ಲಿ ಮಹಿಳೆಗೆ ಸಮಾನ ಅವಕಾಶ ಸಿಕ್ಕಿಲ್ಲ'

ಒಂದನೇ ಪುಟದಿಂದ

12 ಸದಸ್ಯರಿರುವ ಗ್ರಾಮ ಪಂಚಾಯಿತಿಗೆ ಈ ಹಿಂದೆ ಅಧ್ಯಕ್ಷ ಸ್ಥಾನ ಮಹಿಳೆಯರಿಗೆ ಮೀಸಲಾಗಿದ್ದರಿಂದ ಈ ಬಾರಿ (2020) ಪರಿಶಿಷ್ಟ ಜಾತಿಯ ಪುರುಷರಿಗೆ ದೊರಕಬೇಕಿತ್ತು ಎಂದು ಅರ್ಜಿದಾರರು ವಾದಿಸಿದ್ದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದ ಮೀಸಲಾತಿಯಲ್ಲಿ ಅವ್ಯವಹಾರ ಆಗದಂತೆ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗಿದೆ ಎಂದು ರಾಜ್ಯ ಚುನಾವಣಾ ಆಯೋಗದ ಪರ ವಕೀಲರು ವಾದಿಸಿದರು. ಕೊಣಾಜೆ ಗ್ರಾಮ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿಯ 2 ಸದಸ್ಯರಿದ್ದು, ಶೇ 50ರಷ್ಟು ಮೀಸಲಾತಿ ಅಡಿಯಲ್ಲಿ ಮಹಿಳೆಗೆ ಈ ಸ್ಥಾನ ಲಭಿಸಿದೆ ಎಂದು ಅವರು ವಿವರಿಸಿದರು.

'ಗ್ರಾ.ಪಂ. ಮುನ್ನಡೆಸಲು ಮಹಿಳೆಯರಿಗೆ ಅವಕಾಶ ಮಾಡಿಕೊಡಬೇಕು. ಮಹಿಳೆಯರು ರಾಜಕೀಯ ಶಕ್ತಿ ಬೆಳೆಸಿಕೊಳ್ಳಲು ಇದು ಅನುಕೂಲ ಆಗಲಿದೆ. ಗ್ರಾಮ ಮಟ್ಟದಲ್ಲಿ ಮಹಿಳೆಯರು ಅಧಿಕಾರ ಹಿಡಿಯಬೇಕು ಎಂಬುದು ಗಾಂಧೀಜಿ ಕನಸು ಕೂಡ ಆಗಿತ್ತು. ಅದನ್ನು ನನಸು ಮಾಡುವ ನಿಟ್ಟಿನಲ್ಲಿ ಇದು ಸ್ಪಷ್ಟ ಹೆಜ್ಜೆಯಾಗಲಿದೆ' ಎಂದು ಪೀಠ ಹೇಳಿತು.

ನಿಧನ ವಾರ್ತೆ

ಮಾರ್ಕಾಂಡಮುನಿ ಸ್ವಾಮೀಜಿ


ಹಿರಿಯೂರು: ತಾಲ್ಲೂಕಿನ ಕೋಡಿಹಳ್ಳಿ ಆದಿಜಾಂಬವ ಮಹಾಸಂಸ್ಥಾನದ ಮಾರ್ಕಾಂಡಮುನಿ ಸ್ವಾಮೀಜಿ (70) ಗುರುವಾರ ಹೃದಯಾಘಾತದಿಂದ ಲಿಂಗೈಕ್ಯರಾದರು.



ಆರೋಗ್ಯದಲ್ಲಿ ಏರುಪೇರು ಕಂಡ ತಕ್ಷಣ ಹಿರಿಯೂರಿನ ಸಾರ್ವಜನಿಕ ಆಸ್ಪತ್ರೆಗೆ ಭಕ್ತರು ಕರೆ ತಂದರು. ಆಸ್ಪತ್ರೆಗೆ ಬರುವ ವೇಳೆಗೆ ಸ್ವಾಮೀಜಿ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು. ಮಠದಲ್ಲಿ ಶುಕ್ರವಾರ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಆದಿಜಾಂಬವ ಶಾಖಾ ಮಠದ ಸ್ವಾಮೀಜಿಗಳ ಜೊತೆ ಚರ್ಚಿಸಿ ಮಠದ ಆವರಣದಲ್ಲಿ ಅಂತ್ಯಕ್ರಿಯೆ ಕುರಿತು ನಿರ್ಧರಿಸಲಾಗುವುದು ಎಂದು ಶಿವಮುನಿ ಸ್ವಾಮೀಜಿ ಹಾಗೂ ಷಡಕ್ಷರಮುನಿ ಸ್ವಾಮೀಜಿ ತಿಳಿಸಿದ್ದಾರೆ. ಮಾರ್ಕಾಂಡಮುನಿ ಸ್ವಾಮೀಜಿ ಅವರು ಆದಿಜಾಂಬವ ಸಮಾಜದ ಸಂಘಟನೆಯಲ್ಲಿ ತೊಡಗಿದ್ದರು.

ಚುನಾವಣೆಗೆ ಈಗಿನಿಂದಲೇ ತಯಾರಿ: ದೇವೇಗೌಡ



ಬೆಂಗಳೂರು: 'ಉಪ ಚುನಾವಣೆಯ ಸೋಲು, ಗೆಲುವಿನ ಬಗ್ಗೆ ಚರ್ಚಿಸುವ ಬದಲು 2023ರ ಸಾರ್ವತ್ರಿಕ ಚುನಾವಣೆಗೆ ಈಗಿನಿಂದಲೇ ಕೆಲಸ ಮಾಡಲು ತೀರ್ಮಾನಿಸಿದ್ದೇನೆ. ಇದೇ 8 ರಿಂದ ಎರಡನೇ ಹಂತದ ಕಾರ್ಯಾಗಾರ ನಡೆಯಲಿದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ದೀಪಾವಳಿ ಹಬ್ಬದ ಪ್ರಯುಕ್ತ ಪಕ್ಷದ ಕಚೇರಿ ಜೆಪಿ ಭವನದಲ್ಲಿ ಗುರುವಾರ ಲಕ್ಷ್ಮಿ ಪೂಜೆಯಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಎಚ್.ಡಿ.ಕುಮಾರಸ್ವಾಮಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ, ವಿಧಾನಪರಿಷತ್ ಸದಸ್ಯ ತಿಪ್ಪೇಸ್ವಾಮಿ ಚರ್ಚಿಸಿದ್ದೇವೆ' ಎಂದರು.

'ಜೆಡಿಎಸ್ ಪ್ರಾದೇಶಿಕ ಪಕ್ಷ. ಉಳಿಸಲು ಕೆಲಸ ಮಾಡುತ್ತೇವೆ. ನಾನು ರಾಜಕೀಯವಾಗಿ ಬೆಳೆಸಿದ್ದ ಎಂ.ಸಿ.ಮನಗೂಳಿ ಅವರ ಮಗನನ್ನು ಕಾಂಗ್ರೆಸ್‌ನವರು ಕರೆದೊಯ್ದು ಚುನಾವಣೆಗೂ ನಿಲ್ಲಿಸಿದರು. ಅವರಿಗೆ ಎಷ್ಟು ಮತ ಬಂದಿವೆ ಎಂಬುದನ್ನು ಅರ್ಥ ಮಾಡಿಕೊಳ್ಳಲಿ' ಎಂದು ಕುಟುಕಿದರು.

'ಪಕ್ಷ ಸಂಘಟಿಸಲು ತಿಂಗಳಲ್ಲಿ ಎರಡು ಜಿಲ್ಲೆಗಳಿಗೆ ನಾನು ಪ್ರವಾಸ ಮಾಡುತ್ತೇನೆ. ಕುಮಾರಸ್ವಾಮಿ ಮಾಡುವ ಕಾರ್ಯಕ್ರಮದ ಜೊತೆಗೂ ಇರುತ್ತೇನೆ. ಮೂರು ಅಥವಾ ನಾಲ್ಕು ದಿನ ಜಿಲ್ಲಾ ಪ್ರವಾಸದ ವೇಳೆ ಉಳಿದುಕೊಳ್ಳುತ್ತೇನೆ. ಆದಷ್ಟು ಬೇಗ ಪಕ್ಷದ ಕೋರ್ ಕಮಿಟಿ ಘೋಷಣೆ ಮಾಡುತ್ತೇವೆ' ಎಂದರು.

'ಸಿದ್ದರಾಮಯ್ಯ ಅವರ ಪಕ್ಷದ ನಾಯಕರಾಗಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡುತ್ತಾರೆ. ನಾನು ನನ್ನದೇ ಮಾರ್ಗದಲ್ಲಿ ಪಕ್ಷ ಕಟ್ಟುತ್ತೇನೆ. ಮುಂದೆ ಅಭ್ಯರ್ಥಿಗಳ ಆಯ್ಕೆ ಕುರಿತು ಕೋರ್ ಕಮಿಟಿಯಲ್ಲಿ ತೀರ್ಮಾನಿಸುತ್ತೇವೆ' ಎಂದರು.

'ಆರೆಸ್ಸೆಸ್ ಟೀಕಿಸಿದ್ದಕ್ಕೆ ಉಪ ಚುನಾವಣೆಯಲ್ಲಿ ಸೋಲಾಯಿತೇ' ಎಂಬ ಪ್ರಶ್ನೆಗೆ ಗರಂ ಆದ ಅವರು, 'ಅದೆಲ್ಲ ಮುಗಿದ ಅಧ್ಯಾಯ. ಸಿಂದಗಿಯಲ್ಲಿ 38 ಸಾವಿರ ಮುಸ್ಲಿಂ ಮತಗಳಿವೆ. ಆ ಮತಗಳು ಯಾರಿಗೆ ಹೋಯಿತು. ಬಿಜೆಪಿಗೆ ಹೋಯಿತೇ?. ಜನರೇ ತೀರ್ಮಾನಿಸಲಿ' ಎಂದು ಪ್ರಶ್ನಿಸಿದರು.

ತೈಲ ಸುಂಕ ಇಳಿಕೆ: ಚುನಾವಣೆ ಮೇಲೆ ಕಣ್ಣಿಟ್ಟು ಕೇಂದ್ರದ ಕ್ರಮ ಎಂದ ವಿಪಕ್ಷ

ಮತದಾರರ ಭೀತಿಯೇ ಕಾರಣ

• ಆನಂದ್ ಮಿಶ್ರಾ

ನವದೆಹಲಿ: ಬಿಜೆಪಿ ಆಡಳಿತವಿರುವ ಹಲವು ರಾಜ್ಯಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಕಡಿತ ಮಾಡಿವೆ. ತೆರಿಗೆ ಕಡಿತ ಮಾಡಿರುವ ಏಳು ರಾಜ್ಯಗಳ ಪೈಕಿ ಆರರಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಇದೆ. ಈ ತೆರಿಗೆ ಕಡಿತಕ್ಕೆ ಕಾರಣ ಭಯವೇ ಹೊರತು ಜನರ ಭಾವನೆಗಳು ಸರ್ಕಾರಗಳಿಗೆ ಅರ್ಥವಾಗಿದ್ದು ಅಲ್ಲ ಎಂದು ಕಾಂಗ್ರೆಸ್ ಪಕ್ಷವು ಟೀಕಿಸಿದೆ.

ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಬಿಜೆಪಿ ಆಡಳಿತವಿರೋಧಿ ಅಲೆ ಎದುರಿಸುತ್ತಿದೆ. ಉತ್ತರ ಪ್ರದೇಶ ಮತ್ತು ಗುಜರಾತ್ ಸೇರಿ ಹಲವು ರಾಜ್ಯಗಳು ಕೋವಿಡ್ ಬಿಕ್ಕಟ್ಟು ನಿರ್ವಹಿಸಿದ ರೀತಿಯು ಟೀಕೆಗೆ ಒಳಗಾಗಿದೆ. ಜತೆಗೆ, ಏರುತ್ತಲೇ ಇದ್ದ ತೈಲ ಬೆಲೆ ಮತ್ತು ಈ ಬಗ್ಗೆ ಜನರಲ್ಲಿ ಇದ್ದ ಆಕ್ರೋಶವು ಬಿಜೆಪಿಗೆ ಎಚ್ಚರಿಕೆ ಗಂಟೆಯಾಗಿ ಪರಿಣಮಿಸಿದೆ.

ತೈಲ ದರ ಕಡಿತದ ವದಂತಿಯು ಸ್ವಲ್ಪ ಸಮಯದಿಂದ ತೀವ್ರವಾಗಿ ಕೇಳಿಬಂದಿತ್ತು. 'ತೈಲದ ಮೇಲಿನ ತೆರಿಗೆ ಕಡಿತವು ಜನರಿಗೆ ಬಿಜೆಪಿಯ ದೀಪಾವಳಿ ಕೊಡುಗೆ ಎಂದು ಬಿಜೆಪಿ ಬೆಂಬಲಿಗರು ಹೇಳುತ್ತಿದ್ದಾರೆ. ಆದರೆ, ಪೆಟ್ರೋಲಿಯಂ ಉತ್ಪನ್ನಗಳೆರಡರ ದರ ಕಡಿತವು ಸಿಟ್ಟು ಮತ್ತು ಅಸಮಾಧಾನದಿಂದ ಕುದಿಯುತ್ತಿರುವ ಜನರ ಮನವೊಲಿಕೆ ಯತ್ನ. ಇದು ಎಷ್ಟೇ ಜನಪ್ರಿಯ ನಡೆ ಆಗಿದ್ದರೂ ಪರಿಣಾಮಕಾರಿ ಹಾಗೂ ಪಾರದರ್ಶಕ ಆಡಳಿತ ಅಥವಾ ಮಾರುಕಟ್ಟೆ ಆಧಾರಿತ ದರ ನಿಗದಿ ವ್ಯವಸ್ಥೆಗೆ ವ್ಯತಿರಿಕ್ತವಾಗಿದೆ' ಎಂದು ರಾಜಕೀಯ ವಿಶ್ಲೇಷಕ ರಶೀದ್ ಕಿದ್ವಾಯಿ ಹೇಳಿದ್ದಾರೆ.

'ತೈಲ ದರ ಏರಿಕೆಯೊಂದಿಗೆ ಜನರ ಕೋಪವೂ ಏರಿದೆ. ಆಡಳಿತದಲ್ಲಿರುವ ಪಕ್ಷಕ್ಕೆ ಇದು ಪೂರಕವಲ್ಲ. ಚುನಾವಣೆ ಹತ್ತಿರವಿರುವ ಸಂದರ್ಭದಲ್ಲಿಯಂತೂ ಇದು ಇನ್ನೂ ಹೆಚ್ಚು ಅನನುಕೂಲಕರ' ಎಂಬುದು ಕಿದ್ವಾಯಿ ಅವರ ವಿಶ್ಲೇಷಣೆ.

'ಬಿಜೆಪಿ ಜನರನ್ನು ದಿವಾಳಿ ಮಾಡಿದೆ' ಎಂಬ ಹ್ಯಾಷ್‌ಟ್ಯಾಗ್‌ನಲ್ಲಿ ತೈಲ ದರ ಏರಿಕೆ ಬಗ್ಗೆ ಕಾಂಗ್ರೆಸ್ ಪಕ್ಷವು ಟ್ವಿಟರ್‌ನಲ್ಲಿ ಅಭಿಯಾನವನ್ನೇ ನಡೆಸಿದೆ.

'ನೀವು ಸಂತಸದಿಂದ ದೀಪಾವಳಿ ಆಚರಿಸುವ ಈ ಸಂದರ್ಭದಲ್ಲಿ, ಇಂಧನ ದರ ಏರಿಕೆಯಿಂದಾಗಿ ಲಕ್ಷಾಂತರ ಜನರು ತಮ್ಮ ಕುಟುಂಬದ ಸದಸ್ಯರನ್ನು ನೋಡಲು ಹೋಗುವುದಕ್ಕೆ ಸಾಧ್ಯವಾಗಿಲ್ಲ. ಏರುತ್ತಲೇ ಇರುವ ದರ ನಿಯಂತ್ರಣಕ್ಕೆ ನೀವು ಮಾಡಿದ್ದದರೂ ಏನು' ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ಆದರೆ, ಕೇಂದ್ರದ ಹಲವು ಸಚಿವರು, ಮೋದಿ ಅವರನ್ನು ತೆರಿಗೆ ಕಡಿತದ ಬಳಿಕ ಕೊಂಡಾಡಿದ್ದಾರೆ.

ಕೇಂದ್ರ ಸರ್ಕಾರವು ಎಕ್ಸೈಸ್ ಸುಂಕದಲ್ಲಿ ಮಾಡಿರುವ ಕಡಿತವು ಏನಕ್ಕೂ ಸಾಲದು ಎಂದು ಕಾಂಗ್ರೆಸ್ ಹೇಳುತ್ತಿದೆ. ಸಿಪಿಎಂ ನೇತೃತ್ವದ ಕೇರಳದ ಸರ್ಕಾರವು ತೈಲದ ಮೇಲಿನ ತೆರಿಗೆ ಇಳಿಸಬೇಕು ಎಂದು ಕಾಂಗ್ರೆಸ್ ಮತ್ತು ಬಿಜೆಪಿ ಒತ್ತಾಯಿಸಿವೆ. ಪಶ್ಚಿಮ ಬಂಗಾಳದಲ್ಲಿ ಪೆಟ್ರೋಲ್-ಡೀಸೆಲ್ ಮೇಲಿನ ವ್ಯಾಟ್ ಕಡಿತ ಮಾಡುವಂತೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಬಿಜೆಪಿ ಒತ್ತಾಯಿಸಿದೆ. ಮಧ್ಯ ಪ್ರದೇಶವು ಕೂಡ ತೆರಿಗೆ ಕಡಿತ ಮಾಡಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಪದೇ ಪದೇ ತೈಲ ದರ ಏರಿಸಿದ ಬಳಿಕ ಈಗ ಅಲ್ಪ ಕಡಿತ ಮಾಡಲಾಗಿದೆ ಎಂದು ಕಾಂಗ್ರೆಸ್ ಹೇಳಿದೆ. ತೈಲದರವು ₹50ರಷ್ಟು ಕಡಿಮೆ ಆಗಬೇಕಿತ್ತು ಎಂದು ಬಿಜೆಪಿಯ ಮಾಜಿ ಮಿತ್ರ ಪಕ್ಷ ಶಿವಸೇನಾ ಹೇಳಿದೆ. ಎಕ್ಸೈಸ್ ಸುಂಕವನ್ನು ಇನ್ನಷ್ಟು ಇಳಿಕೆ ಮಾಡಬೇಕು ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಒತ್ತಾಯಿಸಿದ್ದಾರೆ.



ಮೋದಿಯವರೇ, ಎಕ್ಸೈಸ್ ಸುಂಕವನ್ನು ಸುಮಾರು ₹35ರಷ್ಟು ಹೆಚ್ಚಿಸಿ ₹5 ಕಡಿತ ಮಾಡಿದ್ದಕ್ಕೆ ಕೃತಜ್ಞತೆ. ದರ ಏರಿಕೆಯನ್ನು ನಾಳೆಯಿಂದಲೇ ಮುಂದುವರಿಸಿ

ದಿಗ್ವಿಜಯ್ ಸಿಂಗ್, ಕಾಂಗ್ರೆಸ್ ಮುಖಂಡ

ಪ್ರಜಾವಾಣಿ ವಿಶೇಷ

2019ರ ಮಟ್ಟಕ್ಕೆ ಮರಳಿದ ಇಂಗಾಲದ ಮಾಲಿನ್ಯ

ಗ್ಲಾಸ್ಗೋ ಶೃಂಗಸಭೆಯಲ್ಲಿ ಗ್ಲೋಬಲ್ ಕಾರ್ಬನ್ ಪ್ರಾಜೆಕ್ಟ್ ವರದಿ ಮಂಡನೆ

ಗ್ಲಾಸ್ಗೋ (ಎಪಿ): ವಿಶ್ವದಲ್ಲಿ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆ ಪ್ರಮಾಣ ಕೋವಿಡ್ ಲಾಕ್‌ಡೌನ್‌ನಿಂದಾಗಿ 2020ರಲ್ಲಿ ದಿಢೀರ್ ಕುಸಿದಿತ್ತು. ಆದರೆ ವಿಶ್ವದ ಹಲವೆಡೆ ಲಾಕ್‌ಡೌನ್ ತೆರವಾದ ಕಾರಣ, ವಿಶ್ವದಲ್ಲಿ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆ ಪ್ರಮಾಣ ಮತ್ತೆ ಏರಿಕೆಯಾಗಿದೆ. ಆದರೆ ಈ ಬಾರಿ ಇಂಗಾಲದ ಹೊರಸೂಸುವಿಕೆ ಹೆಚ್ಚಾಗಲು, ಚೀನಾದಲ್ಲಿ ಕಲ್ಲಿದ್ದಲು ಬಳಕೆ ಏರಿಕೆಯಾದದ್ದೇ ಪ್ರಮುಖ ಕಾರಣ ಎಂದು ಅಧ್ಯಯನ ವರದಿಯೊಂದು ಹೇಳಿದೆ.

ಗ್ಲೋಬಲ್ ಕಾರ್ಬನ್ ಪ್ರಾಜೆಕ್ಟ್ ಹೆಸರಿನಲ್ಲಿ ವಿಜ್ಞಾನಿಗಳ ತಂಡವು ವಿಶ್ವದ ಇಂಗಾಲದ ಡೈ ಆಕ್ಸೈಡ್ ಹೊರಸೂಸುವಿಕೆ ಪ್ರಮಾಣವನ್ನು ದಾಖಲಿಸುತ್ತಿದೆ. ಈ ತಂಡವು ದಾಖಲಿಸಿರುವ ಪ್ರಕಾರ, 2019ರಲ್ಲಿ ವಿಶ್ವದಾದ್ಯಂತ ಒಟ್ಟು 3,670 ಕೋಟಿ ಟನ್ ಇಂಗಾಲವನ್ನು ಹೊರಸೂಸಲಾಗಿತ್ತು. 2020ರಲ್ಲಿ ಇದು 3,480 ಕೋಟಿ ಟನ್‌ಗಳಿಗೆ ಕುಸಿದಿತ್ತು.

'ಲಾಕ್‌ಡೌನ್‌ನ ಕಾರಣ ವಿಶ್ವದಾದ್ಯಂತ ಕೈಗಾರಿಕೆಗಳು ಸ್ಥಗಿತವಾಗಿದ್ದವು. ಹೀಗಾಗಿ ಕಲ್ಲಿದ್ದಲಿನ ಬಳಕೆಯೂ ಕಡಿಮೆಯಾಗಿತ್ತು. ವಾಹನಗಳ ಓಡಾಟವೂ ಇಳಿಕೆಯಾಗಿತ್ತು. ಇವೆಲ್ಲವುಗಳಿಂದ ಆಗುತ್ತಿದ್ದ ವಾಯುಮಾಲಿನ್ಯದ ಪ್ರಮಾಣ ಕಡಿಮೆಯಾಗಿತ್ತು. ಹೀಗಾಗಿಯೇ ವಿಶ್ವದ ಇಂಗಾಲದ ಡೈ ಆಕ್ಸೈಡ್ ಉಗುಳುವಿಕೆ ಪ್ರಮಾಣ ಕುಸಿದಿತ್ತು' ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ. ಅಧ್ಯಯನ ವರದಿಯನ್ನು ಗ್ಲಾಸ್ಗೋ ಹವಾಮಾನ ವೈಪರೀತ್ಯ ಶೃಂಗಸಭೆಯಲ್ಲಿ ಮಂಡಿಸಲಾಗಿದೆ.

2021ರಲ್ಲಿ ವಿಶ್ವದ ಬಹುತೇಕ ದೇಶಗಳಲ್ಲಿ ಆರ್ಥಿಕ ಮತ್ತು ಕೈಗಾರಿಕಾ ಚಟುವಟಿಕೆ ಚೇತರಿಸಿಕೊಳ್ಳುತ್ತಿದೆ. ಇದರಿಂದ ವಿದ್ಯುತ್, ವಾಹನ ಬಳಕೆ ಹೆಚ್ಚಾಗಿದೆ. ಹೀಗಾಗಿ 2021ರ ಅಂತ್ಯದ ವೇಳೆಗೆ ವಿಶ್ವದಾದ್ಯಂತ ಅಂದಾಜು 3,640 ಕೋಟಿ ಟನ್‌ಗಳಷ್ಟು ಇಂಗಾಲದ ಡೈಆಕ್ಸೈಡ್ ವಾತಾವರಣಕ್ಕೆ ಬಿಡುಗಡೆಯಾಗುವ ಸಾಧ್ಯತೆ ಇದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

2021ರಲ್ಲಿ ಇಂಗಾಲದ ಡೈಆಕ್ಸೈಡ್ ಮಾಲಿನ್ಯದ ಪ್ರಮಾಣ ಹೆಚ್ಚಾಗಲು, ಚೀನಾ ತನ್ನ ಕಲ್ಲಿದ್ದಲು ಬಳಕೆಯನ್ನು ಹೆಚ್ಚಿಸಿರುವುದೇ ಪ್ರಧಾನ ಕಾರಣ. ಬೇರೆಲ್ಲಾ ದೇಶಗಳಿಗಿಂತ ಚೀನಾದಲ್ಲಿ ಮೊದಲು ಲಾಕ್‌ಡೌನ್ ತೆರವು ಮಾಡಲಾಗಿತ್ತು. ಆದ್ದರಿಂದ ಅಲ್ಲಿ ಕೈಗಾರಿಕಾ ಚಟುವಟಿಕೆಗಳು ಆರಂಭವಾಯಿತು. ಲಾಕ್‌ಡೌನ್ ಅವಧಿಯಲ್ಲಿ ಆಗಿದ್ದ ನಷ್ಟ ಮತ್ತು ತಯಾರಿಕಾ ಕೊರತೆಯನ್ನು ನೀಗಿಸಲು ಚೀನಾವು ಕೈಗಾರಿಕಾ ಚಟುವಟಿಕೆಯನ್ನು ಹೆಚ್ಚಿಸಿದೆ. ಇದಕ್ಕಾಗಿ ಅಗತ್ಯವಿರುವ ವಿದ್ಯುತ್ ಅನ್ನು ಉತ್ಪಾದಿಸಲು ಕಲ್ಲಿದ್ದಲು ಮತ್ತು ನೈಸರ್ಗಿಕ ಅನಿಲವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಈ ಕಾರಣದಿಂದ ವಾತಾವರಣಕ್ಕೆ ಹೆಚ್ಚಿನ ಪ್ರಮಾಣದ ಇಂಗಾಲದ ಡೈ ಆಕ್ಸೈಡ್ ಬಿಡುಗಡೆಯಾಗಿದೆ ಎಂದು ವಿವರಿಸಲಾಗಿದೆ.

ಲಾಕ್‌ಡೌನ್‌ನಿಂದ ಹೆಚ್ಚು ಬದಲಾವಣೆ ಅಸಾಧ್ಯ

2020ರಲ್ಲಿ ಇಂಗಾಲದ ಡೈ ಆಕ್ಸೈಡ್ ಹೊರಸೂಸುವಿಕೆ ಪ್ರಮಾಣ ಕಡಿಮೆಯಾದಾಗ, ಲಾಕ್‌ಡೌನ್‌ನಿಂದಾಗಿ ವಾಯುಮಾಲಿನ್ಯವನ್ನು ನಿಯಂತ್ರಿಸಬಹುದು ಎಂದು ಕೆಲವರು ಆಶಾವಾದ ವ್ಯಕ್ತಪಡಿಸಿದ್ದರು. ಆದರೆ ಪರಿಸ್ಥಿತಿ ಹಾಗೆ ಇಲ್ಲ. ಆ ಬದಲಾವಣೆ ತಾತ್ಕಾಲಿಕ ಮಾತ್ರವಾಗಿತ್ತು ಎಂದು ಶೃಂಗಸಭೆಯಲ್ಲಿ ವರದಿ ಮಂಡನೆ ವೇಳೆ ಹೇಳಲಾಗಿದೆ.

'ಲಾಕ್‌ಡೌನ್‌ನಿಂದ ಆಗುವ ಬದಲಾವಣೆಗಳು ದೀರ್ಘಾವಧಿಯದ್ದಾಗಿರುವುದಿಲ್ಲ. ಹೀಗಾಗಿ ನಾವು ಈ ಶೃಂಗಸಭೆಯಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತೇವೆಯೋ, ಅದು ದೀರ್ಘಾವಧಿಯವರೆಗೆ ಪರಿಣಾಮ ಬೀರುವಂಥಹುದಾಗಿರಬೇಕು. ಆ ತೀರ್ಮಾನದಿಂದ ಮಾತ್ರವೇ ನಾವು ಭೂಮಿಯನ್ನು ಉಳಿಸಿಕೊಳ್ಳಲು ಸಾಧ್ಯ' ಎಂದು ತಜ್ಞರು ಹೇಳಿದ್ದಾರೆ.

ಮುಖ್ಯಾಂಶಗಳು

- ಕೋವಿಡ್ ಲಾಕ್‌ಡೌನ್ ಕಾರಣದಿಂದ ಇಳಿಕೆಯಾಗಿದ್ದ ವಾಯುಮಾಲಿನ್ಯ
- ಲಾಕ್‌ಡೌನ್ ತೆರವಿನೊಂದಿಗೆ ವಾಯುಮಾಲಿನ್ಯ ಪ್ರಮಾಣವೂ ಹೆಚ್ಚಳ
- ಜಾಗತಿಕ ವಾಯುವಾಲಿನ್ಯ ಹೆಚ್ಚಳಕ್ಕೆ ಚೀನಾದ ಕೊಡುಗೆಯೇ ಅಧಿಕ


ತೈಲ ಉತ್ಪಾದನೆ ಹೆಚ್ಚಿಸಲಿರುವ ಸೌದಿ

ಕೈರೊ (ರಾಯಿಟರ್ಸ್): ಸೌದಿ ಅರೇಬಿಯಾ ಡಿಸೆಂಬರ್‌ನಲ್ಲಿ ಪ್ರತಿದಿನ 1 ಕೋಟಿ ಬ್ಯಾರೆಲ್‌ಗಿಂತ ಹೆಚ್ಚು ಕಚ್ಚಾ ತೈಲ ಉತ್ಪಾದನೆ ಮಾಡಲಿದೆ. ಕೋವಿಡ್ ಸಾಂಕ್ರಾಮಿಕ ಶುರುವಾದ ನಂತರದಲ್ಲಿ ಸೌದಿ ಅರೇಬಿಯಾ ಮೊದಲ ಬಾರಿಗೆ ಇಷ್ಟು ಪ್ರಮಾಣದಲ್ಲಿ ಕಚ್ಚಾ ತೈಲವನ್ನು ಉತ್ಪಾದಿಸಲಿದೆ.

ಗುರುವಾರ ಸಭೆ ಸೇರಿದ್ದ ತೈಲ ರಫ್ತು ದೇಶಗಳ ಒಕ್ಕೂಟ ಮತ್ತು ಒಕ್ಕೂಟದ ಮಿತ್ರ ರಾಷ್ಟ್ರಗಳು (ಒಪೆಕ್+), ಈ ಮೊದಲು ಮಾಡಿದ್ದ ತೀರ್ಮಾನಕ್ಕೆ ಅನುಗುಣವಾಗಿ, ತೈಲ ಉತ್ಪಾದನೆಯನ್ನು ದಿನಕ್ಕೆ ನಾಲ್ಕು ಲಕ್ಷ ಬ್ಯಾರಲ್‌ನಷ್ಟು ಮಾತ್ರ ಹೆಚ್ಚಿಸಲು ಸಮ್ಮತಿಸಿವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಯಾವುದಾದರೂ ವಿಚಾರಕ್ಕಾಗಿ ಪಶ್ಚಾತ್ತಾಪಪಡುವುದಾಗಿ ಎಂದಿಗೂ ಹೇಳದಿರಿ. ಏಕೆಂದರೆ ನಿಮ್ಮ ಜೀವನದ ಒಂದು ಹಂತದಲ್ಲಿ, ನೀವು ಅದನ್ನು ಬಯಸಿದ್ದಿರಿ.

-ಡ್ರೇಕ್

ತೈಲ ಬೆಲೆ ಇಳಿಕೆ ಸ್ವಾಗತಾರ್ಹ ಅಗತ್ಯವಾಗಿತ್ತು, ವಿಳಂಬವೂ ಆಯಿತು

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕ್ರಮವಾಗಿ ₹ 5 ಹಾಗೂ ₹ 10ರಷ್ಟು ತಗ್ಗಿಸಿದೆ. ಕೇಂದ್ರದ ಈ ಕ್ರಮಕ್ಕೆ ಪ್ರತಿಯಾಗಿ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು (ವ್ಯಾಟ್) ತಗ್ಗಿಸುವ ಘೋಷಣೆ ಮಾಡಿವೆ. ಕರ್ನಾಟಕದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ವ್ಯಾಟ್ ಪ್ರಮಾಣದಲ್ಲಿ ತಲಾ ₹ 7ರಷ್ಟು ಇಳಿಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದಾರೆ. 'ಹಿಂಗಾರು ಹಂಗಾಮಿನಲ್ಲಿ ರೈತರಿಗೆ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಡೀಸೆಲ್ ಮೇಲೆ ₹ 10ರಷ್ಟು ಬೆಲೆ ಇಳಿಕೆ ಮಾಡಲಾಗಿದೆ. ಅಲ್ಲದೆ, ಹಬ್ಬದ ಸಂದರ್ಭದಲ್ಲಿ ಜನರು ಖರೀದಿ ಚಟುವಟಿಕೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಲಿ, ಆರ್ಥಿಕ ಚಟುವಟಿಕೆಗಳು ಬಿರುಸು ಪಡೆಯಲಿ ಎಂಬ ಉದ್ದೇಶವೂ ಎಕ್ಸೈಸ್ ಸುಂಕ ಇಳಿಕೆಯ ಹಿಂದೆ ಇದೆ. ಡೀಸೆಲ್ ಬೆಲೆ ಇಳಿಕೆಯಿಂದ ಹಣದುಬ್ಬರ ತಗ್ಗಬಹುದು' ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ. ಅತ್ಯಂತ ಅಗತ್ಯವಾಗಿದ್ದ, ಸ್ವಾಗತಾರ್ಹ ತೀರ್ಮಾನವನ್ನು ಕೇಂದ್ರ ಸರ್ಕಾರ ಕೈಗೊಂಡಿದೆ ಎಂಬುದರಲ್ಲಿ ಅನುಮಾನ ಇಲ್ಲ. ಈ ಕ್ರಮವನ್ನು ಅದು ಬಹಳ ಹಿಂದೆಯೇ ತೆಗೆದುಕೊಳ್ಳಬಹುದಿತ್ತು. ಆದರೆ, ಅದನ್ನು ಈಗ ಮಾಡಿರುವುದರ ಹಿಂದೆ ರಾಜಕೀಯ ಲೆಕ್ಕಾಚಾರಗಳು ಇಲ್ಲವೇ ಇಲ್ಲ ಎನ್ನಲು ಸಾಧ್ಯವಿಲ್ಲ. ದೇಶದ ವಿವಿಧ ರಾಜ್ಯಗಳ ಒಟ್ಟು 29 ವಿಧಾನಸಭಾ ಕ್ಷೇತ್ರಗಳಿಗೆ ಹಾಗೂ ಮೂರು ಲೋಕಸಭಾ ಕ್ಷೇತ್ರಗಳಿಗೆ ಈಚೆಗೆ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಒಟ್ಟಾರೆಯಾಗಿ ತುಸು ಹಿನ್ನಡೆ ಅನುಭವಿಸಿದೆ. ಹಿಮಾಚಲ ಪ್ರದೇಶದಲ್ಲಿ ದೊಡ್ಡ ಹಿನ್ನಡೆ ಕಂಡಿದೆ. ಕರ್ನಾಟಕದಲ್ಲಿನ ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಫಲಿತಾಂಶವು ಬಿಜೆಪಿಗೆ ಅಲ್ಪತೃಪ್ತಿಯನ್ನಷ್ಟೇ ತಂದಿರಬಹುದು. ಈ ಫಲಿತಾಂಶಗಳು ಬಂದ ಒಂದೇ ದಿನದಲ್ಲಿ ಕೇಂದ್ರವು ಈ ತೈಲೋತ್ಪನ್ನಗಳ ಮೇಲಿನ ಎಕ್ಸೈಸ್ ಸುಂಕವನ್ನು ತಗ್ಗಿಸಿದೆ.



ಜನರ ಹಿತದೃಷ್ಟಿಯಿಂದ ತೀರಾ ಅಗತ್ಯವಾಗಿದ್ದ ಕ್ರಮವೊಂದನ್ನು ಸರ್ಕಾರಗಳು ತಡವಾಗಿಯಾದರೂ ಕೈಗೊಂಡಿರುವುದು ಸಮಾಧಾನಕರ

2022ರ ಆರಂಭದಲ್ಲಿಯೇ ಉತ್ತರಪ್ರದೇಶ, ಉತ್ತರಾಖಂಡ, ಪಂಜಾಬ್, ಗೋವಾ ಮತ್ತು ಮಣಿಪುರ ರಾಜ್ಯ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಈ ರಾಜ್ಯಗಳ ಪೈಕಿ ಉತ್ತರಪ್ರದೇಶವು ಬಿಜೆಪಿ ಪಾಲಿಗೆ ಬಹುಮುಖ್ಯವಾದುದು. ಕೋವಿಡ್ ಸಾಂಕ್ರಾಮಿಕವು ವಿಶ್ವವನ್ನು ಅಪ್ಪಳಿಸಿದ ನಂತರದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯು ತೀರಾ ಕಡಿಮೆ ಮಟ್ಟಕ್ಕೆ ಕುಸಿದಿದ್ದಾಗಲೂ, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಳವಾದ ಪರಿಯು ಜನಸಾಮಾನ್ಯರನ್ನು ಹಿಂಡಿ ಹಿಪ್ಪೆ ಮಾಡಿತ್ತು. ಈ ಬೆಲೆ ಹೆಚ್ಚಳಕ್ಕೆ ಪ್ರಮುಖ ಕಾರಣ ಸರ್ಕಾರಗಳು ಹೆಚ್ಚಿಸಿದ ಸುಂಕ ಮತ್ತು ತೆರಿಗೆ. ತೈಲೋತ್ಪನ್ನಗಳ ದರವು ದೇಶದಲ್ಲಿ ಸರ್ಕಾರದ ನಿಯಂತ್ರಣದಿಂದ ಮುಕ್ತವಾಗಿದೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ದರ ಏರಿಳಿತಗಳಿಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಬೆಲೆ ನಿಗದಿ ಆಗುತ್ತದೆ ಎಂದು ಕೇಂದ್ರ ಸರ್ಕಾರ ಎಷ್ಟೇ ಹೇಳಿದರೂ ವಾಸ್ತವ ಬೇರೆಯೇ ಆಗಿರುತ್ತಿತ್ತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ತಗ್ಗಿದಾಗ ದೇಶದಲ್ಲಿ ತೈಲೋತ್ಪನ್ನಗಳಿಗೆ ಸುಂಕ ಅಥವಾ ತೆರಿಗೆ ಹೆಚ್ಚಿಸಿ, ಬೆಲೆ ಇಳಿಕೆಯ ಪ್ರಯೋಜನವು ಜನಸಾಮಾನ್ಯರಿಗೆ ಸಿಗದಂತೆ ಮಾಡಲಾಗುತ್ತಿತ್ತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆ ಕಂಡಾಗ, ದೇಶಿ ಮಾರುಕಟ್ಟೆಯಲ್ಲಿ ತೈಲೋತ್ಪನ್ನಗಳ ಬೆಲೆ ಹೆಚ್ಚಿಸುವುದು ಇದ್ದೇ ಇತ್ತು. 2020ರ ಮಾರ್ಚ್–ಮೇ ನಡುವೆ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕೇಂದ್ರವು ಕ್ರಮವಾಗಿ ₹ 13 ಹಾಗೂ ₹ 16ರಷ್ಟು ಏರಿಸಿತ್ತು. ಇಂತಹ ಕ್ರಮಗಳಿಂದಾಗಿ ದೇಶದ ಬಹುತೇಕ ಕಡೆಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ದರ ₹ 100ರ ಗಡಿ ದಾಟಿತ್ತು. ಹಣದುಬ್ಬರ ಪ್ರಮಾಣವನ್ನು ನಿಯಂತ್ರಣದಲ್ಲಿ ಇರಿಸಬೇಕಾದ ಹೊಣೆ ಹೊತ್ತಿರುವ ಭಾರತೀಯ ರಿಸರ್ವ್ ಬ್ಯಾಂಕ್, ತೆರಿಗೆ ಪ್ರಮಾಣ ಕಡಿತ ಮಾಡಬೇಕು ಎಂದು ಮತ್ತೆ ಮತ್ತೆ ಹೇಳಿತ್ತು. ಉಪಚುನಾವಣೆಗಳ ನಂತರದಲ್ಲಿ, ಪ್ರಮುಖ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಜನರ ಕಷ್ಟ ಸರ್ಕಾರಗಳ ಕಣ್ಣಿಗೆ ಬಿದ್ದಿದೆ. ವಿರೋಧ ಪಕ್ಷಗಳ ಹಾಗೂ ಆರ್‌ಬಿಐನ ಮನವಿ, ಒತ್ತಾಯ ಕಿವಿಗೆ ಕೇಳಿಸಿದೆ. ಈ ಮನವಿ, ಒತ್ತಾಯಗಳಿಗೆ ಸರ್ಕಾರಗಳು ಈಗ ಸ್ಪಂದಿಸಿವೆ.

ಸರ್ಕಾರಗಳು ತೈಲೋತ್ಪನ್ನಗಳ ಬೆಲೆಯನ್ನು ನಿಯಂತ್ರಣಮುಕ್ತಗೊಳಿಸುವ ಇರಾದೆ ನಿಜಕ್ಕೂ ತಮಗೆ ಇದೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು. ಕಚ್ಚಾ ತೈಲದ ಬೆಲೆ ತಗ್ಗಿದಾಗ, ಸುಂಕ ಹೆಚ್ಚಿಸುವುದು ನಿಯಂತ್ರಣಮುಕ್ತಗೊಳಿಸುವ ನಡೆ ಆಗುವುದಿಲ್ಲ, ಅದು ಬೆಲೆಯನ್ನು ಸರ್ಕಾರವೇ ತೀರ್ಮಾನಿಸುವ ವ್ಯವಸ್ಥೆ ಆಗುತ್ತದೆ. ಮುಕ್ತ ಮಾರುಕಟ್ಟೆ ನೀತಿಯನ್ನು ಬೆಂಬಲಿಸುವುದಾಗಿ ಹೇಳಿಕೊಳ್ಳುವ ಸರ್ಕಾರಗಳು ಈ ಕ್ರಮವನ್ನು ಹೇಗೆ ಸಮರ್ಥಿಸಿಕೊಳ್ಳುತ್ತವೆ? ಎಕ್ಸೈಸ್ ಸುಂಕ ತಗ್ಗಿಸಿರುವುದರಿಂದಾಗಿ ಕೇಂದ್ರ ಸರ್ಕಾರಕ್ಕೆ ಹಾಲಿ ಹಣಕಾಸು ವರ್ಷದಲ್ಲಿ ಬರಬಹುದಾಗಿದ್ದ ವರಮಾನದಲ್ಲಿ ₹ 43,500 ಕೋಟಿ ಕಡಿಮೆ ಆಗಲಿದೆ ಎಂಬ ಅಂದಾಜು ಇದೆ. ಆದರೆ, ಬೆಲೆ ಇಳಿಕೆಯ ಕಾರಣದಿಂದಾಗಿ ಜನ ಸಂಚಾರ ಮಾಡುವುದು ಹೆಚ್ಚಾಗುತ್ತದೆ. ಆಗ ತೈಲೋತ್ಪನ್ನಗಳ ಬಳಕೆ ಈಗಿನ ಮಟ್ಟಕ್ಕಿಂತ ಹೆಚ್ಚಾಗಿ, ವರಮಾನ ಸಂಗ್ರಹ ಹೆಚ್ಚುತ್ತದೆ. ಡೀಸೆಲ್ ಬೆಲೆ ಇಳಿಕೆಯಿಂದಾಗಿ ಹಣದುಬ್ಬರ ಕಡಿಮೆಯಾಗಿ, ಜನ ಮಾರುಕಟ್ಟೆಗಳಲ್ಲಿ ವಸ್ತುಗಳನ್ನು ಖರೀದಿಸುವುದು ಜಾಸ್ತಿ ಆಗಬಹುದು. ಆಗ ಜಿಎಸ್‌ಟಿ ವ್ಯವಸ್ಥೆಯ ಮೂಲಕ ಸರ್ಕಾರಗಳಿಗೆ ವರಮಾನ ಹೆಚ್ಚಬಹುದು ಎಂದು ಅರ್ಥಶಾಸ್ತ್ರಜ್ಞರಲ್ಲಿ ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಸರ್ಕಾರಗಳು ಬೆಲೆ ತಗ್ಗಿಸಿ, ತಾವು ನಷ್ಟ ಉಂಡು ಜನರಿಗೆ ಮಹದುಪಕಾರ ಮಾಡಿರುವುದಾಗಿ ಹೇಳಿಕೊಳ್ಳಬೇಕಾಗಿಲ್ಲ. ಜನರ ಹಿತದೃಷ್ಟಿಯಿಂದ ತೀರಾ ಅಗತ್ಯವಾಗಿದ್ದ ಕ್ರಮವೊಂದನ್ನು ಸರ್ಕಾರಗಳು ತಡವಾಗಿಯಾದರೂ ಕೈಗೊಂಡಿವೆ ಎಂದಷ್ಟೇ ಹೇಳಬಹುದು.

ದಿನದ ಟ್ವೀಟ್

ಅಚ್ಚರಿದಾಯಕ ನಡೆ



ಪೆಟ್ರೋಲ್ ಬೆಲೆ ಕಡಿಮೆ ಮಾಡುವುದು ಸರ್ಕಾರದ ಕೈಯಲ್ಲಿಲ್ಲ ಎಂದು ಹೇಳುತ್ತಿದ್ದರು. ಚುನಾವಣೆ ನಡೆಯುವ ಐದು ರಾಜ್ಯಗಳು ಸೇರಿ ಎಂಟು ಕಡೆ ಪೆಟ್ರೋಲ್ ಮೇಲಿನ ವ್ಯಾಟ್ ಕಡಿತ ಹೆಂಗೆ ಆಯ್ತು?

#MillionDollarQuestion

ದಿವ್ಯಶ್ರೀ, ವಕೀಲೆ

ಕಿಡಿನುಡಿ



ಚುನಾವಣೆಯಲ್ಲಿ ಮತದಾರರು ಬಿಜೆಪಿಯನ್ನು ಸೋಲಿಸಿದರೆ ಪೆಟ್ರೋಲ್–ಡೀಸೆಲ್ ಬೆಲೆ ಇಳಿಯುತ್ತದೆ ಎನ್ನುವ ಪಾಠವನ್ನು ಹೇಳಿಕೊಟ್ಟ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳು. ಇದು ಪ್ರಧಾನಿಗಳು ನೀಡಿದ ದೀಪಾವಳಿ ಕೊಡುಗೆ ಅಲ್ಲ, ಇದು ದೇಶದಾದ್ಯಂತ ನಡೆದ ಉಪಚುನಾವಣೆಗಳ ಕೊಡುಗೆ.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ — ಮಂಗಳವಾರ, 5-11-1996

● **ಆಲಮಟ್ಟಿ ವಿವಾದ: ಸೌಹಾರ್ದ ಇತ್ಯರ್ಥಕ್ಕೆ ಪಟೇಲ್ ಒಲವು**

ಬಳ್ಳಾರಿ, ನ. 4– ಆಲಮಟ್ಟಿ ಕುರಿತಂತೆ ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರೊಂದಿಗೆ ಸಂಘರ್ಷದ ಪ್ರಶ್ನೆಯೇ ಇಲ್ಲ, ಈ ಪ್ರಶ್ನೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವುದೇ ತಮ್ಮ ಬಯಕೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ತಿಳಿಸಿದರು.

ಹಂಪಿ ಉತ್ಸವಕ್ಕೆ ಆಗಮಿಸಿದ್ದ ಅವರು ಪತ್ರಕರ್ತರಿಗೆ ಈ ವಿಷಯ ತಿಳಿಸಿದರು. ಕೇಂದ್ರ ಸರ್ಕಾರ ಕರ್ನಾಟಕಕ್ಕೆ ನೀಡಿರುವ ಆರ್ಥಿಕ ನೆರವಿನ ಬಗ್ಗೆ ಬಾಬು ಆಕ್ಷೇಪಿಸುವುದು ಅನಗತ್ಯ. ಅವರಿಗೂ ಈ ನೆರವು ದೊರೆಯುತ್ತಿದೆ ಎಂದರು.

● **ಭದ್ರತಾ ವೆಚ್ಚ ನೀಡಲು ಎಬಿಸಿಎಲ್ ಒಪ್ಪಿಗೆ**

ಬೆಂಗಳೂರು, ನ. 4– ವಿಶ್ವಸುಂದರಿ ಸ್ಪರ್ಧೆಯ ಸಂದರ್ಭದಲ್ಲಿ ಭದ್ರತಾ ವ್ಯವಸ್ಥೆಗೆ ತಗಲುವ ಖರ್ಚು ವೆಚ್ಚವನ್ನು ನೀಡಲು ಅಮಿತಾಭ್ ಬಚ್ಚನ್ ಕಾರ್ಪೊರೇಷನ್ ಲಿಮಿಟೆಡ್ (ಎಬಿಸಿಎಲ್) ಒಪ್ಪಿದೆ. ಅಲ್ಲದೆ ಸ್ಪರ್ಧೆಯ ಬಗ್ಗೆ ಎದ್ದಿರುವ ವಿರೋಧದ ಹಿನ್ನೆಲೆಯಲ್ಲಿ ಮೂರು ಪ್ರಮುಖ ಕಾರ್ಯಕ್ರಮಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ತೀರ್ಮಾನಿಸಿದೆ.

50 ವರ್ಷಗಳ ಹಿಂದೆ — ಶುಕ್ರವಾರ, 5-11-1971

● **ಒಪ್ಪಂದ ಉಲ್ಲಂಘನೆ ಪಾಕ್‌ಗೆ ಹೊಸದಲ್ಲ**

ನವದೆಹಲಿ, ನ. 4– ಪಾಕಿಸ್ತಾನವು 1965ರ ಯುದ್ಧ ಕಾಲದಲ್ಲಿ ರಾಜತಾಂತ್ರಿಕ ರಕ್ಷಣೆ ಕುರಿತ ವಿಯೆನ್ನಾ ಒಪ್ಪಂದವನ್ನು ಉದ್ದೇಶ ಪೂರ್ವಕವಾಗಿ ಉಲ್ಲಂಘಿಸಿದ ವಿಸ್ಮಯಕರ ಘಟನೆಯನ್ನು ಪಾಕ್ ಹೈಕಮಿಷನ್‌ನಿಂದ ಪಕ್ಷಾಂತರಗೊಂಡು ಈಗ ಇಲ್ಲಿನ ಬಾಂಗ್ಲಾ ದೇಶದ ರಾಯಭಾರ ಕಚೇರಿಯ ಮುಖ್ಯಾಧಿಕಾರಿಯಾಗಿರುವ ಹುಮಾಯೂನ್ ರಷೀದ್ ಚೌಧುರಿ ಅವರು ಇಂದು ಹೊರಗೆಡಹಿದರು.

ಪಾಕ್ ಸರ್ಕಾರ 1965ರಲ್ಲಿ ಬೇಕೆಂದೇ ವಿಯೆನ್ನಾ ಒಪ್ಪಂದವನ್ನು ಮುರಿದಿರುವಾಗ, ತನ್ನ ಹೈಕಮಿಷನ್ ಮುಂದೆ ನಡೆಯುತ್ತಿರುವ ಪ್ರದರ್ಶನಗಳ ಬಗೆಗೆ ಈ ಒಪ್ಪಂದದ ಮಾತನಾಡಲು ಪಾಕಿಸ್ತಾನಿ ವಕ್ತಾರರಿಗೆ ಯಾವ ನಾಲಿಗೆ ಇದೆ ಎಂದು ಪ್ರಶ್ನಿಸಿದರು.

ನೂರು ಕೋಟಿ ವೆಚ್ಚದ ಮಂಗೋದ್ಯಾನಕ್ಕಿಂತ 3 ಕೋಟಿ ವೈವಿಧ್ಯಮಯ ಸಸಿ ನೆಡುವುದು ಲೇಸು

ಕಪಿಸೈನ್ಯದ ದಾಳಿಗೆ ಶರಣಾದ ಮಲೆನಾಡು



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಒಂದು ಕಾಲಕ್ಕೆ ಕ್ವಿಂಟಲ್‌ಗಟ್ಟಲೆ ಏಲಕ್ಕಿ ಬೆಳೆಯುತ್ತಿದ್ದ ಮಲೆನಾಡಿನ ರೈತನ ಎಲೆ ಹರಿವಾಣದಲ್ಲಿ ಏಲಕ್ಕಿ ಮಾಯವಾಗಿ ಬಹಳ ಕಾಲವಾಯಿತು. ಕಾರಣ ಮಂಗಗಳ ಬೆಳೆ ದಾಳಿ. ಜುಲೈ- ಆಗಸ್ಟ್ ತಿಂಗಳುಗಳಲ್ಲಿ ಅಡಕೆಗೊನೆಯಲ್ಲಿರುವ ಎಳೆ ಅಡಕೆಗಳನ್ನು ಕಿತ್ತು ಅದರ ಅಮಲು ಬರುವ ರಸವನ್ನು ಹೀರಿ ಕೆಳಗೆಸೆಯುತ್ತವೆ. ಮಂಗಗಳ ಒಂದು ಹಿಂಡು ಒಂದೇ ದಿನದಲ್ಲಿ ಹತ್ತಾರು ಕ್ವಿಂಟಲ್ ತೂಕದ ಅಡಕೆ ಮಿಡಿಯನ್ನು ಹಾಳುಮಾಡಬಲ್ಲದು. ಇದರ ಜೊತೆ ಹವಾಗುಣ ವಿಪರೀತದ ಕಾರಣಕ್ಕೆ, ಎಂದೆಂದೂ ಮುಗಿಯದ ಮಳೆಗಾಲದ ಕಾರಣಕ್ಕೆ ಅತ್ಯಧಿಕ ಕೊಳೆ ರೋಗ.

ಐವತ್ತು ವರ್ಷಗಳ ಹಿಂದೆಯೂ ಮಂಗಗಳಿದ್ದವು. ಅವುಗಳ ಉಪದ್ರವ ಸಹನೀಯವಾಗಿತ್ತು. ಆಗ ಕಾಡಿನಲ್ಲಿ ಮಂಗಗಳ ಆಹಾರಕ್ಕೆ ತೀವ್ರವಾದ ಕೊರತೆ ಕಾಡುತ್ತಿರಲಿಲ್ಲ. ಮಂಗಗಳು ದಾಳಿ ಮಾಡಲು ಬಂದಾಗ ಒಂದು ಗರ್ನಾಲು ಸಿಡಿಸಿದರೂ ಸಾಕಿತ್ತು, ಅವು ಬೆಟ್ಟ ಹತ್ತಿ ಓಡಿಹೋಗುತ್ತಿದ್ದವು.

21ನೇ ಶತಮಾನದ ಮಂಗಗಳು ಯಾವ ರೀತಿ ತಮ್ಮ ನಡವಳಿಕೆಯನ್ನು ಬದಲಾಯಿಸಿಕೊಂಡಿವೆ ಎಂದರೆ, ಹೆಂಚು ಇಳಿಸಿ ಅಡುಗೆ ಮನೆಯಲ್ಲಿರುವ ಪದಾರ್ಥಗಳನ್ನು ಅಪಹರಿಸುವಷ್ಟು. ಮನುಷ್ಯನಿಂದ ದೂರವೇ ಇರಲು ಬಯಸುತ್ತಿದ್ದ ಮಲೆನಾಡಿನ ಮಂಗಗಳು ಗರ್ನಾಲು, ಪಟಾಕಿ, ಏರ್‌ಗನ್ ಇದ್ಯಾವುದಕ್ಕೂ ಬಗ್ಗುತ್ತಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ನಾವೇ ಆಗಿದ್ದೇವೆ ಎನ್ನುವುದು ಎದೆಗೆ ರಾಚುವ ಸತ್ಯ.

ಬೃಹತ್ ಯಂತ್ರಗಳು ಇವತ್ತು ಮಲೆನಾಡನ್ನು ಅಕ್ಷರಶಃ ಆಳುತ್ತಿವೆ. ರಾತ್ರಿ ಬೆಳಗಾಗುವುದರಲ್ಲಿ ಗುಡ್ಡಗಳು ಮಾಯವಾಗುತ್ತಿವೆ. ಸಮತಟ್ಟು ಮಾಡಿದ ಜಾಗದಲ್ಲಿ ಅಡಕೆ, ಶುಂಠಿ, ಅನಾನಸ್ ಬೆಳೆಯಲಾಗುತ್ತಿದೆ. ಮಧ್ಯ ಪಶ್ಚಿಮಘಟ್ಟ ಭಾಗದ ಹೊಸನಗರ, ಸಾಗರ, ಸೊರಬ ಕ್ಷೇತ್ರಗಳ ಅರಣ್ಯ ಪ್ರದೇಶಗಳು ಒತ್ತುವರಿಯ ಭೀತಿಯನ್ನು ಇನ್ನಿಲ್ಲದಂತೆ ಅನುಭವಿಸುತ್ತಿವೆ. ಈ ಹಿಂದೆಯೇ ಬಗರ್‌ಹುಕುಂ ಯೋಜನೆಯಿಂದಾಗಿ ಲಕ್ಷಾಂತರ ಎಕರೆ ಕಾಡು ಪ್ರದೇಶ ಹೇಳಹೆಸರಿಲ್ಲದಂತೆ ಮಾಯವಾಗಿದೆ. ವರ್ಷಪೂರ್ತಿ ಹಣ್ಣು ಬಿಡುವ ನೈಸರ್ಗಿಕ ಕಾಡು ಮರಗಳು, ಬಳ್ಳಿಗಳು, ಪೊದೆಗಳು ನಾಶವಾಗಿದ್ದರಿಂದ, ಮಂಗಗಳ ಆಹಾರ ಭದ್ರತೆಯನ್ನೇ ಕಸಿದುಕೊಂಡಂತಾಗಿದೆ. ಕಾಡಿನ ಮೇಲೆ ಅವಲಂಬಿತವಾಗಿದ್ದ ಮಂಗಗಳ ಸಮೇತ ಅನೇಕ ಕಾಡುಪ್ರಾಣಿಗಳು ಹಳ್ಳಿಮನೆಗಳಿಗೆ ನುಗ್ಗುತ್ತಿವೆ. ಮಲೆನಾಡಿನಲ್ಲಂತೂ ಮಂಗಗಳು ಥೇಟ್ ಭಯೋತ್ಪಾದಕರಂತೆ ವರ್ತಿಸುತ್ತಿವೆ.

ಪ್ರಾಣಿಗಳ ಆವಾಸಸ್ಥಾನವನ್ನು ಹಾಳು ಮಾಡಿದ ಮನುಷ್ಯನೀಗ ವನ್ಯಪ್ರಾಣಿಗಳ ಮೇಲೆ ತನ್ನ ಆಕ್ರೋಶ ತೋರುತ್ತಿದ್ದಾನೆ. ಮಂಗಗಳಿಗೆ ಸಾಮೂಹಿಕವಾಗಿ ವಿಷ ಹಾಕುವುದು ಮಾಮೂಲಿಯಾಗಿದೆ. ತೋಟಕ್ಕೆ ಬಂದ ಮಂಗಗಳನ್ನು ಕೋವಿಯಿಂದ ಕೊಂದೆಸೆಯುವುದು ಗಂಭೀರವಾದ ವಿಷಯವೇ ಅಲ್ಲವಾಗಿದೆ. ಮಂಗಗಳನ್ನು ಕೊಲ್ಲಲಾರದವರು ಒಂದಿಷ್ಟು ಜನ ಸೇರಿ ಮಂಗಗಳ ನಿಯಂತ್ರಣಕ್ಕೆ ಮಂಕಿಪಾರ್ಕ್ ಮಾಡಿ ಎಂದು ಈ ಹಿಂದೆ ಶಿವಮೊಗ್ಗದಲ್ಲಿ ಮೆರವಣಿಗೆ ಮಾಡಿದ್ದರು. ನೂರು ಕೋಟಿ ರೂಪಾಯಿ ವೆಚ್ಚ ಬೇಡುವ ಈ ಯೋಜನೆ ಸರ್ಕಾರಕ್ಕೆ ಆಕರ್ಷಣೀಯವಾಗಿ ತೋರಿದ್ದರಲ್ಲಿ ಉಪೇಕ್ಷೆಯೇ ಇಲ್ಲ. ಒಂದು ನೂರು ಎಕರೆ ಜಾಗವನ್ನು ಹೊಸನಗರ ತಾಲ್ಲೂಕಿನ ಸಂಪೆಕಟ್ಟೆ ಪಂಚಾಯಿತಿ ವ್ಯಾಪ್ತಿಯಲ್ಲಿ ಗುರುತಿಸಿಯಾಗಿದೆ.

ಮಂಗಗಳು ಗುಂಪಿನಲ್ಲಿ ಇರುವ ಮತ್ತು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಪ್ರಾಣಿಗಳು. ಮತ್ತೊಂದು ಗುಂಪಿನೊಂದಿಗೆ ಸೌಹಾರ್ದ ಸಂಬಂಧ ಅವುಗಳಿಗೆ ಸಾಧ್ಯವಿಲ್ಲ. ಅದು ಹೇಗೆ ಶಿವಮೊಗ್ಗ ಜಿಲ್ಲೆಯಲ್ಲಿರುವ ಅಷ್ಟೂ ಮಂಗಗಳ ಗುಂಪನ್ನು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಕೂಡಿಹಾಕುತ್ತಾರೆ ಎನ್ನುವುದು ಯಕ್ಷಪ್ರಶ್ನೆ.

ಇಂಥ ಯೋಜನೆಯ ಬದಲಿಗೆ ದೀರ್ಘಕಾಲಿಕ ಶಮನಕ್ಕೆ ಮತ್ತೇನು ಮಾಡಬಹುದು ಎನ್ನುವುದನ್ನು ಕೊಂಚ ನೋಡೋಣ.

ಅತ್ಯಂತ ಹೆಚ್ಚು ಬೆಳೆದಾಳಿ ನಡೆಸುವ ಕೆಂಪುಮೂತಿಯ ವಯಸ್ಕ ಮಂಗವೊಂದಕ್ಕೆ ದಿನಕ್ಕೆ ಸುಮಾರು ಅರ್ಧ ಕೆ.ಜಿ. ಹಸಿ ಆಹಾರ ಸಾಕಾಗುತ್ತದೆ. ಹಲಸು, ಮಾವು, ಹೆಬ್ಬಲಸು, ಕಾಡುಕಣಗಿಲೆ, ಹುಳಿಮುರುಗ, ಉಪ್ಪಾಗೆ, ಸಳ್ಳೆ ಹೀಗೆ ಸುಮಾರು 83 ಜಾತಿಯ ಸಸ್ಯಪ್ರಭೇದಗಳ ಮೇಲೆ ಅವಲಂಬಿತವಾದ ಮಂಗಗಳು, ಅವುಗಳ ಹಣ್ಣು, ಕಾಯಿ, ಎಲೆ, ತೊಗಟೆ, ಹೂ ಇತ್ಯಾದಿಗಳನ್ನು ತಿಂದು ಬದುಕುತ್ತವೆ. ಹಳ್ಳಿಗಾಡಿನ ಜನರು ಹತ್ತಿರದ ಕಾಡಿನ ಕಿರುಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುತ್ತಾರೆ. ಅರಣ್ಯ ಇಲಾಖೆಯ ಸಮ್ಮತಿಯಿರುವ ಈ ವ್ಯವಹಾರದಲ್ಲಿ ಬಹಳಷ್ಟು ಬಾರಿ, ಕಿರು ಅರಣ್ಯ ಉತ್ಪನ್ನಗಳು ಮಂಗಗಳ ಮುಖ್ಯವಾದ ಆಹಾರವೇ ಆಗಿರುತ್ತವೆ. ಅದರಲ್ಲೂ ಹೆಚ್ಚು ಆಹಾರ ಬೇಡುವ ಮಂಗಗಳ ಸಂತಾನಾಭಿವೃದ್ಧಿ ಸಮಯದಲ್ಲೇ ಅಂದರೆ ಡಿಸೆಂಬರ್-ಏಪ್ರಿಲ್ ತಿಂಗಳುಗಳಲ್ಲೇ ಕಾಡಿನ ಅತಿ ಹೆಚ್ಚು ಉತ್ಪನ್ನಗಳನ್ನು ಸಂಗ್ರಹಿಸಲಾಗುತ್ತದೆ. ಕಾಡಿನಲ್ಲಿ ಆಹಾರದ ಲಭ್ಯತೆ ಕಡಿಮೆಯಾದಾಗ ಸ್ವಾಭಾವಿಕವಾಗಿ ಮಂಗಗಳು ಬೆಳೆ ದಾಳಿ, ಮನೆ ದಾಳಿ ನಡೆಸುವ ಸಾಹಸಕ್ಕೆ ಮುಂದಾಗುತ್ತವೆ.

ಉತ್ತರ ಕನ್ನಡದ ಶಿರಸಿ- ಸಿದ್ದಾಪುರ ಭಾಗದಲ್ಲಿ ನಡೆಸಿದ ಒಂದು ಅಧ್ಯಯನದ ಪ್ರಕಾರ, ಅಲ್ಲಿರುವ 40,000 ಮಂಗಗಳಿಗೆ ವಾರ್ಷಿಕವಾಗಿ 1,875 ಟನ್ ಕಾಡಿನ ಆಹಾರ ಬೇಕಾಗುತ್ತದೆ. ಅದೇ ಸಮಯದಲ್ಲಿ ಆ ಭಾಗದ ಕಾಡಿನಿಂದ 5,000 ಟನ್ನುಗಳಿಗಿಂತ ಹೆಚ್ಚಿನ ಹಸಿ ಪದಾರ್ಥಗಳನ್ನು ಕಿರುಅರಣ್ಯ ಉತ್ಪನ್ನದ ಹೆಸರಿನಲ್ಲಿ ಸಂಗ್ರಹಿಸಲಾಗುತ್ತದೆ. ಇದು ಸಮಸ್ಯೆಯ ಒಂದು ಮುಖ. ಇನ್ನೊಂದು ಮುಖ ಇಲ್ಲಿನ ಕೃಷಿಕರೇ ಆಗಿದ್ದು ಮಾತ್ರ ವಿಪರ್ಯಾಸ. ಮಲೆನಾಡಿನ ಪಾರಂಪರಿಕ ಅಡಕೆ ತೋಟದ ಮೇಲ್ಭಾಗಗಳಲ್ಲಿ ಸೊಪ್ಪಿನಬೆಟ್ಟವೆಂಬ ಸ್ವಾಭಾವಿಕವಾದ ಕಾಡು ಇರುತ್ತದೆ. ಇಲ್ಲಿಂದ ಹಸಿಸೊಪ್ಪು, ಒಣಗಿದ ಎಲೆ, ಕಟ್ಟಿಗೆ ಇವುಗಳನ್ನು ಆಯಾ ಕೃಷಿಕರು ಬಳಸುತ್ತಾರೆ. ಇದೇ ಬೆಟ್ಟದಲ್ಲಿ ಮಂಗಗಳ ಆಹಾರವೂ ಇರುತ್ತದೆ. ಹಸಿಸೊಪ್ಪಿಗಾಗಿ ಕಟ್ಟಿಗೆ ಕಡಿಯುವಾಗ ಮರದ ಅಲ್ಪಾಂಶವನ್ನೂ ಬಿಡದೆ ಕಡಿದು ಹಾಕಿದರೆ, ಅಂತಹ ಮರಗಳಲ್ಲಿ ಹೂ, ಕಾಯಿ, ಹಣ್ಣು, ಎಲೆ ಯಾವುದೂ ಸಿಗುವುದಿಲ್ಲ. ಇದು ಕಾಡಿನ ಜೀವಿಗಳ ಆಹಾರ ಭದ್ರತೆಗೆ ಕೊಡಲಿಯೇಟು. ಜೊತೆಗೆ ಹಣ್ಣು ಬಿಡುವ ಮರವೊಂದು ಸತ್ತು ಹೋದರೆ, ಅದನ್ನು ಮತ್ತೆ ನೆಡುವ ಪರಿಪಾಟ ಬಹುತೇಕ ಕೃಷಿಕರಲ್ಲಿ ಕಂಡು ಬರುವುದಿಲ್ಲ. ಉದಾಹರಣೆಯಾಗಿ, ಮಲೆನಾಡಿನ ಬೆಟ್ಟಗಳಲ್ಲಿ ಮೃದುವಾದ ಕಾಯಿಬಿಡುವ ನಸುಗುನ್ನಿಯೆಂಬ ಬಳ್ಳಿಯೊಂದಿತ್ತು. ಬಹಳ ಪೌಷ್ಟಿಕಾಂಶವಿರುವ ಎಳೆಕಾಯಿಗಳನ್ನು ಮಂಗಗಳು ಬಹಳ ಇಷ್ಟಪಟ್ಟು ತಿನ್ನುತ್ತಿದ್ದವು. ಬಲಿತ ಕಾಯಿಯ ಮೇಲಿರುವ ಅಸಂಖ್ಯಾತ ರೋಮಗಳು ಮನುಷ್ಯನಿಗೆ ತಗುಲಿದರೆ ಅಸಾಧ್ಯ ತುರಿಕೆಯಾಗುತ್ತದೆ. ಇದನ್ನು ಪಿಡುಗು ಎಂದು ಭಾವಿಸಿದ ಇಲ್ಲಿನ ಕೃಷಿಕರು ಅದನ್ನು ಪ್ರತಿವರ್ಷ ಕಡಿದು ನಾಮಾವಶೇಷ ಮಾಡಿ, ಸಸ್ಯಪ್ರಭೇದದ ಕೊಂಡಿಯೊಂದು ಕಳಚುವುದಕ್ಕೆ ಕಾರಣರಾದರು.



ಕೃಷಿಕನಿಗೆ ಇತರೆ ಜೀವಿವೈವಿಧ್ಯದ ಜೀವನಕ್ರಮದ ಅರಿವೂ ಇರಬೇಕು. ಕಾಡಿನ ಪ್ರಾಣಿಗಳು ಅತಿಹೆಚ್ಚು ಬೆಳೆ ದಾಳಿ ಮಾಡಲುಪಕ್ರಮಿಸಿದರೆ, ಅದಕ್ಕೆ ಕಾರಣ ಹುಡುಕಬೇಕು. ಜೀವಜಾಲದ ಸರಪಣಿಯ ಯಾವುದೇ ಕೊಂಡಿ ಕಳಚಿದರೂ, ದೀರ್ಘಾವಧಿಯಲ್ಲಿ ತೊಂದರೆಗೊಳಗಾಗುವವನು ಮಾನವನೇ ಎಂಬ ತಿಳಿವಳಿಕೆ ಬರಬೇಕು.

ಸಾಗರ, ಹೊಸನಗರ, ಸೊರಬ, ತೀರ್ಥಹಳ್ಳಿ ಹೀಗೆ ಪಶ್ಚಿಮಘಟ್ಟಗಳಲ್ಲಿ ಸಾಗುವ ಯಾವುದೇ ರಸ್ತೆಯಲ್ಲಿ ಚಲಿಸಿದರೂ ದಟ್ಟವಾದ ಅರಣ್ಯ ಇಕ್ಕೆಲಗಳಲ್ಲೂ ಕಂಡುಬರುತ್ತದೆ. ರಸ್ತೆಯಿಂದ ಹತ್ತು ಮೀಟರ್ ಒಳಗೆ ಹೋದರೆ ಸಂಪೂರ್ಣ ಕಾಡು ನಾಶವಾದ ಬಯಲು ಪ್ರದೇಶ ಸಿಗುತ್ತದೆ. ವಿವಿಧ ಯೋಜನೆಗಳ ಹೆಸರಿನಲ್ಲಿ ಎಲ್ಲಾ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ, ಅಗಲೀಕರಣಗೊಳಿಸಲಾಗುತ್ತಿದೆ. ಇದರಿಂದ ರಸ್ತೆ ಇಕ್ಕೆಲಗಳಲ್ಲಿರುವ ಅಳಿದುಳಿದ ಮರಗಳನ್ನು ಕಡಿಯಲಾಗುತ್ತಿದೆ. ಈ ತರಹದ ಒತ್ತುವರಿ ಮತ್ತು ಅಭಿವೃದ್ಧಿ ಕಾರ್ಯಗಳು ವನ್ಯಜೀವಿಗಳ ಆಹಾರ ಭದ್ರತೆಯನ್ನು ಸಂಪೂರ್ಣವಾಗಿ ಕಸಿದುಕೊಳ್ಳುತ್ತಿವೆ.

ಒಂದು ಜಿಲ್ಲೆಯ ಮಂಗಗಳ ದಾಳಿಯನ್ನು ನಿಯಂತ್ರಿಸಲು, ಮಂಗೋದ್ಯಾನವೆಂಬ ಯೋಜನೆಯೊಂದರ ಬದಲಿಗೆ, ಮಂಗಗಳಿಗೆ ಇಡೀ ವರ್ಷ ಕಾಡಿನಲ್ಲೇ ಆಹಾರ ಲಭಿಸುವಂತಹ ಸಸ್ಯಪ್ರಭೇದಗಳನ್ನು ಅರಣ್ಯ ಇಲಾಖೆಯು ರೈತರ ಸಹಯೋಗದೊಂದಿಗೆ ಮರುಸ್ಥಾಪನೆ ಮಾಡಬೇಕು. ನೂರು ಕೋಟಿ ವೆಚ್ಚ ಮಾಡಿ ಮಂಗೋದ್ಯಾನವನ್ನು ಮಾಡುವುದಕ್ಕಿಂತ ಮೂರು ಕೋಟಿ ವೈವಿಧ್ಯಮಯ ಸಸಿಗಳನ್ನು ಊರುವುದು ಲೇಸು.

ಚುರುಮುರಿ



ಪಾರ್ಟಿ ತಲಾಶ್

● ಆನಂದ

ಸಮಾಜಸೇವೆ ಮಾಡಲು ಹೊರಟಿರುವ ದೋಸ್ತ್ ಚಂದ್ರಿ ಯಾವುದಾದರೂ ಪೊಲಿಟಿಕಲ್ ಪಾರ್ಟಿ ಸೇರಲು ಹೊರಟಿದ್ದಾನೆ. 'ಯಾವುದಾದರೂ ಪಾರ್ಟಿ ಸೇರಿದೆಯೇನು?' ಎಂದು ಕೇಳಿದೆ.

'ಯುವ ನಾಯಕ ಅಧ್ಯಕ್ಷನಾಗಲಿರುವ ಕಾಂಗ್ರೆಸ್ ಸೇರುವ ಅಂತ ಹೊರಟೆ...' ಎಂದಾಗ ನಾನು 'ಭಲೇ ಧೈರ್ಯ ನಿನ್ನದು ಮಗನೆ' ಎಂದೆ.

'ಮೊನ್ನೆ ಕಾಂಗ್ರೆಸ್ ಆಫೀಸಾಗೆ ಹೋಗಿ 'ನಾನು ಮೆಂಬರ್ ಆಗಿ ರಾಹುಲ್‌ಜಿ ಅವರ ಕೈ ಬಲಪಡಿಸಬೇಕಾಗಿದೆ. ಅದಕ್ಕೇನು ಮಾಡಬೇಕು ಹೇಳ್ರೀ' ಎಂದು ಕೇಳಿದಾಗ ಅವರು, 'ಮೊದಲು ಪಾರ್ಟಿ ಮೆಂಬರ್‌ಶಿಪ್ ಪಡ್ಕೊಳ್ಳಿ' ಅಂತ ಹೇಳಿ ಅರ್ಜಿ ಕೊಟ್ಟರು'.

'ಹಿಂದೆಲ್ಲಾ ಒಂದಿಷ್ಟು ದುಡ್ಡು ಕೊಟ್ಟರೆ ರಶೀದಿ ಕೊಡ್ತಾ ಇದ್ರು. ಅಥವಾ ಯಾರೋ ದುಡ್ಡು ಕೊಟ್ಟು ಯಾರನ್ನೋ ಮೆಂಬರ್ ಮಾಡ್ತಾ ಇದ್ರು. ಈಗ ರಾಹುಲ್‌ಜಿ ಅದನ್ನೆಲ್ಲಾ ಬದಲಿಸಲು ಹೊರಟಿದ್ದಾರೆ. ಈಗ ಮೆಂಬರ್ ಆಗೋರಿಗೆ 10 ಕಂಡೀಷನ್‌ಗಳಿವೆ. ಗುಂಡು ಹಾಕಬಾರದು ಮತ್ತು ಡ್ರಗ್ಸ್ ಸೇವಿಸಬಾರದು. ಡ್ರಗ್ಸ್ ನಾನು ಮುಟ್ಟಲ್ಲ. ಆದರೆ ಗುಂಡು ಹಾಕಬೇಡ ಅಂದರೆ ಹೇಗೆ?' ಎಂದು ಮೊದಲ ಅಸಮಾಧಾನವನ್ನು ಪ್ರಕಟಿಸಿದ.

'ಆಸ್ತಿ ಕಾನೂನಿನ ಇತಿಮಿತಿಯಲ್ಲೇ ಇರಬೇಕಂತೆ' ಎಂದ. 'ರಾಜಕಾರಣ ಕ್ಕಿಳಿದು ಸಮಾಜಸೇವೆ ಮಾಡಬೇಕಾದರೆ ಆಸ್ತಿ ಕಾನೂನಿನ ಇತಿಮಿತಿಯಲ್ಲೇ ಇರಲು ಹೇಗೆ ಸಾಧ್ಯ?' ಎಂದು ಕೇಳಿದೆ.

'ಅದೇ ನನ್ನ ಪ್ರಶ್ನೆ. ಈಗಾಗಲೇ ಮೆಂಬರ್ ಆಗಿರೋರಿಗೆ ಈ ಕಂಡೀಷನ್ ಅನ್ವಯಿಸದು. ಅವರೆಲ್ಲ ಬಚಾವ್. ನಮ್ಮಂತಹ ಹೊಸಬರಿಗೆ ಈ ನಿಯಮ. ಆಮೇಲೆ ಶ್ರಮದಾನ ಮಾಡಲು ತಯಾರಿರಬೇಕಂತೆ. ಟೀವಿ ಕ್ಯಾಮೆರಾಗಳ ಮುಂದೆ ಒಂದಿಷ್ಟು ಶ್ರಮದಾನ ಮಾಡಬಹುದು. ಆಮೇಲೆ ಬರೇ ನಿಂಬೆ ಜ್ಯೂಸ್ ಕುಡಿದು ರಿಲ್ಯಾಕ್ಸ್ ಮಾಡಿಕೊಳ್ಳಲು ಸಾಧ್ಯವೆ?' ಎಂದ.

'ಛೇ ಛೇ ಖಂಡಿತ ಸಾಧ್ಯವಿಲ್ಲ' ಎಂದೊಪ್ಪಿದೆ.

'ಅದಕ್ಕೆ ಬೇರೆ ಯಾವುದಾದರೂ ಪಾರ್ಟಿ ಇದೆಯೆ ಹುಡುಕಿ ಹೇಳು' ಎಂದು ಆ ಕೆಲಸ ನನಗೊಪ್ಪಿಸಿದ.

ಸಂಗತ

'ಕನ್ನಡ' ಅಸ್ಮಿತೆ ಮತ್ತು ಕನ್ನಡಿಗ

ಕನ್ನಡದ ಬಗೆಗಿನ ಸದಾಶಯದ ಮಾತುಗಳು ಕನ್ನಡ ವಾತಾವರಣವನ್ನು ಜೀವಂತವಾಗಿಡಲು ನೆರವಾಗುತ್ತವೆ. ಆದರೆ...

● ಹೊರೆಯಾಲ ದೊರೆಸ್ವಾಮಿ

ಎರಡು ಸಾವಿರ ವರ್ಷಗಳಿಗಿಂತಲೂ ಹಿಂದಿನಿಂದ ಬೆಳೆದುಳಿದುಕೊಂಡು ಬಂದಿರುವ ಕನ್ನಡ, ಜಗತ್ತಿನ 15 ಪ್ರಾಚೀನ ಭಾಷೆಗಳಲ್ಲಿ ಒಂದಾಗಿದೆ ಎಂಬುದು ಬಹುಪಾಲು ಭಾಷಾಶಾಸ್ತ್ರಜ್ಞರ ಒಪ್ಪಿತ ಅಭಿಪ್ರಾಯ. ದ್ರಾವಿಡ ಮೂಲದ ಈ ಭಾಷೆ ಮೊದಲು 'ಕಣ್ಣರು' (ಕನ್ನಡಿಗರ ಮೂಲದವರು 'ಹಟ್ಟಿಕಾರರು' 'ವೀರಕ್ಷತ್ರಿಯರು'- ಶಂ.ಬಾ.ಜೋಶಿ) ಜನರಾಡುವ ನುಡಿಯಾಗಿದ್ದು, ಕ್ರಮೇಣ 'ಚಾಕ್ಷುಷ' (ಲಿಪಿ) ರೂಪ ಪಡೆಯಿತು. ಸದ್ಯಕ್ಕೆ, ವಿದ್ವಾಂಸರು ಒಪ್ಪಿಕೊಂಡಿರುವ ಪ್ರಕಾರ, ಲಭ್ಯವಿರುವ ಕ್ರಿ.ಶ. 5ನೆಯ ಶತಮಾನದ 'ಪಲ್ಮಿಡಿ' ಶಾಸನ ಕನ್ನಡದ ಮೊದಲ ಗ್ರಾಂಥಿಕ (ಅರ್ಥಾತ್ ಚಾಕ್ಷುಷ) ಸ್ವರೂಪವುಳ್ಳದ್ದು. ಆ ದಿನಗಳಲ್ಲಿ, ಅಂದರೆ ಕನ್ನಡ ಅಕ್ಷರ ರೂಪದಲ್ಲಿ ಆವಿರ್ಭವಿಸಿದಾಗ ಅದನ್ನು ಎಷ್ಟು ಜನ ಓದಬಲ್ಲವರಾಗಿದ್ದರು ಎಂಬ ಕುತೂಹಲ ತಣಿಸಲು ದಾಖಲೆಗಳು ಲಭ್ಯವಿಲ್ಲ.

ಅದಕ್ಕೂ ಮುನ್ನ ಪ್ರೊ. ಇ.ಹುಲ್ಸ್‌ರವರು ಕ್ರಿ.ಪೂ.ದ ಗ್ರೀಕ್ ಭಾಷೆಯ ಒಂದು ದಾಖಲೆಯಲ್ಲಿ ಕನ್ನಡ ಪದಗಳಿರುವುದನ್ನು ಸಂಶೋಧಿಸಿದ್ದಾರೆ. ಕ್ರಿ.ಶ. 2ನೆಯ ಶತಮಾನದ ಗ್ರೀಕ್ ನಾಟಕವೊಂದರಲ್ಲಿ ಕನ್ನಡದ ಸಾಲುಗಳಿರುವುದನ್ನು ಗೋವಿಂದ ಪೈ ಹೆಕ್ಕಿ ತೋರಿಸಿರುವರಾದರೂ ಅವು ಕನ್ನಡ ಲಿಪಿಯಲ್ಲಿಲ್ಲ; ಆದರೆ, ಕನ್ನಡ ಭಾಷೆಯಲ್ಲಿವೆ ಎಂಬುದನ್ನು ಗಮನಿಸಬೇಕು.

ಇದರಿಂದ ನಮಗೆ ಅರ್ಥವಾಗುವುದೆಂದರೆ, ಕನ್ನಡ ಮೊದಲು ಆಡುಭಾಷೆಯಾಗಿದ್ದು ಕ್ರಮೇಣ ಅದನ್ನು ಬಳಸುವವರ ಅಗತ್ಯಕ್ಕನುಗುಣವಾಗಿ ಗ್ರಾಂಥಿಕ ಸ್ವರೂಪವನ್ನೂ ಪಡೆಯಿತು ಎಂಬುದು. ಇದನ್ನೇ ಭಾಷಾ ಬೆಳವಣಿಗೆ ಎನ್ನುವುದು. ಮನುಷ್ಯನನ್ನು ಹೊರತುಪಡಿಸಿ ಭಾಷೆಗೆ ಅಸ್ತಿತ್ವವೇ ಇಲ್ಲ. ಅದರ ಸರ್ವಾಂಗೀಣ ಅಭಿವೃದ್ಧಿ ಎಂಬುದೂ ಈ ಹಿನ್ನೆಲೆಯಲ್ಲೇ ಆಗುವಂಥದ್ದು. ಈ ಸಾಮಾನ್ಯ ತಿಳಿವಳಿಕೆಯಿಂದಲೇ ನಾವು 'ಕನ್ನಡ ಬಳಕೆ', 'ಕನ್ನಡದ ಅಭಿವೃದ್ಧಿ' ಇತ್ಯಾದಿಗಳನ್ನು ಅರ್ಥೈಸಿಕೊಳ್ಳಬೇಕಿದೆ.

'ಕನ್ನಡ' ಶಬ್ದ ದೇಶವಾಚಕವೂ ಹೌದು, ಭಾಷಾವಾಚಕವೂ ಹೌದು. 'ಕಣ್ಣರ ನಾಡು' ಕನ್ನಡ. ಕಣ್ಣರ ಭಾಷೆ ಕನ್ನಡ. ಈ ಎರಡನ್ನೂ ಕುರಿತು ಇತಿಹಾಸ ಕಾಲದಿಂದಲೂ ಬರಹಗಾರರು, ಚಿಂತಕರು, ಚಳವಳಿಗಾರರು, ರಾಜಕೀಯ ವ್ಯಕ್ತಿಗಳು ಕಳಕಳಿಯ ಮತ್ತು ಭಾವುಕವಾದ ಅನೇಕ ಬಗೆಯ ಮಾತುಗಳನ್ನು ಹೇಳಿರುವುದುಂಟು. ಕವಿರಾಜಮಾರ್ಗಕಾರನ 'ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ', ಆಂಡಯ್ಯನ 'ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು' ಎಂಬಂಥ ವಾಸ್ತವಿಕ ಮತ್ತು ಗುಣವಾಚಕ ನುಡಿಗಳಲ್ಲಿ ಕನ್ನಡವು ದೇಶವಾಚಕವಾಗಿ ಬಳಕೆಯಾಗಿರುವುದನ್ನು ಕಾಣಬಹುದು. ಅದೇ ರೀತಿ 'ಕನ್ನಡಕ್ಕಾಗಿ ಕಂಕಣ ತೊಟ್ಟವರು', 'ಕನ್ನಡ ಕಟ್ಟಿದವರು', 'ಕನ್ನಡವೇ ಸತ್ಯ ಕನ್ನಡವೇ ನಿತ್ಯ', 'ಕನ್ನಡ ಮಾತೆ ಭುವನೇಶ್ವರಿ'... ಇಂಥ ಹೇಳಿಕೆಗಳು ಮತ್ತು ಘೋಷಣೆಗಳು ಕನ್ನಡದ ಬಗ್ಗೆ ಇರುವ ಅಖಂಡ ಪ್ರೇಮವನ್ನು ವ್ಯಕ್ತಪಡಿಸುತ್ತವೆ.

ಇಂಥ ಸದಾಶಯದ ಮಾತುಗಳು ಕನ್ನಡ ವಾತಾವರಣವನ್ನು ಜೀವಂತವಾಗಿಡಲು ನೆರವಾಗುತ್ತವೆ ಎಂಬುದು ಸುಳ್ಳೇನಲ್ಲ. ಆದರೆ, ಕನ್ನಡ ಒಂದು ಭಾಷೆಯಾಗಿ ಇಷ್ಟೇ ಸತ್ಯವೋ? ಕನ್ನಡದ ಕುರಿತು ಹಳಹಳಿಕೆಯ ಮಾತುಗಳ ನಡುವೆ ಅದನ್ನಾಡುವ ಜನರ ಬದುಕನ್ನು ಕಡೆಗಣಿಸಲಾದೀತೆ?

1981ರ ಮಾರ್ಚ್ 9ರ ರಾತ್ರಿ, ನಾನು ಹಾವೇರಿಯ ರೈಲು ನಿಲ್ದಾಣದಲ್ಲಿ ತಂಗಿದ್ದೆ. ಅಲ್ಲಿಯೇ, ಗೋವಾದಲ್ಲಿ ಆಗತಾನೆ ತೀವ್ರ ಹಲ್ಲೆಗೊಳಗಾಗಿ ಓಡಿಬಂದಿದ್ದ ಉತ್ತರ ಕರ್ನಾಟಕದ ಒಂದೆರಡು ಕೂಲಿಕಾರ್ಮಿಕ ಕುಟುಂಬಗಳಿದ್ದವು. ನಾವು ಕ್ರಮೇಣ ಮಾತಿಗಿಳಿದೆವು. ಆ ಕುಟುಂಬದ ಸದಸ್ಯರು ಜೀವನೋಪಾಯಕ್ಕಾಗಿ ಗೋವಾಕ್ಕೆ ಹೋಗಿದ್ದಾಗ, ಅಲ್ಲಿ ತಮಗಾದ ಹಲ್ಲೆಯ ವಿವರಗಳನ್ನು ಹಂಚಿಕೊಳ್ಳುತ್ತಾ 'ನಾವೂ ಕನ್ನಡ ಮಂದಿ ನೋಡ್ರಿ, ಆದರ, ನಮಗ್ಯಾರೂ ಸಹಾಯ ಮಾಡೋಣಿಲ್ರಿ, ಬರೀ ಕನ್ನಡ ಅಂತಾರ್ರಿ...' ಅಂತ ಹೇಳುತ್ತಲೇ ಹೋದರು. ಈ ನಿದರ್ಶನದ ಉದ್ದೇಶವೆಂದರೆ, ಭಾವನಾತ್ಮಕವಾಗಿ ಕನ್ನಡವನ್ನು ಅವಲೋಕಿಸುವುದಕ್ಕೂ ವಾಸ್ತವಿಕ ಬದುಕಿಗೂ ಇರುವ ಭಿನ್ನತೆಯನ್ನು ಗುರುತಿಸುವುದೇ ಆಗಿದೆ.



ಈ ಕೂಲಿಕಾರ್ಮಿಕರಿಗೆ ಕನ್ನಡಪರ ಹೇಳಿಕೆಗಳು, ಘೋಷಣೆಗಳು ಯಾವುವೂ ಪ್ರಸ್ತುತವಾಗುವುದಿಲ್ಲ. ಕನ್ನಡ ನೈಜವಾಗಿ ಬಳಕೆಯಾಗಿ, ಬೆಳೆಯುವುದು ಅವರ ಭೌತಿಕ ಬದುಕು ಸಮಾಧಾನಕರವಾಗಿದ್ದಾಗ ಮಾತ್ರ. ಅಲ್ಲದಿದ್ದರೆ, ಭಾವನಾತ್ಮಕ ಸಂಬಂಧಗಳಿಂದ ಕನ್ನಡ ಭಾಷೆ ನಿಲ್ಲಲಾರದು, ನಳನಳಿಸಿ ಬೆಳೆಯಲಾರದು.

ವ್ಯಕ್ತಿಯನ್ನು ಹೊರತುಪಡಿಸಿ ಭಾಷೆಯ ಇರುವಿಕೆಯಿಲ್ಲ. ಹೀಗಾಗಿ ಕನ್ನಡಪರ ಹೇಳಿಕೆಗಳು, ಘೋಷಣೆಗಳು, ಉದ್ಘೋಷಣೆಗಳು ತಾತ್ಕಾಲಿಕವಾಗಿ ಸಮಾಧಾನ, ಖುಷಿ ತರಬಹುದೇ ಹೊರತು ಶಾಶ್ವತವಾಗಿಯಲ್ಲ. ಹಾಗಾಗಿ, ಕನ್ನಡಿಗರ ಅದರಲ್ಲೂ ಮುಖ್ಯವಾಗಿ ಕೆಳವರ್ಗದವರ ಬದುಕನ್ನು ಉತ್ತಮಗೊಳಿಸುವತ್ತ ಅರ್ಥಾತ್ ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಪ್ರಯತ್ನಗಳು ಆಗಬೇಕಾದ ಅಗತ್ಯ ಮತ್ತು ಅನಿವಾರ್ಯ ಇದ್ದೇ ಇದೆ. ಆಗಮಾತ್ರ ಕನ್ನಡ ಹುಟ್ಟುವುದು, ಕಟ್ಟುವುದು, ಜಗದಗಲಕ್ಕೂ ಮುಟ್ಟುವುದು ಸಾಧ್ಯವಾಗುತ್ತದೆ ಎಂಬ ಅರಿವು ನಮಗಿರಬೇಕು.

ವ್ಯಕ್ತಿಯ ಭೌತಿಕ ಬದುಕು ಸಂಪನ್ನವಾಗಿದ್ದಾಗ ಸಹಜವಾಗಿಯೇ ಬೌದ್ಧಿಕ ಬದುಕಿನ ಸಾಮರ್ಥ್ಯ ವಿಸ್ತರಿಸುತ್ತದೆ. ಅದರೊಂದಿಗೆ ಅವರ ಎಲ್ಲ ಸಾಮಾಜಿಕ, ಸಾಂಸ್ಕೃತಿಕವೇ ಮೊದಲಾದ ಕ್ಷೇತ್ರಗಳು ಅರಳುತ್ತವೆ. ಅಂಥ ವ್ಯಕ್ತಿಸಮೂಹದಿಂದ ಕೂಡಿದ ಸಮಾಜವು ಬದುಕಿನ ನೈಜ ಕೊಡುಗೆಯನ್ನು ನೀಡಬಲ್ಲುದು. ಅಂಥ ಸಮಾಜ ನಮ್ಮ ಕನ್ನಡಿಗರದ್ದಾಗಲಿ ಎಂದು ನಾವಾದರೂ ಹಾರೈಸೋಣ.

ವಾಚಕರ ವಾಣಿ

ಸರ್ಕಾರಿ ಶಾಲೆ ವೈಭೋಗ ಮರುಕಳಿಸಲಿ

ಸರ್ಕಾರಿ ಶಾಲೆಗಳೆಂದರೆ ಮೂಗು ಮುರಿಯುತ್ತಿದ್ದ ಪೋಷಕರೀಗ ಕೊರೊನಾ ಕಾರಣಕ್ಕೆ ಕಳೆದ ವರ್ಷದಿಂದ ಖಾಸಗಿ ಶಾಲೆಗಳ ದುಬಾರಿ ಶುಲ್ಕ, ಸರಿಯಾಗಿ ನಡೆಯದ ತರಗತಿಯಂಥ ಕಾರಣಗಳಿಂದ ಬೇಸತ್ತು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಂದ ತಮ್ಮೂರಿನ ಸರ್ಕಾರಿ ಶಾಲೆಗಳಿಗೆ ದಾಖಲಿಸಿರುವುದು ಸಂತಸದ ಸುದ್ದಿ. ಆದರೆ ರಾಜ್ಯದ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳು ಹಾಗೂ ಶೌಚಾಲಯಗಳ ಕೊರತೆ ಎದ್ದುಕಾಣುತ್ತಿದೆ. ಆದರೂ ಸರ್ಕಾರ ಈ ವಿಷಯದಲ್ಲಿ ನಿರ್ಲಕ್ಷ್ಯ ಧೋರಣೆ ತಳೆದಿದೆ.

ಕೆಲವು ವರ್ಷಗಳಿಂದ ಮಕ್ಕಳಿಲ್ಲದೆ ಎಷ್ಟೋ ಶಾಲೆಗಳಿಗೆ ಶಾಶ್ವತ ಬೀಗ ಬಿದ್ದಾಗಿತ್ತು. ಮಕ್ಕಳೇ ಇಲ್ಲ ಕೊಠಡಿಗಳೇಕೆ ಎಂದು ಸರ್ಕಾರ ನಿರ್ಲಕ್ಷ್ಯ ತೋರಿತ್ತು. ಬಹುತೇಕ ಕಡೆ ಈ ವರ್ಷ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಶಾಲೆಗೆ ಸೇರಿದ ಯಾವ ಮಗುವೂ ಶಾಲೆ ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕಾದರೆ, ಸರ್ಕಾರ ಶಾಲೆಗಳಿಗೆ ಬೇಕಿರುವ ಮೂಲಸೌಕರ್ಯ ಒದಗಿಸಿಕೊಡಬೇಕು. ಆಗ ಸರ್ಕಾರಿ ಶಾಲೆಗಳ ವೈಭವವನ್ನು ಮತ್ತೆ ಕಣ್ತುಂಬಿಕೊಳ್ಳಬಹುದು.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ರಾಜ್ಯೋತ್ಸವ ಪ್ರಶಸ್ತಿ: ವಿವರ ಪ್ರಕಟಿಸಿ

'ರಾಜ್ಯೋತ್ಸವ ಪ್ರಶಸ್ತಿಯ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಬೇಕಿದೆ. ಹೀಗಾಗಿ, ಪ್ರಶಸ್ತಿ ಕೊಡಿ ಎಂದು ಇನ್ನು ಮುಂದೆ ಯಾರೂ ಸ್ವವಿವರ ಸಹಿತ ಅರ್ಜಿ ಸಲ್ಲಿಸಬೇಕಿಲ್ಲ. ಆಯ್ಕೆ ಸಮಿತಿ ತಾನೇ ಶೋಧಿಸಿ, ಗುರುತಿಸಿದಾಗ ಪ್ರಶಸ್ತಿಯ ಮೌಲ್ಯ ಹೆಚ್ಚುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಜೊತೆಗೆ ಪ್ರಶಸ್ತಿಗೆ ಕನಿಷ್ಠ 60 ವರ್ಷ ಆಗಿರಬೇಕೆಂಬ ನಿರ್ಬಂಧ ಸಡಿಲಿಸಲು ಪ್ರಯತ್ನಿಸುವುದಾಗಿ ಕೂಡಾ ಹೇಳಿದ್ದಾರೆ.

ಈ ಮಾತುಗಳನ್ನು ಆಲಿಸಿದ ಸ್ವಾಭಿಮಾನಿ ಸಾಧಕರಿಗೆ ಅತ್ಯಂತ ಸಂತೋಷ ಆಗಿರುವುದರಲ್ಲಿ ಸಂದೇಹವಿಲ್ಲ. ಅರ್ಜಿ ಸಲ್ಲಿಕೆ, ವಶೀಲಿಬಾಜಿ ಮುಂತಾದವುಗಳಿಗೆ ಒಗ್ಗದ ಸಜ್ಜನ ಸ್ವಾಭಿಮಾನಿ ಸಾಧಕರು ಇನ್ನೂ ಮರೆಯಲ್ಲೇ ಇದ್ದಾರೆ. ಸರ್ಕಾರದ ಈ ನಡೆ ಸ್ವಾಗತಾರ್ಹ. ಆಯ್ಕೆ ಪಾರದರ್ಶಕವಾಗಿದ್ದರೆ ಮಾತ್ರ ಇದು ಸೂಕ್ತ. ಪ್ರಶಸ್ತಿ ಪುರಸ್ಕೃತರ ಸಾಧನೆಗಳನ್ನೂ, ಅವರನ್ನು ಹೇಗೆ ಮತ್ತು ಯಾವ ಕಾರಣಕ್ಕಾಗಿ ಗುರುತಿಸಲಾಯಿತು ಎಂಬ ಎಲ್ಲ ವಿವರಗಳನ್ನೂ ಇಲಾಖೆಯ ವೆಬ್‌ಸೈಟಿನಲ್ಲಿ ಪ್ರಕಟಿಸಿದರೆ ಪಾರದರ್ಶಕತೆ ಸಾಧ್ಯ. ಇಲ್ಲವಾದಲ್ಲಿ ವಶೀಲಿ ಮತ್ತು ಒತ್ತಡ ಹಾಕುವವರಿಗೆ ಪ್ರಶಸ್ತಿ ದಕ್ಕುವ ಸಾಧ್ಯತೆ ಇದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಇದೆಂಥ ರಾಜಕೀಯ?

ಸಿಂದಗಿ ಮತ್ತು ಹಾನಗಲ್ ಉಪಚುನಾವಣೆಯಲ್ಲಿ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಹೀನಾಯ ಸೋಲನುಭವಿಸಿದ ಜೆಡಿಎಸ್ ವರ್ತನೆ ಯಾರ ಮಗುವನ್ನೋ ಬಾವಿಗೆ ತಳ್ಳಿ ಆಳ ನೋಡುವಂತಿತ್ತು. ಮುಸ್ಲಿಂ ಅಭ್ಯರ್ಥಿಯನ್ನು ಗೆಲ್ಲಿಸುವ ನಿಜವಾದ ಕಳಕಳಿಯಿದ್ದರೆ ಹಾಸನದಲ್ಲೋ ಮಂಡ್ಯದಲ್ಲೋ ಟಿಕೆಟ್ ನೀಡಿ ಗೆಲ್ಲಿಸಬಹುದಲ್ಲ. ಜೆಡಿಎಸ್ ಸ್ಪರ್ಧಿಸಿದ್ದು ತಾನು ಗೆಲ್ಲಬೇಕೆಂದಲ್ಲ, ಅಲ್ಪಸಂಖ್ಯಾತರ ಮತಗಳು ವಿಭಜನೆಯಾಗಿ ಕಾಂಗ್ರೆಸ್ ಸೋಲಬೇಕೆಂದು. ಇದಕ್ಕಾಗಿ ಹತ್ತು ದಿನ ಅವಿರತ ಪ್ರಚಾರ!

ಅಲ್ಪಸಂಖ್ಯಾತರ ಹೆಗಲ ಮೇಲೆ ಬಂದೂಕು ಇಟ್ಟು ಕಾಂಗ್ರೆಸ್‌ಗೆ ಗುಂಡಿಕ್ಕಬೇಕೆಂಬ ಅದರ ಆಸೆ ಮುಸ್ಲಿಮರ ಜಾಣನಡೆಯಿಂದ ಭಗ್ನಗೊಂಡಿದೆ. ಇಂಥ ರಾಜಕೀಯ ಯಾವ ಪುರುಷಾರ್ಥಕ್ಕೆ? ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಜಗತ್ತಿಗೆ ಕಾಣುವುದಿಲ್ಲವೇ?

ಶಿವಕುಮಾರ ಬಂಡೋಳಿ, ಹುಣಸಗಿ

ಶುದ್ಧವಾದ ಆಚರಣೆ ನಮ್ಮದಾಗಲಿ

ದೀಪಾವಳಿಗೆ ಪಟಾಕಿ ನಿಷೇಧ ಮಾಡಬೇಡಿ ಎಂದು ಸದ್ಗುರು ಜಗ್ಗಿ ವಾಸುದೇವ್ ಹೇಳಿದ್ದಾರೆ (ಪ್ರ.ವಾ., ನ. 3). 'ಮಕ್ಕಳು ಪಟಾಕಿಯ ಆನಂದ ಅನುಭವಿಸುವುದನ್ನು ತಡೆಯಲು ವಾಯುಮಾಲಿನ್ಯ ಕುರಿತಾದ ಕಾಳಜಿ ಸಕಾರಣವಲ್ಲ' ಎಂದೂ ಅವರು ಹೇಳಿರುವುದನ್ನು ಓದಿ ಅಚ್ಚರಿಯಾಯಿತು. ಪಟಾಕಿಗಳು ಎಷ್ಟು ಅಪಾಯಕಾರಿ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಪ್ರತಿವರ್ಷ ಅನೇಕ ಮಕ್ಕಳು ಪಟಾಕಿಗಳನ್ನು ಸುಡಲು ಹೋಗಿ ಕಣ್ಣು, ಮುಖಗಳನ್ನು ಸುಟ್ಟುಕೊಳ್ಳುತ್ತಲೇ ಇದ್ದಾರೆ. ಇನ್ನು ಕೆಲ ಮಕ್ಕಳು ಹಬ್ಬದ ನಂತರ ಅನಾರೋಗ್ಯದಿಂದ ಬಳಲುತ್ತಾರೆ. ಪಟಾಕಿಗಳಿಂದ ಮಕ್ಕಳ ಕೈಗಳಿಗೆ ಮೆತ್ತಿದ ವಿವಿಧ ರಾಸಾಯನಿಕಗಳು ಅವರ ಅನಾರೋಗ್ಯಕ್ಕೆ ಸಾಮಾನ್ಯ ಕಾರಣವೂ ಆಗಿರುತ್ತವೆ. ಹಾಗಾದರೆ ಇವರ ಆನಂದ ಎಲ್ಲಿ ಹೋಯಿತು? ಜೊತೆಗೆ ಮಕ್ಕಳು ಪಟಾಕಿ ಸುಡುವುದನ್ನು ಆನಂದಿಸಬಹುದು. ಆದರೆ ಆ ಮಕ್ಕಳ ಪೋಷಕರು ಮಾತ್ರ ಸದಾ ಆತಂಕದಲ್ಲೇ ಹಬ್ಬವನ್ನು ಆಚರಿಸುತ್ತಾರೆ ಎಂಬುದನ್ನು ಮರೆಯಬಾರದು.

ಮಕ್ಕಳಿಗೆ ಸಂತೋಷಕರ ವಾತಾವರಣವನ್ನು ನಿರ್ಮಿಸಬೇಕು ಮತ್ತು ಮಕ್ಕಳು ಆನಂದಿಸಬೇಕೆಂಬುದು ಅಕ್ಷರಶಃ ಸರಿ. ಆದರೆ ಹೀಗೆ ಕ್ಷಣಿಕ ಆನಂದಕ್ಕೆ ಇಡೀ ಬದುಕನ್ನೇ ಸುಟ್ಟುಕೊಂಡು ನರಳಬೇಕೆ? ಇವೇ ಮಕ್ಕಳು ದೊಡ್ಡವರಾಗಿ ತಮ್ಮ ಮುಂದಿನ ಪೀಳಿಗೆಗೂ ಪಟಾಕಿ ಸುಡಿ ಜೊತೆಗೆ ಮಾಲಿನ್ಯ ಮಾಡಿ ಕಣ್ಣು ಮುಖಗಳನ್ನು ಸುಟ್ಟುಕೊಳ್ಳಿ ಎಂದು ಹೇಳಬೇಕೆ? ಪಟಾಕಿಗಳ ಬದಲಾಗಿ ಸುಂದರ ಆಕಾಶಬುಟ್ಟಿಗಳನ್ನು ಹಾರಿಬಿಡಬಹುದಲ್ಲವೆ? ಆಕಾಶಬುಟ್ಟಿ ಕೇವಲ ಆಟವಲ್ಲ, ಅದರೊಳಗೊಂದು ಅದ್ಭುತ ವಿಜ್ಞಾನ ಪಾಠವೂ ಇದೆ. ಅದೇ ತೆರನಾಗಿ ಮಣ್ಣಿನ ಹಣತೆಗಳನ್ನು ಮಕ್ಕಳೇ ತಯಾರಿಸುವಂತೆ ಮಾಡುವುದು ಕೂಡ ಮಕ್ಕಳಿಗೆ ಮಣ್ಣಿನೊಂದಿಗಿನ ಬಂಧವನ್ನು, ಅವರ ಕೌಶಲವನ್ನು ಮತ್ತು ಆನಂದವನ್ನು ಹೆಚ್ಚಿಸುತ್ತದೆ.

ಎಲ್ಲೆಲ್ಲೂ ಮಾಲಿನ್ಯದ ಮೆರವಣಿಗೆಯೇ ನಡೆಯುವಾಗ ಮಕ್ಕಳ ಕೈಯಿಂದ ಸಸಿಗಳನ್ನು ನೆಡಿಸಿ ಅವರನ್ನು ಹೊಸದಿಕ್ಕಿನಲ್ಲಿ ಆಲೋಚಿಸುವಂತೆ ಮಾಡಬೇಕು. ಈ ರೀತಿಯ ಪರಿಸರಸ್ನೇಹಿ ಆಲೋಚನೆಗಳನ್ನು ಮಕ್ಕಳಲ್ಲಿ ಬಿತ್ತಬೇಕಾದ ಅವಶ್ಯಕತೆ ಇದೆ. ಹಾಗಾಗಿ ಅಪಾಯಕಾರಿ ಮತ್ತು ಪರಿಸರಕ್ಕೆ ಮಾರಕವಾದ ಪಟಾಕಿ ಸಂಸ್ಕೃತಿಯನ್ನು ತ್ಯಜಿಸಿ ಶುದ್ಧವಾದ ಮತ್ತು ಮಕ್ಕಳ ಮನಸ್ಸನ್ನು ಉಲ್ಲಸಿತಗೊಳಿಸುವ ಆಚರಣೆಗಳತ್ತ ನಾವೆಲ್ಲ ಹೊರಳಬೇಕಿದೆ ಅಲ್ಲವೇ?


ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕನ್ನಡದಲ್ಲಿ ಎಂಜಿನಿಯರಿಂಗ್ ಶಿಕ್ಷಣ ಕಾರ್ಯಸಾಧ್ಯವೇ?

ಆತುರ ಪ್ರಯೋಗಕ್ಕೇ ಮಾರಕ

• ಡಾ. ತಾರಕೇಶ್ವರ್ ವಿ.ಬಿ.



ಹೊಸ ಶಿಕ್ಷಣ ನೀತಿ 2020ರಲ್ಲಿನ ಕೆಲವು ಸದಾಶಯದ ಅಂಶಗಳಲ್ಲಿ ಭಾರತೀಯ ಭಾಷೆಗಳ ಬಗೆಗಿನ ಕಾಳಜಿಯೂ ಒಂದು. ಇದರ ಭಾಗವಾಗಿ, ಉನ್ನತ ಶಿಕ್ಷಣದಲ್ಲಿ ಮತ್ತಷ್ಟು ಪದವಿ ಕಾರ್ಯಕ್ರಮಗಳನ್ನು ಭಾರತೀಯ ಭಾಷೆಗಳಲ್ಲಿ ನಡೆಸುವ ಯೋಜನೆಯೂ ಇದೆ. ಸಂವಿಧಾನದ 8ನೇ ಪರಿಚ್ಛೇದದಲ್ಲಿರುವ 8 ಭಾಷೆಗಳಲ್ಲಿ ಎಂಜಿನಿಯರಿಂಗ್ ಪದವಿಯನ್ನು ನಡೆಸಲು ಎಐಸಿಟಿಇ ಅನುಮತಿ ನೀಡಿದೆ. ಈಗ ಅದಕ್ಕೆ ಅನುಗುಣವಾಗಿ ಕರ್ನಾಟಕ ಸರ್ಕಾರವು ನಾಲ್ಕು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಾಯೋಗಿಕವಾಗಿ ಈ ವರ್ಷದಿಂದಲೇ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲು ತಯಾರಿ ಆರಂಭಿಸಿದೆ.

ಆಗಲೇ ಪಠ್ಯಪುಸ್ತಕಗಳನ್ನು/ಪಠ್ಯಕ್ರಮವನ್ನು ಕನ್ನಡದಲ್ಲಿ ‘ಟ್ರಾನ್ಸ್‌ಫಾರ್ಮ್’ ಮಾಡಿದ್ದೇವೆ ಎಂದೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಹೇಳಿಕೆ ನೀಡಿದ್ದಾರೆ. ಇದನ್ನು ಮೊದಲಿಗೆ ಸ್ವಾಗತಿಸಬೇಕು. ಏಕೆಂದರೆ ಎಲ್ಲಾ ಶಿಕ್ಷಣವನ್ನೂ ಕನ್ನಡದಲ್ಲಿ ನೀಡಬೇಕೆಂದು ಕನ್ನಡ ಚಿಂತಕರು, ಪ್ರೇಮಿಗಳು ಕಳೆದ ಒಂದು ಶತಮಾನದಿಂದ ಆಶಿಸಿದ್ದಾರೆ. ಶಿಕ್ಷಣ ತಜ್ಞರೂ ಕಲಿಯುವವರ ಭಾಷೆಯಲ್ಲಿಯೇ ಕಲಿಕೆಯೂ ಇದ್ದರೆ ಉತ್ತಮವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದರೆ ಈ ಕನ್ನಡ ಮಾಧ್ಯಮದ ಎಂಜಿನಿಯರಿಂಗ್ ತರಗತಿಗಳು ಸ್ವಾಗತಾರ್ಹ ಮತ್ತು ಒಂದು ಶತಮಾನದಿಂದ ಕನಸಾಗಿದ್ದ ಒಂದು ಅಂಶ ಈಡೇರುವ ಸಂದರ್ಭವೂ ಆಗಿದೆ. ಈ ಕಾರಣಗಳಿಗಾಗಿಯೇ ಈ ಪ್ರಯೋಗ, ಪ್ರಯೋಗವಾಗಿಯೇ ಉಳಿಯದಿರಬೇಕಾದರೆ, ಅದರ ಜಾರಿಗೊಳಿಸುವಿಕೆಯನ್ನು ಬಹಳ ಎಚ್ಚರದಿಂದ, ಪೂರ್ವತಯಾರಿಯಿಂದ ಮತ್ತು ಎಲ್ಲರ ಆಕ್ಷೇಪ, ಅನುಮಾನಗಳನ್ನು ಗಂಭೀರವಾಗಿ ತೆಗೆದುಕೊಂಡು ಪರಿಶೀಲಿಸಿ ಅಗತ್ಯ ಮಾರ್ಪಾಡುಗಳನ್ನು ಮಾಡಿಕೊಳ್ಳುವುದರ ಮೂಲಕ ಜಾರಿಗೊಳಿಸಬೇಕು. ಅನಗತ್ಯ ಆತುರವಾಗಲಿ, ನಾವೇ ಮೊದಲು ಮಾಡಿದ್ದು ಎಂಬ ಬಿರುದು ಪಡೆಯುವುದಕ್ಕಾಗಲಿ ಇದನ್ನು ಮಾಡಿದರೆ ಇದು ಯಶಸ್ವಿಯಾಗದೆ ಈ ಬ್ಯಾಚಿನ ವಿದ್ಯಾರ್ಥಿಗಳು ಪ್ರಯೋಗದ ಬಲಿಪಶುಗಳಾಗಬಹುದು ಎಂಬ ಎಚ್ಚರ ಅಗತ್ಯವಿದೆ.

ಈಗಾಗಲೇ ಈ ಕುರಿತ ಕೆಲವು ಪ್ರಶ್ನೆಗಳು ಎದ್ದಿವೆ. ಮೊದಲನೆಯದು, ಕನ್ನಡದಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ನಂತರದ ಕೆಲಸದ ಅವಕಾಶ ಕುರಿತಾದದ್ದು– ಇದು ಬಹಳ ದೊಡ್ಡ ಪ್ರಶ್ನೆ. ಪ್ರತಿಭಾವಂತರಾಗಿದ್ದೂ ಇಂಗ್ಲಿಷ್‌ನಲ್ಲಿ ಸುಲಲಿತವಾಗಿ ಮಾತನಾಡುವುದಕ್ಕೆ ಕಷ್ಟವಾಗುತ್ತದೆ ಅನ್ನುವ ಕಾರಣಕ್ಕೇ ಕೆಲಸ ಸಿಗದೇ ಇರುವಾಗ, ಪೂರ್ತಿಯಾಗಿ ಕನ್ನಡದಲ್ಲಿ ಕಲಿತ ಕಾರಣಕ್ಕೆ ಕೆಲಸ ಸಿಗದೇ ಹೋದರೆ ಈ ವಿದ್ಯಾರ್ಥಿಗಳ ಭವಿಷ್ಯ ಮಂಕಾಗುವ ಸಾಧ್ಯತೆ ಇದೆ. ಇದಕ್ಕೆ ಪರಿಹಾರವಾಗಿ ಸರ್ಕಾರಿ ಉದ್ಯೋಗದಲ್ಲಿ ಇವರಿಗೆ ಮೀಸಲಾತಿ ನೀಡಬೇಕು ಎನ್ನುವ ಬೇಡಿಕೆ ಬಂದಿದೆ. ಆದರೆ ಸರ್ಕಾರಿ ಉದ್ಯೋಗಗಳು ಕಡಿಮೆಯಾಗುತ್ತಿರುವಾಗ, ಇರುವ ಉದ್ಯೋಗಗಳೂ ಹೊರಗುತ್ತಿಗೆಯ ಆಧಾರದಲ್ಲಿ ನಿರ್ವಹಿಸಲ್ಪಡುತ್ತಿರುವ ಸಂದರ್ಭದಲ್ಲಿ ಇದು ಎಷ್ಟರಮಟ್ಟಿಗೆ ಈ ಸಮಸ್ಯೆಯನ್ನು ಪರಿಹರಿಸುತ್ತದೆ ಎಂದು ನನಗೆ ಸಂಶಯವಿದೆ. ಖಾಸಗಿ ರಂಗದಲ್ಲಿ ಉದ್ಯೋಗಗಳು ಸೃಷ್ಟಿಯಾಗುತ್ತಿರುವ ಕಾರಣದಿಂದ ಅದರಲ್ಲಿ ಮತ್ತು ಸ್ವಯಂ-ಉದ್ಯಮದಲ್ಲಿ ಕನ್ನಡದಲ್ಲಿ ಎಂಜಿನಿಯರಿಂಗ್ ಮಾಡಿದ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಕಲ್ಪಿಸುವ ಬಗೆಯನ್ನು ವಿಷದವಾಗಿ ಚರ್ಚೆ ಮಾಡುವ ಅಗತ್ಯವಿದೆ.

ಮತ್ತೊಂದು ಮುಖ್ಯಪ್ರಶ್ನೆ ಕನ್ನಡದಲ್ಲಿ ಪಠ್ಯಕ್ರಮವನ್ನು ರೂಪಿಸುವ ವಿಧಾನವನ್ನು ಕುರಿತು. ಈ ಹಿಂದೆ ಈ ರೀತಿಯ ಪ್ರಯೋಗಗಳು ಆದಾಗ ರೂಪಿಸಿದ ಪರಿಭಾಷೆಗಳು ಕನ್ನಡಕ್ಕಿಂತ ಇಂಗ್ಲಿಷ್ ಭಾಷೆಯೇ ಸುಲಭ ಎನ್ನುವಂತಿದ್ದವು. ಉದಾ. ವರ್ಟಿಬ್ರೇಟ್ಸ್ ಮತ್ತು ಇನ್ವರ್ಟಿಬ್ರೇಟ್ಸ್ ಎನ್ನುವುದನ್ನು ಕಶೇರುಕ ಮತ್ತು ಅಕಶೇರುಕ ಎಂದು ಭಾಷಾಂತರಿಸಿದ್ದು. ಒಂದು ಜ್ಞಾನಶಾಖೆಗೆ ಸೂಕ್ತ ಪರಿಭಾಷೆಯನ್ನು ರೂಪಿಸುವಾಗ ಹಲವಾರು ಅಂಶಗಳನ್ನು ಗಮನದಲ್ಲಿರಿಸಿಕೊಂಡು ರೂಪಿಸಬೇಕಾಗುತ್ತದೆ. ಆತುರ ಸಲ್ಲದು, ಇದಕ್ಕೆ ವಿಷಯ ತಜ್ಞರ, ಶಿಕ್ಷಣ ತಜ್ಞರ, ಭಾಷಾ ತಜ್ಞರ ಮತ್ತು ಭಾಷಾಂತರ ತಜ್ಞರ ತಂಡ ಒಟ್ಟಿಗೆ ಕೆಲಸ ಮಾಡಬೇಕಾಗುತ್ತದೆ.

ಈ ಯೋಜನೆ ಕನ್ನಡಮಾಧ್ಯಮದಲ್ಲಿ ಓದಿದ ಗ್ರಾಮೀಣ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎನ್ನುವ ವಾದವನ್ನು ಮುಂದಿಡಲಾಗುತ್ತಿದೆ. ಎಂಜಿನಿಯರಿಂಗ್ ಪದವಿ ಪಡೆಯಲು ಪಿ.ಯು.ಸಿ. (ಪ್ಲಸ್ ಟೂ) ಪಾಸಾಗಿರಬೇಕು. ಅದನ್ನು ಇಂಗ್ಲಿಷ್‌ನಲ್ಲಿ ಪಾಸು ಮಾಡಿರುತ್ತಾರೆ, ಇಲ್ಲಾ ಅದನ್ನು ಪಾಸುಮಾಡಲು ಸಾಧ್ಯವಾಗದೇ ಅಲ್ಲೇ ಉಳಿದಿರುತ್ತಾರೆ. ಪಿಯುಸಿಯಲ್ಲಿ ಕನ್ನಡ ಮಾಧ್ಯಮದಲ್ಲಿ ವಿಜ್ಞಾನದ ವಿಷಯಗಳನ್ನು ಬೋಧಿಸಿ, ನಂತರ ಅದರ ಸಾಧಕ ಬಾಧಕಗಳನ್ನು ಪರಿಶೀಲಿಸಿ, ಎಂಜಿನಿಯರಿಂಗ್ ಪದವಿಯಲ್ಲಿ ಕನ್ನಡ ಮಾಧ್ಯಮದ ಬಗೆಗೆ ಯೋಚಿಸಬಹುದಾಗಿತ್ತು. ಈಗ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಹತ್ತನೇ ತರಗತಿಯವರಿಗೆ ಕನ್ನಡದಲ್ಲಿ ಕಲಿತು, ಪಿಯುಸಿಯಲ್ಲಿ ವಿಜ್ಞಾನವನ್ನು ಇಂಗ್ಲಿಷ್‌ನಲ್ಲಿ ಕಲಿತು, ಸಿ.ಇ.ಟಿ.ಯನ್ನು ಇಂಗ್ಲಿಷ್‌ನಲ್ಲಿ ಬರೆದು ಪಾಸುಮಾಡಿ, ಕನ್ನಡ ಮಾಧ್ಯಮದ ಎಂಜಿನಿಯರಿಂಗ್ ಪದವಿಗೆ ಬರುತ್ತಾರೆ ಎನ್ನುವುದು ಗೊಂದಲಮಯವಾಗಿ ಕಾಣುತ್ತದೆ. ಕನ್ನಡದಿಂದ ಇಂಗ್ಲಿಷ್ ಮಾಧ್ಯಮಕ್ಕೆ ಒಗ್ಗಿಕೊಳ್ಳುತ್ತಿದ್ದ ವಿದ್ಯಾರ್ಥಿಗಳನ್ನು ಇದು ಮತ್ತೆ ಗೊಂದಲಕ್ಕೆ ಕೆಡವಬಹುದು. ಮೊದಲಿಗೆ ಪಿಯುಸಿ ಮತ್ತು ಸಿ.ಇ.ಟಿ.ಯನ್ನು ಕನ್ನಡದಲ್ಲಿ ನಡೆಸುವ ಯೋಚನೆ ಮಾಡಬೇಕಾಗಿತ್ತು. ಅದರ ಮೂಲಕ ಹಾದುಬಂದವರಿಗೆ ಎಂಜಿನಿಯರಿಂಗ್ ಪದವಿಯನ್ನು ಕನ್ನಡದಲ್ಲಿ ಬೋಧಿಸಬಹುದಿತ್ತು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ವಿಷಯ, ಸಂಗತಿಗಳನ್ನು ಕುರಿತು ಸಂಶೋಧನೆ, ಆವಿಷ್ಕಾರಗಳು ಸತತವಾಗಿ ನಡೆಯುತ್ತಿರುತ್ತವೆ. ಇವುಗಳನ್ನು ಕನ್ನಡಕ್ಕೆ ತರುವ ಕೆಲಸ ಸತತವಾಗಿ ನಡೆಯಬೇಕಾಗುತ್ತದೆ. ಅದಕ್ಕೆ, ತನ್ನ ಆರಂಭದಿಂದ 1956ರವರೆಗೆ ಎಲ್ಲಾ ಶಿಕ್ಷಣವನ್ನು ದೇಶೀಭಾಷೆಯಲ್ಲಿ ನೀಡಿದ್ದ ಉಸ್ಮಾನಿಯ ವಿಶ್ವವಿದ್ಯಾಲಯದ ಉದಾಹರಣೆ ನೋಡಬಹುದು. ಇಲ್ಲಿ ನಾಲ್ಕು ದಶಕಗಳ ಕಾಲ ಎಂಜಿನಿಯರಿಂಗ್, ವೈದ್ಯಕೀಯ ಆದಿಯಾಗಿ ಎಲ್ಲವನ್ನೂ ಉರ್ದುವಿನಲ್ಲಿ ಕಲಿಸಲಾಗುತ್ತಿತ್ತು. ಇದಕ್ಕಾಗಿ ವಿಶ್ವವಿದ್ಯಾಲಯದಲ್ಲಿ ಭಾಷಾಂತರದ ಒಂದು ಸಂಸ್ಥೆಯನ್ನೇ ರೂಪಿಸಲಾಗಿತ್ತು. ಆ ರೀತಿಯಾಗಿ ವಿಷಯ ತಜ್ಞರೂ, ಭಾಷಾಂತರಕಾರರೂ ಆದ ಒಂದು ಪಡೆಯನ್ನು ಪ್ರತಿ ಜ್ಞಾನಶಾಖೆಯಲ್ಲಿ ರೂಪಿಸದೇ ಹೋದರೆ, ಇದು ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿ ಇಡಬೇಕಾದ ಪ್ರಯೋಗವಾಗಬಹುದು.

ಮತ್ತೊಂದು ಗಮನಿಸಬೇಕಾದ ಅಂಶವೆಂದರೆ, ಇಂದು ಶಿಕ್ಷಣ ತಜ್ಞರು ದ್ವಿಭಾಷಿಕ ಮತ್ತು ಬಹುಭಾಷಿಕ ಮಾಧ್ಯಮದ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದಾರೆ. ಮುದ್ರಣ ಕೇಂದ್ರಿತ ಶಿಕ್ಷಣದಿಂದ ಡಿಜಿಟಲ್ ಕೇಂದ್ರಿತ ಶಿಕ್ಷಣದ ಕಡೆಗೆ ನಾವು ಹೊರಳುತ್ತಿರುವುದರಿಂದ ಇದು ಸುಲಭಸಾಧ್ಯವೂ ಹೌದು. ಮೊದಲಿಗೆ ಪ್ರಯೋಗ ರೂಪದಲ್ಲಿ ಸ್ವ-ಇಚ್ಛೆಯಿಂದ ಮುಂದೆ ಬಂದವರಿಗೆ ಇಂಗ್ಲಿಷ್ ಮತ್ತು ಕನ್ನಡ ದ್ವಿಭಾಷಿಕ ಮಾಧ್ಯಮದ ಶಿಕ್ಷಣವನ್ನು ನೀಡಿ ನಂತರ ನಿಧಾನಕ್ಕೆ ಅದರ ಸಾಧಕ-ಬಾಧಕಗಳನ್ನು ಪರಿಶೀಲಿಸಿ ಕನ್ನಡ ಮಾಧ್ಯಮಕ್ಕೆ ಹೊರಳುವ ಅವಕಾಶವನ್ನೂ ಪರಿಶೋಧಿಸಿದರೆ ಒಳಿತು.

ಒಟ್ಟನಲ್ಲಿ ಇದು ಸ್ವಾಗತಾರ್ಹವಾದ ಹೆಜ್ಜೆಯಾದರೂ, ಅತಿ ಆತ್ಮವಿಶ್ವಾಸದಿಂದ ಎದೆತಟ್ಟಿಕೊಳ್ಳುವ, ಬೆನ್ನು ತಟ್ಟುವ ಸಂದರ್ಭವಲ್ಲ; ಬದಲಿಗೆ ಬಹುಎಚ್ಚರದಿಂದ ಮೈಯೆಲ್ಲಾ ಕಣ್ಣಾಗಿ, ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಮತ್ತು ಅದರೊಂದಿಗೆ ಕನ್ನಡದ ಭವಿಷ್ಯವನ್ನೂ ರೂಪಿಸುವ ಕೆಲಸ. ಏಕೆಂದರೆ ಅತಿಯಾದ ಆತ್ಮವಿಶ್ವಾಸದ ಬಲಿಪಶುಗಳಾಗುವವರು ವಿದ್ಯಾರ್ಥಿಗಳು, ಅವರಿಗೆ ಅನ್ಯಾಯ ಆಗಬಾರದು; ಅವರ ಕೆಲಸ/ಅವಕಾಶಗಳಿಗೆ, ಜೀವನಕ್ಕೆ ನಾಳೆ ತೊಂದರೆಯಾಗಬಾರದು.

ಲೇಖಕ: ಪ್ರಾಧ್ಯಾಪಕ, ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ವಿಶ್ವವಿದ್ಯಾಲಯ, ಹೈದರಾಬಾದ್



> ಇದು ಸ್ವಾಗತಾರ್ಹವಾದ ಹೆಜ್ಜೆಯಾದರೂ, ಅತಿ ಆತ್ಮವಿಶ್ವಾಸದಿಂದ ಎದೆತಟ್ಟಿಕೊಳ್ಳುವ, ಬೆನ್ನು ತಟ್ಟುವ ಸಂದರ್ಭವಲ್ಲ. ಬದಲಿಗೆ ಬಹುಎಚ್ಚರದಿಂದ ಮೈಯೆಲ್ಲಾ ಕಣ್ಣಾಗಿ, ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಮತ್ತು ಅದರೊಂದಿಗೆ ಕನ್ನಡದ ಭವಿಷ್ಯವನ್ನೂ ರೂಪಿಸುವ ಕೆಲಸ. ಏಕೆಂದರೆ ಅತಿಯಾದ ಆತ್ಮವಿಶ್ವಾಸದ ಬಲಿಪಶುಗಳಾಗುವವರು ವಿದ್ಯಾರ್ಥಿಗಳು, ಅವರಿಗೆ ಅನ್ಯಾಯ ಆಗಬಾರದು

ಪ್ರಜಾವಾಣಿ ಚರ್ಚೆ

ಕನ್ನಡದಲ್ಲೇ ತಾಂತ್ರಿಕ ಶಿಕ್ಷಣ ನಾಡುನುಡಿ ಬೆಳೆಸುವ ಬದ್ಧತೆ

• ಡಾ.ಸಿ.ಎನ್. ಅಶ್ವತ್ಥನಾರಾಯಣ

ನಮ್ಮ ಉಸಿರು ಕನ್ನಡ, ನಮ್ಮ ಕಸುವು ಕನ್ನಡ
ನಮ್ಮ ಹೆಸರು ಕನ್ನಡ, ನಮ್ಮ ಕಸುಬು ಕನ್ನಡ;
ಕನ್ನಡವಿದು ಕನ್ನಡ, ಬನ್ನಿ ನಮ್ಮ ಸಂಗಡ
-ಎಂ. ಗೋಪಾಲಕೃಷ್ಣ ಅಡಿಗ

ಈಗ ರಾಜ್ಯದ ಶೈಕ್ಷಣಿಕ ವಲಯದಲ್ಲಿ ದಿನವೂ ಒಂದಿಲ್ಲೊಂದು ಕಡೆ ಚರ್ಚಿತವಾಗುತ್ತಿರುವ ವಿಷಯವೆಂದರೆ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 (ಎನ್ಇಪಿ). ರಾಜ್ಯದಲ್ಲಂತೂ ಈ ನೀತಿಯನ್ನು ಕುರಿತು ನಾನಾ ಕಡೆಗಳಲ್ಲಿ ಹಲವು ರೂಪಗಳಲ್ಲಿ ಸಂವಾದ ನಡೆಯುತ್ತಿರುವುದು ಸ್ವಾಗತಾರ್ಹ.

ನಮಗೆ `ನಮ್ಮತನ' ಎನ್ನುವ ಹೆಮ್ಮೆಯನ್ನು ಮೂಡಿಸುವ ಮತ್ತು ಅನನ್ಯ ಸ್ಥಾನಮಾನ ತಂದುಕೊಡುವ ನಿರ್ಣಾಯಕ ಅಂಶಗಳೆಂದರೆ, ಭಾಷೆ ಮತ್ತು ಸಂಸ್ಕೃತಿ. ನಾವು ಆಧುನಿಕ ಶಿಕ್ಷಣ ಮತ್ತು ಅವಕಾಶಗಳನ್ನು ಪಡೆದುಕೊಂಡು ಯಾವ ದೇಶಕ್ಕೆ ಬೇಕಾದರೂ ಹೋಗಿ ನೆಲೆಸಬಹುದು, ನಿಜ. ಆದರೆ, ಎಷ್ಟೇ ತಲೆಮಾರುಗಳು ಉರುಳಿದರೂ ನಮ್ಮ ಅಸ್ತಿತ್ವದ ಬೇರುಗಳಿರುವುದು ನಮ್ಮ ಕರ್ನಾಟಕದಲ್ಲೇ; ಕನ್ನಡ ಭಾಷೆಯಲ್ಲೇ. ಹೀಗಾಗಿ, ನಮ್ಮೆಲ್ಲರ ಅಂತರಂಗದಲ್ಲೂ `ಕನ್ನಡ-ಕನ್ನಡಿಗ-ಕರ್ನಾಟಕ' ಎನ್ನುವುದೇ ನಿತ್ಯಮಂತ್ರವಾಗಿದೆ. ಕನ್ನಡ ಜನಮಾನಸದಲ್ಲಿ ಹೇಗೋ ಹಾಗೆ ಕರ್ನಾಟಕ ಸರ್ಕಾರವು ಕೂಡ ನಾಡು-ನುಡಿಗಳನ್ನು ಆದ್ಯತೆಯ ವಿಷಯವಾಗಿ ಪರಿಗಣಿಸಿದೆ.

ಎನ್ಇಪಿಯಲ್ಲಿ ಅತ್ಯಂತ ಸ್ಪಷ್ಟವಾಗಿ `ಪ್ರಾಥಮಿಕ ಶಿಕ್ಷಣದ ಜೊತೆಗೆ ಸಾಧ್ಯವಿರುವ ಕಡೆಗಳಲ್ಲೆಲ್ಲ ಮಾತೃಭಾಷೆಯಲ್ಲೇ (ಪರಿಸರದ ಭಾಷೆ, ಸ್ಥಳೀಯ ಭಾಷೆ ಮತ್ತು ಪ್ರಾದೇಶಿಕ ಭಾಷೆ ಎಂದರೂ ಇದೇ) ಶಿಕ್ಷಣವನ್ನು ಕೊಡಬೇಕು. ಉನ್ನತ ಶಿಕ್ಷಣವನ್ನು ಕೂಡ ಆಯಾ ಪ್ರದೇಶಗಳ ಭಾಷೆಯಲ್ಲೇ ಕೊಡಬೇಕು' ಎನ್ನುವ ಗುರಿ ಇರುವುದನ್ನು ಎಲ್ಲರೂ ಗಮನಿಸಿರಬಹುದು. ಇದಕ್ಕೆ ತಕ್ಕಂತೆ ಕರ್ನಾಟಕವು ದೇಶದಲ್ಲೇ ಪ್ರಥಮ ರಾಜ್ಯವಾಗಿ ಕನ್ನಡದಲ್ಲೇ ಎಂಜಿನಿಯರಿಂಗ್ ಶಿಕ್ಷಣವನ್ನು ಕೊಡಲು ಮುಂದಡಿ ಇಟ್ಟಿದ್ದು, ಈಗಾಗಲೇ ನಾಲ್ಕು ಕಾಲೇಜುಗಳಲ್ಲಿ ಇದನ್ನು ಆರಂಭಿಸಿದೆ. ಇವೆಂದರೆ- ಭಾಲ್ಕಿಯ ಭೀಮಣ್ಣ ಖಂಡ್ರೆ ಎಂಜಿನಿಯರಿಂಗ್ ಕಾಲೇಜು, ಚಿಕ್ಕಬಳ್ಳಾಪುರದ ಎಸ್.ಜೆ.ಸಿ. ಎಂಜಿನಿಯರಿಂಗ್ ಕಾಲೇಜು, ಮೈಸೂರಿನ ಮಹಾರಾಜ ಎಂಜಿನಿಯರಿಂಗ್ ಕಾಲೇಜು ಮತ್ತು ವಿಜಯಪುರದ ಪಿ.ಜಿ.ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜು.

ಈ ಪೈಕಿ ಮೊದಲ ಎರಡು ಕಾಲೇಜುಗಳಲ್ಲಿ ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲೂ ಕೊನೆಯ ಎರಡು ಕಾಲೇಜುಗಳಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲೂ ಕನ್ನಡ ಮಾಧ್ಯಮದಲ್ಲಿ ಬೋಧನೆಯನ್ನು ಆರಂಭಿಸಲಾಗಿದ್ದು, ನಾಲ್ಕೂ ಕಾಲೇಜುಗಳಲ್ಲಿ ತಲಾ 30 ಸೀಟುಗಳಿವೆ. ಇಷ್ಟೇ ಅಲ್ಲ, ಇದಕ್ಕೆ ತಕ್ಕಂತೆ ಕನ್ನಡದಲ್ಲೇ ಎಂಜಿನಿಯರಿಂಗ್ ಪಠ್ಯ ಪುಸ್ತಕಗಳನ್ನು ಈಗಾಗಲೇ ಸಿದ್ಧಪಡಿಸಲಾಗಿದೆ! ಇದರ ಹಿಂದೆ ನೂರಾರು ಪರಿಣತರ ಶ್ರಮವಿದೆ. ಇಷ್ಟೇ ಅಲ್ಲ, ಡಿಪ್ಲೊಮಾ ಹಂತಕ್ಕೂ ಇದನ್ನು ವಿಸ್ತರಿಸುವ ಮಹದಾಸೆ ನಮ್ಮದು. ಹೀಗಾಗಿ ಈಗ ಈ ಹಂತದಲ್ಲಿರುವ ಕನ್ನಡ-ಇಂಗ್ಲಿಷ್ ಸಮ್ಮಿಶ್ರ ಬೋಧನಾ ಮಾದರಿಯು ಅಬಾಧಿತವಾಗಿ ಮುಂದುವರಿಯಲಿದೆ. ಇದನ್ನು ನಾನಿಲ್ಲಿ ವಿಷದವಾಗಿ ಹೇಳಲು ಕಾರಣವಿದೆ. ಅದೇನೆಂದರೆ, ಕೇಂದ್ರ ಸರ್ಕಾರವು ರಾಷ್ಟ್ರದ ಎಂಟು ಭಾಷೆಗಳಿಗೆ ಈ ದಿಸೆಯಲ್ಲಿ ಹಸಿರು ನಿಶಾನೆ ತೋರಿಸಿದೆ. ಆದರೆ, ಈ ಉಜ್ವಲ ಅವಕಾಶವನ್ನು ಎಲ್ಲರಿಗಿಂತ ಮೊದಲು ಉಪಯೋಗಿಸಿಕೊಂಡಿರುವುದು ನಮ್ಮ ಕರ್ನಾಟಕ ಸರ್ಕಾರವೊಂದೇ! ಇದು ನಿಜಕ್ಕೂ ಹೆಮ್ಮೆ ಪಡಬೇಕಾದ ವಿಚಾರ.

ರಾಷ್ಟ್ರಕವಿ ಕುವೆಂಪು ಅವರಂತೂ ಯಾವಾಗಲೂ ‘ಕನ್ನಡ ನಾಡಿನಲ್ಲಿನ ಶಿಕ್ಷಣ ವ್ಯವಸ್ಥೆಯು ಕನ್ನಡಮಯವಾಗಬೇಕು. ಇಲ್ಲಿ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಸ್ನಾತಕೋತ್ತರ ಶಿಕ್ಷಣದವರೆಗೂ ನಮ್ಮ ನುಡಿಯಾದ ಕನ್ನಡದಲ್ಲೇ ಬೋಧನೆ, ಸಂಶೋಧನೆ, ಪ್ರಸಾರ ಎಲ್ಲವೂ ಸುಗಮವಾಗಿ ನಡೆಯಬೇಕು. ಕನ್ನಡಕ್ಕೆ ಅಂತಹ ಕಸುವಿದೆ’ ಎನ್ನುತ್ತಿದ್ದರು. ಇನ್ನು ಮಹಾತ್ಮ ಗಾಂಧೀಜಿಯವರಂತೂ ಭಾರತೀಯ ಭಾಷೆಗಳಲ್ಲೇ ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂಬ ವಿಚಾರದ ಅಗ್ರ ಪ್ರತಿಪಾದಕರೇ ಆಗಿದ್ದರು. ಗುರುದೇವ ರವೀಂದ್ರನಾಥ ಟ್ಯಾಗೋರ್, ಶಿಕ್ಷಣವೇತ್ತರಾಗಿದ್ದ ಶಾಮಪ್ರಸಾದ್ ಮುಖರ್ಜಿ ಕೂಡ ಇದೇ ತತ್ತ್ವದಲ್ಲಿ ಗಾಢ ನಂಬಿಕೆ ಇಟ್ಟುಕೊಂಡಿದ್ದರು. ಇದು ನಮ್ಮ ಪರಂಪರೆಗೆ ಅನುಗುಣವಾದ ಚಿಂತನೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಆದರೂ ಕನ್ನಡದಲ್ಲಿ ಇದು ಇಲ್ಲಿಯವರೆಗೆ ಸಾಧ್ಯವಾಗಿರಲಿಲ್ಲ. ಇದಕ್ಕೆ ಶತಶತಮಾನಗಳ ಕಾಲದ ಪರಕೀಯರ ಆಳ್ವಿಕೆ, ಬ್ರಿಟಿಷರ ಕಾಲದಲ್ಲಿ ಮೆಕಾಲೆಯು ದೇಶದ ಸಾಂಸ್ಕೃತಿಕ ತಂತುಗಳನ್ನೇ ಕಡಿದು ಹಾಕುವ ದುರುದ್ದೇಶದಿಂದ ಹೇರಿದ ಇಂಗ್ಲಿಷ್ ಶಿಕ್ಷಣ ಪದ್ಧತಿ, ವಸಾಹತುಶಾಹಿ ಆಳ್ವಿಕೆಯ ದುಷ್ಪರಿಣಾಮ, ಇದರ ಫಲವಾಗಿ ಕನ್ನಡದಂತಹ ಸ್ಥಳೀಯ ಭಾಷೆಗಳನ್ನಾಡುವವರು ಬೆಳೆಸಿಕೊಂಡ ಕೀಳರಿಮೆ ಮುಂತಾದ ಹತ್ತಾರು ಐತಿಹಾಸಿಕ ಕಾರಣಗಳಿವೆ. ಹೀಗಾಗಿಯೇ ಆಫ್ರಿಕಾದ ಖ್ಯಾತ ಲೇಖಕ ಗೂಗಿ ವಾ ಥಿಯಾಂಗ್, ‘ಬ್ರಿಟಿಷರ ಆಳ್ವಿಕೆಯಲ್ಲಿದ್ದ ದೇಶಗಳ ಜನರು ಮಾನಸಿಕವಾಗಿ ಕರಾಳ ವಸಾಹತುಶಾಹಿ ಚಕ್ರವ್ಯೂಹದಿಂದ ಹೊರಬರಬೇಕು’ ಎಂದಿದ್ದು, ಇದನ್ನು ‘ಡಿಕಲೋನೈಸಿಂಗ್ ದಿ ಮೈಂಡ್’ ಎಂದು ಕರೆದಿದ್ದಾನೆ.

ಇಸ್ರೇಲ್, ಜರ್ಮನಿ, ಫ್ರಾನ್ಸ್, ಜಪಾನ್, ಚೀನಾ, ರಷ್ಯಾ ಮುಂತಾದ ದೇಶಗಳಲ್ಲಿ ಎಂಜಿನಿಯರಿಂಗ್ ಸೇರಿದಂತೆ ಉನ್ನತ ಶಿಕ್ಷಣದ ಯಾವೊಂದು ವಲಯದಲ್ಲೂ ಇಂಗ್ಲಿಷ್‌ನಲ್ಲಿ ಬೋಧನೆಯೇನೂ ಇಲ್ಲ. ಈ ದೇಶಗಳಲ್ಲೆಲ್ಲ ಇರುವುದು ಆಯಾ ದೇಶಗಳ ಭಾಷೆಗಳಾದ ಹೀಬ್ರೂ, ಜರ್ಮನ್, ಜಪಾನೀಸ್, ಮ್ಯಾಂಡರಿನ್ ಮತ್ತು ರಷ್ಯನ್ ಭಾಷೆಗಳ ಪಾರಮ್ಯವೇ!


ಕಂಪ್ಯೂಟರಿನ ಕೀಲಿಮಣೆಯಿಂದ ಹಿಡಿದು ಸಾಫ್ಟ್‌ವೇರ್ ರೂಪಿಸುವವರೆಗೂ ಇಲ್ಲೆಲ್ಲ ಅಲ್ಲಲ್ಲಿನ ಭಾಷೆಗಳಿಗೆ ರಾಜಮರ್ಯಾದೆ ಇದೆ. ಇಲ್ಲದೆ ಹೋದರೆ ಅಲ್ಲಿಗೆ ಜಗತ್ತಿನ ಯಾವ ದೈತ್ಯ ಕಂಪನಿಯೂ ಕಾಲಿಡುವುದು ಸಾಧ್ಯವಿಲ್ಲ! ಇದಕ್ಕೆ ಉದಾಹರಣೆಯಾಗಿ ಇಸ್ರೇಲಿನ ‘ಟೆಕ್ನಿಆನ್’ ವಿಶ್ವವಿದ್ಯಾಲಯವು ಮಾಡಿರುವ ಸಾಧನೆಗಳನ್ನು ನೋಡಬಹುದು. ತಮ್ಮ ಭಾಷೆಗಳನ್ನು ಯಾವತ್ತೂ ಬಿಟ್ಟುಕೊಡದ ಈ ದೇಶಗಳು ಆಧುನಿಕ ಜ್ಞಾನಶಾಖೆಗಳಲ್ಲಿ ಮಾಡಿರುವ ಸಾಧನೆಗಳು ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ ‘ಭೂಮವೂ ಭವ್ಯವೂ ಮಹೋನ್ನತವೂ ಆಗಿವೆ’. ಭಾರತ ಒಕ್ಕೂಟ ವ್ಯವಸ್ಥೆ ರಚನೆಯಾಗಿರುವುದೇ ಭಾಷೆಗಳ ಆಧಾರದ ಮೇಲೆ. ನಾವು ಸಂವಿಧಾನದಲ್ಲಿ ಕೆಲವೇ ಭಾಷೆಗಳನ್ನಷ್ಟೇ ಗುರುತಿಸಿರಬಹುದು, ನಿಜ. ಆದರೆ, ದೇಶದಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚು ಭಾಷೆಗಳಿವೆ. ಇದೇ ನಮ್ಮ ಶ್ರೀಮಂತಿಕೆ! ಭಾರತವನ್ನು ಪರಸ್ಪರ ಹೆಣೆದು, ಅಖಂಡವಾಗಿ ಉಳಿಸಿರುವುದೇ ನಮ್ಮ ಭಾಷೆಗಳು ಎನ್ನುವುದು ನಮ್ಮ ದೃಢ ನಂಬಿಕೆಯಾಗಿದೆ.

ಅದರಲ್ಲೂ ಕನ್ನಡಕ್ಕೆ ಇಂಗ್ಲಿಷ್‌ಗಿಂತ ದೊಡ್ಡ ಇತಿಹಾಸವಿದೆ; ದೀರ್ಘ ಪರಂಪರೆ ಇದೆ. ನಮಗೆ 1,500 ವರ್ಷಗಳಿಗೂ ಹೆಚ್ಚಿನ ಲಿಖಿತ ಪರಂಪರೆ ಇದೆ. ನಮ್ಮ ಭಾಷೆಯ ರಚನೆ ಮತ್ತು ವಿನ್ಯಾಸ ಅತ್ಯಂತ ವೈಜ್ಞಾನಿಕವಾಗಿದೆ; ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೋಧನೆಗೆ ನಮ್ಮ ಕನ್ನಡ ನುಡಿಯು ಹೇಳಿಮಾಡಿಸಿದಂತಿದೆ. ಭಾರತೀಯ ಭಾಷಿಕ ಸಂರಚನೆ ಮತ್ತು ಕನ್ನಡದ ಸ್ಥಳೀಯ ಶಕ್ತಿ ಎರಡೂ ನಮ್ಮ ಅಂತಃಸತ್ವವನ್ನು ಹೆಚ್ಚಿಸಿವೆ. ನಾವು ಇದನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು.

ಕನ್ನಡವು ಅನ್ನವನ್ನು ಕೊಡುವ ಭಾಷೆಯಾಗಬೇಕೆಂಬ ಒಂದು ಆಗ್ರಹ ಮೊದಲಿನಿಂದಲೂ ಕೇಳಿಬರುತ್ತಿದೆ. ಇದರಲ್ಲಿ ತಪ್ಪೇನೂ ಇಲ್ಲ. ಹಾಗೆಯೇ ಖ್ಯಾತ ವಿಜ್ಞಾನಿಗಳಾದ ರೊದ್ದಂ ನರಸಿಂಹ, ಸಿ.ಎನ್.ಆರ್. ರಾವ್ ಕೂಡ ಕನ್ನಡದಲ್ಲೇ ವಿಜ್ಞಾನ-ತಂತ್ರಜ್ಞಾನದ ಬೋಧನೆಗೆ ಕರೆ ಕೊಟ್ಟಿದ್ದಾರೆ. ಈಗ ನಾವು ನಾಲ್ಕು ಕಾಲೇಜುಗಳ ಮೂಲಕ ಇಟ್ಟಿರುವ ಹೆಜ್ಜೆಯು ತ್ರಿವಿಕ್ರಮ ಸಾಧನೆಗೆ ಪ್ರೇರಣೆಯಾಗಲಿದೆ ಎನ್ನುವ ಭರವಸೆ ನನಗಿದೆ.

ನಮ್ಮದು ‘ಎಲೈಟ್’ ಕನ್ನಡವಲ್ಲ. ಬದಲಿಗೆ ರೈತರು, ಕೂಲಿ ಕಾರ್ಮಿಕರು, ಬಡವರು, ಬಲ್ಲಿದರು ಎಲ್ಲರನ್ನೂ ಒಳಗೊಳ್ಳುವಂತಹ, ಬೆಳೆಸುವಂತಹ ಮತ್ತು ಭಾರತ ಒಕ್ಕೂಟ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಕನ್ನಡಪರ ಬದ್ಧತೆಯಾಗಿದೆ. ಎಂಜಿನಿಯರಿಂಗ್ ಶಿಕ್ಷಣವನ್ನು ಈಗ ಕನ್ನಡದಲ್ಲಿ ಆಗುಮಾಡಿರುವುದು ಒಂದು ದೊಡ್ಡ ಮೈಲಿಗಲ್ಲು!

ಲೇಖಕ:ಕರ್ನಾಟಕದ ಉನ್ನತ ಶಿಕ್ಷಣ ಸಚಿವ



> ನಮ್ಮದು ‘ಎಲೈಟ್’ ಕನ್ನಡವಲ್ಲ. ಬದಲಿಗೆ ರೈತರು, ಕೂಲಿ ಕಾರ್ಮಿಕರು, ಬಡವರು, ಬಲ್ಲಿದರು ಎಲ್ಲರನ್ನೂ ಒಳಗೊಳ್ಳುವಂತಹ, ಬೆಳೆಸುವಂತಹ ಮತ್ತು ಭಾರತ ಒಕ್ಕೂಟ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಕನ್ನಡಪರ ಬದ್ಧತೆಯಾಗಿದೆ. ಎಂಜಿನಿಯರಿಂಗ್ ಶಿಕ್ಷಣವನ್ನು ಈಗ ಕನ್ನಡದಲ್ಲಿ ಆಗುಮಾಡಿರುವುದು ಒಂದು ದೊಡ್ಡ ಮೈಲಿಗಲ್ಲು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ ಸೇನೆ ನೇಮಕಾತಿ ಪ್ರಕ್ರಿಯೆಯಲ್ಲಿ ಬದಲಾವಣೆಗಳು ಆಗಿರುವ ಕುರಿತು ಪ್ರಕಟಣೆಯೊಂದು ಜಾಲತಾಣಗಳಲ್ಲಿ ಹರಿದಾಡಿತ್ತು. 2022ರಲ್ಲಿ ನಡೆಯುವ ಸೇನಾ ಸಿಬ್ಬಂದಿ ನೇಮಕಾತಿಯಲ್ಲಿ ಅಭ್ಯರ್ಥಿಗಳ ವಯೋಮಿತಿಯಲ್ಲಿ ಬದಲಾವಣೆಗಳನ್ನು ಸರ್ಕಾರ ಮಾಡಿದೆ. ಈ ಬಾರಿಯ ನೇಮಕಾತಿಯಲ್ಲಿ ಅಭ್ಯರ್ಥಿಗಳಿಗೆ ಎರಡು ವರ್ಷಗಳ ರಿಯಾಯಿತಿ ನೀಡಲಾಗಿದೆ ಎಂದು ಅದರಲ್ಲಿ ಸೂಚಿಸಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಚಿತ್ರವೊಂದನ್ನು ಕೂಡಾ ಪೋಸ್ಟ್ ಮಾಡಲಾಗಿತ್ತು.



✓ ಈ ಮಾಹಿತಿ ಸುಳ್ಳು ಎಂದು ಸರ್ಕಾರವೇ ಹೇಳಿದೆ. ಈ ಪ್ರಕಟಣೆಯ ಸ್ಕ್ರೀನ್‌ಶಾಟ್ ಸಮೇತ ಟ್ವೀಟ್ ಮಾಡಿರುವ ಪಿಐಬಿ ಫ್ಯಾಕ್ಟ್ ಚೆಕ್, ಸೇನಾ ನೇಮಕಾತಿ ಪ್ರಕ್ರಿಯೆಯಲ್ಲಿ ವಯೋಮಿತಿ ಸಂಬಂಧಿಸಿದಂತೆ ಯಾವುದೇ ಬದಲಾವಣೆ ಆಗಿಲ್ಲ. ಬದಲಾವಣೆ ಆಗಿದೆ ಎಂಬ ಮಾಹಿತಿಯನ್ನು ಅಭ್ಯರ್ಥಿಗಳು ನಂಬಬಾರದು. ಸೇನಾ ನೇಮಕಾತಿಗಾಗಿಯೇ ಇರುವ ಅಧಿಕೃತ ವೆಬ್‌ಸೈಟ್ joinindianarmy.nic.in. ನಲ್ಲಿ ನೇಮಕಾತಿ ಮಾಹಿತಿಗಳು ಲಭ್ಯವಿವೆ ಎಂದು ಪಿಐಬಿ ಫ್ಯಾಕ್ಟ್ ಚೆಕ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಮಿತದಲ್ಲಿ ಅಮಿತ

ಅಂಬುಧಿಯ ಮಡಕೆಯಲಿ, ಹೊಂಬಿಸಿಲ ಕಿಟಕಿಯಲಿ |
ತುಂಬಿಕೊಳ್ಳುವ ಬಡವನೈಶ್ವರ್ಯದಂತೆ ||
ಬಿಂಬದೊಳಗಮಿತ ಸತ್ತ್ವವ ಪಿಡಿದಿಡುವ ಭಕ್ತಿ |
ಯಿಂಬು ಕಿಂಚಿನ್ಮತಿಗೆ – ಮಂಕುತಿಮ್ಮ || 491 ||

ಪದ-ಅರ್ಥ: ಅಂಬುಧಿ = ಸಮುದ್ರ, ಬಿಂಬದೊಳಗಮಿತ = ಬಿಂಬದೊಳಗೆ (ವಿಗ್ರಹದೊಳಗೆ) + ಅಮಿತ (ಅನಂತವಾದ), ಪಿಡಿದಿಡುವ = ಹಿಡಿದು ಇಡುವ, ಇಂಬು = ಅವಕಾಶ, ಸಾಧ್ಯತೆ, ಕಿಂಚಿನ್ಮತಿ = ಸ್ವಲ್ಪ ಬುದ್ಧಿ.

ವಾಚ್ಯಾರ್ಥ: ಸಮುದ್ರವನ್ನು ಮಡಕೆಯಲ್ಲಿ, ಸೂರ್ಯನ ಬಿಸಿಲನ್ನೆಲ್ಲ ಕಿಟಕಿಯಲ್ಲಿ, ತುಂಬಿಕೊಳ್ಳಬಯಸುವ ಬಡವನ ಐಶ್ವರ್ಯದಂತೆ, ವಿಗ್ರಹದಲ್ಲಿ ಅಪಾರ ಭಗವದ್ ಶಕ್ತಿಯನ್ನು ಹಿಡಿದಿಡುವ ಭಕ್ತಿಯೇ ಮಿತವಾದ ಬುದ್ಧಿಗೆ ಇರುವ ಅವಕಾಶ.

ವಿವರಣೆ: ಸ್ವಾಮಿ ವಿವೇಕಾನಂದರು ಭಾರತದಲ್ಲೆಲ್ಲ ಪ್ರವಾಸ ಮಾಡುವಾಗ ರಾಜಸ್ಥಾನದ ಅಳ್ವಾರ್ ರಾಜ್ಯಕ್ಕೆ ಬಂದರು. ಅಲ್ಲಿಯ ರಾಜ ಮಂಗಲಸಿಂಗ್ ಅವರಿಗೆ ಆದರದ ಸ್ವಾಗತ ನೀಡಿದ. ಅವನೊಡನೆ ಚರ್ಚಿಸುವಾಗ ಆತನಿಗೆ ವಿಗ್ರಹಗಳ ಬಗ್ಗೆ ಗೌರವವಿಲ್ಲವೆಂದು ತಿಳಿಯಿತು. ಆತ, ‘ವಿಗ್ರಹಗಳನ್ನು ಪೂಜಿಸುವುದು ಮೂಢನಂಬಿಕೆ. ನಮ್ಮ ಮುಂದೆಯೇ ಇದ್ದ ಕಲ್ಲನ್ನು, ಮನುಷ್ಯನೇ ಕೆತ್ತಿ ವಿಗ್ರಹಮಾಡಿದಾಗ, ಅದನ್ನು ದೇವರೆಂದು ಪೂಜಿಸುವುದು ಹೇಗೆ? ದೇವರು ನಿರಾಕಾರ, ಅವನನ್ನು ಮೂರ್ತಿಯಲ್ಲಿ ಕಾಣುವುದು ಸರಿಯಲ್ಲ’ ಎಂದ. ಆಗ ವಿವೇಕಾನಂದರು ರಾಜನ ದಿವಾನರನ್ನು ಕರೆದು, ರಾಜನ ಮುಂದೆಯೇ, ಗೋಡೆಯ ಮೇಲೆ ನೇತು ಹಾಕಿದ್ದ ಮಹಾರಾಜರ ತಂದೆಯ ಚಿತ್ರಪಟವನ್ನು ತೋರಿಸಿ, ‘ಅದರ ಮೇಲೆ ನೀವು ಉಗುಳುವಿರಾ?’ ಎಂದು ಕೇಳಿದರು. ದಿವಾನರಿಗೆ ಹೆದರಿಕೆ, ರಾಜನಿಗೆ ಮುಜುಗರ. ಆತ, ‘ಸ್ವಾಮಿ, ಅದು ಮಹಾರಾಜರ ತಂದೆಯ ಚಿತ್ರ. ಹಾಗೆ ಮಾಡುವುದು ಅಪಚಾರ’ ಎಂದ. ಆಗ ವಿವೇಕಾನಂದರು, ‘ಅದು ರಾಜರ ಚಿತ್ರ, ರಾಜರಲ್ಲ. ಅದೊಂದು ನಿರ್ಜೀವ ವಸ್ತು. ಕಾಗದದ ಮೇಲೆ ನಿಮ್ಮ ಮುಂದೆಯೇ ಚಿತ್ರಕಾರ ಬಿಡಿಸಿದ್ದು. ದಿವಾನರು ಉಗುಳುವುದಕ್ಕೆ ಯಾಕೆ ಹಿಂಜರಿದರೆಂದರೆ, ಆ ಚಿತ್ರ ನಿಮ್ಮ ತಂದೆಯವರನ್ನು ನೆನಪಿಸುತ್ತದೆ, ಗೌರವವನ್ನು ನೆನಪಿಗೆ ತರುತ್ತದೆ. ಚಿತ್ರ ಮಹಾರಾಜರ ರೂಪವೇ. ಆದ್ದರಿಂದ ಅದನ್ನು ಪೂಜಿಸುತ್ತೀರಿ’ ಎಂದರು. ರಾಜನಿಗೆ ವಿಗ್ರಹಾರಾಧನೆಯಲ್ಲಿ ನಂಬಿಕೆ ಬಂದಿತು.

ಶ್ವೇತಾಶ್ವತರ ಉಪನಿಷತ್ತು ದೇವರನ್ನು, ‘ಏಕೋ ದೇವಃ ಸರ್ವ ಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾತ್ಮರಾತ್ಮಾ’ ಎಂದು ವರ್ಣಿಸುತ್ತದೆ. ಹಾಗೆಂದರೆ ಒಬ್ಬನೇ ದೇವರು ಸರ್ವ ಜೀವಜಂತುಗಳಲ್ಲಿ ನೆಲೆಸಿದ್ದಾನೆ. ರಹಸ್ಯವಾಗಿ ಎಲ್ಲದರಲ್ಲಿ ಆತ್ಮರೂಪದಲ್ಲಿದ್ದಾನೆ. ದೇವರಿಗೆ ಒಂದೇ ಎಂಬ ಆಕಾರವಿಲ್ಲ, ಬಣ್ಣವಿಲ್ಲ. ಎಲ್ಲ ಆಕಾರಗಳೂ ಅವನವೇ. ಲೋಕದ ಜನ ಅದನ್ನು ಕಾಣಲರಿಯರು, ರುಚಿಸಲರಿಯರು, ಮುಟ್ಟಲರಿಯರು. ಆದರೆ ಆ ರೂಪ ಅನುಭವಜನ್ಯವಾಗಬೇಕಾದರೆ, ಸಾಧಕನಿಗೊಂದು ರೂಪದ ಚಿಹ್ನೆ ಬೇಕು. ಭಕ್ತಿ ಹೆಪ್ಪುಗಟ್ಟಲು ವಿಗ್ರಹದ ಆಕಾರ ಅಗತ್ಯವೆನ್ನಿಸಿತು. ದೇಶದ ಧ್ವಜ ಇಡೀ ದೇಶವನ್ನು ಪ್ರತಿನಿಧಿಸುವಂತೆ ವಿಗ್ರಹ, ಅನಂತವಾದ, ನಿರ್ಗುಣವಾದ, ಸರ್ವವ್ಯಾಪಿಯಾದ ತತ್ವವನ್ನು ಭಕ್ತನ ಮಿತವಾದ ಬುದ್ಧಿಗೆ ತಲುಪಿಸುವ ಸಾಧನ. ಹೀಗೆ ಅಮಿತವಾದ ಶಕ್ತಿಯನ್ನು ಮಿತವಾದ ಬುದ್ಧಿಯ ಮನುಷ್ಯನಿಗೆ ತೋರುವ ಸಂಕೇತವಾದ ಬಿಂಬ, ಭಕ್ತಿಗೆ ಕಾರಣವಾಗುತ್ತದೆ. ಇದನ್ನು ಕಗ್ಗ ಕೆಲವು ಸುಂದರ ಉಪಮೆಗಳೊಂದಿಗೆ ವರ್ಣಿಸುತ್ತದೆ. ಸಮುದ್ರವನ್ನು ಮಡಕೆಯಲ್ಲಿ ತುಂಬಿಸಿಕೊಂಡು, ಬಿಸಿಲುರಾಶಿಯನ್ನು ಕಿಟಕಿಯೊಳಗೆ ತೂರಿಸಿಕೊಂಡು, ಸಂತೋಷಪಡುವ ಬಡವನಂತೆ, ವಿಗ್ರಹದಲ್ಲಿ ಅನಂತವನ್ನು ಕಾಣುವ ಅವಕಾಶ ಭಕ್ತನಿಗೆ, ಸಾಧಕನಿಗೆ. ❖

ದಿನ ಭವಿಷ್ಯ

ಶುಕ್ರವಾರ ನವೆಂಬರ್ 5, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಸ್ವಾತಿ ಪ್ರತಿಪದೆ ಗಂ. 46-47 (ರಾ. 1-04) ಶುಕ್ರವಾರ ನಿತ್ಯ ನಕ್ಷತ್ರ ಸ್ವಾತಿ ಗಂ. 0-45 (ಬೆ. 6-39) ಉಪರಿ ವಿಶಾಖಾ ಗಂ. 56-8 (ಬೆ.ಝಾ. 5-06) ಆಯುಃ ನಾಮ ಯೋಗ ಗಂ. 8-0 ಕಿಮಸ್ತುಘ್ನ ಕರಣ ಗಂ. 19-29 ವಿಷ ಗಂ. 13-51 ಅಮೃತ ಗಂ 36-19 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-18 ಸೂರ್ಯಾಸ್ತ: 5-48 ಅದೃಷ್ಟ ಸಂಖ್ಯೆ 14

ಮೇಷ: ಅನಿರೀಕ್ಷಿತ ಧನಾಗಮನದ ಸಾಧ್ಯತೆ. ಮಕ್ಕಳಿಂದ ಶುಭಸಮಾಚಾರ ಕೇಳಲಿದ್ದೀರಿ. ಉತ್ತಮ ಆರೋಗ್ಯವನ್ನು ಹೊಂದಿರುವಿರಿ. ಮಾನಸಿಕ ನೆಮ್ಮದಿಯು ನಿಮ್ಮದಾಗಲಿದೆ.

ವೃಷಭ: ಕೆಲಸದಲ್ಲಿ ಗೌರವ, ಮನ್ನಣೆ. ನಿಂತುಹೋಗಿರುವ ಯೋಜನೆಗಳು ಪುನಃ ಚಾಲನೆ ಪಡೆದುಕೊಳ್ಳಲಿವೆ. ಸಂತಸದ ವಾತಾವರಣ ನೆಲೆಸಲಿದೆ.

ಮಿಥುನ: ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ. ನೆನೆದ ಕಾರ್ಯಗಳು ಸಿದ್ಧಿಯಾಗುವ ದಿನವಾಗಿದೆ. ಸಹೋದರರಿಗೆ ಅಪಘಾತದ ಬಗ್ಗೆ ಎಚ್ಚರಿಕೆ ಅಗತ್ಯ. ಸ್ವಾಭಿಮಾನ ಕಾಪಾಡಿಕೊಳ್ಳಬಹುದು.

ಕರ್ಕಾಟಕ: ಅಪವಾದದಿಂದ ಪಾರಾಗಲಿದ್ದೀರಿ. ಪ್ರಯಾಣವು ಶುಭಕರವಾಗಿ ಪರಿಣಮಿಸಲಿದೆ. ಮಕ್ಕಳ ಬಗ್ಗೆ ಸ್ವಲ್ಪಮಟ್ಟಿನ ಕಾಳಜಿ ಅಗತ್ಯ. ಆರ್ಥಿಕ ಸ್ಥಿತಿ ಎಂದಿನಂತೆ ಮುಂದುವರಿಯಲಿದೆ.

ಸಿಂಹ: ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದಾದರೂ ವಿಷ ಜಂತುಗಳ ಬಗ್ಗೆ ಎಚ್ಚರಿಕೆಯಿಂದಿರುವುದು ಒಳಿತು. ವಿನಾಕಾರಣ ಅಧಿಕ ಖರ್ಚು ಸಂಭವಿಸುವ ಸಾಧ್ಯತೆ ಕಂಡುಬರುವುದು.

ಕನ್ಯಾ: ಕೆಲಸದಲ್ಲಿ ಕಿರಿಕಿರಿಯುಂಟಾಗಲಿದೆ. ಯಾರಮೇಲೂ ಅತಿಯಾದ ನಂಬಿಕೆ ಸಲ್ಲದು. ಮನೆ ಮಂದಿಯೊಂದಿಗೆ ದೂರದ ಬಂಧುಗಳ ದರ್ಶನ ಯೋಗ ಕಂಡುಬರುತ್ತಿದೆ.

ತುಲಾ: ಸಾಹಿತಿ, ಬರಹಗಾರರಿಗೆ ಶುಭದಾಯಕವಾದ ದಿನ. ಅತಿಯಾದ ಕಾರ್ಯಬಾಹುಳ್ಯದಿಂದಾಗಿ ಮಾನಸಿಕ ಗೊಂದಲ. ಆಯ್ಕೆಯ ಮೂಲಕ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡಲ್ಲಿ ಸಫಲತೆ.

ವೃಶ್ಚಿಕ: ಹೊಸ ಹೊಸ ಯೋಜನೆಗಳನ್ನು ಪ್ರಾರಂಭಿಸುವುದಕ್ಕೂ ಮುನ್ನ ತಜ್ಞರ ಸಲಹೆ ಪಡೆದುಕೊಳ್ಳುವುದು ಉತ್ತಮ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿಶೇಷ ವೆಚ್ಚ ಭರಿಸಬೇಕಾದೀತು.

ಧನು: ಕೋರ್ಟ್ ಕಚೇರಿಗೆ ಸಂಬಂಧಿಸಿದ ಕೆಲಸಕಾರ್ಯಗಳು ಯಶಸ್ವಿಯಾಗಲಿವೆ. ಅನಾರೋಗ್ಯ ಪೀಡಿತರು ಆರೋಗ್ಯದಲ್ಲಿ ಪ್ರಗತಿಯನ್ನು ಕಾಣುವಿರಿ. ನೆಮ್ಮದಿಯನ್ನು ಕಾಣುವಿರಿ.

ಮಕರ: ಆರಕ್ಷಕರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳು, ಉಪನ್ಯಾಸಕ ವೃತ್ತಿಯಲ್ಲಿರುವವರಿಗೆ ಕಾರ್ಯಕ್ಷೇತ್ರದಲ್ಲಿ ಅನುಕೂಲಕರ ವಾತಾವರಣ. ಉತ್ತಮ ಆರೋಗ್ಯ ಭಾಗ್ಯ.

ಕುಂಭ: ಮನೆಯ ನಿರ್ಮಾಣ ಹಾಗೂ ಇತರ ಕೆಲಸಗಳಲ್ಲಿ ಪ್ರಗತಿ. ವಾಹನ ಖರೀದಿಗಾಗಿ ಪ್ರಶಸ್ತ ದಿನವಾಗಿರುವುದು. ಪಾಲುದಾರಿಕೆ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಬಿರುಕು.

ಮೀನ: ಕೆಲಸ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಕಂಡುಬಂದರೂ ಸಹೋದ್ಯೋಗಿಗಳ ಸಹಕಾರದಿಂದ ನೆಮ್ಮದಿ ಮೂಡಲಿದೆ. ಸಂಗಾತಿಯ ಸಾಂತ್ವನದ ಮಾತುಗಳಿಂದಾಗಿ ಸಮಾಧಾನ.


ನಿಮ್ಮ ಜನ್ಮದಿನ 5-ನವೆಂಬರ್: ಈದಿನ ಅತ್ಯಂತ ಶುಭ ದಿನವಾಗಿದೆ. ಈ ದಿನ ಜನ್ಮವಾದವರಿಗೆ ಮಾನಸಿಕ ಸಂತೋಷವು ಸದಾ ನೆಲೆಸಿರುವುದು. ನಿರಾಯಾಸವಾಗಿ ಕೆಲಸ ಕಾರ್ಯಗಳನ್ನು ಚಮತ್ಕಾರವೆಂಬಂತೆ ನಿಭಾಯಿಸಲಿದ್ದೀರಿ. ಸಾಂಸಾರಿಕ ಜೀವನದಲ್ಲಿ ಉತ್ತಮ ಪ್ರತಿಕ್ರಿಯೆ. ವಿದ್ಯಾರ್ಥಿಗಳಿಗೆ ಮಾನಸಿಕ ಗೊಂದಲ ಸಾಧ್ಯತೆ.

ಪದಬಂಧ 4769

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಒಡಹುಟ್ಟಿದವರಲ್ಲಿ ಹಿರಿಯ (2)
4.ಇದೊಂದು ಬಗೆಯ ಜಲಚರ (2)
6.ಬೆಲೆಯುಳ್ಳ ಮಣಿಗಳನ್ನೊಳಗೊಂಡಿರುವ ಸಮುದ್ರ (4)
7.ಗಳ ಹಿಡಿದಿರುವ ಜೋಡಿ! (3)
9.ಒಳ್ಳೆಯ ಅವಕಾಶವಿದು (3)
10.ಅಸಲಿಯಲ್ಲ ಇದು ಕೃತಕ! (3)
12.ಪರಿವರ್ತನೆಯ ಕಾಲ (4)
13.ಅಧಮನ ಹತ್ತಿರವಿರುವ ಹಣ (2)
14.ಹಾವುಗೆ ಹತ್ತಿರವಿರುವ ಸರ್ಪ (2)

ಮೇಲಿಂದ ಕೆಳಕ್ಕೆ
1.ಬಣ್ಣನೆಯಲ್ಲಿರುವ ವರ್ಣ (2)
2.ಕಳ್ಳತನ ಮಾಡುವವಳು (2)
3.ಕಡಿಮೆ ಆಯುಸ್ಸುಳ್ಳವನು (3)
4.ಮನುಷ್ಯರನ್ನು ತಿನ್ನುವ ಪ್ರಾಣಿ (5)
5.ನಾರಿಕೇಳದ ಬಳಿಯಿರುವ ಕೊಳವೆ (2)
6.ನೆತ್ತರು ಪ್ರವಹಿಸುವಿಕೆ (5)
8.ಆನೆಯ ನಡಿಗೆ (5)
10.ಭೂಪಟ ಇಲ್ಲಿದೆ (2)
11.ಲೀಲಾಜಾಲವಾಗಿ ನಡೆದ ಏಲಂ (3)
13.ವಾಡಿಕೆಯ ಮತೀಯ ಅನುಷ್ಠಾನ (2)
14.ದೋಣಿಯ ಕಂಬಕ್ಕೆ ಕಟ್ಟುವ ಪಟ (2)



4768ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಮಂಜಸ 3.ಮಜಕೂರು 5.ರದನ 6.ವ್ಯವಹಾರ 7.ಪಶ್ಚಾತ್ತಾಪ 9.ನಪುಂಸಕ 11.ತರಬೇತಿ 13.ನಾಪಿತ 15.ಸುಡುಗಾಡು 16.ಮಹೋತ್ಸಾಹ

ಮೇಲಿಂದ ಕೆಳಕ್ಕೆ: 1.ಸರ್ಗ 2ಸರದಾರ 3.ಮನಸ್ತಾಪ 4.ರುಜು 6.ವ್ಯಸನ 8.ಪದಾತಿ 10.ಕರುನಾಡು 11.ತರತಮ 12.ಮಾಸು 14.ದೇಹ

ಸುಡೊಕು 5155

3					8	2		6
			4	9				3
		8			2		5	
	3			4				1
		1	7		5	6	2	
	6			1				
6			5	2		1		7
	1				4		6	
9		5		7		3		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5154 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

2016ರ ಕಾರ್ಯಾಚರಣೆಯ ನೆನಪು: ಕೆಚ್ಚಿನ ಬಗ್ಗೆ ಹೆಮ್ಮೆ ಎಂದ ಪ್ರಧಾನಿ

‘ನಿರ್ದಿಷ್ಟ ದಾಳಿ: ಉಸ್ತುವಾರಿ ವಹಿಸಿದ್ದೆ’

ಪ್ರಜಾವಾಣಿ ವಾರ್ತೆ



ನೌಶೇರಾ ಸೇನಾನೆಲೆಯಲ್ಲಿ ಯೋಧರಿಗೆ ಸಿಹಿ ತಿನ್ನಿಸಿದ ಪ್ರಧಾನಿ ನರೇಂದ್ರ ಮೋದಿ —ಪಿಟಿಐ ಚಿತ್ರ

ಮುಖ್ಯಾಂಶಗಳು

- ಪ್ರಧಾನಿ ಸಂಚಾರಕ್ಕೆ ಕನಿಷ್ಠ ಭದ್ರತೆಯನ್ನು ಮಾತ್ರ ನಿಯೋಜಿಸಲಾಗಿತ್ತು
- ಜನರಿಗೆ ಅನನುಕೂಲ ತಪ್ಪಿಸಲು ಸಂಚಾರ ಮಾರ್ಗ ನಿಗದಿ ಮಾಡಿರಲಿಲ್ಲ

ಶ್ರೀನಗರ: ಕೊನೆಯ ಯೋಧ ಸುರಕ್ಷಿತವಾಗಿ ಹಿಂದಿರುಗುವವರೆಗೂ 2016ರಲ್ಲಿ ನಡೆದ ನಿರ್ದಿಷ್ಟ ದಾಳಿಯ ಉಸ್ತುವಾರಿಯನ್ನು ತಾವೇ ನೋಡಿಕೊಂಡಿದ್ದಾಗಿ ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದ್ದಾರೆ.

2016ರ ಸೆಪ್ಟೆಂಬರ್ 29ರಂದು ನಿಯಂತ್ರಣ ರೇಖೆಯ ಆಚೆಗೆ ನಡೆಸಿದ ನಿರ್ದಿಷ್ಟ ದಾಳಿಯು ಭಾರತೀಯ ಸೇನೆಯ ಕೆಚ್ಚು ಮತ್ತು ಸಾಮರ್ಥ್ಯವನ್ನು ತೋರುತ್ತದೆ ಎಂದು ಪ್ರಧಾನಿ ಅಭಿಪ್ರಾಯಪಟ್ಟಿದ್ದಾರೆ. ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಉರಿ ವಲಯದ ಸೇನಾ ಶಿಬಿರದ ಮೇಲೆ ಉಗ್ರರು ನಡೆಸಿದ ದಾಳಿಗೆ ಪ್ರತಿಯಾಗಿ ಈ ನಿರ್ದಿಷ್ಟ ದಾಳಿ ನಡೆದಿತ್ತು.

‘ನಿರ್ದಿಷ್ಟ ದಾಳಿಯಲ್ಲಿ ಭಾಗಿಯಾದ ಪ್ರತಿಯೊಬ್ಬ ಯೋಧನೂ ಸುರಕ್ಷಿತವಾಗಿ ಹಿಂದಿರುಗಿದ್ದನ್ನು ನಾನು ಖಾತರಿಪಡಿಸಿಕೊಳ್ಳಬೇಕಿತ್ತು. ದಾಳಿ ನಡೆಸಿದ ಎಲ್ಲರೂ ಸುರಕ್ಷಿತವಾಗಿ ತಮ್ಮ ತಮ್ಮ ಘಟಕಗಳಿಗೆ ಹಿಂದಿರುಗುವ ಮೂಲಕ ನಮ್ಮ ಹೆಮ್ಮೆಗೆ ಕಾರಣರಾಗಿದ್ದಾರೆ’ ಎಂದು ಮೋದಿ ಹೇಳಿದ್ದಾರೆ.

‘ಪ್ರಧಾನಿಯಾಗಿ ಅಲ್ಲ, ನಿಮ್ಮ ಕುಟುಂಬದ ಸದಸ್ಯನಾಗಿ ಇಲ್ಲಿಗೆ ಬಂದಿದ್ದೇನೆ. ಕೋಟ್ಯಂತರ ಭಾರತೀಯರ ಆಶೀರ್ವಾದವನ್ನು ನಿಮಗೆ ತಿಳಿಸಲು ಇಲ್ಲಿಗೆ ಬಂದಿದ್ದೇನೆ’ ಎಂದು ಅವರು ಹೇಳಿದರು.

ಭಯೋತ್ಪಾದನೆಯನ್ನು ಹರಡುವ ಹಲವು ಯತ್ನಗಳು ನಿರ್ದಿಷ್ಟ ದಾಳಿಯ ಬಳಿಕ ನಡೆದಿವೆ. ಆದರೆ, ಈ ಎಲ್ಲ ಪ್ರಯತ್ನಗಳಿಗೂ ತಕ್ಕ ಉತ್ತರ ನೀಡಲಾಗಿದೆ. ಶಸ್ತ್ರಾಸ್ತ್ರಕ್ಕೆ ಭಾರತವು ವಿದೇಶವನ್ನು ಅವಲಂಬಿಸಿದ್ದ ದಿನಗಳಿದ್ದವು. ಶಸ್ತ್ರಾಸ್ತ್ರಗಳ ಬಿಡಿಭಾಗಗಳು ವಿದೇಶದಿಂದ ಬರುವುದಕ್ಕೆ ಯೋಧರು ಕಾಯಬೇಕಿತ್ತು. ಈ ಬಿಡಿಭಾಗಗಳು ತಲುಪುವುದಕ್ಕೆ ವರ್ಷಗಟ್ಟಲೆ ಕಾಯಬೇಕಿತ್ತು. ಆದರೆ, ಈಗ ರಕ್ಷಣಾ ಬಜೆಟ್‌ನ ಶೇ 65ರಷ್ಟು ಮೊತ್ತವನ್ನು ದೇಶದೊಳಗೇ ವೆಚ್ಚ ಮಾಡಲಾಗುತ್ತಿದೆ’ ಎಂದು ಅವರು ವಿವರಿಸಿದರು.

ಬದಲಾಗುತ್ತಿರುವ ಜಗತ್ತು ಮತ್ತು ಯುದ್ಧ ವಿಧಾನಗಳಿಗೆ ಅನುಗುಣವಾಗಿ ಭಾರತವು ತನ್ನ ಸೇನಾ ಸಾಮರ್ಥ್ಯವನ್ನು ಹೆಚ್ಚಿಸಬೇಕು ಎಂದು ಮೋದಿ ಹೇಳಿದ್ದಾರೆ.

‘ಅರ್ಜುನ ಟ್ಯಾಂಕ್ ಮತ್ತು ತೇಜಸ್ ಯುದ್ಧ ವಿಮಾನಗಳು ಕೂಡ ಈಗ ದೇಶದಲ್ಲಿ ತಯಾರಾಗುತ್ತಿವೆ. 200ಕ್ಕೂ ಹೆಚ್ಚು ಬಿಡಿಭಾಗಗಳು ಮತ್ತು ಸಾಧನಗಳನ್ನು ಭಾರತದಲ್ಲಿ ತಯಾರಿಸಲಾಗುತ್ತಿದೆ. ಹೀಗೆ, ವಿದೇಶಗಳ ಮೇಲಿನ ಅವಲಂಬನೆಯನ್ನು ತಗ್ಗಿಸಿದ್ದೇವೆ’ ಎಂದು ಅವರು ಹೇಳಿದರು.

ದೇಶದ ಸುರಕ್ಷತೆಯ ವಿಚಾರದಲ್ಲಿ ಮಹಿಳೆಯರು ವಹಿಸುತ್ತಿರುವ ಪಾತ್ರವನ್ನು ಮೋದಿ ಶ್ಲಾಘಿಸಿದರು. ಮಹಿಳೆಯರ ಪಾತ್ರವು ಈಗ ಹೊಸ ಎತ್ತರಕ್ಕೆ ಏರಿದೆ ಎಂದರು. ‘ರಕ್ಷಣಾ ಪಡೆಗಳಲ್ಲಿ ನಮ್ಮ ಹೆಣ್ಣುಮಕ್ಕಳು ಹೊಸ ಎತ್ತರಕ್ಕೆ ಏರಿದ್ದಾರೆ. ದೇಶದ ರಕ್ಷಣೆಯಲ್ಲಿ ಅವರು ವಹಿಸುತ್ತಿರುವ ಪಾತ್ರವು ಎಣಿಕೆಗೆ ನಿಲುಕದ್ದು’ ಎಂದು ಮೋದಿ ಹೇಳಿದರು.

ಯೋಧರ ಜತೆ ದೀಪಾವಳಿ ಸಂಪ್ರದಾಯ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಜಮ್ಮು ಮತ್ತು ಕಾಶ್ಮೀರಕ್ಕೆ ತೆರಳಿ ಯೋಧರ ಜೊತೆ ದೀಪಾವಳಿ ಆಚರಿಸಿದರು.

ಪ್ರಧಾನಿ ಆಗಿ ಅಧಿಕಾರ ಸ್ವೀಕರಿಸಿದಾಗಿನಿಂದಲೂ ಅವರು ದೀಪಾವಳಿಯನ್ನು ಗಡಿ ಪ್ರದೇಶಕ್ಕೆ ತೆರಳಿ ಸೈನಿಕರ ಜೊತೆ ಆಚರಿಸುವ ಸಂಪ್ರದಾಯ ಹಾಕಿಕೊಂಡಿದ್ದಾರೆ. ಈ ಬಾರಿ ಗಡಿ ಜಿಲ್ಲೆಯಾದ ರಜೌರಿಯ ನೌಶೇರಾ ವಲಯದದಲ್ಲಿ ದೀಪಾವಳಿ ಆಚರಿಸಿದರು. 2014ರಲ್ಲಿ ಮೊದಲ ಬಾರಿ ಸಿಯಾಚಿನ್ ಪ್ರದೇಶದಲ್ಲಿ ದೀಪಾವಳಿ ಆಚರಿಸಿದ್ದರು.

ನೌಶೇರಾದ ಸೇನಾ ನೆಲೆಯಲ್ಲಿ ಅವರು ದೀಪಾವಳಿ ಆಚರಿಸಿದ ಫೋಟೊಗಳನ್ನು ಅಧಿಕೃತ ಮೂಲಗಳು ಹಂಚಿಕೊಂಡಿವೆ. ರಜೌರಿ ಜಿಲ್ಲೆಯಲ್ಲಿ ಮೋದಿ ಅವರು ದೀಪಾವಳಿ ಆಚರಿಸುತ್ತಿರುವುದು ಇದು ಎರಡನೇ ಬಾರಿ.

ಮೋದಿ ಅವರನ್ನು ಸೇನಾ ಮುಖ್ಯಸ್ಥ ಎಂ.ಎಂ. ನರವಣೆ ಅವರು ವೈಮಾನಿಕ ವೀಕ್ಷಣೆಗೆ ಕರೆದುಕೊಂಡು ಹೋದರು. ಜಮ್ಮುವಿನ ಗಡಿ ನಿಯಂತ್ರಣ ರೇಖೆ ಉದ್ದಕ್ಕೂ ಒದಗಿಸಲಾಗಿರುವ ಭದ್ರತೆ ಕುರಿತು ಮೋದಿ ಅವರಿಗೆ ವಿವರಣೆ ನೀಡಿದರು.

ಮೋದಿ ಅವರು ತಮ್ಮ ನಿವಾಸದಿಂದ ಹೊರಟಾಗ, ಸ್ಥಳದಲ್ಲಿ ಕನಿಷ್ಠ ಮಟ್ಟದ ಭದ್ರತೆ ಒದಗಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೂಂಛ್ ಮತ್ತು ರಜೌರಿ ಪ್ರದೇಶದ ಅರಣ್ಯ ವಲಯದಲ್ಲಿ ಭಯೋತ್ಪಾದಕರ ವಿರುದ್ಧ ಸೇನಾ ಕಾರ್ಯಾಚರಣೆ ನಡೆಯುತ್ತಿದೆ. ಈ ಕಾರ್ಯಾಚರಣೆ 26ನೇ ದಿನಕ್ಕೆ ಕಾಲಿಟ್ಟಿದೆ. ಇತ್ತೀಚಿನ ದಿನಗಳಲ್ಲಿ ನಡೆದ ಸುದೀರ್ಘ ಕಾರ್ಯಾಚರಣೆ ಇದು ಎನ್ನಲಾಗಿದೆ.

ಭಾರತ–ಪಾಕ್ ಯೋಧರ ಸಿಹಿ ವಿನಿಮಯ

ಕಾಶ್ಮೀರದಲ್ಲಿ ಗಡಿ ನಿಯಂತ್ರಣ ರೇಖೆ(ಎಲ್‌ಒಸಿ) ಬಳಿ ಭಾರತ ಮತ್ತು ಪಾಕಿಸ್ತಾನದ ಸೇನೆಗಳು ದೀಪಾವಳಿ ಅಂಗವಾಗಿ ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡವು.

ಹಬ್ಬದ ನಿಜವಾದ ಸ್ಫೂರ್ತಿಯಾದ ಶಾಂತಿ ಮತ್ತು ಸೌಹಾರ್ದ, ಕಾರುಣ್ಯವನ್ನು ಉತ್ತೇಜಿಸುವ ಸಲುವಾಗಿ ಉಭಯ ದೇಶಗಳ ಸೇನೆಗಳು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದವು ಎಂದು ಸೇನೆಯ ವಕ್ತಾರರೊಬ್ಬರು ತಿಳಿಸಿದ್ದಾರೆ.

ಕಮನ್ ಅಮನ್ ಸೇತು, ಉರಿ ಮತ್ತು ತಂಗ್ಧಾರ್, ಕುಪ್ವಾರ ಗಡಿಗಳಲ್ಲಿ ಸೇನಾ ಸಿಬ್ಬಂದಿ ಧ್ವಜ ವಂದನೆ ಸಲ್ಲಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಗಡಿ ನಿಯಂತ್ರಣ ರೇಖೆಯಲ್ಲಿ ಉಭಯ ಸೇನೆಗಳು ಕದನವಿರಾಮ ಒಪ್ಪಂದವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವ ಸಂದರ್ಭದಲ್ಲಿಯೇ ಸಿಹಿ ವಿನಿಮಯವೂ ನಡೆದಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಕುಂದಾಪುರ	
ಹಳೆಚಾಲಿ	46000-49500
ಹೊಸಚಾಲಿ	30000-37000
ಪುತ್ತೂರು	
ಕೋಕ	10500-26000
ಹೊಸತು	35500-50000
ರಾಮನಗರ ರೇಷ್ಮೆ	
ಮಿಶ್ರತಳಿ	257-490
ದ್ವಿತಳಿ	289-537

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13000	---	209.30 ಸೆಂಟ್ಸ್
ಎಸಿ	---	---	---	
ಆರ್‌ಪಿ	---	---	6250	ಲಂಡನ್
ಆರ್‌ಸಿ	---	---	3675	2232 ಡಾಲರ್ಸ್

ಬಿಹಾರ: ನಕಲಿ ಮದ್ಯ ಸೇವಿಸಿ 24 ಮಂದಿ ಸಾವು

ಬೆಟ್ಟಿಯಾ / ಗೋಪಾಲ್‌ಗಂಜ್ (ಪಿಟಿಐ): ಬಿಹಾರದ ಗೋಪಾಲಗಂಜ್ ಮತ್ತು ಪಶ್ಚಿಮ ಚಂಪಾರಣ್ ಜಿಲ್ಲೆಗಳಲ್ಲಿ ನಕಲಿ ಮದ್ಯ ಸೇವಿಸಿದ ನಂತರ ಕನಿಷ್ಠ 24 ಜನರು ಸಾವನ್ನಪ್ಪಿದ್ದು, ಹಲವು ಮಂದಿ ಅಸ್ವಸ್ಥರಾಗಿದ್ದಾರೆ. ಕಳೆದ ಎರಡು ದಿನಗಳಿಂದ ಇಲ್ಲಿ ಸಂಪೂರ್ಣ ನಿಷೇಧಾಜ್ಞೆ ಜಾರಿಯಲ್ಲಿದೆ.

ಪಶ್ಚಿಮ ಚಂಪಾರಣ್ ಜಿಲ್ಲೆಯ ಕೇಂದ್ರಸ್ಥಾನ ಬೆಟ್ಟಿಯಾದಲ್ಲಿನ ತೆಲ್ಹುವಾ ಗ್ರಾಮದಲ್ಲಿ ಗುರುವಾರ ಎಂಟು ಜನರು ನಕಲಿ ಮದ್ಯ ಸೇವಿಸಿ ಸಾವನ್ನಪ್ಪಿದ್ದಾರೆ. ಗೋಪಾಲ್‌ಗಂಜ್‌ನಲ್ಲಿ ನಕಲಿ ಮದ್ಯ ಸೇವನೆಯ ಮತ್ತೊಂದು ಘಟನೆಯಲ್ಲಿ ಗುರುವಾರ ಮತ್ತೆ ಆರು ಮಂದಿ ಮೃತಪಟ್ಟಿದ್ದು, ಈ ಜಿಲ್ಲೆಯಲ್ಲಿ ಸಾವಿನ ಸಂಖ್ಯೆ 16ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎರಡೂ ಜಿಲ್ಲೆಗಳ ಜಿಲ್ಲಾ ಆಡಳಿತವು ಇದುವರೆಗೆ ಸಾವಿಗೆ ನಿಖರ ಕಾರಣ ದೃಢಪಡಿಸಿಲ್ಲ. ತೆಲ್ಹುವಾ ನಕಲಿ ಮದ್ಯ ಸೇವನೆ ದುರಂತವು ಕಳೆದ ಹತ್ತು ದಿನಗಳಲ್ಲಿ ಉತ್ತರ ಬಿಹಾರದಲ್ಲಿ ನಡೆದ ಮೂರನೇ ಘಟನೆಯಾಗಿದೆ.

ಗೋಪಾಲಗಂಜ್‌ಗೆ ಧಾವಿಸಿದ ಬಿಹಾರದ ಸಚಿವ ಜನಕ್ ರಾಮ್ ಸುದ್ದಿಗಾರರೊಂದಿಗೆ ಮಾತನಾಡಿ, ‘ನಕಲಿ ಮದ್ಯ ಸೇವಿಸಿ ಸಾವನ್ನಪ್ಪಿದವರ ಮನೆಗಳಿಗೆ ಭೇಟಿ ನೀಡಿದ್ದೇನೆ. ಇದು ಎನ್‌ಡಿಎ ಸರ್ಕಾರದ ಮಾನಹಾನಿ ಮಾಡುವ ಪಿತೂರಿಯಾಗಿರಬಹುದು’ ಎಂದರು.

ಗೋಪಾಲಗಂಜ್ ಪೊಲೀಸ್ ವರಿಷ್ಠಾಧಿಕಾರಿ ಆನಂದ್ ಕುಮಾರ್ ಮಾತನಾಡಿ, ‘ಎರಡು ದಿನಗಳಲ್ಲಿ ಜಿಲ್ಲೆಯ ಮುಹಮ್ಮದ್‌ಪುರ ಗ್ರಾಮದಲ್ಲಿ ಕೆಲವರು ನಿಗೂಢವಾಗಿ ಸಾವನ್ನಪ್ಪಿದ್ದಾರೆ ಶವಪರೀಕ್ಷೆ ವರದಿಗಳು ಇನ್ನಷ್ಟೇ ಬರಬೇಕಿದ್ದು, ಸಾವಿಗೆ ನಿಖರ ಕಾರಣ ತಿಳಿದಿಲ್ಲ. ಮೂರು ತಂಡಗಳು ಪ್ರಕರಣದ ತನಿಖೆ ನಡೆಸುತ್ತಿವೆ. ಕೆಲವರ ಮೃತದೇಹಗಳನ್ನು ಅವರ ಕುಟುಂಬದವರು ಅಂತ್ಯಸಂಸ್ಕಾರ ಮಾಡಿದ್ದಾರೆ’ ಎಂದು ತಿಳಿಸಿದ್ದಾರೆ.

ಪಶ್ಚಿಮ ಚಂಪಾರಣ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಪೇಂದ್ರನಾಥ್ ವರ್ಮಾ, ‘ಇದೊಂದು ಅಸಹಜ ಸಾವಿನ ಪ್ರಕರಣ. ಪ್ರಾಥಮಿಕ ತನಿಖೆಯ ನಂತರವೇ ಹೆಚ್ಚಿನ ಮಾಹಿತಿ ಲಭ್ಯವಾಗಲಿದೆ’ ಎಂದು ಹೇಳಿದ್ದಾರೆ.

ಜಿಲ್ಲಾಡಳಿತಗಳ ಹಿರಿಯ ಅಧಿಕಾರಿಗಳು ಮತ್ತು ಪೊಲೀಸರು ಗ್ರಾಮಗಳಲ್ಲಿ ಮೊಕ್ಕಾಂ ಹೂಡಿದ್ದಾರೆ.

ಕಳೆದ ತಿಂಗಳು, ಮುಜಾಫರ್‌ಪುರದಲ್ಲಿ ಇದೇ ರೀತಿಯ ಘಟನೆಯಲ್ಲಿ ಎಂಟು ಜನರು ಸಾವನ್ನಪ್ಪಿದ್ದರು. ನಿತೀಶ್ ಕುಮಾರ್ ಸರ್ಕಾರವು 2016ರ ಏಪ್ರಿಲ್ 5ರಂದು ರಾಜ್ಯದಲ್ಲಿ ಮದ್ಯದ ತಯಾರಿಕೆ, ವ್ಯಾಪಾರ, ಸಂಗ್ರಹಣೆ, ಸಾಗಣೆ, ಮಾರಾಟ ಮತ್ತು ಸೇವನೆ ನಿಷೇಧಿಸಿದೆ.

ಸ್ವಯಪ್ರೇರಿತ ಪ್ರಕರಣ ದಾಖಲು ಎನ್‌ಜಿಟಿಗೂ ಅಧಿಕಾರ: ಸುಪ್ರೀಂ

ನವದೆಹಲಿ: ಸ್ವಯಂಪ್ರೇರಿತವಾಗಿ ದಾಖಲಿಸಿದ ಪ್ರಕರಣಗಳಲ್ಲಿ ಆದೇಶ ನೀಡುವ ಮೊದಲು ಉಭಯತ್ರರ ವಾದ ಆಲಿಸುವ ಅಧಿಕಾರ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗಿದೆ (ಎನ್‌ಜಿಟಿ) ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್‌ವಿಲ್ಕರ್ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ನ್ಯಾಯಪೀಠವು ಗುರುವಾರ ಪ್ರಕರಣವೊಂದರ ಸಂಬಂಧ ಅ. 7ರಂದು ನೀಡಿದ್ದ ಆದೇಶಕ್ಕೆ ಸಂಬಂಧಿಸಿದಂತೆ ಈ ಸ್ಪಷ್ಟನೆಯನ್ನು ನೀಡಿತು.

ಪರಿಸರಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿ ವಿಚಾರಣೆ ನಡೆಸುವ ಅಧಿಕಾರವಿದೆ. ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ಕಣ್ಗಾವಲು ಸಂಸ್ಥೆಯಾಗಿ ಕೆಲಸ ಮಾಡಬೇಕಾಗಿರುವ ಎನ್‌ಜಿಟಿಯು ದೂರುಗಳಿಗೆ ಕಾಯುತ್ತಾ ಕೂರಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿತು.

ಎನ್‌ಜಿಟಿಯು ಸ್ವಾಯತ್ತ ಸಂಸ್ಥೆಯಾಗಿದೆ. ಕೋರ್ಟ್‌ಗಳಂತೆ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಲಾಗದು ಎಂಬ ವಾದವನ್ನು ತಳ್ಳಿಹಾಕಿತು. ದೂರು ಬರುವವರೆಗೂ ಮೌನಪ್ರೇಕ್ಷಕನಾಗಿ ಕೂರಲಾಗದು ಎಂದೂ ಹೇಳಿತು.

ಅ. 25ರಂದು ದ್ವಿಸದಸ್ಯರ ಪೀಠವು ಗ್ರೇಟರ್ ಮುಂಬೈನಗರಪಾಲಿಕೆಯ ಅರ್ಜಿ ಸೇರಿದಂತೆ ಹಲವು ಅರ್ಜಿಗಳನ್ನು ಎನ್‌ಜಿಟಿಗೆ ವರ್ಗಾಯಿಸಿತ್ತು. ಇವುಗಳನ್ನು ಹೊಸ ಅರ್ಜಿಗಳು ಎಂದು ಪರಿಗಣಿಸುವಂತೆಯೂ ಸೂಚನೆ ನೀಡಿತ್ತು.

ಯುರೋಪಿನಲ್ಲಿ ಕೋವಿಡ್ ಪ್ರಕರಣ ಏರುಗತಿ: ಕಳವಳ

ಬುಡಾಪೆಸ್ಟ್ (ಹಂಗೇರಿ): ಚಳಿಗಾಲ ಆರಂಭವಾಗುತ್ತಿದ್ದಂತೆಯೇ ಯುರೋಪಿನಾದ್ಯಂತ ಹಲವು ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯು ದಾಖಲೆಯ ಮಟ್ಟವನ್ನು ಮುಟ್ಟುತ್ತಿವೆ. ಈ ಹಿನ್ನೆಲೆಯಲ್ಲಿ ಹೊಸ ಅಲೆಯು ತೀವ್ರ ಕಳವಳಕಾರಿಯಾದದ್ದು ಎಂದು ವಿಶ್ವ ಆರೋಗ್ಯ ಸಂಸ್ಥೆಯು ಹೇಳಿದೆ.

ವಿಶೇಷವಾಗಿ ಪೂರ್ವ ಯುರೋಪಿನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಕ್ರಿಸ್‌ಮಸ್ ಹಬ್ಬದ ರಜಾದಿನಗಳಿಗೂ ಮುನ್ನ ಮತ್ತೆ ಹೊಸದಾಗಿ ನಿರ್ಬಂಧ ವಿಧಿಸಬೇಕೇ ಅಥವಾ ಜನರಿಗೆ ಲಸಿಕೆಯನ್ನು ಪಡೆಯುವತ್ತ ಜಾಗೃತಿ ಮೂಡಿಸಬೇಕೆ ಎಂಬ ಚರ್ಚೆಯನ್ನು ಹುಟ್ಟುಹಾಕಿದೆ.

‘ಯುರೋಪಿನ 53 ದೇಶಗಳಲ್ಲಿ ಪ್ರಸ್ತುತ ಕೊರೊನಾ ಸೋಂಕು ವೇಗವಾಗಿ ಹರಡುತ್ತಿದೆ. ಡೆಲ್ಟಾ ರೂಪಾಂತರಿ ವೈರಾಣುಗಳು ವೇಗವಾಗಿ ಹಬ್ಬುತ್ತಿರುವುದರಿಂದ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ’ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯಸ್ಥ ಹ್ಯಾನ್ಸ್ ಕ್ಲೂಗೆ ಹೇಳಿದ್ದಾರೆ.

‘ಚಳಿಗಾಲ ಆರಂಭವಾಗಿರುವ ಕಾರಣ, ಜನರು ಮನೆಯೊಳಗೆ ಉಳಿಯುತ್ತಿರುವುದು ಕೂಡಾ ಸೋಂಕು ಹೆಚ್ಚಳಕ್ಕೆ ಕಾರಣವಾಗಿದೆ. ಯುರೋಪಿನಲ್ಲಿ ಇದೇ ರೀತಿಯ ಪರಿಸ್ಥಿತಿ ಮುಂದುವರಿದಲ್ಲಿ ಫೆಬ್ರುವರಿ ಹೊತ್ತಿಗೆ 5 ಲಕ್ಷ ಜನರು ಸಾವಿಗೀಡಾಗುವ ಸಾಧ್ಯತೆ ಇದೆ’ ಎಂದು ಕ್ಲೂಗೆ ಎಚ್ಚರಿಕೆ ನೀಡಿದ್ದಾರೆ.

ಚೀನಾ ನಿರ್ಬಂಧ: ವಿದೇಶಗಳಿಂದ ಬಂದರು ಪ್ರದೇಶಗಳಲ್ಲಿ ಪ್ರವೇಶಿಸುವವರಿಗೆ ಚೀನಾ ನಿರ್ಬಂಧಗಳನ್ನು ವಿಧಿಸಿದೆ. ಬೀಜಿಂಗ್‌ನಲ್ಲೂ ನಿರ್ಬಂಧಗಳನ್ನು ಬಿಗಿಗೊಳಿಸಲಾಗಿದೆ.

ವಿಶ್ವದ ಮೊದಲ ಕೋವಿಡ್ ಮಾತ್ರೆ: ಬ್ರಿಟನ್ ಅನುಮೋದನೆ

ಲಂಡನ್: ಅಮೆರಿಕ ಮೂಲದ ‘ಮರ್ಕ್ ಅಂಡ್ ರಿಡ್ಜ್‌ಬ್ಯಾಕ್ ಬಯೋಥೆರಪ್ಯೂಟಿಕ್ಸ್’ ಸಂಸ್ಥೆಗಳು ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಕೋವಿಡ್–19 ವೈರಾಣುನಿರೋಧಕ (ಆ್ಯಂಟಿವೈರಲ್) ಮಾತ್ರೆ ‘ಮೊಲ್ನುಪಿರಾವಿರ್’ ಬಳಕೆಗೆ ಗುರುವಾರ ಬ್ರಿಟನ್ ಅನುಮೋದನೆ ನೀಡಿದೆ.

ಕೋವಿಡ್ ಮಾತ್ರೆಯ ಬಳಕೆಗೆ ಅನುಮೋದನೆ ನೀಡಿದ ವಿಶ್ವದ ಮೊದಲ ರಾಷ್ಟ್ರ ಬ್ರಿಟನ್ ಆಗಿದೆ. ಸೌಮ್ಯಪ್ರಮಾಣದ ಕೋವಿಡ್‌ನಿಂದ ಮಧ್ಯಮ ಪ್ರಮಾಣದ ಕೋವಿಡ್ ಲಕ್ಷಣ ಹೊಂದಿರುವವರು ಈ ಮಾತ್ರೆ ಬಳಸಲು ಬ್ರಿಟನ್‌ನ ಮೆಡಿಸಿನ್ಸ್ ಅಂಡ್ ಹೆಲ್ತ್‌ಕೇರ್ ಪ್ರಾಡಕ್ಟ್ಸ್ ರೆಗ್ಯುಲೇಟರಿ ಏಜೆನ್ಸಿ (ಎಂಎಚ್‌ಆರ್‌ಎ) ಶಿಫಾರಸು ಮಾಡಿದೆ.

ಸಿಂಗಪುರ: ಲಸಿಕೆ ಹಾಕಿಸಿಕೊಳ್ಳದೇ ಇದ್ದರೆ ವೇತನರಹಿತ ರಜೆ

ಸಿಂಗಪುರ: ಪ್ರತಿ ನಿತ್ಯ ಕೋವಿಡ್ ಸೋಂಕು ಮತ್ತು ಸಾವಿನ ಪ್ರಕರಣಗಳು ಹೆಚ್ಚುತ್ತಿರುವ ಕುರಿತು ಕಳವಳ ವ್ಯಕ್ತಪಡಿಸಿರುವ ಸಿಂಗಪುರ ಸರ್ಕಾರ, ಲಸಿಕೆ ಹಾಕಿಸಿಕೊಳ್ಳದ ಸರ್ಕಾರಿ ಅಧಿಕಾರಿಗಳನ್ನು ವೇತನ ರಹಿತ ರಜೆ ಮೇಲೆ ಕಳುಹಿಸುವುದಾಗಿ ಎಚ್ಚರಿಕೆ ನೀಡಿದೆ.

ಸಂಪೂರ್ಣ ಲಸಿಕೆ ಪಡೆದ ಉದ್ಯೋಗಿಗಳಿಗೆ ಅಥವಾ ಕೋವಿಡ್ ಸೋಂಕಿನಿಂದ ಚೇತರಿಸಿಕೊಂಡು 270 ದಿನಗಳು ಕಳೆದಿರುವವರಿಗೆ ಮಾತ್ರ ಜನವರಿ 1, 2022ರಿಂದ ಕೆಲಸದ ಸ್ಥಳಗಳಿಗೆ ತೆರಳಲು ಅನುಮತಿ ನೀಡುವುದಾಗಿ ಆರೋಗ್ಯ ಸಚಿವಾಲಯವು ಅಕ್ಟೋಬರ್ 23ರಂದು ಘೋಷಿಸಿತ್ತು.

ಅಹಂ ವಿಸರ್ಜನೆಯ ಸಂದೇಶ

• ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮ ಆಚಾರ–ವಿಚಾರಗಳಲ್ಲಿ ಪುರಾಣಗಳ ಪ್ರಭಾವ ಸ್ಪಷ್ಟವಾಗಿದೆ. ಪುರಾಣ ಎಂದರೆ ವಿಷ್ಣು, ಶಿವ, ನಾರದ, ಗರುಡ, ದೇವಿ – ಮುಂತಾದ ಹದಿನೆಂಟು ಪುರಾಣಗಳು ಎಂಬ ಎಣಿಕೆ ಸಲ್ಲದು. ಇಲ್ಲಿ ‘ಪುರಾಣ’ ಎಂಬುದಕ್ಕೆ ವಿಶಾಲವಾದ ಅರ್ಥವಿದೆ. ದೇಶ–ಕಾಲಾತೀತ ತತ್ತ್ವದ ಸಗುಣವೂ ಸುಂದರವೂ ಶಿವವೂ ಆದ ಅಭಿವ್ಯಕ್ತಿಯೇ ‘ಪುರಾಣ’. ಈ ಅರ್ಥದಲ್ಲಿ ವೇದವೂ ಪುರಾಣವೇ, ರಾಮಾಯಣ–ಮಹಾಭಾರತ–ಭಾಗವತಗಳೂ ಪುರಾಣವೇ, ಗೋವಿನ ಹಾಡು ಕೂಡ ಪುರಾಣವೇ. ‘The mythical narrative is of timeless and placeless validity, true nowever and everywhere’ – ಎಂಬ ಆನಂದ ಕುಮಾರಸ್ವಾಮಿಯವರ ಮಾತು ಇಲ್ಲಿ ಮನನೀಯ. ದೇಶ-ಕಾಲಗಳನ್ನು ಮೀರಿರುವ, ಎಲ್ಲ ಕಾಲದಲ್ಲೂ, ಎಲ್ಲ ದೇಶದಲ್ಲೂ ಸಲ್ಲುವ ’ಕಥನ’ವೇ ಪುರಾಣ. ಪುರಾಣಕ್ಕೆ ಇತಿಹಾಸದ ಹಂಗು ಇರದು; ಅದರ ಗಮನವೆಲ್ಲ ಮೌಲ್ಯಗಳ ಪ್ರತಿಪಾದನೆಯ ಕಡೆಗೆ. ಪುರಾಣವನ್ನು ಇತಿಹಾಸದ ‘ವಸ್ತು’ವನ್ನಾಗಿ ನೋಡುವುದು ನಮ್ಮ ಸಂಕುಚಿತ ಬುದ್ಧಿಯಾದೀತು ಎಂಬ ಎಚ್ಚರಿಕೆ ಬೇಕು. ಪುರಾಣ ಎಂಬುದು ರೂಪಕ, ಸಂಕೇತ; ಅದು ನಮ್ಮ ಅಂತರಂಗಪ್ರಜ್ಞೆಯ ಭಾವಾಭಿವ್ಯಕ್ತಿ. ಹೀಗಲ್ಲದೆ ಅದನ್ನು ಒಂದು ಸುದ್ದಿಯನ್ನಾಗಿಯೋ ವಾರ್ತೆಯನ್ನಾಗಿಯೋ ಅನುವಾದಿಸಿಕೊಂಡು ಸರಳರೇಖಾತ್ಮಕವಾಗಿ ವಿಶ್ಲೇಷಿಸುವುದು ನಾವು ನಮ್ಮ ಸಂಸ್ಕೃತಿಗೆ ಮಾಡುವ ಅಪಚಾರವೇ ಹೌದು. ಪುರಾಣಗಳು ನಿರೂಪಿಸುವುದು ವಾಸ್ತವ ಮಾಹಿತಿಯ ‘ತಥ್ಯ’ಗಳನ್ನಲ್ಲ, ಅವು ನಿರೂಪಿಸುವುದು ತಥ್ಯಗಳ ಗರ್ಭದಲ್ಲಿ ಅಡಗಿರುವ ಸಾರ್ವಕಾಲಿಕ ಸತ್ಯಗಳನ್ನು.

ನಮ್ಮ ಹಬ್ಬಗಳ ಆಚರಣೆಯ ಮೂಲವೂ ಪುರಾಣಲೋಕವೇ, ಸಂಕೇತಗಳ ಜಗತ್ತೇ ಹೌದು; ದೀಪಾವಳಿಯೂ ಇದಕ್ಕೆ ಹೊರತಾಗಿಲ್ಲ. ‘ದೀಪ’ – ಎಂದರೆ ಬೆಳಕು ಎಂಬುದೇ ದೊಡ್ಡ ಸಂಕೇತ. ಕತ್ತಲು–ಬೆಳಕುಗಳ ಸಂಘರ್ಷ; ಬೆಳಕಿನ ಉತ್ಕರ್ಷ – ಈ ಸಂಕೇತಗಳಲ್ಲಿ ನಮ್ಮ ಜೀವನದ ಸತ್ಯ ಶಿವ ಸುಂದರಗಳೇ ಅಡಗಿದೆ. ನರಕ-ಚತುರ್ದಶಿ, ಲಕ್ಷ್ಮೀಪೂಜೆಯ ಆಚರಣೆಗಳಲ್ಲಿ ಪುರಾಣಗಳ ಪ್ರತಿಮೆಗಳು ಸಮೃದ್ಧವಾಗಿವೆ. ಬಲಿಪಾಡ್ಯಮಿಯ ಆಚರಣೆಯಲ್ಲೂ ಪುರಾಣಗಳ ಸಂಕೇತಗಳೇ ಜೀವ-ಪಡೆದುಕೊಂಡಿವೆ.



> ಬಲಿ ಎಂಬುದು ನಮ್ಮೆಲ್ಲರಲ್ಲೂ ಇರಬಹುದಾದ ಅಹಂಕಾರಕ್ಕೆ ಪ್ರತಿಮೆ. ನಮಗೆ ವಾಮನರೂಪದಲ್ಲಿ ತೋರುವುದು ದಿಟವಾಗಿಯೂ ತ್ರಿವಿಕ್ರಮಸ್ವರೂಪವೇ ಹೌದು ಎಂಬ ಅರಿವಿನ ಸಾಕ್ಷಾತ್ಕಾರದಲ್ಲಿಯೇ ನಮ್ಮ ಶಾಶ್ವತಸ್ಥಾನ ನೆಲೆಗೊಂಡಿದೆ.

ಬಲಿಚಕ್ರವರ್ತಿಯ ಕಥೆ ನಮಗೆ ಗೊತ್ತಿದೆ. ಬಲಿ ಒಬ್ಬ ರಾಕ್ಷಸರಾಜ. ಇಂದ್ರನ ಪದವಿಯನ್ನು ಕಿತ್ತುಕೊಂಡ ಅವನು ಚಕ್ರವರ್ತಿಯಾಗಿ ಮೆರೆಯತೊಡಗಿದ. ಅಹಂಕಾರವೂ ಅವನ ಜೊತೆಗೂಡಿತು. ನಾನು ಕೇಳಿದವರೆಲ್ಲರ ಬಯಕೆಗಳೆಲ್ಲವನ್ನೂ ಪೂರೈಸಬಲ್ಲೆ ಎಂಬ ಗರ್ವ ಅವನಲ್ಲಿ ನೆಲೆಗೊಂಡಿತು. ಇಂಥವನನ್ನು ನಿಗ್ರಹಿಸುವುದು ವಿಷ್ಣುವಿಗೆ ಅನಿವಾರ್ಯವಾಯಿತು; ವಿಷ್ಣುವು ವಾಮನರೂಪವನ್ನು ತಳೆದ. ದಾತೃ ನಾನು ಎಂಬ ಅಹಂಕಾರದ ಬೃಹದಾಕಾರದ ಮುಂದೆ ‘ದೇಹಿ’ ಎಂದು ವಾಮನಾಕಾರದಲ್ಲಿ ಆಗ ನಿಂತವನು ಸರ್ವವ್ಯಾಪಕನಾದ ಮಹಾವಿಷ್ಣು! ಏನನ್ನೂ ಕೊಡಬಲ್ಲೆ – ಎಂಬ ಮದದಲ್ಲಿ ಮುಳುಗಿದವನಿಗೆ ತನ್ನಲ್ಲಿಗೆ ಬಂದವರು ಯಾರು, ಏನನ್ನು ಕೇಳಬಹುದು ಎಂಬ ಆಲೋಚನೆಯ ವಿನಯವೇ ಉಳಿದಿರಲಿಲ್ಲ. ಪುಟ್ಟ ಬಾಲಕ ಏನು ತಾನೆ ಕೇಳಿಯಾನು – ಎಂದು ಕುಬ್ಜವಾಗಿಯೇ ಯೋಚಿಸಿದ ಬಲಿಯನ್ನು ವಾಮನ ಮೂರು ಹೆಜ್ಜೆಯನ್ನು ಕೇಳಿದ; ಅಷ್ಟೇ ತಾನೆ ಎಂದುಕೊಂಡ ಬಲಿಯ ಅರಿವಿನ ಅಳತೆಯನ್ನು ಮೀರಿ ವಾಮನನು ತ್ರಿವಿಕ್ರಮನಾಗಿ ಬೆಳೆದ; ಒಂದು ಹೆಜ್ಜೆಯಿಂದ ಇಡಿಯ ಭೂಮಂಲವನ್ನೂ ಮತ್ತೊಂದು ಹೆಜ್ಜೆಯಿಂದ ಇಡಿಯ ಆಕಾಶವನ್ನೂ ಅಳೆದ; ಮೂರನೆಯ ಹೆಜ್ಜೆಗೆ ಬಲಿಯ ತಲೆಯೇ ನೆಲೆಯಾಯಿತು.

ತಲೆ ಎಂಬುದು ಅಹಂಕಾರದ ಚಿಹ್ನೆ. ಅದನ್ನು ವಿಷ್ಣು ಮೆಟ್ಟಿದ ಎಂಬುದು ಇಲ್ಲಿರುವ ಒಂದು ಸಂಕೇತ. ವಿಷ್ಣು ಎಂದರೆ ಸರ್ವವ್ಯಾಪಕ ತತ್ತ್ವ. ಎಲ್ಲವೂ ನಾನೇ, ಎಲ್ಲವೂ ನನ್ನಲ್ಲಿದೆ – ಎಂಬ ಅಹಂಕಾರದಲ್ಲಿದ್ದ ಬಲಿಗೆ ದಿಟವಾದ ಸರ್ವವ್ಯಾಪಕತೆಯ ಅರಿವನ್ನು ಮೂಡಿಸಿದ ಮಹಾವಿಷ್ಣು, ನಮ್ಮ ಪ್ರತ್ಯಾಕ್ಷಾನುಭವವನ್ನು ಮೀರಿದ, ನಮ್ಮ ಅಳತೆ–ಲೆಕ್ಕಾಚಾರಗಳಿಗೆ ದಕ್ಕದ ವಿವರವೊಂದು ಎಲ್ಲವನ್ನೂ ಆವರಿಸಿಕೊಂಡು, ಎಲ್ಲವನ್ನೂ ಮೀರಿ ಇನ್ನೂ ‘ಹತ್ತು ಅಂಗುಲದಷ್ಟು ಹೆಚ್ಚಾಗಿಯೇ ಇದೆ’ (ಅತ್ಯತಿಷ್ಠದ್ದಶಾಂಗುಲಮ್) ಎಂಬ ಸತ್ಯವು ಬಲಿಗೆ ತ್ರಿವಿಕ್ರಮನಿಂದ ಸಾಕ್ಷಾತ್ಕಾರವಾಯಿತು. ಆ ಕ್ಷಣ ಅವನ ಅಹಂಕಾರವೂ ಮರೆಯಾಯಿತು; ಶಾಶ್ವತತತ್ತ್ವವನ್ನು ಅವನು ಕಂಡುಕೊಂಡನಾದ್ದರಿಂದಲೇ ಅವನು ಚಿರಂಜೀವಿಯೂ ಆದ.

ಬಲಿ ಎಂಬುದು ನಮ್ಮೆಲ್ಲರಲ್ಲೂ ಇರಬಹುದಾದ ಅಹಂಕಾರಕ್ಕೆ ಪ್ರತಿಮೆ. ನಮಗೆ ವಾಮನರೂಪದಲ್ಲಿ ತೋರುವುದು ದಿಟವಾಗಿಯೂ ತ್ರಿವಿಕ್ರಮಸ್ವರೂಪವೇ ಹೌದು ಎಂಬ ಅರಿವಿನ ಸಾಕ್ಷಾತ್ಕಾರದಲ್ಲಿಯೇ ನಮ್ಮ ಶಾಶ್ವತಸ್ಥಾನ ನೆಲೆಗೊಂಡಿದೆ. ಎಂದಿಗೂ ಅಳಿಯದ ಆ ಸ್ಥಾನವೇ ಆನಂದ; ಅದು ಒದಗುವುದೇ ‘ನಾನು’ ಎಂಬ ಅಹಂಕಾರದ ವಿಸರ್ಜನೆಯಲ್ಲಿ ಎಂಬ ಮಹಾಸಂದೇಶವನ್ನು ಬಲಿಪಾಡ್ಯಮಿ ನೀಡುತ್ತಿದೆ. ❖

ಅಗತ್ಯ ವಸ್ತು ಸಂಗ್ರಹಿಸಲು ಚೀನಾ ಸಲಹೆ: ಯುದ್ಧದ ಊಹಾಪೋಹ

ಬೀಜಿಂಗ್ (ಎಪಿ): ದೈನಂದಿನ ಜೀವನ ಮತ್ತು ತುರ್ತು ಪರಿಸ್ಥಿತಿ ಎದುರಿಸಲು ಅಗತ್ಯ ವಸ್ತುಗಳನ್ನು ಸಂಗ್ರಹಿಸಲು ಜನರಿಗೆ ಚೀನಾ ಸರ್ಕಾರವೇ ಶಿಫಾರಸು ಮಾಡಿದ್ದು, ಜನರು ಆತಂಕದಲ್ಲಿ ಮುಗಿಬಿದ್ದು ಅಗತ್ಯವಸ್ತುಗಳನ್ನು ಖರೀದಿಸುತ್ತಿದ್ದಾರೆ. ಅಲ್ಲದೇ ಚೀನಾ ತೈವಾನ್‌ನೊಂದಿಗೆ ಯುದ್ಧ ನಡೆಸಲು ಮುಂದಾಗಿದೆಯಾ? ಎನ್ನುವ ಊಹಾಪೋಹ ಮತ್ತು ಪ್ರಶ್ನೆಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹುಟ್ಟುಹಾಕಿದೆ.

ಬಹುಶಃ ಮಿಲಿಟರಿ ಹಗೆತನವು ಸನ್ನಿಹಿತವಾಗಿಲ್ಲ ಎಂದು ಹೆಚ್ಚಿನ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಸಾಮಾಜಿಕ ಮಾಧ್ಯಮದಲ್ಲಿನ ಪೋಸ್ಟ್‌ಗಳು ಜನರ ಮನಸ್ಸಿನಲ್ಲಿ ಅಂತಹ ಅಭಿಪ್ರಾಯ ಇರುವುದನ್ನು ಮತ್ತು ಯುದ್ಧೋತ್ಸಾಹದ ಹೇಳಿಕೆಗಳನ್ನು ಹೊರಹಾಕಿವೆ.

ಸ್ಥಳೀಯ ಮಾಧ್ಯಮಗಳ ಪ್ರಕಾರ, ‘ಯುದ್ಧದ ಭಯವೋ ಅಥವಾ ಇಲ್ಲವೋ, ಚೀನಾದ ಕೆಲವು ನಗರಗಳಲ್ಲಿ ಅಕ್ಕಿ, ನೂಡಲ್ಸ್ ಮತ್ತು ಅಡುಗೆ ಎಣ್ಣೆಯನ್ನು ಜನರು ಮುಗಿಬಿದ್ದು ಖರೀದಿಸುತ್ತಿರುವುದು ಅಲ್ಲಲ್ಲಿ ಕಂಡುಬಂದಿವೆ. ಕೋವಿಡ್–19 ಏಕಾಏಕಿ ಹಲವಾರು ಪ್ರಾಂತ್ಯಗಳಲ್ಲಿ ಹರಡುತ್ತಿರುವುದರಿಂದ ನೆರೆಹೊರೆಯಲ್ಲಿ ಲಾಕ್‌ಡೌನ್‌ಗಳ ಸಾಧ್ಯತೆಯು ಕೆಲವರಿಗೆ ತಕ್ಷಣಕ್ಕೆ ಹೆಚ್ಚು ಚಿಂತೆಯಾಗಿದೆ’.

‘ನನಗೆ ಭಯವಿಲ್ಲ. ಆದರೆ, ನಾವು ಹಿಂದೆಂದಿಗಿಂತಲೂ ಹೆಚ್ಚು ಜಾಗರೂಕರಾಗಿರಬೇಕು ಎಂದು ನಾನು ಭಾವಿಸುತ್ತೇನೆ’ ಎಂದು ಸ್ಥಳೀಯ ನಿವಾಸಿ ಹು ಚುನ್ಮೆಯ್ ತಿಳಿಸಿದ್ದಾರೆ.

ತೈವಾನ್ 2.4 ಕೋಟಿ ಜನಸಂಖ್ಯೆಯ ಸ್ವ-ಆಡಳಿತ ದ್ವೀಪವಾಗಿದೆ. ಚೀನಾ ಇದನ್ನು ತನ್ನ ಆಳ್ವಿಕೆಯಡಿ ಇರಬೇಕಾದ ಪ್ರಾಂತ್ಯವೆಂದು ಪರಿಗಣಿಸಿದ್ದು, ಇಲ್ಲಿನ ಜನರನ್ನು ದಂಗೆಕೋರರೆಂದು ಭಾವಿಸಿದೆ. ಈ ದ್ವೀಪ ರಾಷ್ಟ್ರದಲ್ಲಿ ಇತ್ತೀಚೆಗೆ ಉದ್ವಿಗ್ನತೆ ತೀವ್ರವಾಗಿ ಏರಿದೆ. ಚೀನಾವು ದ್ವೀಪದ ಸಮೀಪಕ್ಕೆ ಹೆಚ್ಚು ಯುದ್ಧವಿಮಾನಗಳನ್ನು ಕಳುಹಿಸುತ್ತಿದೆ. ಅಮೆರಿಕ ತೈವಾನ್‌ಗೆ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡುತ್ತಿದ್ದು, ಅಲ್ಲಿನ ಸರ್ಕಾರದೊಂದಿಗೆ ಗಾಢ ಸಂಬಂಧಗಳನ್ನು ಬೆಸೆಯುತ್ತಿದೆ.

‘ಬೋಧಕರ ಕೈಪಿಡಿಯಲ್ಲಿನ ನ್ಯೂನತೆ ಸರಿಪಡಿಸಿ’

ನವದೆಹಲಿ (ಪಿಟಿಐ): ಲಿಂಗತ್ವ ತಟಸ್ಥ ನೀತಿಯಡಿ ಬೋಧಕರ ತರಬೇತಿಗಾಗಿ ಹೊರತಂದಿರುವ ಕೈಪಿಡಿ ಹಲವು ನ್ಯೂನತೆಗಳಿಂದ ಕೂಡಿದ್ದು, ಕೂಡಲೇ ಇವುಗಳನ್ನು ಸರಿಪಡಿಸುವಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು (ಎನ್‌ಸಿಪಿಸಿಆರ್) ಎನ್‌ಸಿಇಆರ್‌ಟಿಗೆ ಸೂಚಿಸಿದೆ.

ಕೆಲ ಮಕ್ಕಳು ಜೈವಿಕ ಕಾರಣಗಳಿಂದವಿಭಿನ್ನಅಗತ್ಯಗಳನ್ನುಹೊಂದಿರುತ್ತಾರೆ. ಇಂಥ ಮಕ್ಕಳಿಗೆ ಸಮಾನ ಹಕ್ಕುಗಳನ್ನು ಈ ಕೈಪಿಡಿ ನಿರಾಕರಿಸುತ್ತದೆ ಎಂದು ಆಯೋಗ ಅಸಮಾಧಾನ ವ್ಯಕ್ತಪಡಿಸಿದೆ.

ಈ ಕುರಿತು ಎನ್‌ಸಿಇಆರ್‌ಟಿ ನಿರ್ದೇಶಕರಿಗೆ ಪತ್ರ ಬರೆದಿರುವ ಆಯೋಗ, ‘ಕೈಪಿಡಿಯಲ್ಲಿನ ನ್ಯೂನತೆಗಳ ಬಗ್ಗೆ ಆಯೋಗಕ್ಕೆ ಸಾಕಷ್ಟು ದೂರುಗಳು ಬಂದಿವೆ’ ಎಂದು ಹೇಳಿದೆ.

‘ನೂತನ ಕೈಪಿಡಿಯು ಎಲ್‌ಜಿಬಿಟಿಕ್ಯೂ ಸಮುದಾಯದ ಬಗ್ಗೆ ಶಿಕ್ಷಕರಲ್ಲಿ ಅರಿವು ಮೂಡಿಸುವ ಹಾಗೂ ಅವರ ಜೈವಿಕ ಅಗತ್ಯಗಳ ಕುರಿತು ಶಿಕ್ಷಕರನ್ನು ಸಂವೇದನಾಶೀಲರನ್ನಾಗಿ ಮಾಡುವ ಉದ್ದೇಶ ಹೊಂದಿದೆ’.

‘ಎಲ್‌ಜಿಬಿಟಿಕ್ಯೂ ಸಮುದಾಯಕ್ಕೆ ಸೇರಿದ ಮಕ್ಕಳಿಗೆ ನೀಡಬೇಕಾದ ಸವಲತ್ತುಗಳ ಬಗ್ಗೆ ಕೈಪಿಡಿಯಲ್ಲಿ ವಿವರಿಸಲಾಗಿದೆ. ಆದರೆ, ಕೈಪಿಡಿಯಲ್ಲಿನ ಅಂಶಗಳು ವಾಸ್ತವದಲ್ಲಿ ಈ ಮಕ್ಕಳ ಅಗತ್ಯಗಳಿಗೆ ಸರಿಹೊಂದುವ ರೀತಿಯಲ್ಲಿ ಇಲ್ಲ ಎಂಬುದು ತಿಳಿದುಬರುತ್ತದೆ’ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಮುಹೂರ್ತದ ವಹಿವಾಟು: ಸಕಾರಾತ್ಮಕವಾಗಿ ಅಂತ್ಯ



ಮುಂಬೈ ಷೇರುವಿನಿಮಯ ಕೇಂದ್ರದ ಸಿಇಒ ಆಶಿಶ್‌ಕುಮಾರ್ ಚೌಹಾಣ್ ಮತ್ತು ಬಾಲಿವುಡ್ ನಟಿ ಭಾಗ್ಯಶ್ರೀ ಅವರು ಗಂಟೆ ಬಾರಿಸುವ ಮೂಲಕ ಗುರುವಾರ ಮುಹೂರ್ತದ ವಹಿವಾಟಿಗೆ ಚಾಲನೆ ನೀಡಿದರು —ಪಿಟಿಐ ಚಿತ್ರ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಗುರುವಾರ ನಡೆದ ಒಂದು ಗಂಟೆ ಅವಧಿಯ ಮುಹೂರ್ತದ ವಹಿವಾಟು ಸಕಾರಾತ್ಮಕವಾಗಿ ಅಂತ್ಯವಾಗಿದೆ.

ಕೆಲವು ಭಾಗಗಳಲ್ಲಿ ದೀಪಾವಳಿಯನ್ನು ಹೊಸ ವರ್ಷವೆಂದು ಆಚರಿಸಲಾಗುತ್ತದೆ. ಹೊಸ ವರ್ಷಕ್ಕೆ ಹೊಸ ಲೆಕ್ಕ ಎನ್ನುವಂತೆ ಹೂಡಿಕೆದಾರರು ಹೊಸ ಖಾತೆ ತೆರೆದು ಖರೀದಿ ನಡೆಸಿದ್ದರಿಂದ ಸೂಚ್ಯಂಕಗಳು ಏರಿಕೆ ಕಂಡಿವೆ ಎಂದು ದಲ್ಲಾಳಿಗಳು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ (ಸೆನ್ಸೆಕ್ಸ್) 296 ಅಂಶ ಏರಿಕೆ ಕಂಡು 60,067 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 87 ಅಂಶ ಹೆಚ್ಚಾಗಿ 17,916 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಸೆನ್ಸೆಕ್ಸ್‌ನಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ, ಐಟಿಸಿ, ಬಜಾಜ್ ಆಟೊ, ಎಲ್‌ಆ್ಯಂಡ್‌ಟಿ, ಕೋಟಕ್ ಬ್ಯಾಂಕ್, ಸನ್ ಫಾರ್ಮಾ ಮತ್ತು ನೆಸ್ಲೆ ಇಂಡಿಯಾ ಕಂಪನಿಗಳ ಷೇರುಗಳು ಶೇಕಡ 2.87ರವರೆಗೂ ಏರಿಕೆ ಕಂಡವು.

ಇನ್ನೊಂದೆಡೆ ಐಸಿಐಸಿಐ ಬ್ಯಾಂಕ್, ಅಲ್ಟ್ರಾಟೆಕ್ ಸಿಮೆಂಟ್, ಏಷ್ಯನ್ ಪೇಂಟ್ಸ್ ಮತ್ತು ಡಾ. ರೆಡ್ಡೀಸ್ ಕಂಪನಿಗಳ ಷೇರುಗಳು ಶೇ 0.43ರವರೆಗೂ ಇಳಿಕೆ ಕಂಡವು.

ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಕಡಿತ ಮಾಡಿರುವುದು ಸಹ ಷೇರುಪೇಟೆಗಳಲ್ಲಿ ಖರೀದಿ ಉತ್ಸಾಹವನ್ನು ಹೆಚ್ಚಿಸಿತು ಎಂದು ದಲ್ಲಾಳಿಗಳು ಹೇಳಿದ್ದಾರೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕವು ಶೇ 1.36ರಷ್ಟು ಏರಿಕೆ ಕಂಡಿತು. ಮಿಡ್ ಕ್ಯಾಪ್ ಸೂಚ್ಯಂಕ ಶೇ 0.73ರಷ್ಟು ಹೆಚ್ಚಾಯಿತು.

ದೀಪಾವಳಿ ಬಲಿಪಾಡ್ಯಮಿಯ ಪ್ರಯುಕ್ತ ಶುಕ್ರವಾರ ಷೇರುಪೇಟೆ ವಹಿವಾಟು ಇರುವುದಿಲ್ಲ.

ಆಕಾಶವಾಣಿಯಲ್ಲಿ ಇಂದು ಪುರಾಣಿಕ್ ಸಂದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣಕಾಸು ಮತ್ತು ಬ್ಯಾಂಕಿಂಗ್ ತಜ್ಞ ಯು.ಪಿ. ಪುರಾಣಿಕ್ ಅವರ ಸಂದರ್ಶನವು ಆಕಾಶವಾಣಿಯ ‘ಬಾಳ ಬೆಳಕು’ ಕಾರ್ಯಕ್ರಮದಲ್ಲಿ ಶುಕ್ರವಾರ ಮಧ್ಯಾಹ್ನ 2.35ಕ್ಕೆ ಪ್ರಸಾರ ಆಗಲಿದೆ.

ಪುರಾಣಿಕ್ ಅವರು ಈ ಕಾರ್ಯಕ್ರಮದಲ್ಲಿ ತಮ್ಮ ವೃತ್ತಿ ಜೀವನದ ಬಗ್ಗೆ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ‘ಪ್ರಜಾವಾಣಿ’ಯಲ್ಲಿ ಪ್ರತಿ ಬುಧವಾರ ‘ಪ್ರಶ್ನೋತ್ತರ’ ಅಂಕಣದ ಮೂಲಕ ಪುರಾಣಿಕ್ ಅವರು ಉಳಿತಾಯ, ತೆರಿಗೆ ವಿಚಾರಗಳ ಕುರಿತು ಜನಸಾಮಾನ್ಯರ ಪ್ರಶ್ನೆಗಳು, ಅನುಮಾನಗಳಿಗೆ ಪರಿಹಾರ ನೀಡುತ್ತಿದ್ದಾರೆ.

ಆಕಾಶವಾಣಿಯ MW 612 KHz ತರಂಗಾಂತರದಲ್ಲಿ ಈ ಕಾರ್ಯಕ್ರಮ ಆಲಿಸಬಹುದು. ಬೆಂಗಳೂರು ಆಕಾಶವಾಣಿಯ ಯೂಟ್ಯೂಬ್ ಚಾನೆಲ್ ಮೂಲಕವೂ ಇದನ್ನು ಆಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬ್ರೋಕರೇಜ್ ಸಂಸ್ಥೆ ನೊಮುರ ಅಂದಾಜು

ಸುಂಕ ಇಳಿಕೆ: ವಿತ್ತೀಯ ಕೊರತೆ ಶೇ 0.3 ಹೆಚ್ಚಳ



ಮುಂಬೈ (ಪಿಟಿಐ): ಡೀಸೆಲ್ ಮತ್ತು ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕವನ್ನು ಕೇಂದ್ರ ಸರ್ಕಾರವು ಇಳಿಕೆ ಮಾಡಿರುವುದರಿಂದಾಗಿ, ಕೇಂದ್ರದ ಬೊಕ್ಕಸಕ್ಕೆ ₹ 45 ಸಾವಿರ ಕೋಟಿ ನಷ್ಟ ಆಗುತ್ತದೆ, ಕೇಂದ್ರದ ವಿತ್ತೀಯ ಕೊರತೆಯು ಶೇಕಡ 0.3ರಷ್ಟು ಹೆಚ್ಚಳ ಆಗಲಿದೆ ಎಂದು ಬ್ರೋಕರೇಜ್ ಸಂಸ್ಥೆ ನೊಮುರ ಹೇಳಿದೆ.

ಒಂದು ವರ್ಷದಲ್ಲಿ ಆಗುವ ವರಮಾನ ನಷ್ಟವು ₹ 1 ಲಕ್ಷ ಕೋಟಿ ಆಗುತ್ತದೆ. ಪ್ರಸಕ್ತ ಹಣಕಾಸು ವರ್ಷದ ಇನ್ನುಳಿದ ಅವಧಿಗೆ ಆಗುವ ವರಮಾನ ನಷ್ಟವು ₹ 45 ಸಾವಿರ ಕೋಟಿ ಎಂದು ನೊಮುರ ಅಂದಾಜು ಮಾಡಿದೆ. ಇದರಿಂದಾಗಿ ಕೇಂದ್ರದ ವಿತ್ತೀಯ ಕೊರತೆ ಪ್ರಮಾಣವು ಶೇ 0.3ರಷ್ಟು ಹೆಚ್ಚಾಗಿ, ಶೇ 6.5ಕ್ಕೆ ತಲುಪಬಹುದು ಎಂದು ಸಂಸ್ಥೆ ಹೇಳಿದೆ.

ಕೇಂದ್ರವು ಪ್ರಸಕ್ತ ಹಣಕಾಸು ವರ್ಷದಲ್ಲಿ ಇದುವರೆಗೆ ತೀರಾ ಹಿಡಿತದಿಂದ ಹಣ ಖರ್ಚು ಮಾಡಿದ ಕಾರಣದಿಂದಾಗಿ ವಿತ್ತೀಯ ಕೊರತೆಯು ಸೆಪ್ಟೆಂಬರ್ ಅಂತ್ಯದವರೆಗೆ ಬಜೆಟ್ ಅಂದಾಜಿನ ಶೇ 35ರಷ್ಟಕ್ಕೆ ಮಿತಿಗೊಂಡಿದೆ. ಈಗಿನ ಎಕ್ಸೈಸ್ ಸುಂಕ ಕಡಿತದ ನಂತರ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ ಪ್ರಮಾಣವು ನೇರವಾಗಿ ಶೇ 0.14ರಷ್ಟು ಕಡಿಮೆ ಆಗುವ ನಿರೀಕ್ಷೆ ಇದೆ. ಪರೋಕ್ಷ ಪರಿಣಾಮಗಳನ್ನೂ ಪರಿಗಣಿಸಿದರೆ ಹಣದುಬ್ಬರವು ಶೇ 0.3ರವರೆಗೆ ತಗ್ಗಬಹುದು ಎಂದು ಅದು ಹೇಳಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹480

ಬ್ರಿಟನ್‌ನಲ್ಲಿ ಗಾಂಧಿ ಸ್ಮರಣಾರ್ಥ ಹೊಸ ನಾಣ್ಯ

ಲಂಡನ್ (ಪಿಟಿಐ): ಮಹಾತ್ಮ ಗಾಂಧಿ ಸ್ಮರಣಾರ್ಥ ಅವರ ಜೀವನ ಮತ್ತು ಪರಂಪರೆ ಕೊಂಡಾಡುವ 5 ಪೌಂಡ್‌ನ ಹೊಸ ನಾಣ್ಯವನ್ನು ದೀಪಾವಳಿ ಹಬ್ಬದ ಅಂಗವಾಗಿ ಗುರುವಾರ ಬ್ರಿಟನ್ ಹಣಕಾಸು ಸಚಿವ ರಿಷಿ ಸುನಕ್ ಅನಾವರಣಗೊಳಿಸಿದರು.

ಗಾಂಧಿಯವರ ಅತ್ಯಂತ ಪ್ರಸಿದ್ಧ ಉಲ್ಲೇಖಗಳಲ್ಲಿ ಒಂದಾದ ‘ಮೈ ಲೈಫ್ ಈಸ್ ಮೈ ಮೆಸೇಜ್’ ಜೊತೆಗೆ ಭಾರತದ ರಾಷ್ಟ್ರೀಯ ಹೂವು ಕಮಲದ ಚಿತ್ರವನ್ನು ಈ ನಾಣ್ಯ ಒಳಗೊಂಡಿದೆ.

ಕಾಯ್ದೆ ರೂಪಿಸಿ ಸುಮ್ಮನಾಗಿರುವ ರಾಜ್ಯ ಸರ್ಕಾರ; ಕಲ್ಯಾಣ ಯೋಜನೆಗಳಿಗೆ ಕಾದಿರುವ ವ್ಯಾಪಾರಿಗಳು

ಕಾಯ್ದೆಯಷ್ಟೆ; ಸರ್ವೆ, ಯೋಜನೆ ಎರಡೂ ಇಲ್ಲ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬೀದಿ ಬದಿ ವ್ಯಾಪಾರ ಕಾನೂನುಬದ್ಧಗೊಳಿಸಿ ಕಾಯ್ದೆಯನ್ನಷ್ಟೇ ರೂಪಿಸಿ ಸರ್ಕಾರ ಸುಮ್ಮನಾಗಿದೆ. ಏಳು ವರ್ಷಗಳು ಕಳೆದರೂ ಅದರ ಅಡಿಯಲ್ಲಿ ಸರ್ವೆ ಕಾರ್ಯವೂ ನಡೆದಿಲ್ಲ, ಅವರ ಕಲ್ಯಾಣಕ್ಕೆ ಯೋಜನೆಗಳೂ ರೂಪುಗೊಂಡಿಲ್ಲ.

ಬೀದಿ ಬದಿ ವ್ಯಾಪಾರಿಗಳಿಗೆ ಸ್ಥಳೀಯ ಆಡಳಿತ ಮತ್ತು ಪೊಲೀಸ್ ಅಧಿಕಾರಿಗಳಿಂದ ಆಗುತ್ತಿರುವ ಕಿರುಕುಳ ತಪ್ಪಿಸಲು 2014ರಲ್ಲಿ ಕೇಂದ್ರ ಸರ್ಕಾರ ಕಾಯ್ದೆಯನ್ನು ಜಾರಿಗೆ ತಂದಿದೆ. ಅದರ ಅಡಿಯಲ್ಲಿ ನಿಯಮಾವಳಿಗಳನ್ನು ರೂಪಿಸುವುದು, ವ್ಯಾಪಾರಿಗಳ ಸರ್ವೆ ಕಾರ್ಯ ನಡೆಸುವುದು ಮತ್ತು ಅವರ ಸ್ಥಿತಿಗತಿ ಆಧರಿಸಿ ಯೋಜನೆಗಳನ್ನು ರೂಪಿಸುವುದು, ಪಟ್ಟಣ ವ್ಯಾಪಾರ ಸಮಿತಿಗಳನ್ನು ರಚಿಸುವುದು ರಾಜ್ಯ ಸರ್ಕಾರಗಳ ಜವಾಬ್ದಾರಿ.

ಕಾಯ್ದೆಯನ್ನು ಮೂಲೆಗುಂಪು ಮಾಡಿದ್ದ ರಾಜ್ಯ ಸರ್ಕಾರದ ಮೇಲೆ ಬೀದಿ ಬದಿ ವ್ಯಾಪಾರಿಗಳ ಪರ ಹೋರಾಟಗಾರರು ಒತ್ತಡ ಹೇರಿದ ಬಳಿಕ 2019ರಲ್ಲಿ ನಿಯಮಾವಳಿಗಳನ್ನು ರೂಪಿಸಿತ್ತು. ಆದರೆ, ಸರ್ವೆ ಕಾರ್ಯವನ್ನಾಗಲಿ ಮಾಡಿಲ್ಲ. ಈ ಕಾಯ್ದೆಯಡಿ ನಿಯಮಾವಳಿ ರೂಪಿಸುವ ಮುನ್ನ ದೀನ ದಯಾಳ್ ಅಂತ್ಯೋದಯ ಯೋಜನೆಗಾಗಿ ಸರ್ವೆ ಮಾಡಿತ್ತು.

'ಬೆಂಗಳೂರಿನಲ್ಲಿ ಕಾಟಾಚಾರಕ್ಕೆ ಸರ್ವೆ ಕಾರ್ಯವನ್ನು ಬಿಬಿಎಂಪಿ ನಡೆಸಿತು. 1.5 ಲಕ್ಷಕ್ಕೂ ಹೆಚ್ಚು ಮಂದಿ ಬೀದಿ ಬದಿ ವ್ಯಾಪಾರಿಗಳಿರುವ ಅಂದಾಜಿದೆ. ಆದರೆ, 26 ಸಾವಿರ ಜನರನ್ನಷ್ಟೇ ಬಿಬಿಎಂಪಿ ಪಟ್ಟಿ ಮಾಡಿ ಗುರುತಿನ ಚೀಟಿ ನೀಡಿದೆ' ಎಂದು ಬೀದಿ ಬದಿ ವ್ಯಾಪಾರಿಗಳ ಪರ ಹೋರಾಟಗಾರರು ದೂರುತ್ತಾರೆ.

'ವಾರ್ಡ್‌ಗೆ ತಲಾ ಒಬ್ಬರು ಆರೋಗ್ಯ ನಿರೀಕ್ಷಕರನ್ನು ಸರ್ವೆ ಕಾರ್ಯಕ್ಕೆ ನಿಯೋಜಿಸಲಾಗಿತ್ತು. ಬೆಳಿಗ್ಗೆ 10ರಿಂದ ಸಂಜೆ 5ರ ತನಕ ಮಾತ್ರ ಬಿಬಿಎಂಪಿಯ ಆರೋಗ್ಯ ವಿಭಾಗದ ಅಧಿಕಾರಿಗಳು ಸರ್ವೆ ನಡೆಸಿದರು. ಬೆಳಿಗ್ಗೆ 3 ಗಂಟೆಗೆ ಕೆ.ಆರ್. ಮಾರುಕಟ್ಟೆಯಲ್ಲಿ ವ್ಯಾಪಾರ ಆರಂಭವಾಗುತ್ತದೆ. ಸಂಜೆ ಬಳಿಕ ಚಾಟ್ಸ್ ತಳ್ಳುಗಾಡಿಗಳು ವ್ಯಾಪಾರ ಶುರು ಮಾಡುತ್ತವೆ. ಇವುಗಳನ್ನು ಲೆಕ್ಕಕ್ಕೇ ತೆಗೆದುಕೊಂಡಿಲ್ಲ' ಎಂದು ಅವರು ಹೇಳುತ್ತಾರೆ.

'ಕೋವಿಡ್ ಸಂದರ್ಭದ ಸಂಕಷ್ಟದಿಂದ ಹೊರಗೆ ಬರಲು ಸಾಧ್ಯವೇ ಆಗಿಲ್ಲ. ಕೆಲವರು ಕುಟುಂಬ ಸದಸ್ಯರನ್ನು ಕಳೆದುಕೊಂಡಿದ್ದಾರೆ. ಅವರಿಗೆ ಪರಿಹಾರ ದೊರಕಿಲ್ಲ. ಮನೆ ಬಾಡಿಗೆ ಪಾವತಿಸಲು ಸಾಧ್ಯವಾಗದೆ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಆದರೆ, ಅವರ ನೆರವಿಗೆ ಯಾವುದೇ ಯೋಜನೆಯನ್ನು ಸರ್ಕಾರ ರೂಪಿಸಲಿಲ್ಲ. ನೆಪಮಾತ್ರಕ್ಕಷ್ಟೇ ನಿಯಮಾವಳಿಗಳನ್ನು ರೂಪಿಸಿ ಸರ್ಕಾರ ಸುಮ್ಮನಾಗಿದೆ' ಎಂದು ಆರೋಪಿಸುತ್ತಾರೆ.



ಗಾಂಧಿ ಬಜಾರ್‌ನಲ್ಲಿ ತರಕಾರಿ ವ್ಯಾಪಾರದಲ್ಲಿ ತೊಡಗಿರುವ ಮಹಿಳೆ – ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್.ಜಿ.

'ಬೀದಿ ವ್ಯಾಪಾರ–ಬದುಕು ದುಸ್ತರ' ಭಾಗ - 4

ತಳ್ಳುಗಾಡಿ ವ್ಯಾಪಾರಿಗಳು ಸರ್ವೆಯಿಂದ ಹೊರಗೆ

ತಳ್ಳುಗಾಡಿಯಲ್ಲಿ ತಿಂಡಿ ತಿನಿಸು, ತರಕಾರಿ, ಹೂವು, ಹಣ್ಣು ಮಾರಾಟ ಮಾಡುವ ವ್ಯಾಪಾರಿಗಳನ್ನು ಬಿಬಿಎಂಪಿ ನಡೆಸಿದ ಸರ್ವೆಯಲ್ಲಿ ಪರಿಗಣಿಸಿಯೇ ಇಲ್ಲ ಎಂದು ಬೀದಿ ಬದಿ ವ್ಯಾಪಾರಿಗಳ ಪರ ಹೋರಾಟಗಾರ ವಿನಯ ಶ್ರೀನಿವಾಸ್ ಆರೋಪಿಸಿದರು.


ಕೋವಿಡ್ ಸಂದರ್ಭದಲ್ಲಿ ಮನೆ–ಮನೆಗಳಿಗೆ ಹಣ್ಣು– ತರಕಾರಿಯನ್ನು ಈ ವ್ಯಾಪಾರಿಗಳು ಪೂರೈಸಿದರು. ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಜನರಿಗೆ ಅಗತ್ಯ ವಸ್ತುಗಳನ್ನು ತಲುಪಿಸಿದರು. ಅಂತವರಿಗೆ ಸರ್ಕಾರ ಕಿರುಕುಳ ನೀಡುವುದನ್ನು ಬಿಟ್ಟು ಬೇರೇನೂ ಮಾಡಿಲ್ಲ. ವ್ಯಾಪಾರಕ್ಕೆ ಧ್ವನಿವರ್ಧಕ ಬಳಸದಂತೆ ನಿರ್ಬಂಧಿಸಲಾಗಿದೆ ಎಂದರು.

'ತಳ್ಳುಗಾಡಿ ವ್ಯಾಪಾರಿಗಳಲ್ಲದೇ ಬೆಳಗಿನ ಜಾವ ಮತ್ತು ಸಂಜೆ ವೇಳೆ ಮಾತ್ರ ವ್ಯಾಪಾರ ನಡೆಸುವವರು ಇದ್ದಾರೆ. ಅವರೆಲ್ಲರೂ ಸರ್ವೆಯಿಂದ ಹೊರಗುಳಿದಿದ್ದಾರೆ. ಹೀಗಾಗಿ, ಕಾಯ್ದೆಯಡಿ ಹೊಸದಾಗಿ ಸರ್ವೆ ನಡೆಸಬೇಕು ಎಂಬ ಒತ್ತಾಯವನ್ನು ಮಾಡುತ್ತಲೇ ಇದ್ದೇವೆ. ಆದರೆ, ಬಿಬಿಎಂಪಿ ಅಧಿಕಾರಿಗಳು ಪರಿಗಣಿಸಿಲ್ಲ' ಎಂದೂ ದೂರಿದರು.

ಪಟ್ಟಣ ವ್ಯಾಪಾರ ಸಮಿತಿ

ಬೀದಿ ಬದಿ ವ್ಯಾಪಾರಿಗಳ ಸಮಸ್ಯೆಗಳ ಪರಿಹಾರಕ್ಕೆ ಪಟ್ಟಣ ವ್ಯಾಪಾರ ಸಮಿತಿ ರಚನೆ ಮಾಡಬೇಕಿದ್ದು, ಅದನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆಸಲಾಗಿದೆ.

ಚುನಾವಣೆ ಮೂಲಕ ಎಲ್ಲಾ ಕಡೆ ಸಮಿತಿಯ ಸದಸ್ಯರನ್ನು ಬಿಬಿಎಂಪಿ ಆಯ್ಕೆ ಮಾಡಿದೆ. ಆದರೆ, ಕೆಲವೆಡೆ ಸಭೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಸಮಸ್ಯೆಗಳನ್ನು ಆಲಿಸುತ್ತಿಲ್ಲ ಎಂದು ವ್ಯಾಪಾರಿಗಳು ದೂರುತ್ತಾರೆ.



ಬೀದಿ ಬದಿ ವ್ಯಾಪಾರಿಗಳ ಕಾಯ್ದೆ ಅಡಿಯಲ್ಲಿ ಸರ್ವೆ ಕಾರ್ಯವನ್ನು ಸರ್ಕಾರ ನಡೆಸಬೇಕು. ವ್ಯಾಪಾರಿಗಳನ್ನು ಮೇಲೆತ್ತಲು ಯೋಜನೆಗಳನ್ನು ರೂಪಿಸಬೇಕು

ಎಂ.ಡಿ. ಇಸ್ಮಾಯಿಲ್, ಗಾಂಧಿನಗರದ ಬೀದಿ ಬದಿ ವ್ಯಾಪಾರಿ

ಭಾರತ–ಪಾಕ್ ಗಡಿಯ ಹೊಲದಲ್ಲಿ ಬಾಂಬ್ ಪತ್ತೆ

ಚಂಡೀಗಡ: 'ದೀಪಾವಳಿಯ ಮುನ್ನಾದಿನ ಫಿರೋಜ್‌ಪುರ ಜಿಲ್ಲೆಯ ಭಾರತ-ಪಾಕಿಸ್ತಾನದ ಗಡಿಯ ಸಮೀಪ ಹೊಲವೊಂದರಲ್ಲಿ ಅಡಗಿಸಿಟ್ಟಿದ್ದ ಸ್ಫೋಟಕ ತುಂಬಿದ ಟಿಫಿನ್ ಬಾಕ್ಸ್ ಅನ್ನು ವಶಪಡಿಸಿಕೊಂಡಿದ್ದು, ಭಯೋತ್ಪಾದಕ ದಾಳಿಯ ಸಂಭವನೀಯ ಪ್ರಯತ್ನವನ್ನು ವಿಫಲಗೊಳಿಸಲಾಗಿದೆ' ಎಂದು ಪಂಜಾಬ್ ಪೊಲೀಸರು ಹೇಳಿದ್ದಾರೆ.

'ಜಲಾಲಾಬಾದ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ವಾರದ ಆರಂಭದಲ್ಲಿ ಮೂವರನ್ನು ಬಂಧಿಸಲಾಗಿತ್ತು. ಆರೋಪಿಗಳ ವಿಚಾರಣೆ ಸಂದರ್ಭದಲ್ಲಿ ಬುಧವಾರ ಗಡಿ ಪ್ರದೇಶದ ಅಲಿ ಕೆ ಗ್ರಾಮದಲ್ಲಿ ಟಿಫಿನ್ ಬಾಕ್ಸ್‌ವೊಂದರಲ್ಲಿ ಬಾಂಬ್ ಇರುವುದು ಬೆಳಕಿಗೆ ಬಂದಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಫಿರೋಜ್‌ಪುರದ ಜುಗ್ಗೆ ನಿಹಂಗಾ ವಾಲೆ ಗ್ರಾಮದ ನಿವಾಸಿ ಜಸ್ವಂತ್ ಸಿಂಗ್ ಅಲಿಯಾಸ್ ಶಿಂದಾ ಬಾಬಾ ಮತ್ತು ಲುಧಿಯಾನದ ವಾಲಿಪುರ್ ಖುರ್ದ್ ಗ್ರಾಮದ ಬಲ್ವಂತ್ ಸಿಂಗ್ ಬಂಧಿತ ಆರೋಪಿಗಳು. ರಂಜೀತ್ ಸಿಂಗ್ ಅಲಿಯಾಸ್ ಗೋರಾ ಅವರನ್ನೂ ಬಂಧಿಸಲಾಗಿದೆ' ಎಂದು ಡಿಜಿಪಿ ಇಕ್ಬಾಲ್ ಪ್ರೀತಿ ಸಿಂಗ್ ಸಾಹೋಟಾ ತಿಳಿಸಿದ್ದಾರೆ. ಈ ಬಗ್ಗೆ ತನಿಖೆ ಮುಂದುವರಿದಿದ್ದು, ಇನ್ನೂ ಹೆಚ್ಚಿನ ಜನರನ್ನು ಬಂಧಿಸುವ ಸಾಧ್ಯತೆ ಇದೆ ಎಂದು ಪೊಲೀಸರು ಹೇಳಿದ್ದಾರೆ.

ಪಟಾಕಿ: ಇಬ್ಬರು ಬಾಲಕರಿಗೆ ಗಾಯ

ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದಲ್ಲಿ ಗುರುವಾರ ಪಟಾಕಿ ಸಿಡಿದು ಇಬ್ಬರು ಬಾಲಕರು ಗಾಯಗೊಂಡಿದ್ದಾರೆ. ಬಸವನಗುಡಿಯ ಅರ್ಹಮ್ ಖಾನ್ (9) ಎನ್ನುವ ಬಾಲಕನ ಕಣ್ಣಿಗೆ ಪಟಾಕಿಯಿಂದ ಹಾನಿಯಾಗಿದ್ದು, ಮುಖದ ಚರ್ಮ ಸುಟ್ಟು ಹೋಗಿದೆ. ಸದ್ಯ ಬಾಲಕನಿಗೆ ಮಿಂಟೊ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಬಸವನಗುಡಿ ನಿವಾಸಿಯಾಗಿರುವ ಈ ಬಾಲಕ ಬುಧವಾರ ರಾತ್ರಿ ತನ್ನ ಮನೆಯಲ್ಲಿ ಹೂಕುಂಡ ಪಟಾಕಿ ಸಿಡಿಸಲು ಹೋದಾಗ ಕಣ್ಣಿಗೆ ಗಾಯವಾಗಿದೆ.

ಬಾಲಕನ ಕಣ್ಣಿನ ದೃಷ್ಟಿಗೆ ಸಮಸ್ಯೆಯಾಗಿಲ್ಲ. ಕಣ್ಣಿನ ರೆಪ್ಪೆ ಹಾಗು ಮುಖದ ಚರ್ಮ ಸುಟ್ಟು ಹೋಗಿದ್ದು, ಕಣ್ಣಿನ ಸುತ್ತ ಗಾಯವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಇನ್ನೊಂದು ಘಟನೆಯಲ್ಲಿ, ಸ್ಕೂಟರ್‌ನಲ್ಲಿ ಹಿಂದೆ ಕುಳಿತಿದ್ದ 13 ವರ್ಷದ ಬಾಲಕನೊಬ್ಬ ಪಟಾಕಿ ಸಿಡಿದು ಗಾಯಗೊಂಡಿದ್ದಾನೆ. ತಕ್ಷಣ ಬಾಲಕನನ್ನು ಚಿಕ್ಕಲಸಂದ್ರದ ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ಉತ್ತಮ ಮಳೆ: ನಳನಳಿಸುತ್ತಿದೆ ರಾಗಿ ಬೆಳೆ

• ಸಿ.ಜಿ.ಮೋಹನ್ ಕುಮಾರ್

ದಾಬಸ್ ಪೇಟೆ: ಈ ವರ್ಷ ಉತ್ತಮವಾಗಿ ಮಳೆಯಾಗಿದ್ದು, ನೆಲಮಂಗಲ ತಾಲ್ಲೂಕಿನಲ್ಲಿ ತಾಲ್ಲೂಕಿನ ಎಲ್ಲೆಡೆ ರಾಗಿ, ದ್ವಿದಳ ಧಾನ್ಯ ಬೆಳೆಗಳು ನಳನಳಿಸುತ್ತಿವೆ. ಬೆವರಿನ ಶ್ರಮಕ್ಕೆ ತಕ್ಕಂತೆ ರಾಗಿ ತೆನೆ ಕಚ್ಚಿರುವುದು ಕಂಡು ರೈತರಲ್ಲಿ ಸಂತಸ ಮೂಡಿದೆ.

ತಾಲ್ಲೂಕಿನಲ್ಲಿ ಈ ವರ್ಷ ವಾಡಿಕೆ ಮಳೆಗಿಂತ ಹೆಚ್ಚಿನ ಮಳೆಯಾಗಿದೆ. ಇದರಿಂದ ತಾಲ್ಲೂಕಿನ ಪ್ರಮುಖ ಬೆಳೆಯಾದ ರಾಗಿಯ ಸಮೃದ್ಧ ಇಳುವರಿಯ ನಿರೀಕ್ಷೆಯನ್ನು ರೈತರು ಹೊಂದಿದ್ದಾರೆ.

ರಾಗಿ ಬೆಳವಣಿಗೆಯ ವಿವಿಧ ಹಂತಗಳಾದ ಬಿತ್ತನೆ ಸಮಯ, ಬೆಳವಣಿಗೆ ಹಂತ ಹಾಗೂ ಕಾಳು ಕಟ್ಟುವಾಗ ಮಳೆಯು ಹದವಾಗಿ ಬಿದ್ದಿತ್ತು. ಹಾಗಾಗಿ ರಾಗಿ ಹೊಲಗಳು ತೆನೆ ತುಂಬಿ ತೂಗುತ್ತಿವೆ. ಇನ್ನು ಕಟಾವು ಮತ್ತು ಒಕ್ಕಣೆ ಸಮಯದಲ್ಲಿ ಮಳೆ ಸಮಸ್ಯೆ ತಂದೊಡ್ಡದಿದ್ದರೆ, ಪೂರ್ಣ ಪ್ರಮಾಣದ ಬೆಳೆ ರೈತರಿಗೆ ಸಿಗಲಿದೆ.

ತಾಲ್ಲೂಕಿನಾದ್ಯಂತ ಮುಂಗಾರು ಹಂಗಾಮಿನಲ್ಲಿ 16,086 ಹೆಕ್ಟೇರ್‌ಗಳಲ್ಲಿ ರಾಗಿ ಬಿತ್ತನೆ ಮಾಡಲಾಗಿದೆ. ಕಳೆದ ಮುಂಗಾರು ಹಂಗಾಮಿನಲ್ಲಿ 11,742 ಹೆಕ್ಟೇರ್‌ಗಳಲ್ಲಿ ಬಿತ್ತನೆ ಆಗುವ ಮೂಲಕ ಶೇ 97.83ರಷ್ಟು ಗುರಿ ಸಾಧನೆ ಮಾಡಲಾಗಿತ್ತು.

ತಾಲ್ಲೂಕಿನಲ್ಲಿ ದ್ವಿದಳ ಧಾನ್ಯಗಳ ಬೆಳೆಯೂ ಚೆನ್ನಾಗಿ ಆಗಿದ್ದು, ರೈತರು ಯಥೇಚ್ಛ ಫಸಲು ಸಿಗಲಿದೆ ಎಂಬ ಆಶಾವಾದ ಹೊಂದಿದ್ದಾರೆ. 256 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿದೆ. ಅಲಸಂದೆ 179 ಹೆಕ್ಟೇರ್, ಅವರೆಕಾಳು 436 ಹೆಕ್ಟೇರ್, ನೆಲಗಡಲೆ 50 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ.

ವಿಶೇಷವೆಂದರೆ, ಈ ಬಾರಿ ತಾಲ್ಲೂಕಿನಲ್ಲಿ ರೈತರು ಮುಸುಕಿನ ಜೋಳವನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆದಿದ್ದಾರೆ. 1,287 ಹೆಕ್ಟೇರ್‌ಗಳಲ್ಲಿ ಮುಸುಕಿನ ಜೋಳ ಬಿತ್ತನೆಯಾಗಿದೆ.

ಈ ವರ್ಷ ಉತ್ತಮ ಬೆಳೆ ಬಂದಿದೆ. ಎಲ್ಲಿಯೂ ಮಳೆಯ ಕೊರತೆಯಾಗಲಿಲ್ಲ. ಇದರಿಂದ ಬೆಳೆಗಳು ಚೆನ್ನಾಗಿ ಬರಲು ಸಾಧ್ಯವಾಯಿತು ಎಂದು ರೈತರು ಹೇಳುತ್ತಾರೆ.

ತಾಲ್ಲೂಕಿನಲ್ಲಿ ರೈತರು ಮಳೆಗಾಲದಲ್ಲಿ ಶ್ರಮಪಟ್ಟು ವಿವಿ ಬೆಳೆಗಳನ್ನು ಬೆಳೆಯುತ್ತಾರೆ. ತಾಲ್ಲೂಕು ರಾಗಿ ಬೆಳೆಗೆ ಪ್ರಸಿದ್ಧ. ತಾಲ್ಲೂಕಿನ ಉದ್ದಕ್ಕೂ ರಾಗಿ ಬೆಳೆ ಚೆನ್ನಾಗಿ ಬಂದಿದ್ದು, ರೈತರಿಗೆ ಒಳ್ಳೆಯ ರಾಗಿ ಮತ್ತು ಜಾನುವಾರುಗಳಿಗೆ ಹುಲುಸಾದ ಮೇವು ಸಿಗಲಿದೆ ಎನ್ನುತ್ತಾರೆ ಸಹಾಯಕ ಕೃಷಿ ನಿರ್ದೇಶಕ ಪಿ.ರಾಘವೇಂದ್ರ.



ದಾಬಸ್‌ಪೇಟೆ ಸೋಂಪುರ ಹೋಬಳಿಯ ಹೊಲವೊಂದರಲ್ಲಿ ಸಮೃದ್ಧ ರಾಗಿ ಫಸಲು– ಪ್ರಜಾವಾಣಿ ಚಿತ್ರ



ಹಬ್ಬದ ಸಂಭ್ರಮ

ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಗುರುವಾರ ಭಾರಿ ಜನ ದಟ್ಟಣೆ ಕಂಡುಬಂತು– ಪ್ರಜಾವಾಣಿ ಚಿತ್ರ

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು

'ಪರಿಶಿಷ್ಟರ ಕಲ್ಯಾಣಕ್ಕೆ ಬಿಜೆಪಿ ಸಿದ್ಧವೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ (ಟಿಎಸ್‌ಪಿ) ಕಾಯ್ದೆಯನ್ನು ರಾಷ್ಟ್ರಮಟ್ಟದಲ್ಲಿ ಜಾರಿಗೆ ತಂದು ಬಜೆಟ್‌ನ ಶೇ 24ರಷ್ಟನ್ನು ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಡಲು ಬಿಜೆಪಿ ಸರ್ಕಾರ ಸಿದ್ಧ ಇದೆಯೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.



ಸಿದ್ದರಾಮಯ್ಯ

'ನಾನು ಪರಿಶಿಷ್ಟರನ್ನು ಅವಮಾನಿಸಿದ್ದೇನೆ ಎಂದು ಕೀಳುಮಟ್ಟದ ಆರೋಪಗಳನ್ನು ಬಿಜೆಪಿ ಎಸ್‌ಸಿ ಮೋರ್ಚಾದ ನಾಯಕರು ಮಾಡಿರುವುದನ್ನು ಗಮನಿಸಿದ್ದೇನೆ. ಸಿಂದಗಿಯಲ್ಲಿ ನಡೆದಿದ್ದ ಮಾದಿಗ ದಂಡೋರಾ ಸಭೆಯಲ್ಲಿ ಗೋವಿಂದ ಕಾರಜೋಳ, ರಮೇಶ ಜಿಗಜಿಣಗಿ, ನಾರಾಯಣ ಸ್ವಾಮಿ ಮತ್ತಿತರ ನಾಯಕರು ಅಂಬೇಡ್ಕರ್ ಮತ್ತು ಸಂವಿಧಾನವನ್ನು ವಿರೋಧಿಸುವ ಬಿಜೆಪಿ ಜೊತೆ ಸ್ವಾರ್ಥಕ್ಕಾಗಿ ಸೇರಿದ್ದಾರೆ ಎಂದು ಹೇಳಿದ್ದೇನೆಯೇ ಹೊರತು, ಪರಿಶಿಷ್ಟರು ಹೊಟ್ಟೆಪಾಡಿಗಾಗಿ ಬಿಜೆಪಿ ಸೇರಿದ್ದಾರೆ ಎಂದು ಹೇಳಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

'ನನ್ನನ್ನು ಪರಿಶಿಷ್ಟರ ವಿರೋಧಿ ಎಂದು ಚಿತ್ರಿಸಲು ಹೊರಟಿರುವ ಬಿಜೆಪಿ ಎಸ್‌ಸಿ ಮೋರ್ಚಾದ ತಥಾಕಥಿತ ನಾಯಕರು, ಅವರ ಪಕ್ಷದ ಸಂಸದ ಅನಂತಕುಮಾರ ಹೆಗಡೆ ಸಂವಿಧಾನ ಬದಲಿಸುತ್ತೇವೆ ಎಂದಾಗ, ಪರಿಶಿಷ್ಟರನ್ನು ನಾಯಿಗಳು ಎಂದು ತುಚ್ಛೀಕರಿಸಿದಾಗ ಎಲ್ಲಿ ಹೋಗಿದ್ದರು? ಯಾಕೆ ಬಾಯಿ ಮುಚ್ಚಿಕೊಂಡಿದ್ದರು? ಯಾಕೆ ಪ್ರತಿಭಟಿಸಲಿಲ್ಲ? ಎನ್ನುವುದನ್ನು ರಾಜ್ಯದ ಜನತೆಗೆ ತಿಳಿಸಬೇಕು' ಎಂದು ಆಗ್ರಹಿಸಿದ್ದಾರೆ.

'ರಾಜ್ಯ ಬಜೆಟ್‌ನ ಶೇ 24ರಷ್ಟನ್ನು ಮೀಸಲಿಡುವ ಎಸ್‌ಸಿಪಿ, ಟಿಎಸ್‌ಪಿ ಕಾಯ್ದೆಯನ್ನು ನಾನು ಜಾರಿಗೆ ತಂದಿದ್ದೆ. ಆಂಧ್ರಪ್ರದೇಶದಲ್ಲಿ ಇದೇ ಉದ್ದೇಶ ಕಾಯ್ದೆ ಇದ್ದರೂ ನಾವು ರಚಿಸಿದ ಕಾಯ್ದೆ ಹೆಚ್ಚು ಪ್ರಗತಿಪರವಾದುದು. ನಮ್ಮಲ್ಲಿನ ಕಾಯ್ದೆ ಪ್ರಕಾರ ಮೀಸಲಿಟ್ಟ ಶೇ 24ರಷ್ಟು ಹಣ ಖರ್ಚಾಗದಿದ್ದರೆ ಅದನ್ನು ಮುಂದಿನ ವರ್ಷಕ್ಕೆ ಬಳಸಬಹುದು. ಅಲ್ಲದೆ, ಖರ್ಚು ಮಾಡದ ಇಲಾಖೆಗಳ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬಹುದು' ಎಂದಿದ್ದಾರೆ.

'2008-09ರಿಂದ 2012-13ನೇ ಸಾಲಿನವರೆಗೆ ಬಿಜೆಪಿ ಸರ್ಕಾರ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಖರ್ಚು ಮಾಡಿದ್ದು ಕೇವಲ ₹ 22,261 ಕೋಟಿ. ನಮ್ಮ (ಕಾಂಗ್ರೆಸ್) ಸರ್ಕಾರದ ಅವಧಿಯಲ್ಲಿ ₹ 88,395 ಕೋಟಿ. ಯಾರು ದಲಿತ ವಿರೋಧಿ? ನಾನಾ? ಬಿಜೆಪಿ ನಾಯಕರಾ' ಎಂದೂ ಪ್ರಶ್ನಿಸಿದ್ದಾರೆ.

'ನಾನು ಮುಸ್ಲಿಮರ ವಿರೋಧಿ ಎಂದು ಬೊಬ್ಬಿಟ್ಟ ಪಕ್ಷದ ಅಭ್ಯರ್ಥಿಗಳ ಠೇವಣಿ ಜಪ್ತಿ ಮಾಡಿಸುವ ಮೂಲಕ ಉಪ ಚುನಾವಣೆಯಲ್ಲಿ ಮತದಾರರು ಉತ್ತರ ಕೊಟ್ಟಿದ್ದಾರೆ. ಈಗ ಬಿಜೆಪಿಯ ಕೆಲವು ನಾಯಕರು ನಾನು ಪರಿಶಿಷ್ಟರ ವಿರೋಧಿ ಎಂದು ಕೂಗಾಡುತ್ತಿದ್ದಾರೆ. ಅವರಿಗೂ ಮತದಾರರೇ ಉತ್ತರ ನೀಡಲಿದ್ದಾರೆ' ಎಂದೂ ಹೇಳಿದ್ದಾರೆ.

ಬಿಜೆಪಿಗರಿಗೆ ನಡುಕ: 'ಅಧಿಕಾರದಲ್ಲಿದ್ದರೂ ಪರಿಶಿಷ್ಟರನ್ನು ಮುಖ್ಯಮಂತ್ರಿಯನ್ನಾಗಿಸದೇ ಸ್ಥಿಮಿತ ಕಳೆದುಕೊಂಡವರಂತೆ ಮಾತನಾಡುವ ರಾಜ್ಯ ಬಿಜೆಪಿ ನಾಯಕರಿಗೆ, ಪರಿಶಿಷ್ಟರಪರ ಅತಿ ಹೆಚ್ಚು ಕೆಲಸ ಮಾಡಿರುವ ಸಿದ್ದರಾಮಯ್ಯ ಅವರ ಬದ್ಧತೆ ಕಂಡರೆ ನಡುಕ ಉಂಟಾಗುತ್ತದೆ' ಎಂದು ಟ್ವೀಟ್ ಮೂಲಕ ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಜೆಪಿಯಿಂದ ಷಡ್ಯಂತ್ರ: ಆಂಜನೇಯ



ಆಂಜನೇಯ

'ದೇವರಾಜ ಅರಸು ನಂತರ ಅಹಿಂದ ವರ್ಗಕ್ಕೆ ಹೆಚ್ಚು ಉಪಕಾರ ಮಾಡಿದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಸಿದ್ದರಾಮಯ್ಯ ಅವರದ್ದು. ಸಿದ್ದರಾಮಯ್ಯ ಅವರ ಜನಪ್ರಿಯತೆಯನ್ನು ಬಿಜೆಪಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಪರಿಶಿಷ್ಟ ಸಮುದಾಯ ಬಿಜೆಪಿ ಷಡ್ಯಂತ್ರ ಅರಿಯದಷ್ಟು ದಡ್ಡರಲ್ಲ' ಎಂದು ಕಾಂಗ್ರೆಸ್ ಮುಖಂಡ ಎಚ್. ಆಂಜನೇಯ ಹೇಳಿದ್ದಾರೆ.

'ಬಿಜೆಪಿ ಆಡಳಿತದಿಂದ ಬೇಸತ್ತಿರುವ ಜನ ಸಿದ್ದರಾಮಯ್ಯ ಆಡಳಿತವನ್ನು ಬಯಸುತ್ತಿದ್ದಾರೆ. ಇದರಿಂದ ಭೀತಿಗೆ ಒಳಗಾಗಿ ಸಿದ್ದರಾಮಯ್ಯ ವಿರುದ್ಧ ಪರಿಶಿಷ್ಟ ವರ್ಗವನ್ನು ಎತ್ತಿಕಟ್ಟಲು ಬಿಜೆಪಿ ನಾಯಕರು ಯತ್ನಿಸುತ್ತಿದ್ದಾರೆ. ಬೆಲೆ ಏರಿಕೆ, ಜನಪರ ಯೋಜನೆಗಳಿಗೆ ಕಡಿವಾಣ, ಜನವಿರೋಧಿ ನೀತಿಗಳ ಜಾರಿಯಿಂದ ಬೇಸತ್ತಿರುವ ಜನರು ಬಿಜೆಪಿಯನ್ನು ಶಪಿಸುತ್ತಿದ್ದಾರೆ. ಹೀಗಾಗಿ, ಜನರ ಗಮನ ಬೇರೆಡೆಗೆ ಸೆಳೆಯಲು ಬಿಜೆಪಿ ತಂತ್ರಗಾರಿಕೆ ಮಾಡುತ್ತಿದೆ' ಎಂದೂ ಅವರು ಆರೋಪಿಸಿದ್ದಾರೆ.

ಪ್ರತ್ಯೇಕ ಪ್ರಕರಣ: ನಿವೃತ್ತ ಪ್ರಾಂಶುಪಾಲ, ಬ್ಯಾಂಕ್ ಉದ್ಯೋಗಿಗೆ ಬೆದರಿಕೆ

ಹನಿಟ್ರ್ಯಾಪ್ ಜಾಲ; ಯುವತಿ ಸೇರಿ ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಪ್ರಾಂಶುಪಾಲ ಹಾಗೂ ಬ್ಯಾಂಕ್ ಉದ್ಯೋಗಿಯನ್ನು ಹನಿಟ್ರ್ಯಾಪ್ ಜಾಲಕ್ಕೆ ಬೀಳಿಸಿ ಹಣ ಸುಲಿಗೆ ಮಾಡಿದ್ದ ಪ್ರತ್ಯೇಕ ಪ್ರಕರಣಗಳನ್ನು ಭೇದಿಸಿರುವ ನಗರದ ಪೊಲೀಸರು, ಯುವತಿ ಸೇರಿ ಐವರನ್ನು ಬಂಧಿಸಿದ್ದಾರೆ.

'ಹನಿಟ್ರ್ಯಾಪ್ ಸಂಬಂಧ ನಂದಿನಿ ಲೇಔಟ್ ಹಾಗೂ ಗೋವಿಂದಪುರ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ಎರಡೂ ಪ್ರಕರಣದಲ್ಲಿ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನಂದಿನಿ ಲೇಔಟ್ ನಿವಾಸಿಯಾದ ನಿವೃತ್ತ ಪ್ರಾಂಶುಪಾಲ, ಬಾರ್ ಪರವಾನಗಿ ಪಡೆಯಲು ಪ್ರಯತ್ನಿಸುತ್ತಿದ್ದರು. ಅದನ್ನು ತಿಳಿದುಕೊಂಡಿದ್ದ ಆರೋಪಿ ತ್ರಿಷಾ, ಮೊಬೈಲ್‌ನಲ್ಲಿ ಪ್ರಾಂಶುಪಾಲರನ್ನು ಸಂಪರ್ಕಿಸಿದ್ದಳು. ಪರವಾನಗಿ ಕೊಡಿಸಲು ನೆರವಾಗುವುದಾಗಿ ಹೇಳಿದ್ದ ಆಕೆ, ಸಲುಗೆಯಿಂದ ಮಾತನಾಡಲಾರಂಭಿಸಿದ್ದಳು. ಇಬ್ಬರ ನಡುವೆ ಆತ್ಮೀಯತೆ ಬೆಳೆದಿತ್ತು' ಎಂದೂ ಹೇಳಿವೆ.

ವರದಿಗಾರರ ಸೋಗಿನಲ್ಲಿ ಕೃತ್ಯ: 'ಮುತ್ತು, ಪೆದ್ದ ರೆಡ್ಡಿ ಹಾಗೂ ದಾಮೋದರ್ ಎಂಬುವವರ ಜೊತೆ ಸೇರಿ ಸಂಚು ರೂಪಿಸಿದ್ದ ತ್ರಿಷಾ, ನಿವೃತ್ತ ಪ್ರಾಂಶುಪಾಲರಿಗೆ ಕರೆ ಮಾಡಿ ಮನೆಯೊಂದಕ್ಕೆ ಕರೆಸಿಕೊಂಡಿದ್ದಳು. ತ್ರಿಷಾ ಹಾಗೂ ಪ್ರಾಂಶುಪಾಲ ಒಟ್ಟಿಗೆ ಕುಳಿತಿದ್ದ ವೇಳೆಯಲ್ಲೇ ಇತರೆ ಆರೋಪಿಗಳು ಮನೆಗೆ ಬಂದಿದ್ದರು' ಎಂದೂ ಮೂಲಗಳು ತಿಳಿಸಿವೆ.

'ತಾವು ಸುದ್ದಿ ವಾಹಿನಿಯೊಂದರ ವರದಿಗಾರರೆಂದು ಹೇಳಿದ್ದ ಆರೋಪಿಗಳು, ನಕಲಿ ಗುರುತಿನ ಚೀಟಿ ತೋರಿಸಿದ್ದರು. ಯುವತಿ ಜೊತೆಗಿನ ವಿಡಿಯೊ ಇದ್ದು, ಅದನ್ನು ವಾಹಿನಿಯಲ್ಲಿ ಪ್ರಸಾರ ಮಾಡುವುದಾಗಿ ಬೆದರಿಸಿದ್ದರು. ₹ 5 ಲಕ್ಷ ಕೊಟ್ಟರೆ ವಿಡಿಯೊ ಪ್ರಸಾರ ಮಾಡುವುದಿಲ್ಲವೆಂದು ಹೇಳಿದ್ದರು. ಹೆದರಿದ್ದ ಪ್ರಾಂಶುಪಾಲ, ₹ 3 ಲಕ್ಷ ಕೊಟ್ಟಿದ್ದರು' ಎಂದೂ ಮೂಲಗಳು ವಿವರಿಸಿವೆ.

'ಪುನಃ ಆರೋಪಿಗಳು ಹಣಕ್ಕೆ ಬೇಡಿಕೆ ಇಟ್ಟಿದ್ದರು. ನೊಂದ ಪ್ರಾಂಶುಪಾಲ, ನಂದಿನಿ ಲೇಔಟ್ ಠಾಣೆಗೆ ದೂರು ನೀಡಿದ್ದರು' ಎಂದೂ ಮೂಲಗಳು ಹೇಳಿವೆ.

ಬ್ಯಾಂಕ್ ಉದ್ಯೋಗಿಗೆ ಬ್ಲ್ಯಾಕ್‌ಮೇಲ್: ಗೋವಿಂದಪುರ ಠಾಣೆ ವ್ಯಾಪ್ತಿಯಲ್ಲಿ ಬ್ಯಾಂಕ್ ಉದ್ಯೋಗಿಯೊಬ್ಬರನ್ನು ಹನಿಟ್ರ್ಯಾಪ್ ಮಾಡಿ ಹಣ ಸುಲಿಗೆ ಮಾಡಿದ್ದ ಆರೋಪಿ ಮೊಹಮ್ಮದ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ದೂರುದಾರ ಉದ್ಯೋಗಿಯ ಮೊಬೈಲ್‌ಗೆ ಯುವತಿಯೊಬ್ಬಳು ಕರೆ ಮಾಡಿದ್ದಳು. ಮಿಸ್ಡ್ ಕಾಲ್ ಎಂಬುದಾಗಿ ಹೇಳಿ ಕರೆ ಕಡಿತಗೊಳಿಸಿದ್ದಳು. ನಂತರ, 'ಮಿಸ್ಡ್ ಕಾಲ್ ಮಾಡಿದ್ದಕ್ಕೆ ಕ್ಷಮಿಸಿ' ಎಂದು ವಾಟ್ಸ್‌ಆ್ಯಪ್‌ಗೆ ಸಂದೇಶ ಕಳುಹಿಸಿದ್ದಳು. ಅದಕ್ಕೆ ಉತ್ತರಿಸಿದ್ದ ಉದ್ಯೋಗಿ, ಮಾತುಕತೆ ಮುಂದುವರಿಸಿದ್ದರು. ಇಬ್ಬರ ನಡುವೆ ಸಲುಗೆಯೂ ಬೆಳೆದಿತ್ತು' ಎಂದು ಮೂಲಗಳು ತಿಳಿಸಿವೆ.

'ಭೇಟಿಯಾಗಬೇಕೆಂದು ಹೇಳಿದ್ದ ಯುವತಿ, ಬ್ಯಾಂಕ್ ಉದ್ಯೋಗಿಯನ್ನು ಅ. 10ರಂದು ವೀರಣ್ಣಪಾಳ್ಯದ ಹೋಟೆಲೊಂದಕ್ಕೆ ಕರೆದಿದ್ದಳು. ದೂರುದಾರ ಹಾಗೂ ಯುವತಿ, ಹೋಟೆಲ್ ಕೊಠಡಿಯಲ್ಲಿ ಕುಳಿತಿದ್ದರು. ಕೊಠಡಿಗೆ ಪ್ರವೇಶಿಸಿದ್ದ ಇತರೆ ಆರೋಪಿಗಳು, ತಾವು ಪೊಲೀಸ್ ಎಂಬುದಾಗಿ ಹೇಳಿಕೊಂಡಿದ್ದರು.'

'ಯುವತಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದೀಯಾ, ಜೊತೆಗೆ ಡ್ರಗ್ಸ್ ಮಾರಲು ಬಂದಿದ್ದೀಯಾ ಎಂಬುದಾಗಿ ಗದರಿಸಿದ್ದ ಆರೋಪಿಗಳು, ಹಣಕ್ಕೆ ಬೇಡಿಕೆ ಇಟ್ಟಿದ್ದರು. ದೂರುದಾರರ ಮೂರು ಬ್ಯಾಂಕ್ ಖಾತೆಗಳಿಂದ ₹ 5.91 ಲಕ್ಷವನ್ನು ಆರೋಪಿಗಳು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಂಡು ಯುವತಿ ಸಮೇತ ಪರಾರಿಯಾಗಿದ್ದರು. ಈ ಬಗ್ಗೆ ಬ್ಯಾಂಕ್ ಉದ್ಯೋಗಿ ಗೋವಿಂದಪುರ ಠಾಣೆಗೆ ದೂರು ನೀಡಿದ್ದರು' ಎಂದೂ ಮೂಲಗಳು ವಿವರಿಸಿವೆ.

ಗೃಹ ಸಚಿವರ ಹೆಸರಿನಲ್ಲಿ ವಂಚನೆ: ವಶಕ್ಕೆ

ಬೆಂಗಳೂರು: ಗೃಹ ಸಚಿವ ಆರಗ ಜ್ಞಾನೇಂದ್ರ ಹೆಸರಿನಲ್ಲಿ ಹಣ ಪಡೆದು ವಂಚಿಸಿದ್ದ ಆರೋಪದಡಿ ಶಿವಮೊಗ್ಗದ ಭವಾನಿರಾವ್ ಮೋರೆ ಎಂಬುವರನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಬಿಜೆಪಿ ಮುಖಂಡನೆಂದು ಹೇಳಿಕೊಂಡು ಓಡಾಡುತ್ತಿದ್ದ ಭವಾನಿರಾವ್, 'ಲೇಡಿಸ್ ಡ್ಯಾನ್ಸ್ ಬಾರ್' ತೆರೆಯಲು ಪರವಾನಗಿ ಕೊಡಿಸುವುದಾಗಿ ಹೇಳಿ ಗೃಹ ಸಚಿವರ ಹೆಸರಿನಲ್ಲಿ ಹಣ ಪಡೆದು ವಂಚಿಸಿದ್ದರು ಎನ್ನಲಾಗಿದೆ. ಈ ಸಂಬಂಧ ಉದ್ಯಮಿ ಬಿ. ಸುರೇಶ್ ಎಂಬುವರು ಕಬ್ಬನ್ ಪಾರ್ಕ್ ಠಾಣೆಗೆ ದೂರು ನೀಡಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಶಿವಮೊಗ್ಗದ ಬಿಜೆಪಿ ಮುಖಂಡರ ಜೊತೆ ಭವಾನಿರಾವ್ ಸುತ್ತಾಡುತ್ತಿದ್ದರು. ಮುಖಂಡರ ಜೊತೆ ತೆಗೆಸಿಕೊಂಡಿದ್ದ ಫೋಟೊಗಳನ್ನು ತೋರಿಸಿ ಜನರನ್ನು ನಂಬಿಸುತ್ತಿದ್ದರು' ಎಂದೂ ವಿವರಿಸಿವೆ.

'ರಾಜ್ಯ ಸರ್ಕಾರ ಹಾಗೂ ಪೊಲೀಸ್ ಇಲಾಖೆಯಿಂದ ಡ್ಯಾನ್ಸ್ ಬಾರ್‌ಗೆ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿ ಹೇಳಿದ್ದ ಆರೋಪಿ, ದೂರುದಾರರಿಂದ ಅ. 30ರಂದು ₹ 1.25 ಕೋಟಿ ಪಡೆದಿದ್ದರು. ಬಾರ್‌ಗೆ ಪರವಾನಗಿ ಸಿಗದಿದ್ದರಿಂದ ₹ 1 ಕೋಟಿ ವಾಪಸು ಕೊಟ್ಟಿದ್ದರು. ಉಳಿದ ₹ 25 ಲಕ್ಷ ನೀಡದೇ ಸತಾಯಿಸುತ್ತಿದ್ದರು' ಎಂದೂ ಮೂಲಗಳು ಹೇಳಿವೆ.

ತೇಜಸ್ವಿ ಪ್ರತಿಷ್ಠಾನ: ಕೈಬರಹ ಸ್ಪರ್ಧೆ

ಕೊಟ್ಟಿಗೆಹಾರ: ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಇಲ್ಲಿನ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದ ವತಿಯಿಂದ 'ಕನ್ನಡ ಕೈಬರಹ ಸ್ಪರ್ಧೆ ಆಯೋಜಿಸಿಲಾಗಿದೆ.

ಮಾಹಿತಿಗೆ 9663098873 , 8971920839 ಸಂಖ್ಯೆ ಸಂಪರ್ಕಿಸಬಹುದು ಎಂದು ಪ್ರತಿಷ್ಠಾನವು ಪ್ರಕಟಣೆಯಲ್ಲಿ ತಿಳಿಸಿದೆ.

ದಲಿತರನ್ನೇ ಸಿಎಂ ಮಾಡುವುದಾಗಿ ಪ್ರಕಟಿಸಿ: ಬಿಜೆಪಿ

'ಸಿದ್ದರಾಮಯ್ಯ ಬಣ್ಣದ ತಗಡಿನ ತುತ್ತೂರಿ'

ಬೆಂಗಳೂರು: 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಾನೇ ಮುಂದೆ ನಿಂತು ದಲಿತರನ್ನು ಮುಖ್ಯಮಂತ್ರಿ ಮಾಡುತ್ತೇನೆ ಎಂದು ಪ್ರಕಟಿಸಿ' ಎಂದು ಬಿಜೆಪಿ ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿದೆ.

'ನೀವು ಈ ರೀತಿ ಪ್ರಕಟಿಸಿದರೆ ನಿಮ್ಮ ದಲಿತ ಪ್ರೇಮವನ್ನು ಒಪ್ಪಿಕೊಳ್ಳಬಹುದು. ಇಲ್ಲವಾದರೆ ಬಣ್ಣದ ತಗಡಿನ ತುತ್ತೂರಿ' ಎಂದು ಬಿಜೆಪಿ ಟ್ವೀಟ್ ಮಾಡಿದೆ.

'ಈಗ ದಲಿತ ಪರ ಕಾಳಜಿ ತೋರಿಸುತ್ತಿದ್ದೀರಿ. ಆದರೆ ಕೊರಟಗೆರೆಯಲ್ಲಿ ದಲಿತ ನಾಯಕ ಜಿ.ಪರಮೇಶ್ವರ ಅವರನ್ನು ಸೋಲಿಸಿದ್ದು ಯಾರು? ಪರಮೇಶ್ವರ ಅವರು ಗೆದ್ದರೆ ಮುಖ್ಯಮಂತ್ರಿ ಆಗಲು ಅಡ್ಡಿ ಆಗುತ್ತಾರೆ ಎನ್ನುವ ಕಾರಣಕ್ಕೆ ನೀವೇ ಸೋಲಿಸಿದ್ದಲ್ಲವೆ. ಈ ಬಗ್ಗೆ ಸತ್ಯ ದರ್ಶನ ಮಾಡಿಸುವಿರೇ' ಎಂದು ಬಿಜೆಪಿ ವ್ಯಂಗ್ಯವಾಡಿದೆ.

'ದಲಿತ ನಾಯಕ ಡಾ.ಮಹಾದೇವಪ್ಪ ಅವರನ್ನು ದೂರವಿಟ್ಟಿದ್ದು ಹೊಟ್ಟೆ ಪಾಡಿಗಾಗಿಯೇ? ಪರಮೇಶ್ವರ ಅವರ ಏಳಿಗೆ ಸಹಿಸದ್ದು ಹೊಟ್ಟೆ ಪಾಡಿನ ಕಾರಣಕ್ಕಾಗಿಯೇ? ಈಗ ನೀವು ದಲಿತ ಪರ ಹೇಳಿಕೆ ನೀಡುತ್ತಿರುವುದು ಹೊಟ್ಟೆ ಪಾಡಿಗಾಗಿಯೇ? ಮಲ್ಲಿಕಾರ್ಜುನ ಖರ್ಗೆ ಅವರನ್ನು ನೀವು ಪಿತೂರಿ ಮಾಡಿ ದೆಹಲಿಗೆ ಸಾಗ ಹಾಕಿದ್ದು ಹೊಟ್ಟೆ ಪಾಡಿಗಾಗಿಯೇ' ಎಂದು ಮತ್ತೊಂದು ಟ್ವೀಟ್‌ನಲ್ಲಿ ಪ್ರಶ್ನಿಸಿದೆ.

'ಸಿದ್ದರಾಮಯ್ಯ ಅವರಿಗೆ ದಲಿತರು ಎಂದರೆ ಕೇವಲ ಮತಬ್ಯಾಂಕ್. ಈ ಕಾರಣಕ್ಕಾಗಿಯೇ ತಮ್ಮ ಸರ್ಕಾರ ಇದ್ದಾಗ ದಲಿತ ಸಮುದಾಯದ ಅಭಿವೃದ್ಧಿಗೆ ಹಣ ನೀಡಿದ್ದೇನೆ ಎಂದು ಹೇಳುತ್ತಾರೆ. ಆದರೆ ಆಂತರ್ಯದಲ್ಲಿ ದಲಿತ ನಾಯಕರನ್ನು ತುಳಿದು ಅಧಿಕಾರಕ್ಕೆ ಏರುತ್ತಾರೆ' ಎಂದು ಬಿಜೆಪಿ ಟೀಕಿಸಿದೆ.

ಪುನೀತ್ ರಾಜ್‌ಕುಮಾರ್ ಅಭಿಮಾನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ನಟ ಪುನೀತ್ ರಾಜಕುಮಾರ್ ನಿಧನದಿಂದ ಮಾನಸಿಕವಾಗಿ ನೊಂದಿದ್ದ ಅವರ ಅಭಿಮಾನಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುರುವಾರ ನಗರದ ಎಲೇಕೇರಿಯಲ್ಲಿ ನಡೆದಿದೆ.



ವೆಂಕಟೇಶ್

ವೆಂಕಟೇಶ್ (30) ಆತ್ಮಹತ್ಯೆ ಮಾಡಿಕೊಂಡವರು. ಈತ ಎಲೇಕೇರಿಯ ಕೃಷ್ಣಮೂರ್ತಿ ಎಂಬುವವರ ಪುತ್ರ. ನಗರದ ಲಕ್ಷ್ಮಿ ಚಿತ್ರಮಂದಿರದ ಬಳಿ ವೆಂಕಿ ಜೆಂಟ್ಸ್ ಪಾರ್ಲರ್ ಇಟ್ಟುಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದರು.

ಅವಿವಾಹಿತರಾಗಿದ್ದ ಅವರು ಪುನೀತ್ ಅವರ ಅಪ್ಪಟ ಅಭಿಮಾನಿಯಾಗಿದ್ದರು.

ಶ್ರೀರಾಮನ ಆಶೀರ್ವಾದ ಕೋರಿದ ಕೇಜ್ರಿವಾಲ್

ನವದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಅವರ ಪತ್ನಿ ಸುನೀತಾ ಕೇಜ್ರಿವಾಲ್ ಹಾಗೂ ಸಂಪುಟದ ಸಚಿವರೊಂದಿಗೆ ಇಲ್ಲಿನ ತ್ಯಾಗರಾಜ್ ಸ್ಟೇಡಿಯಂನಲ್ಲಿ ಅಯೋಧ್ಯೆಯ ಶ್ರೀರಾಮ ಮಂದಿರದ ಮಾದರಿಯ ವೇದಿಕೆಯಲ್ಲಿ ದೀಪಾವಳಿ ಪೂಜೆ ಮಾಡಿದರು.

ಆಚಾರ್ಯ ಶ್ರೀಕಾಂತ ಶಾಸ್ತ್ರಿಗಳ ಶ್ಲೋಕಗಳ ಪಠಣದ ನಡುವೆ ಕೇಜ್ರಿವಾಲ್ ದಂಪತಿ ಧಾರ್ಮಿಕ ವಿಧಿಗಳನ್ನು ನಡೆಸಿದರು.

ಉತ್ತರಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಅರವಿಂದ ಕೇಜ್ರಿವಾಲ್ ಮತ್ತು ಎಎಪಿ ನಾಯಕರು ಇತ್ತೀಚೆಗಷ್ಟೇ ಅಯೋಧ್ಯೆಗೆ ಭೇಟಿ ನೀಡಿದ್ದರು.

ಅಲ್ಲಿನ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿದ್ದ ಕೇಜ್ರಿವಾಲ್ ಎಎಪಿಯು ಮೃದು ಹಿಂದುತ್ವದ ಒಲವು ತೋರುತ್ತಿರುವ ಕುರಿತು ಸೂಚ್ಯವಾಗಿ ಗಮನ ಸೆಳೆದಿದ್ದರು.

ಹೋರಾಟ ಸಮಿತಿಯಿಂದ ನಿರ್ಣಯ ಅಂಗೀಕಾರ

22ರಿಂದ ಮತ್ತೆ ಮೇಕೆದಾಟು ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಕನಕಪುರ: ಮೇಕೆದಾಟುವಿನಲ್ಲಿ ಜಲಾಶಯ ನಿರ್ಮಾಣ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ನ. 22ರಂದು ಕನಕಪುರದಿಂದ ಪಾದಯಾತ್ರೆ ಪ್ರಾರಂಭಿಸುವುದಾಗಿ ಕರ್ನಾಟಕ ರಾಜ್ಯ ಮೇಕೆದಾಟು ಹೋರಾಟ ಸಮಿತಿಯ ಜಿಲ್ಲಾ ಅಧ್ಯಕ್ಷ ಎಂ.ಡಿ. ಶಿವಕುಮಾರ್ ತಿಳಿಸಿದರು.


ತಾಲ್ಲೂಕಿನ ಹಾರೋಹಳ್ಳಿಯಲ್ಲಿ ಮೇಕೆದಾಟು ಹೋರಾಟ ಸಮಿತಿಯಿಂದ ನಡೆಸುತ್ತಿರುವ ಪಾದಯಾತ್ರೆ ಕುರಿತು ಗುರುವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಅಣೆಕಟ್ಟೆ ನಿರ್ಮಾಣ ಮಾಡುವಂತೆ ಒತ್ತಾಯಿಸಿ ಈ ಹಿಂದೆ ಪಾದಯಾತ್ರೆ ನಡೆಸಿದ ಸಂದರ್ಭದಲ್ಲಿ ಹೋರಾಟಗಾರರ ನೈತಿಕ ಬಲವನ್ನು ಕುಗ್ಗಿಸಲು ಜಿಲ್ಲಾಡಳಿತವು ಕನಕಪುರದಲ್ಲಿ ಪಾದಯಾತ್ರೆ ತಡೆದು ಬಂಧಿಸಿತ್ತು. ಅಲ್ಲಿಗೆ ನಮ್ಮ ಹೋರಾಟ ಮುಗಿದಿಲ್ಲ. ಮುಂದೆ ನಮ್ಮ ಹೋರಾಟವನ್ನು ಮುಂದುವರಿಸಿ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದಾಗಿ ಹೇಳಿದರು.

ನ. 22ರಿಂದ ಪ್ರಾರಂಭಗೊಳ್ಳುವ ಪಾದಯಾತ್ರೆಯ ರೂಪರೇಷೆ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಿ ಪಾದಯಾತ್ರೆಯಲ್ಲಿ ಯಾವ ರೀತಿ ತೊಡಗಿಸಿಕೊಳ್ಳಬೇಕು. ಯಾರು ಯಾವ ಜವಾಬ್ದಾರಿ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು.

ಹೋರಾಟಕ್ಕೆ ಎಲ್ಲಾ ಸಂಘ, ಸಂಸ್ಥೆಗಳು, ಜನರು ಸಹಕಾರ ನೀಡಬೇಕು ಎಂದು ಕೋರಲಾಯಿತು.

ಮೇಕೆದಾಟು ಹೋರಾಟ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಸಂಪತ್‌ಕುಮಾರ್, ಪದಾಧಿಕಾರಿಗಳಾದ ದೇವರಾಜು, ಜಗದೀಶ್, ಗಜೇಂದ್ರ ಸಿಂಗ್, ವೆಂಕಟರಮಣಯ್ಯ, ತಾತಯ್ಯ, ರಾಜಣ್ಣ ಇದ್ದರು.



ಹಾರೋಹಳ್ಳಿಯಲ್ಲಿ ಮೇಕೆದಾಟು ಹೋರಾಟ ಕುರಿತು ಸಮಿತಿಯ ಪದಾಧಿಕಾರಿಗಳ ಸಭೆ ನಡೆಯಿತು

‘ಮುಂದ...’ ಸ್ಫೂರ್ತಿಯ ಮಂತ್ರ

ಪ್ರತಿ ಕೆಲಸವನ್ನು ಶ್ರದ್ಧೆಯಿಂದ ಮಾಡಿ. ಹೊಸತನದ, ಸಕಾರಾತ್ಮಕ ಜಗತ್ತಿಗೆ ತೆರೆದುಕೊಳ್ಳಿ ಎನ್ನುತ್ತಾ ರಾಮ, ಶಾಮ ಭಾಮದ ಸಂಭಾಷಣೆ ‘ಮುಂದ’ ಶಬ್ದವನ್ನೇ ಸ್ಫೂರ್ತಿಯ ಮಂತ್ರವಾಗಿಸಿಕೊಂಡು ಬಹುಮುಖಿಯಾಗಿ ತೊಡಗಿಕೊಂಡಿರುವವರು ನಟ, ನಿರ್ದೇಶಕ ರಮೇಶ್ ಅರವಿಂದ್. ಅವರ 102ನೇ ಚಿತ್ರ ‘100’ ತೆರೆ ಕಾಣುತ್ತಿರುವ ನೆಪದಲ್ಲೊಂದಿಷ್ಟು ಮಾತುಕತೆ...



ರಮೇಶ್ ಅರವಿಂದ್

ಶರತ್ ಹೆಗ್ಡೆ

- **ದೀರ್ಘ ಕಾಲದ ನಂತರ ಹೊಸ ಬಗೆಯ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೀರಿ...**

– ಹೌದು, ಸದಾ ಹೊಸತನಕ್ಕೆ ತೆರೆದುಕೊಳ್ಳುವವನು ನಾನು. ‘100’ ಸಿನಿಮಾ ಪ್ರಸ್ತುತ ಸನ್ನಿವೇಶದ ಜೊತೆಗೇ ಬೆಸೆದುಕೊಂಡಿದೆ. ವಾಸ್ತವ ಜಗತ್ತಿನಲ್ಲಿ ಏನು ನಡೆಯುತ್ತಿದೆ, ಅದು ನಮ್ಮ ಬದುಕನ್ನು ಹೇಗೆ ಆವರಿಸುತ್ತಿದೆ ಎಂಬುದನ್ನು ಹೇಳಬೇಕಿತ್ತು. ಇದುವರೆಗೆ ಥ್ರಿಲ್ಲರ್ ಪ್ರಕಾರಕ್ಕೆ ನಾನು ಹೋಗಿರಲಿಲ್ಲ. ಥ್ರಿಲ್ಲರ್‌ನಲ್ಲೂ ಇದು ಫ್ಯಾಮಿಲಿ ಥ್ರಿಲ್ಲರ್. ಕಥೆ ಕೂಡ ಹಾಗೆಯೇ, ಕುಟುಂಬದ ಒಳಗೇ ನಡೆಯುತ್ತದೆ. ಪ್ರೇಕ್ಷಕರಾಗಿಯೂ ಇಡೀ ಕುಟುಂಬ ನೋಡಬೇಕಾದ ಚಿತ್ರ.

- **ಏನಿದು ‘100’, ಅದರಲ್ಲಿ ರಮೇಶ್ ಯಾರು?**

– ‘100’ ಎಂದರೆ ಪೊಲೀಸ್ ಸಹಾಯವಾಣಿ. ಇಡೀ ಕಥೆ ಸೈಬರ್ ಅಪರಾಧದ ಸುತ್ತ ಇದೆ. ಇದರಲ್ಲಿ ನನ್ನದು ಇನ್‌ಸ್ಪೆಕ್ಟರ್ ವಿಷ್ಣು ಅನ್ನುವ ಪಾತ್ರ. ಬಹಳ ಗಂಭೀರ ಪಾತ್ರ. ನನ್ನ ಮತ್ತು ಒಬ್ಬ ಸೈಬರ್ ಸ್ಟಾಕರ್ ನಡುವೆ ನಡೆಯುವ ಘರ್ಷಣೆ ಚಿತ್ರದ ಕಥೆ. ಈಗಿನ ಪ್ಲಸ್ ಮತ್ತು ಮೈನಸ್ ಪಾಯಿಂಟ್‌ಗಳು ಎರಡೂ ಇರುವುದೂ ಸಾಮಾಜಿಕ ಮಾಧ್ಯಮದಲ್ಲಿ. ಅದನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ ಮಾಧ್ಯಮ ತಪ್ಪು ವ್ಯಕ್ತಿಗಳ ಕೈಗೆ ಸಿಕ್ಕಿದರೆ ಏನಾಗುತ್ತದೆ ಎಂಬುದನ್ನು ಹೇಳಿದ್ದೇನೆ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಈ ಚಿತ್ರ ಬಿಡುಗಡೆ ಆಗಲಿದೆ.

- **‘100’ರಲ್ಲಿ ಏನು ಹೇಳಲು ಹೊರಟಿದ್ದೀರಿ?**

ಈಗ ನಿಮ್ಮ ಮನೆಯೊಳಗೆ ಅನುಮತಿ ಇಲ್ಲದೇ ನಿಮ್ಮ ಮೊಬೈಲ್ ಮೂಲಕ ಯಾರ್‍ಯಾರೋ ಪ್ರವೇಶಿಸಿ ಏನೇನನ್ನೋ ತುಂಬುತ್ತಿದ್ದಾರೆ. ಬ್ರೈನ್‌ವಾಷ್ ಮಾಡುತ್ತಿದ್ದಾರೆ. ಇಂಟರ್‌ನೆಟ್ ಅನ್ನುವುದು ಅಟಂ ಬಾಂಬ್ ಇದ್ದ ಹಾಗೆ. ಸರ್ವನಾಶ ಮಾಡಲೂಬಹುದು. ಅದನ್ನು ಇಲ್ಲಿ ಹೇಳಿದ್ದೇನೆ. ಕಮರ್ಷಿಯಲ್ ಚಿತ್ರವಿದು. ಒಳ್ಳೆಯ ಪ್ರತಿಭೆಗಳ ತಂಡ ಈ ಚಿತ್ರದಲ್ಲಿದೆ.

ಬಹಳ ಕಾಲದ ಬಳಿಕ ಸಾಹಸ ದೃಶ್ಯದಲ್ಲಿ ಕಾಣಿಸಿದ್ದೇನೆ. ಎಲ್ಲ ಚಿತ್ರಗಳಲ್ಲಿ ಹೀರೊ ವಿಲನ್‌ಗೆ ಹೊಡೆಯುತ್ತಾನಲ್ಲಾ... ಆದರೆ, ಯಾವ ಕಾರಣಕ್ಕೆ ಹೊಡೆಯುತ್ತಾನೆ ಎಂಬುದನ್ನು ಸ್ಪಷ್ಟಪಡಿಸಿ ಹೊಡೆಯಬೇಕು. ಅದು ಪ್ರೇಕ್ಷಕರಿಗೆ ಇಷ್ಟವಾಗುತ್ತದೆ.

- **ಕೋವಿಡ್ ಪರಿಣಾಮ ‘100’ ಚಿತ್ರದ ಮೇಲೆ ಹೇಗಾಯಿತು?**

ಕೋವಿಡ್ ಎಲ್ಲರ ಮೇಲೂ ಪರಿಣಾಮ ಬೀರಿದೆ. ಶಿವಾಜಿ ಸುರತ್ಕಲ್ ಬಿಡುಗಡೆಯಾಗಿ 50ನೇ ದಿನಕ್ಕೆ ‘100’ನ್ನು ಬಿಡುಗಡೆ ಮಾಡಬೇಕು ಅಂದುಕೊಂಡಿದ್ದೆ. ಕೋವಿಡ್‌ನಿಂದ ಸುಮಾರು 1 ವರ್ಷ ತಡವಾಯಿತು. ಆದರೆ, ಕುಟುಂಬದೊಡನೆ ಕಾಲಕಳೆಯಲು, ಒಂದಿಷ್ಟು ಓದಿಕೊಳ್ಳಲು ಸಮಯ ಸಿಕ್ಕಿತು.

- **ಶಿವಾಜಿ ಸುರತ್ಕಲ್–2 ಸಿದ್ಧತೆ ಹೇಗಿದೆ?**

– ಶಿವಾಜಿ ಸುರತ್ಕಲ್–2ಗೆ ಕಲಾವಿದರ ಆಯ್ಕೆ ನಡೆದು ಎಲ್ಲ ಸಿದ್ಧತೆಗಳು ನಡೆದಿವೆ. ಮುಂದಿನ ಬೇಸಿಗೆ ರಜೆ ವೇಳೆಗೆ ನೀವು ‘ಶಿವಾಜಿ ಸುರತ್ಕಲ್–2’ಅನ್ನು ನೋಡಬಹುದು.

- **ಮತ್ತೆ ತುಂಟ, ಲವ್ವರ್ ಬಾಯ್ ರಮೇಶ್ ಅವರನ್ನು ಕಾಣಬಹುದೇ?**

– ನಮ್ಮದು ಕ್ರಿಯೇಟಿವ್ ತುಂಟತನ. ಕಾಲೇಜು ವೇದಿಕೆಗಳಲ್ಲೆಲ್ಲಾ ತುಂಟತನ ಮಾಡುತ್ತಿದ್ದೆ. ತುಂಟತನದ ಅನೇಕ ಪಾತ್ರಗಳು ನನ್ನ ಸ್ವಭಾವಕ್ಕೆ ಹೊಂದುತ್ತಿದ್ದವು.

ಲವರ್ ಬಾಯ್ ಇಮೇಜ್‌ಗೆ ಯಾವ ರೀತಿಯ ಕಥೆಗಳು ಬರುತ್ತವೆ ಅನ್ನುವುದೂ ಮುಖ್ಯ. ಎಷ್ಟೋ ಜನ ಹುಡುಗರು ನನ್ನ ‘ತ್ಯಾಗರಾಜ’ನ ತರಹ ಭಾವನೆ ಹೇಳದೇ ಹೋಗುತ್ತಾರೆ. ಮನುಷ್ಯನ ಭಾವನೆಗಳು ಹೀಗೆಯೇ ಅಲ್ವಾ? ರಾಮನ ಕಾಲದಲ್ಲೂ ಅದೇ ಇತ್ತು. ಈಗಲೂ ಅದೇ ಇದೆ. ಅದನ್ನು ಹೇಗೆ ಪ್ಯಾಕೇಜ್ ಮಾಡುತ್ತೇವೆ ಅನ್ನುವುದು ಮುಖ್ಯ. ಈಗಲೂ ಮಾಡಬಹುದು. ಆದರೆ, ಬೇರೆಯೇ ರೀತಿ ಅಷ್ಟೆ.

- **ಡಿಜಿಟಲ್ ವೇದಿಕೆಗೆ ಬರುತ್ತಿದ್ದೀರಂತೆ?**

ನನ್ನ ಮೂಲವೇ ಸೃಜನಶೀಲತೆ. ಅದನ್ನು ಮರೆಯುವುದಿಲ್ಲ. ಮರುಹುಡುಕಾಟ ಮಾಡುತ್ತಲೇ ಇರಬೇಕು. ನಮ್ಮನ್ನು ನಾವೇ ಮತ್ತೆ ಮತ್ತೆ ಹುಟ್ಟಿಸಿಕೊಳ್ಳಬೇಕು. ಡಿಜಿಟಲ್ ವೇದಿಕೆಗೆ ಎಂದು ಒಂದು ವಿಷಯ ಸಿದ್ಧಪಡಿಸಿದ್ದೆ. ಅದು ಕನ್ನಡಿಗರೇ ಕಟ್ಟುವ ವೇದಿಕೆಗೆ ಸಿದ್ಧಪಡಿಸಿದ್ದು. ಮುಂದೆ ನೋಡೋಣ. ಡಿಜಿಟಲ್ ವೇದಿಕೆ ಹೇಗೆಲ್ಲಾ ಬೆಳೆಯುತ್ತದೋ ಅದಕ್ಕೆ ತಕ್ಕಂತೆ ತೆರೆದುಕೊಳ್ಳುತ್ತೇನೆ. ಹಾಗೆಯೇ ಇದುವರೆಗೆ ಎರಡು ಗಂಟೆಗೆ ಸಿನಿಮಾ ಮಾಡುತ್ತಿದ್ದೇನೆ. ಮುಂದೆ ಒಟಿಟಿಗೆ ಮಾಡುವುದಾದರೆ ಎರಡು ಗಂಟೆಗಳ ಕಥೆಯನ್ನು ಹತ್ತು ಭಾಗಗಳಲ್ಲಿ ಹೇಳಬೇಕಾಗುತ್ತದೆ. ಅದರ ಬರಹವೇ ಬೇರೆ. ಜನ ಮುಂದಿನ ಸಂಚಿಕೆಗೆ ಕಾಯುವಂತಾಗಬೇಕು. ಅಂಥ ಕನ್ನಡದ ಅದ್ಭುತ ಕಂಟೆಂಟ್ ಒಟಿಟಿಯಲ್ಲಿ ಬರಬೇಕು. ❖

ಕೆಲಸ ಬಿಟ್ಟು ಬಂದ ಬೃಂದಾ



ಬೃಂದಾ ಆಚಾರ್ಯ

ನಿರೂಪಣೆ: ಅಭಿಲಾಷ್ ಪಿ.ಎಸ್.

ಕಿರುತೆರೆಯ ಪೌರಾಣಿಕ ಧಾರಾವಾಹಿಗಳಲ್ಲಿ ಕಾಣಿಸಿಕೊಂಡಿದ್ದ ನಟಿ ಬೃಂದಾ ಆಚಾರ್ಯ ಇದೀಗ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾರೆ. ‘ನೆನಪಿರಲಿ’ ಖ್ಯಾತಿಯ ನಟ ಪ್ರೇಮ್ ಅವರ 25ನೇ ಸಿನಿಮಾ ‘ಪ್ರೇಮಂ ಪೂಜ್ಯಂ’ ಮುಖಾಂತರ ಸ್ಯಾಂಡಲ್‌ವುಡ್‌ಗೆ ಬೃಂದಾ ಮೊದಲ ಹೆಜ್ಜೆ ಇಡುತ್ತಿದ್ದಾರೆ. ಸಿನಿಮಾದ ವಿಶೇಷ ಏನೆಂದರೆ ನಾಯಕ–ನಾಯಕಿ ಸಿನಿಮಾದಲ್ಲಿ ಒಬ್ಬರನ್ನೊಬ್ಬರು ಮುಟ್ಟುವುದೇ ಇಲ್ಲ. ಡಾ.ರಾಘವೇಂದ್ರ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಇಂಥ ವಿಭಿನ್ನ ಕಥಾಹಂದರದ ಈ ಸಿನಿಮಾ ನ.12ರಂದು ತೆರೆ ಮೇಲೆ ಬರುತ್ತಿದೆ. ಇಂಥ ಸಿನಿಮಾಗಾಗಿಯೇ ಕೈತುಂಬಾ ವೇತನ ಸಿಗುತ್ತಿದ್ದ ಐ.ಟಿ ಕೆಲಸಕ್ಕೆ ವಾರದಲ್ಲೇ ರಾಜೀನಾಮೆ ನೀಡಿ ಬಂದಿದ್ದ ಬೃಂದಾ ಅವರು ತಮ್ಮ ನಟನೆಯ ಪಯಣದ ಬಗ್ಗೆ ಹೀಗೆನ್ನುತ್ತಾರೆ....

ಸಿನಿಮಾಕ್ಕಾಗಿ ಬೆಂಗಳೂರಿಗೆ ಶಿಫ್ಟ್!

ನನ್ನ ಮಾತೃಭಾಷೆ ಕನ್ನಡ ಆಗಿದ್ದ ಕಾರಣ, ಕನ್ನಡ ಸಿನಿಮಾ ಕ್ಷೇತ್ರದಲ್ಲೇ ಪ್ರಯತ್ನಿಸಬೇಕು ಎಂದು ನಿರ್ಧರಿಸಿದ್ದೆ. ಇದಕ್ಕಾಗಿ ಮುಂಬೈಯಲ್ಲಿ ಕೆಲಸ ತೊರೆದು, ಬೆಂಗಳೂರಿನಲ್ಲಿ ಹೊಸ ಐ.ಟಿ. ಕೆಲಸಕ್ಕೆ ಸೇರಿದ್ದೆ. ಆದರೆ ಬೆಂಗಳೂರಿಗೆ ಬಂದ ಸಂದರ್ಭದಲ್ಲಿ ಚಿತ್ರರಂಗದಲ್ಲಿ ಯಾರ ಪರಿಚಯವೂ ನನಗೆ ಇರಲಿಲ್ಲ. ಒಳ್ಳೆಯ ಕೆಲಸ, ವೇತನ ಎಲ್ಲವನ್ನೂ ಬಿಟ್ಟು ಏನೂ ತಿಳಿಯದೇ ಇರುವ ಕ್ಷೇತ್ರಕ್ಕೆ ಕಾಲಿಡುವ ಬಗ್ಗೆ ಅಪ್ಪ, ಅಮ್ಮನಿಗೂ ಅಳುಕಿತ್ತು. ಕಿರುತೆರೆ ಪಯಣ ಪ್ರಾರಂಭಿಸಿದ ಸಂದರ್ಭದಲ್ಲಿ ಐ.ಟಿ. ಕೆಲಸದ ಜೊತೆಗೇ ಅದರ ಚಿತ್ರೀಕರಣದಲ್ಲೂ ಭಾಗವಹಿಸುತ್ತಿದ್ದೆ. ನಾನು ಮಾಡಿದ ‘ಮಹಾಕಾಳಿ’ ಹಾಗೂ ‘ಶನಿ’ ಧಾರಾವಾಹಿಗಳು ಪೌರಾಣಿಕ ಧಾರಾವಾಹಿಗಳು.


ಶನಿ ಧಾರಾವಾಹಿ ಪೂರ್ಣಗೊಂಡ ಬಳಿಕ ಆಲ್ಬಂ ಸಾಂಗ್‌ಗಾಗಿ ಒಬ್ಬರು ಸಹಾಯಕ ನಿರ್ದೇಶಕರು ಕರೆ ಮಾಡಿದ್ದರು. ಆದರೆ ನನ್ನ ಪರಿಚಯ ನೋಡಿ ‘ಪ್ರೇಮಂ ಪೂಜ್ಯಂ’ನಲ್ಲಿನ ನಾಯಕಿ ಪಾತ್ರಕ್ಕೆ ನಾನು ಸೂಕ್ತ ಎಂದು ನಿರ್ಧರಿಸಿ, ನಿರ್ದೇಶಕ ಡಾ.ರಾಘವೇಂದ್ರ ಅವರಿಗೆ ನನ್ನ ಪ್ರೊಫೈಲ್ ಕಳುಹಿಸಿದ್ದರು. 2019ರ ಮಾರ್ಚ್‌ನಲ್ಲಿ ‘ಪ್ರೇಮಂ ಪೂಜ್ಯಂ’ ಪ್ರಾಜೆಕ್ಟ್ ಸಿಕ್ಕಿದ ಬಳಿಕ ಪೂರ್ಣವಾಗಿ ನಾನು ಇದರಲ್ಲಿ ತೊಡಗಿಸಿಕೊಳ್ಳಬೇಕು ಎಂದು ನಿರ್ಧರಿಸಿ, ಒಂದೇ ವಾರದಲ್ಲಿ ಕೆಲಸಕ್ಕೆ ರಾಜೀನಾಮೆ ನೀಡಿದ್ದೆ.

ನನಗೆ ರೊಮ್ಯಾಂಟಿಕ್ ಸಿನಿಮಾಗಳೆಂದರೆ ಅಚ್ಚುಮೆಚ್ಚು. ಹೀಗಿರುವಾಗ ಇದೇ ಜಾನರ್‌ನ ಸಿನಿಮಾ ಹಾಗೂ ‘ಪ್ರೇಮಂ ಪೂಜ್ಯಂ’ನಂಥ ಅದ್ಭುತವಾದ ಕಥೆ ಇರುವ ಸಿನಿಮಾ ಮುಖಾಂತರ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಡುತ್ತಿದ್ದೇನೆ ಎನ್ನುವುದಕ್ಕಿಂತ ಬೇರೆ ಖುಷಿ ಬೇಕೇ? ಚಿಕ್ಕವಯಸ್ಸಿನಿಂದಲೂ ವೇದಿಕೆಯಲ್ಲಿ ಇದ್ದು ಕ್ಯಾಮೆರಾ ಭಯ ಎನ್ನುವುದೇ ಇಲ್ಲ. ಆದರೂ, ಮೊದಲ ಸಿನಿಮಾದ ಅನುಭವ ನೆನಪಿನಲ್ಲಿ ಉಳಿಯುವಂಥದ್ದು. ಪ್ರೇಮ್ ಅವರು ಪ್ರೀತಿಯಿಂದ ಮಾತನಾಡಿಸುತ್ತಾರೆ. ಅವರಿಂದ ಬಹಳ ಕಲಿತಿದ್ದೇನೆ. ಐಂದ್ರಿತಾ ರೇ ಅವರು ಚಿತ್ರೀಕರಣದಲ್ಲಿ ತೊಡಗಿರುವ ಸಂದರ್ಭದಲ್ಲಿ ನಾನು ಹೋಗಿ ಚಿತ್ರತಂಡದ ನಡುವೆ ಇದ್ದುಕೊಂಡು ಇಣುಕಿ ಇಣುಕಿ ನೋಡುತ್ತಿದ್ದೆ. ಚಿತ್ರೀಕರಣದ ಬಳಿಕ ನನ್ನ ಬಳಿಗೆ ಬಂದ ಅವರು ‘ಮೊದಲ ಸಿನಿಮಾನಾ?’ ಎಂದು ಕೇಳಿದ್ದರು.

ಚಿತ್ರದಲ್ಲಿ ನನ್ನ ಹಾಗೂ ಐಂದ್ರಿತಾ ರೇ ಅವರ ಪಾತ್ರಗಳು ಸರಿಸಮಾನವಾದ ಪ್ರಾಮುಖ್ಯತೆ ಹೊಂದಿವೆ. ನಾನು ಎರಡು ಶೇಡ್‌ನಲ್ಲಿ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಟ್ರೇಲರ್‌ನಲ್ಲಿ ನನ್ನ ಪಾತ್ರ ತುಣುಕಷ್ಟೇ ಇರುವುದು, ಸಾಗರದಷ್ಟು ಸಿನಿಮಾದಲ್ಲಿದೆ. ಮೊದಲ ಸಿನಿಮಾದ ಬಿಡುಗಡೆಗಾಗಿ ನ.12ಕ್ಕೆ ಕಾತುರದಿಂದ ಕಾಯುತ್ತಿದ್ದೇನೆ. ❖

ಗ್ಲಾಮರಸ್ ಮೇಘನಾ ಈಗ ಡಿಸಿಪಿ ದೀಪ!

ಸಿನಿ ಸಂಕ್ಷಿಪ್ತ



ಮೇಘನಾ ಗಾಂವ್ಕರ್

ಸ್ಯಾಂಡಲ್‌ವುಡ್‌ನಲ್ಲಿ ಗ್ಲ್ಯಾಮರಸ್ ಪಾತ್ರಗಳಿಗೆ ಬಣ್ಣಹಚ್ಚಿದ್ದ ನಟಿ ಮೇಘನಾ ಗಾಂವ್ಕರ್ ಇದೇ ಮೊದಲ ಬಾರಿಗೆ ಖಡಕ್ ಪೊಲೀಸ್ ಅಧಿಕಾರಿ ಪಾತ್ರವೊಂದನ್ನು ಒಪ್ಪಿಕೊಂಡಿದ್ದಾರೆ.

2020ರಲ್ಲಿ ಬಿಡುಗಡೆಯಾಗಿದ್ದ ನಟ ರಮೇಶ್ ಅರವಿಂದ್ ಅವರ 101ನೇ ಚಿತ್ರ ‘ಶಿವಾಜಿ ಸುರತ್ಕಲ್’ನ ಎರಡನೇ ಭಾಗ ಡಿಸೆಂಬರ್‌ನಲ್ಲಿ ಸೆಟ್ಟೇರಲಿದ್ದು, ಚಿತ್ರದಲ್ಲಿ ಡಿಸಿಪಿ ಹುದ್ದೆಯಲ್ಲಿರುವ ಯುವ ಐಪಿಎಸ್ ಅಧಿಕಾರಿ ‘ದೀಪ ಕಾಮತ್’ ಪಾತ್ರದಲ್ಲಿ ಮೇಘನಾ ಕಾಣಿಸಿಕೊಳ್ಳಲಿದ್ದಾರೆ.

ಶಿವಾಜಿ ಸುರತ್ಕಲ್ ಆಗಿ ಕಾಣಿಸಿಕೊಂಡ ರಮೇಶ್ ಅರವಿಂದ್ ಅವರ ಜೊತೆ ರಾಧಿಕಾ ನಾರಾಯಣ್, ರಾಘು ರಮಣಕೊಪ್ಪ, ವಿದ್ಯಾ ಮೂರ್ತಿಯವರು ಅವರವರ ಪಾತ್ರದಲ್ಲಿ ಮುಂದುವರಿಯಲಿದ್ದು, ಇನ್ನಷ್ಟು ಪ್ರಮುಖ ಪಾತ್ರಗಳು ಸೇರಿಕೊಳ್ಳಲಿವೆ. ಚಿತ್ರದಲ್ಲಿ ಪ್ರಮುಖ ಪಾತ್ರವಾದ ದೀಪ ಕಾಮತ್, ಶಿವಾಜಿ ಸುರತ್ಕಲ್ ಅವರಿಗೆ ಬೆನ್ನೆಲುಬಾಗಿ ನಿಲ್ಲುವ ಮತ್ತು ಮೇಲಧಿಕಾರಿಯ ಪಾತ್ರವಾಗಿರುತ್ತದೆ. ಇನ್ನಷ್ಟು ಹೊಸ ಕಲಾವಿದರು ಚಿತ್ರತಂಡ ಸೇರಲಿದ್ದು ಚಿತ್ರದ ನಿರ್ಮಾಣದ ಕೆಲಸವು ಈಗಾಗಲೇ ನಡೆಯುತ್ತಿದೆ, ಕೆಲವೇ ದಿನದಲ್ಲಿ ಮುಹೂರ್ತ ನಡೆಯಲಿದೆ ಎಂದು ಚಿತ್ರತಂಡ ತಿಳಿಸಿದೆ.

‘ಡಿಸೆಂಬರ್‌ನಿಂದ ಬೆಂಗಳೂರು, ಮೈಸೂರು, ಮಂಗಳೂರು, ಸುರತ್ಕಲ್, ಉಡುಪಿ, ಯಲ್ಲಾಪುರದಲ್ಲಿ 45 ದಿನ ಚಿತ್ರೀಕರಣ ನಡೆಯಲಿದೆ. ಎರಡನೇ ಭಾಗದಲ್ಲಿ ಒಂದಿಷ್ಟು ಹೊಸ ಪಾತ್ರಗಳು ಸೇರ್ಪಡೆಯಾಗಲಿವೆ. ಈ ಭಾಗದಲ್ಲಿ ಒಂದು ಯುವ ಐಪಿಎಸ್ ಅಧಿಕಾರಿಯ ಪಾತ್ರವನ್ನು ಸೃಷ್ಟಿಸಿದ್ದೆವು. ಈ ಪಾತ್ರಕ್ಕೆ ಯಾರು ಸರಿ ಹೊಂದುತ್ತಾರೆ ಎಂದು ಯೋಚಿಸುವ ಸಂದರ್ಭದಲ್ಲಿ ಮೇಘನಾ ಅವರು ಸೂಕ್ತ ಎಂದು ನಿರ್ಧರಿಸಿದೆವು. ಗ್ಲ್ಯಾಮರಸ್ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರೂ, ಅವರ ಮುಖದಲ್ಲಿ ಆ ಗಾಂಭೀರ್ಯ ಇದೆ. ಹಿಂದೆಂದೂ ಅವರು ಈ ರೀತಿಯ ಪಾತ್ರ ಮಾಡಿರಲಿಲ್ಲ. ಮೇಘನಾ ತಂದೆಯೂ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ್ದರಂತೆ. ಹೀಗಾಗಿ ಮೇಘನಾ ಖುಷಿಯಿಂದ ಒಪ್ಪಿಕೊಂಡರು’ ಎನ್ನುತ್ತಾರೆ ನಿರ್ದೇಶಕ ಆಕಾಶ್ ಶ್ರೀವತ್ಸ.

‘ಎರಡನೇ ಭಾಗವು ಬಹುಕೋನಗಳಿರುವ ಚಿತ್ರಕಥೆ ಹೊಂದಿದ್ದು, ಪತ್ತೆದಾರಿ ಕಥೆಯಾಗಿದೆ. ಕೊಲೆಗಾರನ ಹುಡುಕಾಟದ ಮಾರ್ಗದಲ್ಲಿ ಚಲಿಸುತ್ತಿರುತ್ತದೆ. ವಿಶೇಷವಾಗಿ ಶಿವಾಜಿ ಸುರತ್ಕಲ್ ಎಂಬ ಶೀರ್ಷಿಕೆಗೆ ಈ ಚಿತ್ರದಲ್ಲಿ ಉತ್ತರವಿದೆ’ ಎಂದಿದ್ದಾರೆ ಆಕಾಶ್. ರಮೇಶ ಅರವಿಂದ್ ಅವರ 103ನೇ ಚಿತ್ರ ಇದಾಗಿದ್ದು, ಚಿತ್ರವನ್ನು ರೇಖಾ ಕೆ.ಎನ್. ಮತ್ತು ಅನುಪ್ ಗೌಡ ನಿರ್ಮಾಣ ಮಾಡುತ್ತಿದ್ದಾರೆ. ❖

ಮೂಕನಾಯಕನಿಗೆ ಒಲಿದ ಪ್ರಶಸ್ತಿ



ಕುಮಾರ್ ಗೋವಿಂದ್

ಸಾಧನೆ

ನಟ ಕುಮಾರ್ ಗೋವಿಂದ್ ಅವರಿಗೆ ‘ಮೂಕನಾಯಕ’ ಚಿತ್ರದ ಅಭಿನಯಕ್ಕಾಗಿ ಅಮೆರಿಕದ ‘ಡಲ್ಲಾಸ್ ಆಕ್ಟಿಂಗ್ ಅಂತರಾಷ್ಟ್ರೀಯ ಚಿತ್ರೋತ್ಸವ’ದಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ಲಭಿಸಿದೆ. ಈ ಚಿತ್ರೋತ್ಸವಕ್ಕೆ 2016ರ ನಂತರ ನಿರ್ಮಾಣಗೊಂಡ ಚಿತ್ರಗಳನ್ನು ಆಹ್ವಾನಿಸಲಾಗಿತ್ತು.

ಈ ಚಿತ್ರವನ್ನು ಬರಗೂರು ರಾಮಚಂದ್ರಪ್ಪ ನಿರ್ದೇಶಿಸಿದ್ದರು. ಎಂ. ಬಾಲರಾಜ್ ಅವರು ನಿರ್ಮಿಸಿದ್ದರು.

‘ಮೂಕನಾಯಕ' ಚಿತ್ರವು ಮಾತುಬಾರದ ಚಿತ್ರಕಲಾವಿದನ ಬದುಕಿನ ಸುತ್ತ ಸಂಯೋಜಿಸಿದ ಕತೆ ಒಳಗೊಂಡಿದೆ. ಸಮಾಜದ ಆಗು ಹೋಗುಗಳನ್ನು ತನ್ನ ಚಿತ್ರಗಳ ಮೂಲಕ ಅಭಿವ್ಯಕ್ತಿಸುವ ಕಾಳಜಿಯ ಕಲಾವಿದನ ಪಾತ್ರವನ್ನು ಕುಮಾರ್ ಗೋವಿಂದ್ ನಿರ್ವಹಿಸಿದ್ದರು. ಕಲಾವಿದನ ಸಹೋದರಿ ಪಾತ್ರವನ್ನು ನಿರ್ವಹಿಸಿದ (ಸ್ಪರ್ಶ) ರೇಖಾ ಅವರು ರಾಜ್ಯ ಸರ್ಕಾರದ ಅತ್ಯುತ್ತಮ ಪೋಷಕನಟಿ ಪ್ರಶಸ್ತಿಗೆ ಪಾತ್ರರಾಗಿದ್ದರು.

ಬರಗೂರು ಚಿತ್ರಕತೆ, ಸಂಭಾಷಣೆ, ಗೀತರಚನೆಯ ಜೊತೆಗೆ ನಿರ್ದೇಶನ ಮಾಡಿದ `ಮೂಕನಾಯಕ' ಚಿತ್ರವನ್ನು ‘ಸಮುದಾಯದತ್ತ ಸಿನಿಮಾ’ ಪರಿಕಲ್ಪನೆಯ ‘ಚಿತ್ರಯಾತ್ರೆ’ ಮೂಲಕ ರಾಜ್ಯದ ಅನೇಕ ಕಡೆ ಪ್ರದರ್ಶಿಸಲಾಗಿತ್ತು. ❖

ಹುಡುಕಾಟದಲ್ಲಿದೆ ‘ಒಂಬತ್ತನೇ ದಿಕ್ಕು’

ವಿಶಿಷ್ಟ ಚಿತ್ರಗಳ ನಿರ್ದೇಶನಕ್ಕೆ ಹೆಸರಾದ ದಯಾಳ್ ಪದ್ಮನಾಭನ್ ಈಗ ‘ಒಂಬತ್ತನೇ ದಿಕ್ಕು’ ಹುಡುಕಿದ್ದಾರೆ. ಲೂಸ್ ಮಾದ ಯೋಗಿ ಅವರು ನಾಯಕ, ಅದಿತಿ ಪ್ರಭುದೇವ ನಾಯಕಿ. ಇತ್ತೀಚೆಗೆ ಟ್ರೇಲರ್ ಬಿಡುಗಡೆ ನಡೆದಿದೆ. ದಯಾಳ್ ಅವರ 19ನೇ ಚಿತ್ರವಿದು.

‘ಈ ಚಿತ್ರದ ಕಥೆ ಎರಡು ಕಾಲಘಟ್ಟದಲ್ಲಿ ಸಾಗುತ್ತದೆ. ನಮಗೆ ಸಿಗುವುದಿಲ್ಲ ಎಂದು ಗೊತ್ತಿದ್ದರೂ ನಾವು ಮತ್ತೊಂದು ದಾರಿಯಲ್ಲಿ ಏನನ್ನೋ ಹುಡುಕುತ್ತಾ ಹೋಗುತ್ತೇವೆ. ಅದು ಮತ್ತೊಂದು ಕಡೆ ಸಿಗುತ್ತದೆ. ಅದಕ್ಕೆ ನಾನು ಈ ಶೀರ್ಷಿಕೆ ಆಯ್ಕೆ ಮಾಡಿಕೊಂಡೆ. ಮೂರು ಸಾಹಸ ಸನ್ನಿವೇಶಗಳಿವೆ. ಲೂಸ್ ಮಾದ ಯೋಗಿ ಅವರಂತಹ ಉತ್ತಮ ಕಲಾವಿದರೊಡನೆ ಕೆಲಸಮಾಡಿದ್ದು, ಖುಷಿ ತಂದಿದೆ’ ಎಂದರು.

ಸಾಯಿಕುಮಾರ್, ಹಿರಿಯನಟ ಅಶೋಕ್, ಸುಂದರ್, ರಮೇಶ್ ಭಟ್, ಶೃತಿ ನಾಯಕ್, ಪ್ರಶಾಂತ್ ಸಿದ್ದಿ, ಮುನಿ ತಾರಾಗಣದಲ್ಲಿದ್ದಾರೆ. ನ. 19ರಂದು ಚಿತ್ರ ಬಿಡುಗಡೆ ಆಗಲಿದೆ.

ಒಳ್ಳೆಯ ವಿಷಯಾಧರಿತ ಚಿತ್ರವಿದು. ಇತ್ತೀಚೆಗೆ ಸಿನಿಮಾ ನೋಡಿದೆ. ತುಂಬಾ ಚೆನ್ನಾಗಿದೆ. ಪ್ರೇಕ್ಷಕರು ನಮ್ಮ ಸಿನಿಮಾ ಇಷ್ಟಪಡುವುದರಲ್ಲಿ ಯಾವುದೇ ಸಂದೇಹವಿಲ್ಲ’ ಎಂದರು ನಾಯಕ ಲೂಸ್ ಮಾದ ಯೋಗಿ.

‘ನಾನು ದಯಾಳ್ ಅವರ ಜೊತೆ ಈ ಹಿಂದೆ ‘ರಂಗನಾಯಕಿ’ ಚಿತ್ರದಲ್ಲಿ ಅಭಿನಯಿಸಿದ್ದೇನೆ. ಈ ಚಿತ್ರದಲ್ಲಿ ನನ್ನದು ವಿಭಿನ್ನ ಪಾತ್ರ. ದಯಾಳ್ ಅವರು ನಿಗದಿಯಂತೆ ಸಿನಿಮಾ ಮಾಡುತ್ತಾರೆ’ ಎಂದರು ನಾಯಕಿ ಅದಿತಿ. ಮಣಿಕಾಂತ್ ಕದ್ರಿ ಸಂಗೀತ ನೀಡಿರುವ ಈ ಚಿತ್ರಕ್ಕೆ ರಾಕೇಶ್ ಛಾಯಾಗ್ರಹಣ, ಪ್ರೀತಿ ಮೋಹನ್ ಸಂಕಲನವಿದೆ. ❖



ಅದಿತಿ ಪ್ರಭುದೇವ, ಯೋಗಿ

ಮನಸೂರೆಗೊಳ್ಳುತ್ತಿದೆ ‘ಮೈಸೂರು’ ಟ್ರೇಲರ್

‘ಮೈಸೂರು- ಲೈಫ್ ಎಂಡ್ಸ್ ವಿತ್ ಲವ್’ ಶೀರ್ಷಿಕೆಯ ಚಿತ್ರವೊಂದು ಸದ್ದಿಲ್ಲದೇ ನಿರ್ಮಾಣ ಮುಗಿಸಿದೆ. ಚಿತ್ರದ ಟ್ರೇಲರ್ ಹಾಗೂ ಮೂರು ಹಾಡುಗಳ ಬಿಡುಗಡೆ ಇತ್ತೀಚೆಗೆ ನಡೆದಿದೆ.

ಕಿರುತೆರೆಯಲ್ಲಿ ಪರಿಣತರಾದ ವಾಸುದೇವ ರೆಡ್ಡಿ ಅವರು ಎಸ್.ಆರ್. ಕಂಬೈನ್ಸ್ ಲಾಂಛನದಲ್ಲಿ ನಿರ್ಮಿಸಿ, ನಿರ್ದೇಶಿಸಿದ ಮೊದಲ ಚಿತ್ರವಿದು.

ವಿವರ ನೀಡಿದ ರೆಡ್ಡಿ, ‘ನಾನು ಮೂಲತಃ ಮೈಸೂರಿನವನು. ಚಿತ್ರ ಅನಿವಾಸಿ ಕನ್ನಡಿಗನ ಕಥೆ. ಹೊರರಾಜ್ಯದಿಂದ ನಾಯಕ ಮೈಸೂರಿಗೆ ಬರುತ್ತಾನೆ. ಅಲ್ಲಿ ಅವನಿಗೆ ನಾಯಕಿಯ ಮೇಲೆ ಪ್ರೀತಿ ಮೂಡುತ್ತದೆ. ನಂತರ ನಾಯಕನಿಗೆ ನಕ್ಸಲ್ ನಂಟಿರುವುದು ತಿಳಿಯುತ್ತದೆ. ನ್ಯಾಯಾಲಯ ಆತನಿಗೆ ಗಲ್ಲು ಶಿಕ್ಷೆ ವಿಧಿಸುತ್ತದೆ. ಸಾವಿನ ಮುಂಚೆ ನಿನ್ನ ಕೊನೆಯಾಸೆ ಏನು ಎಂದು ಕೇಳಿದಾಗ, ನನ್ನ ದೇಹವನ್ನು ಆಸ್ಪತ್ರೆಗೆ ದಾನ ಮಾಡಿ, ನನ್ನ ಅಂಗಗಳು ಬೇರೆಯವರ ಬಾಳಿಗೆ ಆಸರೆಯಾಗಲಿ ಎನ್ನುತ್ತಾನೆ. ಇಂತಹ ನಾಯಕ, ಹೇಗೆ ಕೆಟ್ಟವನಾಗಲು ಸಾಧ್ಯ ಎಂದು, ಈತನ ಪ್ರಕರಣವನ್ನು ಮತ್ತೆ ವಿಚಾರಿಸಲಾಗುತ್ತದೆ. ಮುಂದೇನು ಎಂಬುದನ್ನು ಚಿತ್ರದಲ್ಲೇ ನೋಡಬೇಕು’ ಎಂದರು.



ಪೂಜಾ, ಸಂವಿತ್

‘ಈ ಚಿತ್ರವು ಕನ್ನಡ, ಒರಿಯಾ ಹಾಗೂ ಬಂಗಾಳಿ ಭಾಷೆಗಳಲ್ಲಿ ನಿರ್ಮಾಣವಾಗಿದೆ. ಈ ಚಿತ್ರದ ಕನ್ನಡದ ಆವೃತ್ತಿಯಲ್ಲಿ ಶೇಕಡಾ ಇಪ್ಪತ್ತೈದು ಭಾಗದಷ್ಟು ಒರಿಯಾ ಭಾಷೆ ಇರುತ್ತದೆ. ಒಡಿಶಾ ಆವೃತ್ತಿಯಲ್ಲಿ ಶೇಕಡಾ ಇಪ್ಪತ್ತೈದರಷ್ಟು ಕನ್ನಡದ ಸಂಭಾಷಣೆ ಇರುತ್ತದೆ. ಚಿತ್ರ ಸದ್ಯದಲ್ಲೇ ತೆರೆಗೆ ಬರಲಿದೆ’ ಎಂದರು.

‘ಇದೊಂದು ಮ್ಯೂಸಿಕಲ್ ಲವ್ ಸ್ಟೋರಿ. ನೃತ್ಯ ಹಾಗೂ ನಾಟಕದಲ್ಲಿ ಆಸಕ್ತಿಯಿರುವ ನಾನು ಇನ್ಫೊಸಿಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನಾಯಕಿಯಾಗಿ ಮೊದಲ ಚಿತ್ರ’ ಎಂದು ಹೇಳಿದರು ನಾಯಕಿ ಪೂಜಾ.


ಮೂಲತಃ ಒಡಿಶಾದವರಾದ ಸಂವಿತ್ ಈ ಚಿತ್ರದ ನಾಯಕ.

ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಉಡುಪಿ, ಭುವನೇಶ್ವರ್, ಪೂರಿ, ಕಟಕ್ ಕಡೆ ಚಿತ್ರೀಕರಣ ನಡೆದಿದೆ.

ಜ್ಯೂನಿಯರ್ ನರಸಿಂಹರಾಜು, ಪೂಜಾ, ಸತ್ಯಜಿತ್, ಕುರಿ ಪ್ರತಾಪ್, ಭಾಸ್ಕರ್ ಶೆಟ್ಟಿ, ಅಶೋಕ್ ಹೆಗ್ಡೆ, ಜೈಶ್ರೀ, ರವಿಕುಮಾರ್ ತಾರಾಬಳಗದಲ್ಲಿದ್ದಾರೆ. ❖

ಒಟಿಟಿಯಲ್ಲಿ ‘ಹೀಗೇಕೆ ನೀ ದೂರ ಹೋಗುವೆ’

ನಟ, ನಿರ್ದೇಶಕ ಸಂದೀಪ್ ಮಲಾನಿ ನಟಿಸಿರುವ ನೂರನೇ ಚಿತ್ರ ‘ಹೀಗೇಕೆ ನೀ ದೂರ ಹೋಗುವೆ’. ಈ ಚಿತ್ರ ನಿರ್ಮಾಣ ಅಂತಿಮ ಹಂತದಲ್ಲಿದೆ. ಚಿತ್ರ ಶೀಘ್ರ ಒಟಿಟಿಯಲ್ಲಿ ಬಿಡುಗಡೆಯಾಗಲಿದೆ.



ಸಂದೀಪ್ ಮಲಾನಿ

ಚಿತ್ರದ ಮಾಹಿತಿ ನೀಡಿದ ಸಂದೀಪ್, ‘ಇದು ನನಗಿಷ್ಟವಾದ ಜನಪ್ರಿಯ ಗೀತೆಯೊಂದರ ಸಾಲು. ನನ್ನ ಮಗ ಸಿಲ್ವರ್ ಮಲಾನಿ ಹಾಗೂ ತಮ್ಮ ಸಂತೋಷ್ ಇಬ್ಬರು ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ರಾಜೇಶ್ ಚೌಧರಿ ಈ ಚಿತ್ರ ನಿರ್ಮಿಸಿದ್ದಾರೆ. ಬೆಂಗಳೂರಿನಲ್ಲೇ ಚಿತ್ರೀಕರಣ ಮಾಡಿದ್ದೇವೆ. ನನ್ನೊಂದಿಗೆ ಎಸ್ತರ್ ನರೋನ್ಹಾ, ನಿಹಾಲ್ ತಾವ್ರೋ ಹಾಗೂ ಅಶ್ವಿನ್ ಡಿ ಕೋಸ್ಟಾ, ರಾಜೀವ್ ಪಿಳ್ಳೈ, ಸೀಮಾ ಬುತೆಲ್ಲೋ, ಉದಯ ಸೂರ್ಯ ಮತ್ತು ನಿರ್ಮಾಪಕರ ಪುತ್ರಿಯರಾದ ಅಶ್ಮಿತಾ ಚೌಧರಿ, ಅಮೀಶಾ ಚೌಧರಿ ಮುಂತಾದವರು ಅಭಿನಯಿಸಿದ್ದಾರೆ’ ಎಂದರು. ❖

ಭಾರತದ ಎದುರು ಮೊದಲ ಹಣಾಹಣಿಗೆ ಸ್ಕಾಟ್ಲೆಂಡ್ ತಂಡ ಸಜ್ಜು
ಸುಲಭ ಜಯಕ್ಕೆ ವಿರಾಟ್ ಪಡೆ ತವಕ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡವು ಶುಕ್ರವಾರ ಸ್ಕಾಟ್ಲೆಂಡ್ ತಂಡದ ಎದುರು ಕಣಕ್ಕಿಳಿಯಲಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅನುಭವವಿಲ್ಲದ ಮತ್ತು ಈಗ ಅಂಬೆಗಾಲಿಕ್ಕುತ್ತಿರುವ ಸ್ಕಾಟ್ಲೆಂಡ್ ತಂಡವನ್ನು ಸುಲಭವಾಗಿ ಸೋಲಿಸುವ ಛಲದಲ್ಲಿದೆ. ಆದರೆ, ನೆಟ್ ರನ್‌ರೇಟ್‌ನಲ್ಲಿಯೂ ದೊಡ್ಡ ಅಂತರದಿಂದ ಜಯಿಸುವುದು ಕೂಡ ಮುಖ್ಯವಾಗಿದೆ.

ಸೂಪರ್ 12 ಹಂತದ ಎರಡನೇ ಗುಂಪಿನಲ್ಲಿ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ವಿರುದ್ಧ ಸೋತಿರುವ ಭಾರತ ತಂಡ ಅಫ್ಗಾನಿಸ್ತಾನ ವಿರುದ್ಧ ಗೆದ್ದಿದೆ. ಆದರೆ, ಸ್ಕಾಟ್ಲೆಂಡ್, ನಮಿಬಿಯಾ ವಿರುದ್ಧವೂ ದೊಡ್ಡ ಅಂತರದಿಂದ ಜಯಿಸಬೇಕು. ಅದರೊಂದಿಗೆ ನ್ಯೂಜಿಲೆಂಡ್ ತಂಡವು ತನ್ನ ಮುಂದಿನ ಎರಡು ಪಂದ್ಯಗಳ ಪೈಕಿ ಕನಿಷ್ಠ ಒಂದರಲ್ಲಾದರೂ ಸೋಲುವುದನ್ನು ನಿರೀಕ್ಷಿಸಬೇಕು. ಇದಿಷ್ಟೇ ಈಗ ವಿರಾಟ್ ಕೊಹ್ಲಿ ಬಳಗದ ನಿಯಂತ್ರಣದಲ್ಲಿರುವ ಸಂಗತಿ.

ನ್ಯೂಜಿಲೆಂಡ್ ತಂಡ ಕೂಡ ಪಾಕ್ ಎದುರು ಸೋತಿತ್ತು. ಆದರೆ, ಪುಟಿದೆದ್ದ ಕೇನ್ ವಿಲಿಯಮ್ಸನ್ ಬಳಗವು ಭಾರತ ತಂಡವನ್ನು ಮಣಿಸಿತ್ತು. ಸ್ಕಾಟ್ಲೆಂಡ್ ವಿರುದ್ಧ 16 ರನ್‌ಗಳಿಂದ ಗೆದ್ದಿತ್ತು. ಕಿವೀಸ್ ಕೂಡ ಶುಕ್ರವಾರ ನಮಿಬಿಯಾ ವಿರುದ್ಧ ಮತ್ತು ನ.7ರಂದು ಅಫ್ಗಾನಿಸ್ತಾನ ವಿರುದ್ಧ ಕಣಕ್ಕಿಳಿಯಲಿದೆ.

ಪಾಕಿಸ್ತಾನ ಈಗಾಗಲೇ ಸೆಮಿಫೈನಲ್ ಪ್ರವೇಶಿಸಿದೆ. ಎರಡನೇ ತಂಡವಾಗಿ ಪ್ರವೇಶಿಸಲು ಕಿವೀಸ್‌ಗೆ ಭಾರತಕ್ಕಿಂತ ಹೆಚ್ಚು ಸರಳ ಅವಕಾಶಗಳಿವೆ. ಆದರೂ ತನ್ನ ಪಾಲಿನಲ್ಲಿ ಉಳಿದಿರುವ ಎರಡೂ ಪಂದ್ಯಗಳಲ್ಲಿ ದೊಡ್ಡ ಅಂತರದ ಜಯ ಗಳಿಸುವುದು ಕೂಡ ತಂಡಕ್ಕೆ ಮಹತ್ವದ್ದು.

ಸ್ಕಾಟ್ಲೆಂಡ್ ತಂಡವನ್ನು ಭಾರತವು ಇದೇ ಮೊದಲ ಸಲ ಎದುರಿಸಲಿದೆ. 2007ರಲ್ಲಿ ಉಭಯ ತಂಡಗಳ ಪಂದ್ಯವು ಟಾಸ್ ನಂತರ ಪ್ರತಿಕೂಲ ಹವಾಮಾನದ ಕಾರಣ ರದ್ದಾಗಿತ್ತು.


ಕೈಲ್ ಕೋಯ್ಜರ್ ನೇತೃತ್ವದ ತಂಡವು ಇದೇ ಮೊದಲ ಬಾರಿ ವಿಶ್ವಕಪ್ ಪ್ರಧಾನ ಸುತ್ತಿಗೆ ಪ್ರವೇಶಿಸಿದೆ. ಆದರೆ ಒಂದೂ ಪಂದ್ಯದಲ್ಲಿ ಜಯಿಸಿಲ್ಲ. ಕಿವೀಸ್ ಎದುರಿನ ಪಂದ್ಯದಲ್ಲಿ ದಿಟ್ಟತನದಿಂದ ಆಡಿತ್ತು. ಅಫ್ಗನ್ ವಿರುದ್ಧದ ಜಯದಿಂದ ತುಸು ಆತ್ಮವಿಶ್ವಾಸ ವೃದ್ಧಿಸಿಕೊಂಡಿರುವ ಭಾರತ ತಂಡವು ಹೆಚ್ಚು ಬದಲಾವಣೆಗಳನ್ನು ಮಾಡದೇ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಿದೆ. ರೋಹಿತ್, ಕೆ.ಎಲ್. ರಾಹುಲ್ ಜೋಡಿಯು ಶತಕದ ಜೊತೆಯಾಟವಾಡಿತ್ತು. ರಿಷಭ್ ಮತ್ತು ಹಾರ್ದಿಕ್ ತಮ್ಮ ಲಯ ಕಂಡುಕೊಂಡಿದ್ದರು. ಶಮಿ, ಬೂಮ್ರಾ ಉತ್ತಮ ಬೌಲಿಂಗ್‌ನೊಂದಿಗೆ ಗಮನ ಸೆಳೆದಿದ್ದರು. ಅಶ್ವಿನ್ ಕೂಡ ನಾಲ್ಕು ವರ್ಷಗಳ ನಂತರ ಬಿಳಿಚೆಂಡಿನ ಕ್ರಿಕೆಟ್ ಪಂದ್ಯಕ್ಕೆ ಮರಳಿದ್ದರು.

ಭಾರತಕ್ಕೆ ಹೋಲಿಸಿದರೆ ಸ್ಕಾಟ್ಲೆಂಡ್ ಬಲಾಢ್ಯ ತಂಡವೇನಲ್ಲ. ಆದರೆ, ಅತಿ ಆತ್ಮವಿಶ್ವಾಸದಿಂದ ಸ್ವಲ್ಪ ಎಚ್ಚರ ತಪ್ಪಿದರೂ ಆಘಾತ ನೀಡುವ ಸಾಮರ್ಥ್ಯ ಅದಕ್ಕಿದೆ.

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್ (ವಿಕೆಟ್‌ಕೀಪರ್), ರವೀಂದ್ರ ಜಡೇಜ, ಮೊಹಮ್ಮದ್ ಶಮಿ, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಭುವನೇಶ್ವರ್ ಕುಮಾರ್, ರಾಹುಲ್ ಚಾಹರ್, ವರುಣ್ ಚಕ್ರವರ್ತಿ, ಆರ್. ಅಶ್ವಿನ್.
ಸ್ಕಾಟ್ಲೆಂಡ್: ಕೈಲ್ ಕೊಯ್ಜರ್ (ನಾಯಕ), ರಿಚಿ ಬ್ಯಾರಿಂಗ್ಟನ್, ಡೈಲನ್ ಬಜ್, ಮ್ಯಾಥ್ಯೂ ಕ್ರಾಸ್, ಜೋಶ್ ಡೇವಿ, ಅಲ್‌ಸ್ಡೇರ್ ಇವಾನ್ಸ್, ಕ್ರಿಸ್ ಗ್ರೀವ್ಸ್, ಮಿಚೆಲ್ ಲೀಸ್ಕ್, ಕೆಲಮ್ ಮೆಕ್‌ಲಾಯ್ಡ್, ಜಾರ್ಜ್ ಮನ್ಸಿ, ಸಫಿಯಾನ್ ಶರೀಫ್, ಹಮ್ಜಾ ತಾಹೀರ್, ಕ್ರೇಗ್ ವಾಲೆಸ್, ಮಾರ್ಕ್ ವಾಟ್, ಬ್ರೆಡ್ಲಿ ವೀಲ್.
ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್


ಮೊಹಮ್ಮದ್ ಶಮಿ


ಕೈಲ್ ಕೊಯ್ಜರ್ –ಎಎಫ್‌ಪಿ ಚಿತ್ರ


ವಿರಾಟ್ ಕೊಹ್ಲಿ

ಆಸಿಫ್ ಅಲಿ ಐಸಿಸಿ ತಿಂಗಳ ಆಟಗಾರ

ದುಬೈ (ಪಿಟಿಐ): ಭರ್ಜರಿ ಹೊಡೆತಗಳ ಮೂಲಕ ರಂಜಿಸುವ ಪಾಕಿಸ್ತಾನದ ಬ್ಯಾಟರ್ ಆಸಿಫ್ ಅಲಿ ಅವರನ್ನು ಐಸಿಸಿ ಅಕ್ಟೋಬರ್ ತಿಂಗಳ ಆಟಗಾರ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಬಾಂಗ್ಲಾದೇಶದ ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಮತ್ತು ನಮೀಬಿಯಾದ ಡೇವಿಡ್ ವೀಸ್ ಅವರಿಗೂ ಗೌರವ ಸಂದಿದೆ.

ಮಹಿಳೆಯರ ವಿಭಾಗದಲ್ಲಿ ಐರ್ಲೆಂಡ್‌ನ ಆಲ್‌ರೌಂಡರ್ ಲಾರಾ ಡೆಲಾನಿ, ಬ್ಯಾಟರ್ ಗ್ಯಾಬಿ ಲ್ಯೂಯಿಸ್ ಮತ್ತು ಜಿಂಬಾಬ್ವೆಯ ನಾಯಕಿಮೇರಿ ಆ್ಯನ್ ಮುಸೊಂಡ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ನ್ಯೂಜಿಲೆಂಡ್ ಮತ್ತು ಅಫ್ಗಾನಿಸ್ತಾನ ಎದುರು ಪಾಕಿಸ್ತಾನ ಜಯ ಗಳಿಸುವಲ್ಲಿ ಆಸಿಫ್ ಅಲಿ ಪ್ರಮುಖ ಪಾತ್ರ ವಹಿಸಿದ್ದರು. ನ್ಯೂಜಿಲೆಂಡ್ ಎದುರು 12 ಎಸೆತಗಳಲ್ಲಿ 27 ರನ್ ಗಳಿಸಿದ್ದ ಅವರು ಅಫ್ಗಾನಿಸ್ತಾನ ಎದುರಿನ ಪಂದ್ಯದ 19ನೇ ಓವರ್‌ನಲ್ಲಿ ನಾಲ್ಕು ಸಿಕ್ಸರ್ ಸಿಡಿಸಿ ಗೆಲುವಿಗೆ ಕಾರಣರಾಗಿದ್ದರು.

ಕಳೆದ ತಿಂಗಳಲ್ಲಿ ಒಟ್ಟು ಆರು ಟ್ವೆಂಟಿ–20 ಪಂದ್ಯಗಳನ್ನು ಆಡಿರುವ ಶಕೀಬ್ ಅಲ್ ಹಸನ್ 109.16ರ ಸ್ಟ್ರೈಕ್‌ರೇಟ್‌ನಲ್ಲಿ 131 ರನ್ ಗಳಿಸಿದ್ದ ಅವರು 11 ವಿಕೆಟ್ ಉರುಳಿಸಿದ್ದಾರೆ.

ಅಕ್ಟೋಬರ್‌ನಲ್ಲಿ ಎಂಟು ಪಂದ್ಯ ಆಡಿರುವ ವೀಸ್ 162 ರನ್ ಕಲೆ ಹಾಕಿದ್ದಾರೆ. ಏಳು ವಿಕೆಟ್‌ಗಳನ್ನೂ ಗಳಿಸಿದ್ದಾರೆ. ಅವರಿಂದಾಗಿ ತಂಡ ಸೂಪರ್ 12ರ ಹಂತ ಪ್ರವೇಶಿಸುವಲ್ಲಿ ಯಶಸ್ವಿಯಾಗಿತ್ತು. ಗುಂಪು ಹಂತದ ಮಹತ್ವದ ಪಂದ್ಯದಲ್ಲಿ 28 ಎಸೆತದಲ್ಲಿ 66 ರನ್ ಗಳಿಸಿದ್ದರು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ನೆಟ್ ರನ್‌ರೇಟ್	ಪಾಯಿಂಟ್ಸ್
ಗುಂಪು 1					
ಇಂಗ್ಲೆಂಡ್	4	4	0	+3.183	8
ಆಸ್ಟ್ರೇಲಿಯಾ	4	3	1	+1.031	6
ದಕ್ಷಿಣ ಆಫ್ರಿಕಾ	4	3	1	+0.742	6
ಶ್ರೀಲಂಕಾ	5	2	3	-0.269	4
ವೆಸ್ಟ್ ಇಂಡೀಸ್	4	1	3	-1.557	2
ಬಾಂಗ್ಲಾದೇಶ	5	0	5	-2.383	0
ಗುಂಪು 2					
ಪಾಕಿಸ್ತಾನ	4	4	0	+1.065	8
ಅಫ್ಗಾನಿಸ್ತಾನ	4	2	2	+1.481	4
ನ್ಯೂಜಿಲೆಂಡ್	3	2	1	+0.816	4
ಭಾರತ	3	1	2	+0.073	2
ನಮೀಬಿಯಾ	3	1	2	-1.600	2
ಸ್ಕಾಟ್ಲೆಂಡ್	3	0	3	-2.645	0

* ಗುರುವಾರದ ಪಂದ್ಯಗಳ ಅಂತ್ಯಕ್ಕೆ

ಸೆಮಿಯತ್ತ ಆಸ್ಟ್ರೇಲಿಯಾ
ಜಂಪಾಗೆ ಐದು ವಿಕೆಟ್;ವಾರ್ನರ್–ಫಿಂಚ್ ಜೊತೆಯಾಟ

ದುಬೈ (ಪಿಟಿಐ): ಮಿಷೆಲ್ ಸ್ಟಾರ್ಕ್ ಮತ್ತು ಜೋಶ್ ಹ್ಯಾಜಲ್‌ವುಡ್ ಜೋಡಿಯ ಬಿರುಗಾಳಿ ವೇಗದ ಬೆನ್ನಲ್ಲೇ ಆ್ಯಡಂ ಜಂಪಾ ಅವರ ಸ್ಪಿನ್ ಸುಳಿಯಲ್ಲಿ ಬಿದ್ದ ಬಾಂಗ್ಲಾದೇಶ ಅಲ್ಪ ಮೊತ್ತಕ್ಕೆ ಉರುಳಿತು. ಇದರ ಪರಿಣಾಮ ಆಸ್ಟ್ರೇಲಿಯಾ ಎಂಟು ವಿಕೆಟ್‌ಗಳ ಜಯ ದಾಖಲಿಸಿತು.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ಸಂಜೆ ನಡೆದ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಸೂಪರ್ 12 ಹಂತದ ಮೊದಲ ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಆಸ್ಟ್ರೇಲಿಯಾ 73 ರನ್‌ಗಳಿಗೆ ಆಲೌಟ್ ಮಾಡಿತು. ಸುಲಭ ಗುರಿ ಬೆನ್ನತ್ತಿದ ತಂಡ 6.2 ಓವರ್‌ಗಳಲ್ಲಿ ದಡ ಸೇರಿತು. ಈ ಮೂಲಕ ಸೆಮಿಫೈನಲ್ ಹಾದಿಯನ್ನು ಸುಗಮ ಮಾಡಿಕೊಂಡಿತು.

ಆರಂಭಿಕ ಜೋಡಿ ಡೇವಿಡ್ ವಾರ್ನರ್ ಮತ್ತು ನಾಯಕ ಆ್ಯರನ್ ಫಿಂಚ್ ಐದು ಓವರ್‌ಗಳಲ್ಲಿ 58 ರನ್ ಕಲೆ ಹಾಕಿ ತಂಡಕ್ಕೆ 10 ವಿಕೆಟ್‌ಗಳ ಜಯ ತಂದುಕೊಡುವ ಭರವಸೆ ಮೂಡಿಸಿದ್ದರು.


ಆದರೆ ತಸ್ಕಿನ್ ಅಹಮ್ಮದ್ ಮತ್ತು ಶೊರಿಫುಲ್ ಇಸ್ಲಾಂ ತಲಾ ಒಂದೊಂದು ವಿಕೆಟ್ ಉರುಳಿಸಿ ತಂಡಕ್ಕೆ ಪೆಟ್ಟು ನೀಡಿದರು. ಮಿಷೆಲ್ ಮಾರ್ಷ್ ಐದು ಎಸೆತಗಳಲ್ಲಿ 16 ರನ್ ಗಳಿಸಿ ಮಿಂಚಿದರು.

ಟಾಸ್ ಗೆದ್ದ ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವೇಗ ಮತ್ತು ಸ್ಪಿನ್ ದಾಳಿಗೆ ಬಾಂಗ್ಲಾದೇಶ ಬೆದರಿತು. ತಂಡದ ಮೊತ್ತ ಒಂದು ರನ್ ಆಗಿದ್ದಾಗ ಲಿಟನ್ ದಾಸ್ ಔಟಾದರು.

ಮಿಷೆಲ್ ಸ್ಟಾರ್ಕ್ ಅವರ ಎಸೆತ ಸ್ಟಾರ್ಕ್ ಬ್ಯಾಟಿನ ಅಂಚಿಗೆ ತಾಗಿ ವಿಕೆಟ್ ಉರುಳಿಸಿತು. ಆರು ರನ್ ಗಳಿಸುವಷ್ಟರಲ್ಲಿ ಸೌಮ್ಯ ಸರ್ಕಾರ್ ಕೂಡ ವಾಪಸಾದರು. ಹ್ಯಾಜಲ್‌ವುಡ್ ಎಸೆತವನ್ನು ಸ್ಟಂಪ್ ಮೇಲೆ ಎಳೆದುಕೊಂಡು ಸೌಮ್ಯ ಔಟಾದರು. ಅಗ್ರ ಕ್ರಮಾಂಕದ ಐವರ ಪೈಕಿ ನಾಲ್ವರು ಸ್ಟಾರ್ಕ್ ಮತ್ತು ಹ್ಯಾಜಲ್‌ವುಡ್‌ಗೆ ಬಲಿಯಾದರು. ಒಂದು ವಿಕೆಟ್ ಮ್ಯಾಕ್ಸ್‌ವೆಲ್ ಉರುಳಿಸಿದರು.

ಕೊನೆಯ ಐವರು ಬ್ಯಾಟರ್‌ಗಳು ಜಂಪಾ ದಾಳಿಗೆ ಬಲಿಯಾದರು. 33 ಎಸೆತಗಳಿಗೆ ಐದು ವಿಕೆಟ್ ಕಳೆದುಕೊಂಡಿದ್ದ ಬಾಂಗ್ಲಾದೇಶ ತಂಡ ಮಹಮ್ಮದುಲ್ಲ ಮತ್ತು ಶಮೀಮ್ ಹೊಸೇನ್ ಮೇಲೆ ನಿರೀಕ್ಷೆ ಇರಿಸಿಕೊಂಡಿತ್ತು. ಇಬ್ಬರೂ ಬೌಂಡರಿಗಳನ್ನು ಸಿಡಿಸಿ ಭರವಸೆ ಮೂಡಿಸಿದರು. ಜಂಪಾ ಎಸೆತವನ್ನು ಶಮೀಮ್ ಲಾಫ್ಟ್ ಮಾಡಿ ಸಿಕ್ಸರ್‌ಗೆ ಎತ್ತಿದರು.

ಆದರೆ ತಿರುಗೇಟು ನೀಡಿದ ಜಂಪಾ ವಿಕೆಟ್‌ಗಳನ್ನು ಉರುಳಿಸುತ್ತ ಸಾಗಿದರು. ಹ್ಯಾಟ್ರಿಕ್ ಗಳಿಸುವ ಅಪೂರ್ವ ಅವಕಾಶವೂ ಅವರಿಗೆ ಒದಗಿತ್ತು. ಆದರೆ ವಿಕೆಟ್ ಕೀಪರ್ ಮ್ಯಾಥ್ಯೂ ವೇಡ್ ಕ್ಯಾಚ್ ಕೈಚೆಲ್ಲಿ ನಿರಾಸೆ ಮೂಡಿಸಿದರು.



ಆ್ಯಡಂ ಜಂಪಾ	
ಓವರ್	4
ಮೇಡನ್	0
ನೀಡಿದ ರನ್	19
ವಿಕೆಟ್	5
ಇಕಾನಮಿ	4.75

ಆ್ಯಡಂ ಜಂಪಾ –ರಾಯಿಟರ್ಸ್ ಚಿತ್ರ

ಟ್ವೆಂಟಿ–20 ವಿಶ್ವಕಪ್‌ನಲ್ಲಿ ಶ್ರೇಷ್ಠ ಬೌಲಿಂಗ್

ಬೌಲರ್	ದೇಶ	ಸಾಧನೆ	ಎದುರಾಳಿ	ವರ್ಷ
ಅಜಂತ್ ಮೆಂಡಿಸ್	ಶ್ರೀಲಂಕಾ	8ಕ್ಕೆ6	ಜಿಂಬಾಬ್ವೆ	2012
ರಂಗನಾ ಹೆರಾತ್	ಶ್ರೀಲಂಕಾ	3ಕ್ಕೆ5	ನ್ಯೂಜಿಲೆಂಡ್	2014
ಉಮರ್ ಗುಲ್	ಪಾಕಿಸ್ತಾನ	6ಕ್ಕೆ5	ನ್ಯೂಜಿಲೆಂಡ್	2009
ಅಹ್ಸನ್ ಮಲಿಕ್	ನೆದರ್ಲೆಂಡ್	19ಕ್ಕೆ5	ದಕ್ಷಿಣ ಆಫ್ರಿಕಾ	2014
ಆ್ಯಡಂ ಜಂಪಾ	ಆಸ್ಟ್ರೇಲಿಯಾ	19ಕ್ಕೆ5	ಬಾಂಗ್ಲಾದೇಶ	2021


ಆ್ಯರನ್ ಫಿಂಚ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಬಾಂಗ್ಲಾದೇಶ 73ಕ್ಕೆ ಆಲೌಟ್ (15 ಓವರ್)
ನಯೀಮ್ ಸಿ ಕಮಿನ್ಸ್ ಬಿ ಹೇಜಲ್‌ವುಡ್ 17 (16 ಎ, 4x3), ಲಿಟನ್ ಬಿ ಸ್ಟಾರ್ಕ್ 0 (1 ಎ), ಸೌಮ್ಯ ಬಿ ಹೇಜಲ್‌ವುಡ್ 5 (8 ಎ, 4x1), ಮುಷ್ಫಿಕುರ್ ಎಲ್‌ಬಿಡಬ್ಲ್ಯು ಬಿ ಮ್ಯಾಕ್ಸ್‌ವೆಲ್ 1 (2 ಎ), ಮಹಮ್ಮದುಲ್ಲ ಸಿ ವೇಡ್ ಬಿ ಸ್ಟಾರ್ಕ್ 16 (18 ಎ, 4x2), ಅಫೀಫ್ ಸಿ ಫಿಂಚ್ ಬಿ ಜಂಪಾ 0 (4 ಎ), ಶಮೀಮ್ ಸಿ ವೇಡ್ ಬಿ ಜಂಪಾ 19 (18 ಎ, 4x1, 6x1), ಮೆಹದಿ ಎಲ್‌ಬಿಡಬ್ಲ್ಯು ಬಿ ಜಂಪಾ 0 (1 ಎ), ತಸ್ಕಿನ್ ಔಟಾಗದೆ 6 (11 ಎ), ಮುಸ್ತಫಿಜುರ್ ಸಿ ಸ್ಮಿತ್ ಬಿ ಜಂಪಾ 4 (9 ಎ), ಶೊರಿಫುಲ್ ಸಿ ಫಿಂಚ್ ಬಿ ಜಂಪಾ 0 (2 ಎ)
ಇತರೆ (ಲೆಗ್ ಬೈ 1, ವೈಡ್ 4) 5
ವಿಕೆಟ್ ಪತನ: 1-1 (ಲಿಟನ್ ದಾಸ್, 0.3), 2-6 (ಸೌಮ್ಯ ಸರ್ಕಾರ್, 1.6), 3-10 (ಮುಷ್ಫಿಕುರ್ ರಹೀಮ್, 2.5), 4-32 (ಮೊಹಮ್ಮದ್ ನಯೀಮ್, 5.3), 5-33 (ಅಫೀಫ್ ಹೊಸೇನ್, 6.1), 6-62 (ಶಮೀಮ್ ಹೊಸೇನ್, 10.5), 7-62 (ಮೆಹದಿ ಹಸನ್, 10.6), 8-65 (ಮಹಮ್ಮದುಲ್ಲ, 12.2), 9-73 (ಮುಸ್ತಫಿಜುರ್ ರಹಮಾನ್, 14.4), 10-73 (ಶೊರಿಫುಲ್ ಇಸ್ಲಾಂ, 14.6)
ಬೌಲಿಂಗ್: ಮಿಷೆಲ್ ಸ್ಟಾರ್ಕ್ 4-0-21-2, ಜೋಶ್ ಹ್ಯಾಜಲ್‌ವುಡ್ 2-0-8-2, ಗ್ಲೆನ್ ಮ್ಯಾಕ್ಸ್‌ವೆಲ್ 2-0-6-1, ಪ್ಯಾಟ್ ಕಮಿನ್ಸ್ 3-0-18-0, ಆ್ಯಡಂ ಜಂಪಾ 4-0-19-5

ಆಸ್ಟ್ರೇಲಿಯಾ 2ಕ್ಕೆ 78 (6.2 ಓವರ್)
ವಾರ್ನರ್ ಬಿ ಶೊರಿಫುಲ್ 18 (14 ಎ, 4x3), ಫಿಂಚ್ ಬಿ ತಸ್ಕಿನ್ 40 (20 ಎ, 4x2, 6x4), ಮಾರ್ಷ್ ಔಟಾಗದೆ 16 (5 ಎ, 4x2, 6x1), ಮ್ಯಾಕ್ಸ್‌ವೆಲ್ ಔಟಾಗದೆ 0 (0 ಎ)
ಇತರೆ (ಲೆಗ್‌ಬೈ 1, ನೋಬಾಲ್ 1, ವೈಡ್ 2) 4
ವಿಕೆಟ್ ಪತನ: 1-58 (ಆ್ಯರನ್ ಫಿಂಚ್, 4.6), 2-67 (ಡೇವಿಡ್ ವಾರ್ನರ್, 5.6)
ಬೌಲಿಂಗ್: ತಸ್ಕಿನ್ ಅಹಮ್ಮದ್ 3.2-0-36-1, ಮುಸ್ತಫಿಜುರ್ ರಹಮಾನ್ 2-0-32-0, ಶೊರಿಫುಲ್ ಇಸ್ಲಾಂ 1-0-9-1

ಫಲಿತಾಂಶ: ಆಸ್ಟ್ರೇಲಿಯಾಗೆ 8 ವಿಕೆಟ್‌ಗಳ ಜಯ

ಇಂದು, ನಾಳಿನ ಪಂದ್ಯಗಳು

ಇಂದು...
ನ್ಯೂಜಿಲೆಂಡ್–ನಮಿಬಿಯಾ
ಸ್ಥಳ: ಶಾರ್ಜಾ,
ಆರಂಭ: ಮಧ್ಯಾಹ್ನ 3.30

ಶನಿವಾರದ ಪಂದ್ಯಗಳು
ಆಸ್ಟ್ರೇಲಿಯಾ–ವೆಸ್ಟ್ ಇಂಡೀಸ್
ಸ್ಥಳ: ಅಬುಧಾಬಿ,
ಆರಂಭ: ಸಂಜೆ 3.30
ಇಂಗ್ಲೆಂಡ್–ದಕ್ಷಿಣ ಆಫ್ರಿಕಾ
ಸ್ಥಳ: ಶಾರ್ಜಾ,
ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್


ನ್ಯೂಜಿಲೆಂಡ್ ನಾಯಕ ಕೇನ್ ವಿಲಿಯಮ್ಸನ್


ಬೆಂಗಳೂರು ಯುನೈಟೆಡ್ ಎಫ್‌ಸಿಯ ಆದರ್ಶ್ (ಎಡ) ಮತ್ತು ಡೆಕ್ಕನ್ ಎಫ್‌ಸಿಯ ಮಹಮ್ಮದ್ ಆದಿಲ್ ಅವರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ಎಎಸ್‌ಸಿ ಸೆಂಟರ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡ ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ರೋಚಕ ಜಯ ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ತಂಡ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿಯನ್ನು 1–0ಯಿಂದ ಮಣಿಸಿತು. 42ನೇ ನಿಮಿಷದಲ್ಲಿ ಎಲಂಗ್‌ಬಂ ಟಂಡನ್ ಮೇಟಿ ಗಳಿಸಿದ ಗೋಲು ತಂಡಕ್ಕೆ ಜಯ ತಂದುಕೊಟ್ಟಿತು.

ಎಫ್‌ಸಿ ಡೆಕ್ಕನ್ ಮತ್ತು ಬೆಂಗಳೂರು ಯುನೈಟೆಡ್ ಎಫ್‌ಸಿ ನಡುವಿನ ಪಂದ್ಯ ಗೋಲುರಹಿತ ಡ್ರಾದಲ್ಲಿ ಮುಕ್ತಾಯಗೊಂಡಿತು.

ಶುಕ್ರವಾರ ಮಧ್ಯಾಹ್ನ 1.45ಕ್ಕೆ ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ಮತ್ತು ಬೆಂಗಳೂರು ಈಗಲ್ಸ್ ಎಫ್‌ಸಿ ಸೆಣಸಲಿದ್ದು 3.45ಕ್ಕೆ ಎಫ್‌ಸಿ ಬೆಂಗಳೂರು ಯುನೈಟೆಡ್ ಮತ್ತು ಎಂಇಜಿ ಸೆಂಟರ್ ಎಫ್‌ಸಿ ನಡುವೆ ಪಂದ್ಯ ನಡೆಯಲಿದೆ.

ತಿದ್ದುಪಡಿ

ಗುರುವಾರದ ಸಂಚಿಕೆಯಲ್ಲಿ ಪ್ರಕಟವಾದ ಭಾರತ–ಅಫ್ಗಾನಿಸ್ತಾನ ಟಿ20 ಪಂದ್ಯದ ಸ್ಕೋರ್ ಕಾರ್ಡ್‌ನಲ್ಲಿ ಅಫ್ಗಾನಿಸ್ತಾನದ ಬ್ಯಾಟಿಂಗ್ ಕ್ರಮಾಂಕದಲ್ಲಿ ಪ್ರಮಾದವಶಾತ್ ದಕ್ಷಿಣ ಆಫ್ರಿಕಾ–ಬಾಂಗ್ಲಾ ಆಟಗಾರರ ಹೆಸರುಗಳು ಬಂದಿವೆ. ಇದಕ್ಕಾಗಿ ವಿಷಾದಿಸುತ್ತೇವೆ.

ವೆಸ್ಟ್ ಇಂಡೀಸ್ ವಿರುದ್ಧ ಶ್ರೀಲಂಕಾ ಜಯಭೇರಿ

ಅಬುಧಾಬಿ (ಪಿಟಿಐ): ಶಿಮ್ರಾನ್ ಹೆಟ್ಮೆಯರ್ (ಔಟಾಗದೆ 81; 54 ಎಸೆತ, 8 ಬೌಂಡರಿ, 4 ಸಿಕ್ಸರ್) ಮತ್ತು ನಿಕೋಲಸ್ ಪೂರನ್ (46; 34 ಎ, 6 ಬೌಂ, 1 ಸಿ) ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಗುರುವಾರ ರಾತ್ರಿ ನಡೆದ ಸೂಪರ್ 12ರ ಹಂತದ ಪಂದ್ಯದಲ್ಲಿ ಹಾಲಿ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವನ್ನು ಶ್ರೀಲಂಕಾ 20 ರನ್‌ಗಳಿಂದ ಮಣಿಸಿತು.

190 ರನ್‌ಗಳ ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್ ಪರ ಹೆಟ್ಮೆಯರ್ ಮತ್ತು ಪೂರನ್ ಮಾತ್ರ ಉತ್ತಮ ದಿಟ್ಟ ಆಟವಾಡಿದರು. ಕ್ರಿಸ್ ಗೇಲ್ ಸೇರಿದಂತೆ ಎಂಟು ಬ್ಯಾಟರ್‌ಗಳಿಗೆ ಎರಡಂಕಿ ಮೊತ್ತ ದಾಟಲು ಸಾಧ್ಯವಾಗಲಿಲ್ಲ.

ಈ ಸೋಲಿನೊಂದಿಗೆ ವೆಸ್ಟ್ ಇಂಡೀಸ್ ತಂಡ ಟೂರ್ನಿಯಿಂದ ಹೊರಬಿದ್ದಿತು. 2012 ಮತ್ತು 2016ರಲ್ಲಿ ಚಾಂಪಿಯನ್ ಆಗಿದ್ದ ವೆಸ್ಟ್ ಇಂಡೀಸ್ 2010ರ ನಂತರ ಇದೇ ಮೊದಲ ಬಾರಿ ಸೆಮಿಫೈನಲ್ ಪ್ರವೇಶಿಸದೆ ವಾಪಸಾಗುತ್ತಿದೆ.

ಟಾಸ್ ಗೆದ್ದ ವೆಸ್ಟ್ ಇಂಡೀಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪಥುನ್ ನಿಸಾಂಕಾ ಮತ್ತು ಚರಿತಾ ಅಸಲಂಕಾ ಅವರ ಸುಂದರ ಅರ್ಧಶತಕಗಳ ಬಲದಿಂದ ಶ್ರೀಲಂಕಾ 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 189 ರನ್ ಗಳಿಸಿತು.

ಲಂಕಾ ತಂಡದ ಆರಂಭಿಕ ಬ್ಯಾಟ್ಸ್‌ಮನ್ ನಿಸಾಂಕ (51; 41ಎಸೆತ, 5ಬೌಂಡರಿ) ಮತ್ತು ಅಸಲಂಕಾ (68; 41ಎ,8ಬೌಂ,1ಸಿ) ಆಕರ್ಷಕವಾಗಿ ಬ್ಯಾಟಿಂಗ್ ಮಾಡಿದರು. ಎರಡನೇ ವಿಕೆಟ್‌ಗೆ 91 ರನ್ ಸೇರಿಸಿದರು.

16ನೇ ಓವರ್‌ನಲ್ಲಿ ನಿಸಾಂಕಾ ಔಟಾದ ನಂತರ ಚರಿತ ಜೊತೆಗೂಡಿದ ದಸುನ್ ಶನಕಾ (ಔಟಾಗದೆ 25; 14ಎ) ಕೊನೆಯ ಹಂತದ ಓವರ್‌ಗಳಲ್ಲಿ ರನ್ ಸೂರೆ ಮಾಡಿದರು.

ಮೂರನೇ ವಿಕೆಟ್ ಜೊತೆಯಾಟದಲ್ಲಿ 46 ರನ್‌ಗಳನ್ನು ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 3ಕ್ಕೆ 189 (ಪಥುಮ್ ನಿಸಾಂಕಾ 51, ಕುಶಾಲ ಪೆರೇರಾ 29, ಚರಿತ ಅಸಲಂಕಾ 68, ದಸುನ್ ಶನಾಕ ಔಟಾಗದೆ 25, ಆ್ಯಂಡ್ರೆ ರಸೆಲ್ 33ಕ್ಕೆ2, ಡ್ವೇನ್ ಬ್ರಾವೊ 42ಕ್ಕೆ1); **ವೆಸ್ಟ್ ಇಂಡೀಸ್:** 20 ಓವರ್‌ಗಳಲ್ಲಿ 8ಕ್ಕೆ 169 (ಕ್ರಿಸ್ ಗೇಲ್ 1, ಎವಿನ್ ಲೂಯಿಸ್ 8, ನಿಕೋಲಸ್ ಪೂರನ್ 46, ರಾಸ್ಟನ್ ಚೇಸ್ 9, ಆ್ಯಂಡ್ರೆ ರಸೆಲ್ 2, ಜೇಸನ್ ಹೋಲ್ಡರ್ 8, ಶಿಮ್ರಾನ್ ಹೆಟ್ಮೆಯರ್ ಔಟಾಗದೆ 81; ಬಿನುರ ಫೆರ್ನಾಂಡೊ 24ಕ್ಕೆ2, ದುಷ್ಮಂತ ಚಮೀರ 41ಕ್ಕೆ1, ಚಮಿಕ ಕರುಣರತ್ನೆ 43ಕ್ಕೆ2, ದಸುನ್ ಶನಕ 18ಕ್ಕೆ1, ವನಿಂದು ಹಸರಂಗ 19ಕ್ಕೆ2). **ಫಲಿತಾಂಶ:** ಶ್ರೀಲಂಕಾಕ್ಕೆ 20 ರನ್‌ಗಳ ಜಯ. ಪಂದ್ಯಶ್ರೇಷ್ಠ: ಚರಿತ್ ಅಸಲಂಕಾ.


ಚರಿತ್ ಅಸಲಂಕಾ ಸಂಭ್ರಮ –ಪಿಟಿಐ ಚಿತ್ರ

ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿ: ಕರ್ನಾಟಕಕ್ಕೆ ಶರಣಾದ ಮುಂಬೈ

ಮನೀಷ್ ಬಳಗದ ಶುಭಾರಂಭ

ಗುವಾಹತಿ: ದೀಪಾವಳಿ ಹಬ್ಬದಂದು ಮನೀಷ್ ಪಾಂಡೆ ನಾಯಕತ್ವದ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಈ ಋತುವಿನ ಮೊದಲ ದೇಶಿ ಕ್ರಿಕೆಟ್ ಟೂರ್ನಿಯ ಬಿ ಗುಂಪಿನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವು 9 ರನ್‌ಗಳಿಂದ ಬದ್ಧ ಎದುರಾಳಿ ಮುಂಬೈ ವಿರುದ್ಧ ಜಯಿಸಿತು.

ಬರ್ಸಾಪರ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಮುಂಬೈ ತಂಡದ ನಾಯಕ ಅಜಿಂಕ್ಯ ರಹಾನೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು.

ಮನೀಷ್ ಪಾಂಡೆ (84; 64ಎಸೆತ) ಮತ್ತು ಕರುಣ್ ನಾಯರ್ (72; 53ಎಸೆತ) ಅವರ ಅಮೋಘ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 166 ರನ್ ಗಳಿಸಿತು.

ಅದಕ್ಕುತ್ತರವಾಗಿ ಮುಂಬೈ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 157 ರನ್ ಗಳಿಸಲಷ್ಟೇ ಶಕ್ತವಾಯಿತು. ಅಜಿಂಕ್ಯ ರಹಾನೆ (75; 54ಎ) ಅವರ ಆಕರ್ಷಕ ಅರ್ಧಶತಕವು ವ್ಯರ್ಥವಾಯಿತು. ಸ್ಪಿನ್ನರ್ ಕೆ.ಸಿ. ಕಾರ್ಯಪ್ಪ (26ಕ್ಕೆ3) ಮತ್ತು ಕೃಷ್ಣಪ್ಪ ಗೌತಮ್ (26ಕ್ಕೆ2) ಅವರ ನಿಖರ ದಾಳಿಯ ಮುಂದೆ ಮುಂಬೈ ಶರಣಾಯಿತು.

ಮನೀಷ್–ಕರುಣ್ ಜೊತೆಯಾಟ: ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡದ ಆರಂಭ ಚೆನ್ನಾಗಿರಲಿಲ್ಲ. ಇನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಮಯಂಕ್ ಅಗರವಾಲ್ ವಿಕೆಟ್ ಗಳಿಸಿದ ಮೋಹಿತ್ ಅವಸ್ತಿ ಸಂಭ್ರಮ ಮುಗಿಲುಮುಟ್ಟಿತು.

ತಮ್ಮ ಎರಡನೇ ಓವರ್‌ನಲ್ಲಿ ದೇವದತ್ತ ಪಡಿಕ್ಕಲ್‌ಗೂ ಡಗ್‌ಔಟ್ ದಾರಿ ತೋರಿಸಿದ ಅವಸ್ತಿ ಮೆರೆದರು. ಐಪಿಎಲ್‌ನಲ್ಲಿ ಅಮೋಘ ಆಟವಾಡಿದ್ದ ಇಬ್ಬರು ಬ್ಯಾಟ್ಸ್‌ಮನ್‌ಗಳು ಬೇಗನೆ ಔಟಾದಾಗ ಕರ್ನಾಟಕ ಬಳಗದಲ್ಲಿ ಒತ್ತಡ ಹೆಚ್ಚಿತು.

ಆದರೆ, ನಾಯಕನಿಗೆ ತಕ್ಕ ಆಟವಾಡಿದ ಪಾಂಡೆ ಮತ್ತು 'ಮಾಜಿ ನಾಯಕ' ಕರುಣ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 149 ರನ್‌ಗಳನ್ನು ಸೇರಿಸಿದರು. ಕೊನೆಯ ಓವರ್‌ನ ನಾಲ್ಕನೇ ಎಸೆತದಲ್ಲಿ ಕರುಣ್ ಮತ್ತು ಅಂತಿಮ ಎಸೆತದಲ್ಲಿ ಪಾಂಡೆ ಔಟಾಗುವವರೆಗೂ ಬೌಲರ್‌ಗಳು ಪರದಾಡಿದರು.

ಹೋದ ಋತುವಿನಲ್ಲಿ ಬ್ಯಾಟಿಂಗ್ ಲಯ ಕಂಡುಕೊಳ್ಳಲು ಪರದಾಡಿದ್ದ ಕರುಣ್ ಇಲ್ಲಿ ಉತ್ತಮ ಆರಂಭ ಮಾಡಿದ್ದಾರೆ.


ಕರುಣ್ ನಾಯರ್

ಮುಂಬೈ ತಂಡಕ್ಕೂ ಆರಂಭದಲ್ಲಿಯೇ ಪೆಟ್ಟು ಬಿತ್ತು. ಪೃಥ್ವಿ ಶಾ ಅವರನ್ನು ಮೊದಲ ಓವರ್‌ನಲ್ಲಿಯೇ ಕ್ಲೀನ್ ಬೌಲ್ಡ್ ಮಾಡಿದ ಕಾರ್ಯಪ್ಪ ಖಾತೆ ತೆರೆದರು. ಆದರೆ ಅಜಿಂಕ್ಯ ಮತ್ತು ಮಧ್ಯಕ್ರಮಾಂಕದಲ್ಲಿಸಿದ್ಧೇಶ್ ಲಾಡ್ (32 ರನ್) ಜಯದ ಆಸೆ ಚಿಗುರಿಸಿದ್ದರು. ಆದರೆ, ಕರ್ನಾಟಕದ ಬೌಲರ್‌ಗಳು ಬಿಗಿದಾಳಿ ನಡೆಸಿದರು.

ಇಂದಿನ ಪಂದ್ಯ: ಕರ್ನಾಟಕ–ಛತ್ತೀಸಗಡ

ಶನಿವಾರದ ಪಂದ್ಯ: ಕರ್ನಾಟಕ–ಸರ್ವಿಸಸ್


ಮನೀಷ್ ಪಾಂಡೆ

ಸ್ಕೋರ್ ಕಾರ್ಡ್

ಕರ್ನಾಟಕ 4ಕ್ಕೆ166 (20 ಓವರ್‌ಗಳಲ್ಲಿ)
ಮಯಂಕ್ ಸಿ ಅಂಕೋಲೇಕರ್ ಬಿ ಮೋಹಿತ್ 00 (1ಎ), ಪಡಿಕ್ಕಲ್ ಸಿ ಶಿವಂ ಬಿ ಮೋಹಿತ್ 5 (3ಎ, 4X1), ಮನೀಷ್ ಸಿ ತಾರೆ ಬಿ ದೇಶಪಾಂಡೆ 84 (64ಎ,4X7, 6X2), ಕರುಣ್ ಸಿ ಹಕೀಂ ಬಿ ದೇಶಪಾಂಡೆ 72 (53ಎ, 4X6, 6X2), ಗೌತಮ್ ಔಟಾಗದೆ 0
ವಿಕೆಟ್ ಪತನ: 1–0 (ಮಯಂಕ್ ಅಗರವಾಲ್; 0.1), 2–15 (ದೇವದತ್ತ ಪಡಿಕ್ಕಲ್;2.1), 3–164 (ಕರುಣ್ ನಾಯರ್; 19.4), 4–166 (ಮನೀಷ್ ಪಾಂಡೆ, 19.6)
ಬೌಲಿಂಗ್: ಮೋಹಿತ್ ಅವಸ್ತಿ 4–0–32–2, ತುಷಾರ್ ದೇಶಪಾಂಡೆ 4–0–38–2, ಅಥರ್ವ ಅಂಕೋಲೇಕರ್ 4–0–25–0,ತನುಷ್ ಕೋಟ್ಯಾನ್ 4–0–25–0, ಶಿವಂ ದುಬೆ3–0–27–0, ಯಶಸ್ವಿ ಜೈಸ್ವಾಲ್ 1–0–17–0
ಮುಂಬೈ 6ಕ್ಕೆ 157 (20 ಓವರ್‌ಗಳಲ್ಲಿ)
ಪೃಥ್ವಿ ಬಿ ಕಾರ್ಯಪ್ಪ 4 (3ಎ,4X1), ರಹಾನೆ ಸಿ ಪಾಂಡೆ ಬಿ ಕಾರ್ಯಪ್ಪ 75 (54ಎ, 4X6, 3X6), ಜೈಸ್ವಾಲ್ ಸ್ಟಂಪ್ಡ್ ಶರತ್ ಬಿ ಗೌತಮ್ 13 (12ಎ, 4X2), ಲಾಡ್ ಸಿ ಪಡಿಕ್ಕಲ್ ಬಿ ಗೌತಮ್ 32 (25ಎ, 4X5), ಶಿವಂ ಬಿ ಕಾರ್ಯಪ್ಪ 3 (6ಎ), ತಾರೆ ಔಟಾಗದೆ 12 (10ಎ, 4X1), ಅಮನ್ ಹಕೀಂ ಖಾನ್ ಸಿ ಕರುಣ್ ಬಿ ವಿದ್ಯಾಧರ್ 1(2ಎ), ಅಥರ್ವ ಅಂಕೋಲೇಕರ್ ಔಟಾಗದೆ 13 (8ಎ, 6X1)
ವಿಕೆಟ್ ಪತನ: 1–4 (ಪೃಥ್ವಿ ಶಾ; 0.3), 2–44 (ಯಶಸ್ವಿ ಜೈಸ್ವಾಲ್; 6.3), 3–125 (ಸಿದ್ಧೇಶ್ ಲಾಡ್; 15.2), 4–129 (ಅಜಿಂಕ್ಯ ರಹಾನೆ;16.3), 5–129 (ಶಿವಂ ದುಬೆ; 16.4), 6–130 (ಅಮನ್ ಖಾನ್; 17.1)
ಬೌಲಿಂಗ್: ಕೆ.ಸಿ. ಕಾರ್ಯಪ್ಪ 4–0–26–3, ಪ್ರಸಿದ್ಧ ಕೃಷ್ಣ 4–0–41–0,ಪ್ರತೀಕ್ ಜೈನ್ 4–0–39–0, ವಿದ್ಯಾಧರ ಪಾಟೀಲ 4–0–25–1, ಕೃಷ್ಣಪ್ಪ ಗೌತಮ್ 4–0–26–2.

ಫಲಿತಾಂಶ: ಕರ್ನಾಟಕಕ್ಕೆ 9 ರನ್‌ಗಳ ಜಯ; 4 ಪಾಯಿಂಟ್ಸ್

ಬಂಗಾಳಕ್ಕೆ ಮಣಿದ ಛತ್ತೀಸಗಡ

ಗುವಾಹತಿ: ಸುದೀಪ್ ಚಟರ್ಜಿ (ಔಟಾಗದೆ 51) ಅರ್ಧಶತಕದ ನೆರವಿನಿಂದ ಬಂಗಾಳ ತಂಡವು ಬಿ ಗುಂಪಿನ ಪಂದ್ಯದಲ್ಲಿ ಛತ್ತೀಸಗಡದ ಎದುರು 7 ವಿಕೆಟ್‌ಗಳಿಂದ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಬಿ ಗುಂಪು: ಛತ್ತೀಸಗಡ: 20 ಓವರ್‌ಗಳಲ್ಲಿ 7ಕ್ಕೆ118 (ಅಖಿಲ್ ಹರ್ವಾಡ್ಕರ್ 73, ಅಜಯ್ ಮಂಡಲ್ 25, ಮುಖೇಶ್ ಕುಮಾರ್ 26ಕ್ಕೆ2) **ಬಂಗಾಳ:** 17 ಓವರ್‌ಗಳಲ್ಲಿ 3ಕ್ಕೆ119 (ಸುದೀಪ್ ಚಟರ್ಜಿ ಔಟಾಗದೆ 51, ವೃದ್ಧಿಮಾನ್ ಸಹಾ 24, ರವಿಕಿರಣ 24ಕ್ಕೆ2) ಫಲಿತಾಂಶ: ಬಂಗಾಳಕ್ಕೆ 7 ವಿಕೆಟ್ ಜಯ.

ಬರೋಡಾ: 20 ಓವರ್‌ಗಳಲ್ಲಿ 9ಕ್ಕೆ124 (ಕೇದಾರ್ ದೇವಧರ್ 18, ಭಾನು ಪನಿಯಾ 55, ಧ್ರುವ್ ಪಟೇಲ್ 15, ಅತಿಥ್ ಶೇಟ್ 14, ದಿವೇಶ್ ಪಠಾಣಿಯಾ 21ಕ್ಕೆ2, ನಿತಿನ್ ಯಾದವ್ 22ಕ್ಕೆ3) ಸರ್ವಿಸಸ್: 20 ಓವರ್‌ಗಳಲ್ಲಿ 8ಕ್ಕೆ128 (ರಜತ್ ಪಲಿವಾಲ 23, ದಿವೇಶ್ ಪಠಾಣಿಯಾ ಔಟಾಗದೆ 41, ವರುಣ್ ಚೌಧರಿ ಔಟಾಗದೆ 13, ಕೃಣಾಲ್ ಪಾಂಡ್ಯ 12ಕ್ಕೆ2, ನಿನಾದ್ ರಥ್ವಾ 8ಕ್ಕೆ3) ಫಲಿತಾಂಶ: ಸರ್ವಿಸಸ್‌ಗೆ 2 ವಿಕೆಟ್‌ಗಳ ಜಯ.

ಕ್ರಿಕೆಟ್: ಕರ್ನಾಟಕ ಮಹಿಳೆಯರಿಗೆ ಜಯ

ಬೆಂಗಳೂರು: ಚಂದು ವಿ. (17ಕ್ಕೆ 5) ಅವರ ಪರಿಣಾಮಕಾರಿ ಬೌಲಿಂಗ್ ಬಲದಿಂದ ಕರ್ನಾಟಕ ಮಹಿಳಾ ತಂಡವು ಬಿಸಿಸಿಐ ಮಹಿಳಾ ಏಕದಿನ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಮತ್ತೊಂದು ಜಯ ಸಂಪಾದಿಸಿತು.

ನಾಗಪುರದ ವಿಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 10 ವಿಕೆಟ್‌ಗಳಿಂದ ಸೌರಾಷ್ಟ್ರ ತಂಡವನ್ನು ಮಣಿಸಿತು. ರಾಜ್ಯದ ಶುಭಾ ಸತೀಶ್ ಅರ್ಧಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಸೌರಾಷ್ಟ್ರ: 41.2 ಓವರ್‌ಗಳಲ್ಲಿ 95 (ಪಿ.ಎಸ್.ನಿಮಾವತ್ 33, ಸರಸ್ವತಿ ಕೆ. 25; ಮೋನಿಕಾ ಸಿ. ಪಟೇಲ್ 11ಕ್ಕೆ 2, ಚಂದು ವಿ. 17ಕ್ಕೆ 5). ಕರ್ನಾಟಕ: 15.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 99 (ದಿವ್ಯಾ ಜ್ಞಾನಾನಂದ ಔಟಾಗದೆ 43, ಶುಭಾ ಸತೀಶ್ ಔಟಾಗದೆ 55). ಫಲಿತಾಂಶ ಕರ್ನಾಟಕ ತಂಡಕ್ಕೆ 10 ವಿಕೆಟ್‌ಗಳ ಜಯ.

ಬುಧವಾರದ ಪಂದ್ಯದಲ್ಲಿ ಕರ್ನಾಟಕ ಮಹಿಳೆಯರು 7 ವಿಕೆಟ್‌ಗಳಿಂದ ಛತ್ತೀಸಗಡ ತಂಡವನ್ನು ಮಣಿಸಿದ್ದರು. ಮೊದಲು ಬ್ಯಾಟ್ ಮಾಡಿದ ಛತ್ತೀಸಗಡ ತಂಡವನ್ನು ರಾಜ್ಯದ ಬೌಲರ್‌ಗಳು 44ನೇ ಓವರ್‌ನಲ್ಲಿ 150 ರನ್‌ಗಳಿಗೆ ನಿಯಂತ್ರಿಸಿದ್ದರು. ಕರ್ನಾಟಕ ವೃಂದಾ ದಿನೇಶ್ (ಔಟಾಗದೆ 67) ಹಾಗೂ ಶುಭಾ ಸತೀಶ್ (64) ಅವರ ಅರ್ಧಶತಕಗಳ ನೆರವಿನಿಂದ 35ನೇ ಓವರ್‌ನಲ್ಲಿ 3 ವಿಕೆಟ್ ಕಳೆದುಕೊಂಡು ಜಯ ಸಾಧಿಸಿತು.


ಚಂದು ವಿ.

ಬೆಂಗಳೂರು ರೇಸ್

ಲೇಕ್ ತಾಹೋ ಗೆಲ್ಲುವ ನಿರೀಕ್ಷೆ

ವಿಜಯನಗರ ಕಪ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಲೇಕ್ ತಾಹೋ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.00 ಗಂಟೆಗೆ ಆರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡೆವಿಲ್ಸ್ ಮ್ಯಾಜಿಕ್ 1, ಬ್ಲ್ಯಾಕ್ ಕಾಫೀ 4, ಐಸ್‌ಲ್ಯಾಂಡಿಕ್ 2
2ನೇ ರೇಸ್: ಮಟೇರ 3, ಥೌಸಂಡ್ ವರ್ಡ್ಸ್ 7, ಸ್ಟಾರ್ ಆಫ್ ದಿ ಹಿಲ್ಸ್ 9
3ನೇ ರೇಸ್: ಸಿಲ್ವರಿಟಾ 2, ಒಜಾರ್ಕ್ 1, ರೈಟ್ಲಿ ನೋಬಲ್ 8
4ನೇ ರೇಸ್: ಪವರ್ಫುಲ್ ಲೇಡಿ 1, ಗೋಲ್ಡನ್ ವಿಶನ್ 3, ಎಲೈಟ್ ಕ್ರೌನ್ 5
5ನೇ ರೇಸ್: ರಿಕಾಲ್ ಆಫ್ ಯು 1, ರಿಯಾಲಿಯಾ 2, ಸ್ಟಾರ್ ಅಂಡ್ ಗಾರ್ಟರ್ 3
6ನೇ ರೇಸ್: ರೂಲಿಂಗ್ ಗಾಡೆಸ್ 7, ಸದರ್ನ್ ಡೈನಾಸ್ಟಿ 4, ಸೀಕ್ರೆಟ್ ಆಫ್ ಲೈಫ್ 8
7ನೇ ರೇಸ್: ಲೇಕ್ ತಾಹೋ 2, ಗ್ರೀನ್ ಚಾನೆಲ್ 1, ಪೆಲುಷೆ 3
8ನೇ ರೇಸ್: ಲಿವಿಸಿಲ್ಲಾ 6, ದಿ ಸಾವಿರನ್ ಆರ್ಬ್ 7, ಇಂಪೆಲಿಂಗ್ ಪವರ್ 9
9ನೇ ರೇಸ್: ಚೈನ್ ಆಫ್ ಥಾಟ್ಸ್ 3, ಇಂಪೆಕಬಲ್ 10, ಅನದರ್ ರೈನ್‌ಬೋ 8

ಉತ್ತಮ ಬೆಟ್: ಸಿಲ್ವರಿಟಾ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8.9	1,2,3	4,5,6	7,8,9

ಭಾರತಕ್ಕೆ ಪದಕ ಗೆದ್ದುಕೊಟ್ಟ ಆಕಾಶ್

ವಿಶ್ವ ಬಾಕ್ಸಿಂಗ್: ಪದಾರ್ಪಣೆ ಚಾಂಪಿಯನ್‌ಷಿಪ್‌ನಲ್ಲಿ ಮಿಂಚು

ಬೆಲ್‌ಗ್ರೇಡ್ (ಪಿಟಿಐ): ಮೊದಲ ಬಾರಿ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡ ಭಾರತದ ಆಕಾಶ್ ಕುಮಾರ್ ಕಂಚಿನ ಪದಕಕ್ಕೆ ಮುತ್ತನ್ನಿತ್ತಿದ್ದಾರೆ. ಗುರುವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ಅವರು ಕಜಕಸ್ತಾನದ ಯುವ ಬಾಕ್ಸರ್ ಮಖಮುದ್ ಸಬೀರ್‌ಖಾನ್ ಎದುರು 0–5ರಲ್ಲಿ ಸೋತರು.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಐದು ಪದಕ ಗೆದ್ದುಕೊಂಡಿರುವ ಶಿವ ಥಾಪಾ ಮತ್ತು ಏಷ್ಯನ್ ಚಾಂಪಿಯನ್ ಸಂಜೀತ್ ಸೇರಿದಂತೆ ಭಾರತದ ಪ್ರಮುಖ ಬಾಕ್ಸರ್‌ಗಳು ಸೆಮಿಫೈನಲ್ ಪ್ರವೇಶಿಸುವುದಕ್ಕೂ ಸಾಧ್ಯವಾಗದೇ ನಿರಾಸೆಗೆ ಒಳಗಾಗಿದ್ದರು. ಆದರೆ 54 ಕೆಜಿ ವಿಭಾಗದಲ್ಲಿ ಆಕಾಶ್ ಕುಮಾರ್ ಅಮೋಘ ಸಾಮರ್ಥ್ಯ ತೋರುತ್ತ ಬಂದಿದ್ದರು. ಕಂಚು ಗೆಲ್ಲುವ ಮೂಲಕ ಈ ಬಾರಿಯ ಚಾಂಪಿಯನ್‌ಷಿಪ್‌ನಲ್ಲಿ ದೇಶದ ಪರವಾಗಿ ಪದಕ ಗೆದ್ದ ಏಕೈಕ ಬಾಕ್ಸರ್ ಎನಿಸಿಕೊಂಡರು. 19 ವರ್ಷದ ಮಖಮುದ್ ಅವರು ಕಜಕಸ್ತಾನದ ರಾಷ್ಟ್ರೀಯ ಚಾಂಪಿಯನ್ ಕೂಡ ಆಗಿದ್ದಾರೆ. ತಾಳ್ಮೆಯಿಂದ ಆಡಿದರು. ತಂತ್ರಗಳನ್ನು ಪ್ರಯೋಗಿಸುವಲ್ಲಿ ಚಾಣಾಕ್ಷತನ ಮೆರೆದ ಅವರು ಪ್ರತಿ ದಾಳಿ ನಡೆಸುವ ಅವಕಾಶಗಳಲ್ಲಿ ಎಡವಲಿಲ್ಲ. ಹೀಗಾಗಿ ಸುಲಭವಾಗಿ ಪಾಯಿಂಟ್‌ಗಳು ಒಲಿದು ಬಂದವು.

ಮೊದಲ ಸುತ್ತಿನಲ್ಲಿ ಏಕಪಕ್ಷೀಯ ಜಯ ಸಾಧಿಸಿದ ಮಖಮುದ್ ಎರಡನೇ ಸುತ್ತಿನ ಆರಂಭದಲ್ಲಿ ಮುನ್ನಡೆ ಸಾಧಿಸಿದ್ದರು. ತಿರುಗೇಟು ನೀಡಲು ಆಕಾಶ್ ಪ್ರಯತ್ನಿಸಿದರು. ಆದರೆ ಅವರ ಪಂಚ್‌ಗಳು ನಿರೀಕ್ಷೆಗೆ ತಕ್ಕಂತೆ ಪ್ರಭಾವ ಬೀರಲಿಲ್ಲ. ನಿಖರ ದಾಳಿಯ ಮೂಲಕ ಮಖಮುದ್ ಗೆಲುವು ಸಾಧಿಸಿದರು.

ಈ ಹಿಂದಿನ ಪದಕ ವಿಜೇತರು

ವಿಜೇಂದರ್ ಸಿಂಗ್–ಕಂಚು (2009), ವಿಕಾಸ್ ಕೃಷನ್–ಕಂಚು (2011), ಶಿವ ಥಾಪಾ–ಕಂಚು (2015), ಗೌರವ್ ಬಿಧೂರಿ–ಕಂಚು (2017), ಅಮಿತ್ ಪಂಘಾಲ್–ಬೆಳ್ಳಿ (2019), ಕೌಶಿಕ್–ಕಂಚು (2019).

ಹಬ್ಬಕ್ಕಿರಲಿ ಮಕ್ಕಳಿಗೆ ರಂಗುರಂಗಿನ ಉಡುಪು

ಮಂಜುಶ್ರೀ ಎಂ. ಕಡಕೋಳ

ಬಣ್ಣಬಣ್ಣದ ಬಟ್ಟೆ ತೊಟ್ಟ ಪುಟ್ಟ ಮಕ್ಕಳು ಮನೆತುಂಬಾ ಓಡಾಡುವುದನ್ನು ನೋಡುವುದೇ ಸಂಭ್ರಮ. ಅದರಲ್ಲೂ ಬೆಳಕಿನ ಹಬ್ಬ ದೀಪಾವಳಿಯ ಸಡಗರಕ್ಕೆ ತಮ್ಮ ಮಕ್ಕಳಿಗೆ ಹೊಳೆಯುವ ಬಣ್ಣದ ಬಟ್ಟೆ ಹಾಕಬೇಕೆಂಬ ಆಸೆ ಹಲವು ಪೋಷಕರದ್ದು. ಮಾರುಕಟ್ಟೆಯಲ್ಲಿನ ಥರೇವಾರಿ ವಿನ್ಯಾಸದ ಉಡುಪುಗಳಲ್ಲಿ ತಮ್ಮ ಮಕ್ಕಳಿಗೆ ಯಾವ ವಿನ್ಯಾಸ ಸೂಕ್ತವಾಗುತ್ತದೆ ಎನ್ನುವ ಗೊಂದಲವೂ ಕಾಡದಿರದು.

ಮಕ್ಕಳ ಚರ್ಮ ಸೂಕ್ಷ್ಮವಾಗಿರುವುದರಿಂದ ಅವರಿಗೆ ಕಿರಿಕಿರಿ ಆಗದಿರುವ ಉಡುಪುಗಳ ಆಯ್ಕೆಯ ಸವಾಲೂ ಎದುರಾಗುವುದು ಸಹಜ. ಕೆಲವು ಉಡುಪುಗಳು ಮೇಲ್ನೋಟಕ್ಕೆ ಮಿರಮಿರನೆ ಮಿನುಗುವಂತಿದ್ದರೂ ಒಳಗಡೆ ಹಾಕಿರುವ ಬಟ್ಟೆಯ ಗುಣಮಟ್ಟ ಕಳಪೆಯಾಗಿರುವ ಸಾಧ್ಯತೆಯೂ ಇಲ್ಲದಿಲ್ಲ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮಕ್ಕಳ ಉಡುಗೆಗಳನ್ನು ಆಯ್ಕೆ ಮಾಡುವ ಜಾಣತನವೂ ಇರಬೇಕು.

ಪ್ರತಿ ಸಲವೂ ಹಬ್ಬಕ್ಕೆ ಒಂದೇ ಮಾದರಿ, ಬಣ್ಣ, ವಿನ್ಯಾಸ ಖರೀದಿಸುವ ಬದಲು ಭಿನ್ನ ಬಗೆಯ ರೆಡಿಮೇಡ್ ಉಡುಪುಗಳು ಇಲ್ಲವೇ ವಿನ್ಯಾಸ ಮಾಡಿಸಬಹುದು. ಅದಕ್ಕಾಗಿ ಇಲ್ಲಿವೆ ಕೆಲ ಟಿಪ್ಸ್.





ಸಾಂಪ್ರದಾಯಿಕ ಉಡುಗೆ

ಹಬ್ಬಗಳಲ್ಲಿ ಸಾಮಾನ್ಯವಾಗಿ ಸಾಂಪ್ರದಾಯಿಕ ಉಡುಪುಗಳದ್ದೇ ಮೇಲುಗೈ. ಹಿರಿಯರಿರಲಿ, ಕಿರಿಯರಿರಲಿ ಇಬ್ಬರೂ ಅದೇ ಮಾದರಿಯ ವಿನ್ಯಾಸಕ್ಕೆ ಮೊರೆ ಹೋಗುವುದು ಸಹಜ. ಪುಟ್ಟ ಹೆಣ್ಣುಮಕ್ಕಳಿಗೆ ರೆಡಿಮೇಡ್ ಸೀರೆ, ಲಂಗ-ಜಾಕೀಟು, ಘಾಗ್ರಾ-ಚೋಲಿ, ಲೆಹೆಂಗಾ... ಹೀಗೆ ವಿಭಿನ್ನ ವಿನ್ಯಾಸಗಳು ದೊರೆಯುತ್ತವೆ. ಇಂಥ ಉಡುಪುಗಳು ರೆಡಿಮೇಡ್ ಆಗಿಯೂ ದೊರೆಯುತ್ತವೆ. ಕೆಲವರು ನಿರ್ದಿಷ್ಟ ವಿನ್ಯಾಸದ ಉಡುಪುಗಳನ್ನು ಟೈಲರ್ ಬಳಿ ಹೊಲೆಸುವುದೂ ಉಂಟು.

ಖಣದ ಫ್ಯಾಷನ್

ಇತ್ತೀಚೆಗೆ ಇಳಕಲ್ ಖಣದಲ್ಲಿ ಹೆಣ್ಣುಮಕ್ಕಳಿಗೆ ಲಂಗ-ಜಾಕೀಟು, ಫ್ರಾಕ್, ಗೌನ್, ಚೂಡಿದಾರ್ ಮಾದರಿಯ ಉಡುಪುಗಳನ್ನು ಹೊಲೆಸುವುದು ಟ್ರೆಂಡ್ ಆಗಿದೆ. ಇಳಕಲ್ ಖಣದಲ್ಲಿ ಬಾರ್ಡರ್ ಇರುವುದರಿಂದ ಲಂಗ-ಜಾಕೀಟ್‌ಗೆ ಹೇಳಿ ಮಾಡಿಸಿದ ಮೆಟಿರೀಯಲ್ ಇದು. ಖಣದ ಬಟ್ಟೆಯಲ್ಲಿ ರೇಷ್ಮೆ, ಕಾಟನ್ ಮೆಟಿರೀಯಲ್ ಕೂಡಾ ಲಭ್ಯವಿದೆ. ಖಣದ ಬಟ್ಟೆಗೆ ಒಳಗೆ ಕಾಟನ್ ಬಟ್ಟೆಯ ಲೈನಿಂಗ್ ಕೊಡುವುದರಿಂದ ಮಕ್ಕಳಿಗೆ ಧರಿಸಲೂ ಆರಾಮದಾಯಕವಾಗಿರುತ್ತದೆ. ಗಾಢ ಬಣ್ಣದ ಖಣದಲ್ಲಿ ವಿನ್ಯಾಸ ಮಾಡಿಸಿದ ಉಡುಪುಗಳು ಶ್ರೀಮಂತ ನೋಟ ನೀಡುತ್ತವೆ. ಬಟ್ಟೆಯೂ ಹಗುರವಾಗಿರುವುದರಿಂದ ಮಕ್ಕಳಿಗೂ ಕಿರಿಕಿರಿ ಅನಿಸದು. ದೇಶಿಯ ಉಡುಪಿನ ಸೊಬಗೂ ಮೇಳೈಸುತ್ತದೆ.

ಗೌನ್

ಗೌನ್ ವಿನ್ಯಾಸದ ಉಡುಪು ಇತ್ತೀಚಿನ ಫ್ಯಾಷನ್‌ನಲ್ಲಿ ಮುಂಚೂಣಿಯಲ್ಲಿರುವಂಥದ್ದು. ಉದ್ದನೆಯ ಲಂಗದ ಮಾದರಿ ಎನಿಸಿದರೂ ಮಕ್ಕಳು ಬೇಗನೆ ಬೆಳೆಯುವುದರಿಂದ ಗೌನ್ ಕೊಳ್ಳುವುದು ಉತ್ತಮ ಆಯ್ಕೆ. ಮೈಕಟ್ಟು ತೆಳ್ಳಗಿರುವವರು ಸೇರಿದಂತೆ ತುಸು ದಪ್ಪ ಎನಿಸುವ ಮಕ್ಕಳಿಗೂ ಗೌನ್ ಸೂಕ್ತ. ಹಬ್ಬ ಮಾತ್ರವಲ್ಲದೇ ಇತರ ಸಮಾರಂಭಗಳಿಗೂ ಗೌನ್ ಧರಿಸಬಹುದು. ಇವುಗಳಲ್ಲಿ ನಾನಾ ವಿನ್ಯಾಸಗಳೂ ದೊರೆಯುತ್ತವೆ.

ಫ್ರಾಕ್

ಫ್ರಾಕ್‌ಗಳಿಗಂತೂ ಫ್ಯಾಷನ್ ಲೋಕದಲ್ಲಿ ಸದಾ ಬೇಡಿಕೆ. ಸಿಂಡ್ರೆಲಾ ಫ್ರಾಕ್, ಅಂಬ್ರೆಲಾ ಫ್ರಾಕ್, ವೆಲ್ವೆಟ್ ಫ್ರಾಕ್ ಹೀಗೆ ವಿವಿಧ ಬಗೆಯ ಫ್ರಾಕ್‌ಗಳೂ ಲಭ್ಯ. ಕಾರ್ಟೂನ್‌ಗಳಲ್ಲಿ ಬರುವ ಪಾತ್ರಗಳ ಉಡುಪುಗಳು ಮಕ್ಕಳ ಗಮನ ಸೆಳೆಯುವುದರಿಂದ ಹಿಂದೆ ಬಿದ್ದಿಲ್ಲ. ಇವೆಲ್ಲದರ ನಡುವೆ ಶರಾರ, ತ್ರಿಪೀಸ್ ಕುರ್ತಾ, ಪೈಲಾಜೊ-ದುಪಟ್ಟಾ, ಮಿನಿ ಸ್ಕರ್ಟ್, ಮಿಡ್ಡಿ.... ಹೀಗೆ ಹತ್ತು ಹಲವು ವಿನ್ಯಾಸಗಳಿಗೆ ಕೊರತೆಯಿಲ್ಲ.

ಧೋತಿ –ಕುರ್ತಾ, ಶರ್ಟ್–ಪಂಚೆ

ಹೆಣ್ಣುಮಕ್ಕಳಷ್ಟು ವೈವಿಧ್ಯಮಯ ಉಡುಪುಗಳು ಗಂಡುಮಕ್ಕಳಿಗಿಲ್ಲವಾದರೂ, ಇತ್ತೀಚೆಗೆ ಪುಟ್ಟ ಮಕ್ಕಳಿಗೂ ಸಿಲ್ಕ್ ಪಂಚೆ-ಶರ್ಟ್-ಶಲ್ಯ ಗಮನ ಸೆಳೆಯುತ್ತಿದೆ. ಇದರ ಜತೆಗೆ ಸದಾ ಕಾಲಕ್ಕೂ ಪ್ರಸ್ತುತವಾಗುವ ಧೋತಿ-ಕುರ್ತಾ- ಅದರ ಮೇಲೊಂದು ಕೋಟು ಆಕರ್ಷಕ ನೋಟ ನೀಡುತ್ತದೆ. 2 ಪೀಸ್ ಸೂಟ್ ಸೆಟ್, ಪ್ಯಾಂಟು-ಶರ್ಟು, ವೆಯಿಸ್ಟ್ ಕೋಟ್ ಸೂಟ್ ಸೆಟ್, ಧೋತಿ-ಶೇರ್ವಾನಿ, ಶ್ರಗ್ ಪ್ಯಾಂಟ್-ಶರ್ಟ್ ವಿನ್ಯಾಸ ಉಡುಪುಗಳೂ ಆಕರ್ಷಕ ನೋಟ ನೀಡುತ್ತವೆ.

ಸುರಕ್ಷತೆ ಆದ್ಯತೆಯಾಗಿರಲಿ

ವಿನ್ಯಾಸ ಯಾವುದೇ ಇರಲಿ, ಮಕ್ಕಳ ಚರ್ಮಕ್ಕೆ ಆರಾಮದಾಯಕ ಮತ್ತು ಧರಿಸಲು ಅನುಕೂಲವಾಗಿರುವಂಥದ್ದನ್ನು ಆಯ್ಕೆ ಮಾಡುವುದು ಒಳಿತು. ಉದ್ದನೆಯ ಲಂಗ, ಗೌನ್ ಹಾಕುವಾಗ ತೀರಾ ನೆಲಕ್ಕೆ ತಾಕುವಂತೆ ಹಾಕದೇ ತುಸು ಮೇಲೆಯೇ ಹಾಕುವುದರಿಂದ ನಡೆಯಲು ಅನುಕೂಲ. ಅಲ್ಲಿ-ಇಲ್ಲಿ ಸಿಕ್ಕಿ ಹಾಕಿಕೊಳ್ಳುವ ಸಂಭವವನ್ನೂ ತಪ್ಪಿಸಬಹುದು. ಹಬ್ಬಕ್ಕೆ ಹಾಕುವ ಬಟ್ಟೆಗಳು ಮಕ್ಕಳ ಆಟೋಟ ಚಟುಟಿಕೆಗಳಿಗೆ ತೊಂದರೆಯಾಗದಂತೆ ಇರುವುದೂ ಅವಶ್ಯಕ. ಪಟಾಕಿ ಹಚ್ಚುವಂಥ ಸಂದರ್ಭಗಳಲ್ಲಿ ಹತ್ತಿಯ ಉಡುಪುಗಳಿಗೇ ಆದ್ಯತೆ ಇರಲಿ. ನೆಟ್ಟೆಂಡ್ ಮಾದರಿಯ ಉಡುಪುಗಳಿಗೆ ಬೆಂಕಿಯ ಕಿಡಿಗಳು ಸುಲಭವಾಗಿ ಹತ್ತಿಕೊಳ್ಳುತ್ತವೆ. ಹಾಗಾಗಿ, ಈ ಬಗ್ಗೆ ಎಚ್ಚರ ವಹಿಸುವುದು ಅಗತ್ಯ. ❖

ಬಾಯಲ್ಲಿ ನೀರೂರಿಸುವ ಮೋತಿಚೂರ್ ಲಡ್ಡು, ಬಾದಾಮ್ ಪುರಿ

ರೆಸಿಪಿ



ಮೋತಿಚೂರ್ ಲಡ್ಡು

ಬೇಕಾಗುವ ಸಾಮಗ್ರಿಗಳು: ಕಡಲೆಹಿಟ್ಟು - 3 ಕಪ್, ಸಕ್ಕರೆ - 2 ಕಪ್, ಕೇಸರಿ - 6 ದಳ, ಅಡುಗೆ ಸೋಡಾ - ಕಾಲು ಚಮಚ, ಹಾಲು- 1 ಕಪ್, ಫುಡ್ ಕಲರ್ - 1 ಚಮಚ, ಏಲಕ್ಕಿ - 2 ಚಮಚ

ತಯಾರಿಸುವ ವಿಧಾನ: ಒಂದು ಕಪ್ ಕಡಲೆಹಿಟ್ಟಿಗೆ 3 ಚಮಚ ಹಾಲು, ನೀರು, ಅಡುಗೆ ಸೋಡಾ, ಫುಡ್ ಕಲರ್ ಹಾಕಿ ಚೆನ್ನಾಗಿ ಕಲೆಸಿ. ಅದರಲ್ಲಿ ಸಣ್ಣ ಸಣ್ಣ ಕಾಳು ತಯಾರಿಸಿ ಎಣ್ಣೆಯಲ್ಲಿ ಕರಿಯಿರಿ. ಸಕ್ಕರೆ ಪಾಕ ತಯಾರಿಸಿಕೊಂಡು ಅದಕ್ಕೆ ಮೊದಲೇ ತಯಾರಿಸಿಕೊಂಡ ಬೂಂದಿ ಕಾಳುಗಳನ್ನು ಸೇರಿಸಬೇಕು. ಈ ಮಿಶ್ರಣವನ್ನು ಚೆನ್ನಾಗಿ ಕಲೆಸಿ ಉಂಡೆ ಮಾಡಬೇಕು. ಈ ನಿಮ್ಮ ಮುಂದೆ ಸಿಹಿಯಾದ ಮೋತಿಚೂರ್ ಲಡ್ಡು ಸವಿಯಲು ಸಿದ್ಧ.



ಪನೀರ್ ಬಿರಿಯಾನಿ

ಬೇಕಾಗುವ ಸಾಮಗ್ರಿಗಳು: ಪನೀರ್ – ಅರ್ಧ ಕೆ.ಜಿ., ಬಾಸುಮತಿ ಅಕ್ಕಿ – 2 ಕಪ್, ತುಪ್ಪ - 5 ಚಮಚ, ಜೀರಿಗೆ – 1 ಚಮಚ, ಎಣ್ಣೆ – 2 ಚಮಚ, ಈರುಳ್ಳಿ – 3 (ಹೆಚ್ಚಿಕೊಂಡಿದ್ದು), ಶುಂಠಿ-ಬೆಳ್ಳುಳ್ಳಿ ಪೇಸ್ಟ್ – 2 ಚಮಚ, ಚಕ್ಕೆ - 1 ತುಂಡು, ಏಲಕ್ಕಿ – 2, ಲವಂಗ – 4, ಪಲಾವ್ ಎಲೆ – 1, ಹಸಿಮೆಣಸು – 5, ಕ್ಯಾರೆಟ್ – ಸ್ವಲ್ಪ, ಕೊತ್ತಂಬರಿ ಸೊಪ್ಪು – 2 ಚಮಚ, ಪುದಿನ ಸೊಪ್ಪು – 3 ಚಮಚ, ನೀರು – 4 ಕಪ್ ರುಚಿಗೆ ತಕ್ಕಷ್ಟು ಉಪ್ಪು

ತಯಾರಿಸುವ ವಿಧಾನ: ಅಕ್ಕಿಯನ್ನು ತೊಳೆದು 20 ನಿಮಿಷ ನೆನೆಸಿಡಿ. ನಂತರ ಪ್ಯಾನ್‌ಗೆ ತುಪ್ಪ, ಎಣ್ಣೆ ಹಾಕಿ ಬಿಸಿ ಮಾಡಿ. ಇದಕ್ಕೆ ಪನೀರ್ ತುಂಡು ಮಾಡಿ ಹಾಕಿ ಕೆಂಪಗಾಗುವಂತೆ ಹುರಿಯಿರಿ. ಅದನ್ನು ಪಾತ್ರೆಯೊಂದರಲ್ಲಿ ತೆಗೆದು ಇರಿಸಿಕೊಳ್ಳಿ. ಅದೇ ಪ್ಯಾನ್‌ಗೆ ಚಕ್ಕೆ, ಲವಂಗ, ಏಲಕ್ಕಿ, ಪಲಾವ್ ಎಲೆ ಹಾಕಿ ಹುರಿದುಕೊಳ್ಳಿ. ನಂತರ ಈರುಳ್ಳಿ ಸೇರಿಸಿ ಕೆಂಪಗಾಗುವವರೆಗೆ ಹುರಿಯಿರಿ. ಇದಕ್ಕೆ ಕತ್ತರಿಸಿದ ಹಸಿಮೆಣಸು, ಕ್ಯಾರೆಟ್, ಶುಂಠಿ ಬೆಳ್ಳುಳ್ಳಿ ಪೇಸ್ಟ್ ಹಾಕಿ ಹುರಿಯಿರಿ. ಅಗತ್ಯವಿರುವಷ್ಟು ನೀರು ಸೇರಿಸಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಕುದಿಸಿ. ಬಳಿಕ ಅಕ್ಕಿ ಸೇರಿಸಿ, ಚೆನ್ನಾಗಿ ಬೇಯಿಸಿ. ಅದಕ್ಕೆ ಹುರಿದ ಪನೀರ್, ಚಿಕ್ಕದಾಗಿ ಕತ್ತರಿಸಿದ ಕೊತ್ತಂಬರಿಸೊಪ್ಪು, ಪುದಿನ ಸೊಪ್ಪು ಹಾಕಿ ಮುಚ್ಚಳ ಮುಚ್ಚಿ ಸಣ್ಣ ಉರಿಯಲ್ಲಿ 10 ನಿಮಿಷ ಬೇಯಿಸಿಕೊಳ್ಳಿ.



ಬಾದಾಮ್ ಪುರಿ

ಬೇಕಾಗುವ ಸಾಮಗ್ರಿಗಳು: ಮೈದಾಹಿಟ್ಟು-1 ಕಪ್, ರವೆ- 1/2 ಕಪ್, ಅಕ್ಕಿಹಿಟ್ಟು-2 ಚಮಚ, ತುಪ್ಪ- 1/2 ಕಪ್, ಸಕ್ಕರೆ - 1 ಕಪ್, ಏಲಕ್ಕಿ ಪುಡಿ- ಅರ್ಧ ಚಮಚ, ಕೇಸರಿ ಬಣ್ಣ - ಕಾಲು ಚಮಚ, ಜಾಯಿಕಾಯಿ ಪುಡಿ - ಕಾಲು ಚಮಚ.

ತಯಾರಿಸುವ ವಿಧಾನ: ಮೈದಾಹಿಟ್ಟು, ರವೆ ಮತ್ತು ಅಕ್ಕಿಹಿಟ್ಟನ್ನು ಮಿಶ್ರಣ ಮಾಡಿ. ಅದಕ್ಕೆ ಸ್ವಲ್ಪ ತುಪ್ಪ, ನೀರು ಸೇರಿಸಿ ಗಟ್ಟಿಯಾಗಿ ಪೂರಿಯ ಹದಕ್ಕೆ ಕಲೆಸಿ. ಇದನ್ನು ಅರ್ಧ ಗಂಟೆ ನೆನೆಸಿಡಿ. ಬಾಣಲೆಗೆ ಅರ್ಧ ಕಪ್ ನೀರು, ಸ್ವಲ್ಪ ಸಕ್ಕರೆ ಸೇರಿಸಿ ಕುದಿಸಿ. ಸಕ್ಕರೆ ಪಾಕ ಬರುತ್ತಿದ್ದಂತೆಯೇ ಕೇಸರಿ ಬಣ್ಣ, ಏಲಕ್ಕಿ ಪುಡಿ, ಜಾಯಿಕಾಯಿ ಪುಡಿ, ಸೇರಿಸಿ ಕಲೆಸಿ ಒಲೆಯಿಂದ ಕೆಳಗಿಳಿಸಿ. ಕಲೆಸಿಟ್ಟ ಹಿಟ್ಟಿನ ಮಿಶ್ರಣದಿಂದ ತೆಳುವಾದ ಪೂರಿ ಲಟ್ಟಿಸಿ ತ್ರಿಕೋನಾಕಾರ ಬರುವಂತೆ ಮಡಚಿ ಅಂಚುಗಳನ್ನು ಸಮನಾಗಿ ಒತ್ತಿ. ಅದನ್ನು ಎಣ್ಣೆಯಲ್ಲಿ ಕರಿಯಿರಿ. ಈ ಪೂರಿಗಳನ್ನು ಸಕ್ಕರೆ ಪಾಕದಲ್ಲಿ ಅದ್ದಿ. ನಂತರ ತಿನ್ನಲು ಕೊಡಿ.

ಸಿನಿಮಾ

‘ಆದಿಪುರುಷ್’ ಶೂಟಿಂಗ್ ಮುಗಿಸಿದ ಪ್ರಭಾಸ್

ಬಾಲಿವುಡ್‌ನ ಖ್ಯಾತ ನಿರ್ದೇಶಕ ಓಂ ರಾವತ್ ನಿರ್ದೇಶನದ ಬಹುನಿರೀಕ್ಷಿತ ಆದಿಪುರುಷ್ ಚಿತ್ರದ ಶೂಟಿಂಗ್ ಮುಕ್ತಾಯದ ಹಂತಕ್ಕೆ ತಲುಪಿದ್ದು, ನಟ ಪ್ರಭಾಸ್ ಭಾಗದ ಚಿತ್ರೀಕರಣ ಸಂಪೂರ್ಣವಾಗಿ ಮುಗಿದಿದೆ ಎಂದು ಚಿತ್ರತಂಡ ಹೇಳಿದೆ.

ಈ ಸಿನಿಮಾದ 100ನೇ ದಿನದ ಚಿತ್ರೀಕರಣ ಹಾಗೂ ಪ್ರಭಾಸ್ ಭಾಗದ ಶೂಟಿಂಗ್ ಮುಕ್ತಾಯವಾದ ಸಂದರ್ಭದಲ್ಲಿ ಚಿತ್ರತಂಡ ಕೇಕ್ ಕತ್ತರಿಸಿ ಸಂಭ್ರಮಾಚರಣೆ ಮಾಡಿತ್ತು. ಓಂ ರಾವತ್ ಅವರು ಪ್ರಭಾಸ್‌ಗೆ ಕೇಕ್ ತಿನ್ನಿಸಿದ್ದರು. ಈ ಫೋಟೊಗಳನ್ನು ಚಿತ್ರತಂಡ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದೆ.

ಸದ್ಯ ಪ್ರಭಾಸ್ ಮೂರು ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ಆದಿಪುರುಷ್ ಶೂಟಿಂಗ್ ಮುಕ್ತಾಯವಾಗಿರುವುದರಿಂದ ಸಲಾರ್, ಇನ್ನು ಹೆಸರಿಡದ ಎರಡು ಸಿನಿಮಾಗಳಲ್ಲಿ ತೊಡಗಿಸಿಕೊಳ್ಳಲಿದ್ದಾರೆ ಎನ್ನಲಾಗಿದೆ. ಈಗಾಗಲೇ ರಾಧೆ-ಶ್ಯಾಮಾ ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ.

ರಾಮಾಯಣ ಆಧಾರಿತ ಆದಿಪುರುಷ್ ಸಿನಿಮಾ ಬಹುಭಾಷೆಯಲ್ಲಿ ನಿರ್ಮಾಣವಾಗುತ್ತಿದ್ದು ಈ ಚಿತ್ರ 2022ರ ಆಗಸ್ಟ್ 11ಕ್ಕೆ ಬಿಡುಗಡೆಯಾಗಲಿದೆ ಎನ್ನಲಾಗಿದೆ.

ಆದಿಪುರುಷ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಟಿ ಸೀರೀಸ್ ಪ್ರೊಡಕ್ಷನ್ ಕಂಪನಿ ಈ ಚಿತ್ರವನ್ನು ಸುಮಾರು ₹500 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿದೆ. ಅಜಯ್ ದೇವಗನ್ ಅಭಿನಯದ ‘ತಾನಾಜಿ’ ಸಿನಿಮಾ ನಿರ್ದೇಶಿಸಿದ್ದ ಓಂ ರಾವುತ್ ‘ಆದಿಪುರುಷ್’ ನಿರ್ದೇಶನ ಮಾಡುತ್ತಿದ್ದಾರೆ. ❖



ಕನ್ನಡಕದ ಗಾಜು ಹುಷಾರು...!

ಸುಕೃತ ಎಸ್.

‘ಕನ್ನಡಕ ಎಲ್ಲೋ ಇಟ್ಟು ಬಿಟ್ಟಿದ್ದೇನೆ, ಎಲ್ಲಿ ಇಟ್ಟೆ ಅಂತ ನೆನಪೇ ಆಗ್ತಾ ಇಲ್ಲ’ ಎಂದು ಅಜ್ಜ-ಅಜ್ಜಿ, ಅಪ್ಪ-ಅಮ್ಮ ಎಷ್ಟೋ ಬಾರಿ ನಾವು ಕೂಡ ಕನ್ನಡಕವನ್ನು ಎಲ್ಲೋ ಇಟ್ಟು ಈ ರೀತಿ ಗೊಣಗುವುದುಂಟು. ಕನ್ನಡಕ ಇಡಲೆಂದೇ ಇರುವ ಬಾಕ್ಸ್‌ಗಳನ್ನು ಹಲವು ಬಾರಿ ಕಳೆದುಕೊಂಡಿರುತ್ತೇವೆ ಅಥವಾ ಅದು ಎಲ್ಲೋ ಮೂಲೆಯಲ್ಲಿ ಇರುತ್ತದೆ.

ನಮ್ಮ ದೃಷ್ಟಿಗೆ ಪೂರಕವಾಗಿ ಕೆಲಸ ಮಾಡುವ ಕನ್ನಡಕದ ಕುರಿತ ನಿರ್ಲಕ್ಷ್ಯಕ್ಕೆ ಇಂಥ ಹಲವು ಉದಾಹರಣೆಗಳು ಸಿಗುತ್ತವೆ. ಇದೇ ಕಾರಣಕ್ಕೆ ಕನ್ನಡಕ ಗಾಜುಗಳಲ್ಲಿ ಅಲ್ಲಲ್ಲಿ ಸ್ಕ್ರಾಚ್‌ಗಳಾಗಿರುತ್ತವೆ. ಇದರಿಂದ ಬಳಸಲು ಸಾಧ್ಯವಾಗದೇ ಕೆಲವು ತಿಂಗಳುಗಳಲ್ಲೇ ಹೊಸತು ಖರೀದಿ ಮಾಡುವ ಸಂದರ್ಭ ಬರುತ್ತದೆ.

ಒಂದುವೇಳೆ ಕೆಲಸ ಒತ್ತಡದಲ್ಲಿ ಗಾಜುಗಳ ಮೇಲೆ ಸ್ಕ್ರಾಚ್‌ಗಳಾದಾಗ ಮನೆಯಲ್ಲಿಯೇ ಕೆಲವು ಉಪಾಯಗಳನ್ನು ಮಾಡಿಕೊಂಡು, ಸ್ಕ್ರಾಚ್ ಅನ್ನು ಸರಿ ಮಾಡಿಕೊಳ್ಳಬಹುದು. ಜೊತೆಗೆ, ಸ್ಕ್ರಾಚ್ ಆಗದಂತೆ ಹೇಗೆ ಮುತುವರ್ಜಿ ವಹಿಸಿಕೊಳ್ಳಬಹುದೂ ಎನ್ನುವುದನ್ನು ಇಲ್ಲಿ ನೋಡೋಣ.

ಸ್ಕ್ರಾಚ್ ಆದಾಗ ಏನು ಮಾಡಬೇಕು?

ದೊಡ್ಡ ದೊಡ್ಡ ಸ್ಕ್ರಾಚ್ ಆದಾಗ ಈ ಉಪಾಯ ಕೆಲಸಕ್ಕೆ ಬರುವುದಿಲ್ಲ. ನಿತ್ಯದ ಕೆಲಸದ ಮಧ್ಯೆ ಆದ ಸಣ್ಣ ಪುಟ್ಟ ಸ್ಕ್ರಾಚ್‌ಗಳನ್ನು ಈ ಉಪಾಯದ ಮೂಲಕ ಇಲ್ಲವಾಗಿಸಿಕೊಳ್ಳಬಹುದು.

- ಮೊದಲಿಗೆ ಬೆಚ್ಚಗಿನ ನೀರಿನಿಂದ ಗಾಜುಗಳನ್ನು ತೊಳೆದುಕೊಳ್ಳಬೇಕು. ನಂತರ ಮೈಕ್ರೋಫೈಬರ್ ಬಟ್ಟೆಯಿಂದ ನಿಧಾನವಾಗಿ ಒರೆಸಿಕೊಳ್ಳಬೇಕು. ಇದಾದ ಬಳಿಕ ಸೆಲ್ಯೂಷನ್‌ನಿಂದ ಮತ್ತೊಮ್ಮೆ ಗಾಜುಗಳನ್ನು ಒರೆಸಿಕೊಳ್ಳಬೇಕು.
- ಬೇಕಿಂಗ್ ಸೋಡಾಕ್ಕೆ ಸ್ವಲ್ಪ ನೀರು ಮಿಶ್ರಣ ಮಾಡಿ, ಗಟ್ಟಿ ಪೇಸ್ಟ್ ಮಾಡಿಕೊಳ್ಳಬೇಕು. ಮತ್ತೊಂದು ಮೈಕ್ರೋಫೈಬರ್ ಬಟ್ಟೆಯಿಂದ ಈ ಪೇಸ್ಟ್ ಅನ್ನು ಗಾಜಿಗೆ ಒರೆಸಿ ನಿಧಾನಕ್ಕೆ ಉಜ್ಜಬೇಕು.
- ಇದಾದ ಬಳಿಕ, ಮತ್ತೊಮ್ಮೆ ಬೆಚ್ಚಗಿನ ನೀರಿನಲ್ಲಿ ಗಾಜುಗಳನ್ನು ತೊಳೆಯಬೇಕು. ಹೊಸದೊಂದು ಮೈಕ್ರೋಫೈಬರ್ ಬಟ್ಟೆಯಿಂದ ನಿಧಾನವಾಗಿ ಗಾಜನ್ನು ಒರೆಸಿದರೆ, ಕನ್ನಡಕ ಗಾಜಿನ ಮೇಲೆ ಆಗಿರುವ ಸಣ್ಣಪುಟ್ಟ ಸ್ಕ್ರಾಚ್‌ಗಳನ್ನು ಇಲ್ಲವಾಗಿಸಿಕೊಳ್ಳಬಹುದು.



ಸ್ಕ್ರಾಚ್‌ಗಳನ್ನು ಹೇಗೆ ತೆಗೆಯುವುದು ಎಂದು ತಿಳಿದುಕೊಂಡ ಬಳಿಕ, ಸ್ಕ್ರಾಚ್ ಆಗದೇ ಇರುವ ಹಾಗೆ ತಡೆಯುವುದು ಹೇಗೆ? ಎನ್ನುವುದನ್ನು ಗಮನಿಸಬೇಕು. ಕನ್ನಡಕಗಳನ್ನು ಅದರ ಬಾಕ್ಸ್ (ಕೇಸ್)ನಲ್ಲೇ ಇಡುವುದು ಉತ್ತಮವಾದುದು. ಆದರೂ, ಇದನ್ನು ಬಿಟ್ಟು ಹಲವು ಮಾರ್ಗಗಳಲ್ಲಿ ಕನ್ನಡಕದ ಗಾಜುಗಳ ಮೇಲಾಗುವ ಸ್ಕ್ರಾಚ್‌ಗಳನ್ನು ತಡೆಯಬಹುದು. ಹೇಗೆ ಎಂದು ನೋಡೋಣ:

- ಕನ್ನಡಕವನ್ನು ತೆಗೆಯುವಾಗ ಕನ್ನಡಕದ ಹಿಡಿಯನ್ನು ಹಿಡಿದು ತೆಗೆಯುವುದು ಉತ್ತಮ. ಕನ್ನಡಕದ ಗಾಜಿನ ಪಟ್ಟಿಯನ್ನು ಹಿಡಿದು ತೆಗೆಯುವುದರಿಂದ ಬೀಳುವ ಪ್ರಮೇಯವೇ ಹೆಚ್ಚು. ಜೊತೆಗೆ, ಎರಡೂ ಕೈಗಳನ್ನು ಬಳಸಿ ಕನ್ನಡಕವನ್ನು ತೆಗೆಯುವುದು ಸೂಕ್ತ ಎನ್ನುತ್ತಾರೆ ನೇತ್ರ ತಜ್ಞರು.
- ಕನ್ನಡಕವನ್ನು ಹೇಗೆ ಇಡುತ್ತೇವೆ ಎನ್ನುವುದರಲ್ಲಿಯೂ ಉಪಾಯ ಇದೆ. ಗಾಜಿನ ಪಟ್ಟಿಯನ್ನು ಕೆಳಗೆ ಮುಖ ಮಾಡಿ ಇಡುವುದು ಒಳ್ಳೆಯದು. ಇದಕ್ಕಿಂತ ಉತ್ತಮವಾದುದು ಎಂದರೆ, ಕನ್ನಡಕ ಹಿಡಿಕೆಯನ್ನು ತೆರೆದಿಟ್ಟು, ಗಾಜಿನ ಪಟ್ಟಿಯನ್ನು ಅಡಿ ಮಾಡಿ ಇಡುವುದು ಸೂಕ್ತ. ಜೊತೆಗೆ, ಒಂದೊಮ್ಮೆ ಕೈಗೆ ತಾಕಿದರೂ ಕನ್ನಡಕ ಕೆಳಗೆ ಬೀಳುವುದಿಲ್ಲ ಎನ್ನುವಂಥ ಜಾಗದಲ್ಲಿ ಕನ್ನಡಕವನ್ನು ಇಡಬೇಕು.
- ಕನ್ನಡಕವನ್ನು ಸೀರೆಯ ಅಂಚು, ಶರ್ಟ್‌ನಿಂದ, ಕರ್ಚೀಫಿನಿಂದ ಒರೆಸುವುದು ಸಾಮಾನ್ಯ ರೂಢಿ. ಇದನ್ನು ಮಾಡಬಾರದು. ಮೈಕ್ರೋಫೈಬರ್ ಬಟ್ಟೆಯನ್ನು ಸದಾ ಇಟ್ಟುಕೊಂಡು, ಅದರಿಂದಲೇ ಕನ್ನಡಕವನ್ನು ಒರೆಸುವುದರಿಂದ ಸ್ಕ್ರಾಚ್ ಆಗುವುದನ್ನು ತಡೆಯಬಹುದು. ❖

ರಾತ್ರಿ ಮಲಗುವ ಮುನ್ನ ಈ ತಪ್ಪು ಮಾಡದಿರಿ...

ಮನಸ್ವಿ



ಸೌಂದರ್ಯ

ಸದಾ ಹೊಳೆಯುವ, ಕಾಂತಿಯಿಂದ ಕೂಡಿದ ತ್ವಚೆ ತಮ್ಮದಾಗಿರಬೇಕು ಎಂದು ಎಲ್ಲರೂ ಬಯಸುತ್ತಾರೆ. ಆದರೆ ಇತ್ತೀಚೆಗೆ ಜನರಲ್ಲಿ ಚರ್ಮದ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಒಣ-ಶುಷ್ಕ ಚರ್ಮ, ಕಾಂತಿ ರಹಿತ ಚರ್ಮ, ನೆರಿಗೆ ಮೂಡುವುದು, ಕಲೆ, ಮೊಡವೆ ಉಂಟಾಗುವುದು ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳುತ್ತಲೇ ಇರುತ್ತವೆ. ಚರ್ಮದ ಸೌಂದರ್ಯಕ್ಕೆ ನೂರಾರು ಮಾರ್ಗಗಳನ್ನು ಅನುಸರಿಸಿದರೂ ಕಾಂತಿ ಹೆಚ್ಚಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಅದಕ್ಕೆ ನಾವು ಅನುಸರಿಸುವ ಮಾರ್ಗಗಳೂ ಕಾರಣವಾಗಿರಬಹುದು. ಅದರಲ್ಲೂ ರಾತ್ರಿ ವೇಳೆ ನಾವು ಪಾಲಿಸುವ ಕೆಲವು ಕ್ರಮಗಳು ನಮ್ಮ ಚರ್ಮಕ್ಕೆ ಹಾನಿ ಉಂಟು ಮಾಡಬಹುದು.

ವಿಟಮಿನ್ ಸಿ ಸಿರಮ್ ಹಚ್ಚಿಕೊಳ್ಳುವುದು

ವಿಟಮಿನ್ ಸಿ ಸಿರಮ್ ಅನ್ನು ತ್ವಚೆಗೆ ಹಚ್ಚಿಕೊಳ್ಳುವ ಮೂಲಕ ಅಂದವನ್ನ ಹೆಚ್ಚಿಸಿಕೊಳ್ಳಲು ಬಯಸುವವರು ಹಲವರು. ಆದರೆ ರಾತ್ರಿ ವೇಳೆ ವಿಟಮಿನ್ ಸಿ ಬಳಕೆ ತಪ್ಪು. ಹಗಲಿನ ವೇಳೆ ಸೂರ್ಯನ ಕಿರಣಗಳು ನೇರವಾಗಿ ಚರ್ಮಕ್ಕೆ ತಾಕುತ್ತಿರುತ್ತದೆ. ಅಲ್ಲದೇ ವಿಟಮಿನ್ ಸಿ ಸಿರಮ್‌ನಲ್ಲಿ ಆ್ಯಂಟಿಆಕ್ಸಿಡೆಂಟ್ ಅಂಶ ಅಧಿಕವಿದ್ದು ಇದನ್ನು ಹಗಲಿನ ವೇಳೆ ಹಚ್ಚಿಕೊಳ್ಳುವುದರಿಂದ ಚರ್ಮವನ್ನು ಬಿಸಿಲಿನ ಶಾಖದಿಂದ ರಕ್ಷಿಸಬಹುದಲ್ಲದೇ ರ‍್ಯಾಡಿಕಲ್ಸ್‌ಗಳನ್ನು ಸ್ವಚ್ಛಗೊಳಿಸುತ್ತವೆ.

ಮುಖ ತೊಳೆಯದೇ ಇರುವುದು

ಹಗಲಿನ ವೇಳೆ ದೂಳು, ಎಣ್ಣೆಯಂಶ, ಮೇಕಪ್ ಹಾಗೂ ಮಾಲಿನ್ಯಕಾರಕ ಅಂಶಗಳು ಮುಖದ ತ್ವಚೆಯ ಮೇಲೆ ಹರಡಿಕೊಂಡಿರುತ್ತವೆ. ಆ ಕಾರಣಕ್ಕೆ ರಾತ್ರಿ ಮುಖ ತೊಳೆಯದೇ ಮಲಗಬಾರದು. ಮುಖ ತೊಳೆಯದೇ ಮಲಗುವುದರಿಂದ ಚರ್ಮದಲ್ಲಿ ಕಿರಿಕಿರಿ, ಕಜ್ಜಿ, ತುರಿಕೆ, ಫ್ರಿ ರ‍್ಯಾಡಿಕಲ್‌ಗಳಿಗೆ ಹಾನಿಯಾಗುವುದು ಮುಂತಾದ ಸಮಸ್ಯೆಗಳು ಉಂಟಾಗುತ್ತವೆ. ಇದರಿಂದ ಬೇಗನೆ ವಯಸ್ಸಾದಂತೆ ಕಾಣುವುದು, ಕಪ್ಪು ಕಲೆಗಳು, ಮುಖದ ಮೇಲೆ ಗೆರೆ, ನೆರಿಗೆ ಮೂಡುವುದು ಮುಂತಾದ ಸಮಸ್ಯೆಗಳು ಕಾಣಿಸಬಹುದು. ಮುಖ ತೊಳೆಯದೇ ಮಲಗುವುದರಿಂದ ಮೊಡವೆಗಳು ಕಾಣಿಸಿಕೊಳ್ಳಬಹುದು. ಅಲ್ಲದೇ ಮೇಕಪ್ ತೆಗೆಯದೇ ಮಲಗುವುದರಿಂದ ಕಣ್ಣಿಗೂ ಹಾನಿಯಾಗುವ ಸಾಧ್ಯತೆ ಹೆಚ್ಚು. ಕಣ್ಣಿನ ಅಲರ್ಜಿ, ತುರಿಕೆಯಂತಹ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆಯೂ ಹೆಚ್ಚು.

ರಾತ್ರಿ ವೇಳೆ 30 ಸೆಕೆಂಡುಗಳ ಕಾಲ ಬಿಸಿನೀರಿನಿಂದ ಮುಖ ತೊಳೆದುಕೊಳ್ಳಬೇಕು. ಮುಖ ತೊಳೆಯುವಾಗ ಸೌಮ್ಯವಾದ ಕ್ಲೆನ್ಸರ್‌ನಿಂದ ತೊಳೆಯಬೇಕು. ಪರಿಮಳ ರಹಿತ ಕ್ಲೆನ್ಸರ್ ಬಳಕೆ ಉತ್ತಮ. ಇದರಿಂದ ತುರಿಕೆ ಹಾಗೂ ಚರ್ಮ ಒಣಗುವುದನ್ನು ತಪ್ಪಿಸಬಹುದು.



ಮಾಯಿಶ್ಚರೈಸರ್ ಆಯ್ಕೆಯ ಮುನ್ನ

ಚರ್ಮ ತೇವಾಂಶರಹಿತವಾಗಿದ್ದು ಚರ್ಮದ ಸುತ್ತಲಿನ ಭಾಗವು ಒಣಗಿ ಬಿಸಿ ಹಿಡಿದಂತಿದ್ದರೆ ಚರ್ಮದಲ್ಲಿ ಎಣ್ಣೆಯಂಶ ಹೆಚ್ಚು ಉತ್ಪತ್ತಿಯಾಗಿ ಬೇರೆ ಬೇರೆ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಚರ್ಮದ ಡೀಹೈಡ್ರೇರಷನ್‌ನಿಂದ ಚರ್ಮ ಕೆಂಪಾಗುವುದು, ಸೂಕ್ಷ್ಮತೆಯನ್ನು ಕಳೆದುಕೊಳ್ಳುವುದು, ಕಿರಿಕಿರಿ ಮುಂತಾದ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಆ ಕಾರಣಕ್ಕೆ ಚರ್ಮವನ್ನು ತೇವಾಂಶಭರಿತವಾಗಿಸಲು ಮಾಯಿಶ್ಚರೈಸರ್ ಬಳಕೆ ಉತ್ತಮ. ಮಾಯಿಶ್ಚರೈಸರ್ ಬಳಕೆಯಿಂದ ಚರ್ಮಕ್ಕೆ ಹಲವು ಬಗೆಯ ಉಪಯೋಗಗಳಿವೆ. ಅದರಲ್ಲೂ ಚಳಿಗಾಲದಲ್ಲಿ ಚರ್ಮ ಕೆಂಪಾಗಿ ಸೀಳಿದಂತಿರುತ್ತದೆ. ಇದರ ನಿವಾರಣೆಗೆ ಮಾಯಿಶ್ಚರೈಸರ್ ಕ್ರೀಮ್‌ಗಳನ್ನು ಹಚ್ಚಿಕೊಳ್ಳಬೇಕು.

ಮುಖದ ಮೇಲೆ ಬಲ ಪ್ರಯೋಗ

ಮುಖ ತೊಳೆಯುವಾಗ ಕ್ರೀಮ್ ಬಳಸುವಾಗ ಮುಖವನ್ನು ಗಟ್ಟಿಯಾಗಿ ಉಜ್ಜಬಾರದು. ಮುಖ ಸ್ವಚ್ಛವಾಗುವವರೆಗೂ ಚೆನ್ನಾಗಿ ಎರಡೆರಡು ಬಾರಿ ನಿಧಾನಕ್ಕೆ ತೊಳೆಯಿರಿ. ಚರ್ಮದ ಒಳಗೆ ನೈಸರ್ಗಿಕ ಎಣ್ಣೆಯಂಶ ಇದ್ದು ಅವು ನೇರವಾಗಿ ವಾತಾವರಣದಲ್ಲಿರವ ಮಾಲಿನ್ಯಕಾರಕ ಅಂಶಗಳು ಚರ್ಮದ ಒಳ ಭಾಗಕ್ಕೆ ತಾಕದಂತೆ ತಡೆಯಬಹುದು.


ಅಸಮರ್ಪಕ ನಿದ್ದೆ

ರಾತ್ರಿ ವೇಳೆ ಸರಿಯಾಗಿ ನಿದ್ದೆ ಮಾಡದೇ ಇರುವುದು ಚರ್ಮದ ಮೇಲೆ ನೇರವಾಗಿ ಪರಿಣಾಮ ಬೀರದೇ ಇದ್ದರೂ ಅದರ ಪರಿಣಾಮ ಚರ್ಮಕ್ಕೆ ಆಗುವುದು ಖಂಡಿತ. ತಡ ರಾತ್ರಿವರೆಗೆ ಟಿವಿ ಅಥವಾ ಮೊಬೈಲ್ ನೋಡುತ್ತಾ ಮಲಗುವುದರಿಂದ ಚರ್ಮಕ್ಕೆ ಹೆಚ್ಚು ಹಾನಿ ಉಂಟಾಗುತ್ತದೆ. ಅಲ್ಲದೇ ಇದರಿಂದ ನಿದ್ದೆಗೂ ತೊಂದರೆ ಉಂಟಾಗುತ್ತದೆ. ಅಧ್ಯಯನವೊಂದರ ಪ್ರಕಾರ ನಿದ್ದೆಯ ಕೊರತೆಯಿಂದ ಬೇಗನೆ ವಯಸ್ಸಾದಂತೆ ಕಾಣುವುದು, ಮುಖದ ಚರ್ಮದಲ್ಲಿ ನೆರಿಗೆ ಮೂಡುವುದು, ಚರ್ಮ ಕಳೆಗುಂದುವುದು ಮುಂತಾದ ಸಮಸ್ಯೆಗಳು ಉಂಟಾಗುತ್ತವೆ. ಆ ಕಾರಣಕ್ಕೆ ಚರ್ಮದ ಆರೋಗ್ಯಕ್ಕೆ ದಿನದಲ್ಲಿ 8 ಗಂಟೆಗಳ ನಿದ್ದೆ ಅವಶ್ಯ. ಮಲಗಿರುವಾಗ ಚರ್ಮದಲ್ಲಿ ರಕ್ತಸಂಚಲನ ಹೆಚ್ಚುತ್ತದೆ. ಇದು ಕೊಲಾಜನ್ ಮರುಉತ್ಪತ್ತಿಗೆ ಸಹಾಯ ಮಾಡುತ್ತದೆ, ಅಲ್ಲದೇ ವಾತಾವರಣದ ಕಲುಷಿತದಿಂದ ಚರ್ಮಕ್ಕೆ ಉಂಟಾದ ಹಾನಿಯನ್ನೂ ತಪ್ಪಿಸುತ್ತದೆ. ❖

ಸಂಗೀತ ಕಛೇರಿ

‘ಮಾಸ್ಟರ್ಸ್ ಆಫ್ ಕರ್ನಾಟಕ’ ಎನ್ನುವ ಡಿಜಿಟಲ್ ಸಂಗೀತ ಕಛೇರಿಗಳ ಸರಣಿಯನ್ನು ಧ್ರುವ ಆರ್ಟ್ಸ್, ಯುಕೆ ಮತ್ತು ಪ್ರತಿಷ್ಠಿತ ಲಂಡನ್ ಇಂಟರ್‌ನ್ಯಾಷನಲ್ ಆರ್ಟ್ಸ್ ಫೆಸ್ಟಿವಲ್‌ನ ಕ್ಯುರೇಟರ್ ಆಯೋಜಿಸುತ್ತಿದೆ. ಈ ಸರಣಿಯನ್ನು ಖ್ಯಾತ ವಯೋಲಿನ್ ವಾದಕಿ ಡಾ.ಜೋತ್ಸ್ನಾ ಶ್ರೀಕಾಂತ್ ಸಂಯೋಜಿಸುತ್ತಿದ್ದಾರೆ.

ಪ್ರತೀ ತಿಂಗಳಿಗೊಮ್ಮೆ ಕಛೇರಿಗಳು ಜರುಗಲಿವೆ. ಕಛೇರಿಗಳ ವಿಡಿಯೊಗಳನ್ನು ವೀಕ್ಷಿಸಲು ಟಿಕೆಟ್ ಖರೀದಿಸಬೇಕು. ಟಿಕೆಟ್‌ಗಳು www.tikkl.com/dhruvarts ಇಲ್ಲಿ ಲಭ್ಯ ಇವೆ.



ಎಂ.ಎಸ್. ಶೀಲಾ



ಡಾ.ಜೋತ್ಸ್ನಾ ಶ್ರೀಕಾಂತ್

2021ರ ನವೆಂಬರ್‌ನಲ್ಲಿ ಎಸ್. ಶಂಕರ್ ಹಾಗೂ ಎಂ.ಎಸ್.ಶೀಲಾ ಅವರು ಕಛೇರಿಗಳು ಇವೆ. ಡಿಸೆಂಬರ್‌ನಲ್ಲಿ ಸುಮಾ ಸುಧೀಂದ್ರ, 2022ರ ಜನವರಿಯಲ್ಲಿ ನಾಗಮಣಿ ಶ್ರೀನಾಥ್, ಫೆಬ್ರುವರಿಯಲ್ಲಿ ಮೈಸೂರು ಸಹೋದರರು, ಮಾರ್ಚ್‌ನಲ್ಲಿ ಡಾ.ಟಿ. ಎಸ್.ಸತ್ಯವತಿ, ಏಪ್ರಿಲ್‌ನಲ್ಲಿ ರುದ್ರಪಟ್ಟಣಂ ಸಹೋದರರು ಮತ್ತು ಮೇ ನಲ್ಲಿ ಆರ್. ಕೆ.ಪದ್ಮನಾಭ ಅವರ ಕಛೇರಿಗಳು ನಡೆಯಲಿವೆ. ❖




ಮೈಸೂರು ಸಹೋದರರು

ರಂಗ ಪ್ರವೇಶ

ಕೃಶಾಲಾ ನೃತ್ಯ ಥಿಯೇಟರ್‌ನ ಖ್ಯಾತ ಕಥಕ್ ನೃತ್ಯ ಕಲಾವಿದೆ ಸಿಮ್ರಾನ್ ಗೋಧ್ವಾನಿ ಅವರ ಶಿಷ್ಯೆ ಮಾನ್ಸಿ ಮೆನನ್ ಅವರ ಕಥಕ್ ರಂಗಪ್ರವೇಶವು ನವೆಂಬರ್ 7, ಭಾನುವಾರ ಕೋರಮಮಂಗಲದ 6ನೇ ಬ್ಲಾಕ್‌ನಲ್ಲಿರುವ ಕೋರಮಂಗಲ ಕ್ಲಬ್‌ನಲ್ಲಿ ನಡೆಯಲಿದೆ.

ದಿನ: 7ನೇ ನವೆಂಬರ್ (ಭಾನುವಾರ)
ಸಮಯ: ಸಂಜೆ 5.30ರಿಂದ
ಪ್ರವೇಶ: ಉಚಿತ



ಕಷ್ಟಗಳ ಸರಣಿಗೆ ಯಶಸ್ಸಿನ ‘ಪಂಚ್’



ಆಕಾಶ್ ಕುಮಾರ್ (ಎಡ) ಹಾಗೂ ವೆನಿಜುವೆಲಾದ ಯೋಲ್ ಫಿನೊಲ್ ರಿವಾಸ್ ನಡುವಣ ಸೆಣಸಾಟ– ಪಿಟಿಐ ಚಿತ್ರ

ಬಸವರಾಜ ದಳವಾಯಿ

ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುತ್ತಿರುವ ವೇಳೆಯೇ ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿದ್ದ ತಾಯಿಯ ಮರಣ... ದಶಕದ ಹಿಂದೆಯೇ ಕೊನೆಯುಸಿರೆಳೆದಿರುವ ತಂದೆ... ಕೊಲೆ ಪ್ರಕರಣದಲ್ಲಿ ಸಿಲುಕಿ ಜೈಲುಪಾಲಾಗಿರುವ ಸಹೋದರ...

ಇಂತಹ ಕಷ್ಟಗಳ ಸರಮಾಲೆಗಳಿಂದ ಜರ್ಜರಿತನಾಗಿದ್ದ ಯುವ ಬಾಕ್ಸಿಂಗ್ ಪಟು ಹರಿಯಾಣದ ಆಕಾಶ್ ಕುಮಾರ್ ಅವುಗಳಿಂದ ವಿಚಲಿತರಾಗಲಿಲ್ಲ. ಗುರಿಯೆಡೆಗೆ ಸಾಗುವ ಛಲ ಕಳೆದುಕೊಳ್ಳಲಿಲ್ಲ. ಸದ್ಯ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪುವ ಮೂಲಕ 21ರ ಹರೆಯದ ಈ ಹುಡುಗ ಯಶಸ್ಸಿನ ಮೆಟ್ಟಿಲೇರಿದ್ದರು.

ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ನಡೆಯುತ್ತಿರುವ ವಿಶ್ವ ಪುರುಷರ ಚಾಂಪಿಯನ್‌ಷಿಪ್‌ನಲ್ಲಿ ಆಕಾಶ್, ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 2016ರ ರಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ, ವೆನಿಜುವೆಲಾದ ಯೋಲ್ ಫಿನೊಲ್ ರಿವಾಸ್‌ಗೆ ಸೋಲಿನ ಪಂಚ್ ನೀಡಿದ್ದರು. ಆತ್ಮವಿಶ್ವಾಸದ ಗಣಿಯಾಗಿರುವ ಆಕಾಶ್, ಬೌಟ್‌ನ ಮೂರೂ ಸುತ್ತುಗಳಲ್ಲಿ ನೀಡಿದ ಪಂಚ್‌ಗಳಿಗೆ ರಿವಾಸ್ ಕಂಗೆಟ್ಟಿದ್ದರು.

ಆಕಾಶ್, ನಾಲ್ಕರ ಘಟ್ಟ ತಲುಪುವ ಮೂಲಕ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪದಕ ಜಯಿಸಲಿರುವ ದೇಶದ ಏಳನೇ ಬಾಕ್ಸಿಂಗ್ ಪಟು ಎಂಬ ಶ್ರೇಯ ಗಳಿಸಿಕೊಂಡಿದ್ದರು. ವಿಜೇಂದರ್ ಸಿಂಗ್ (2019, ಕಂಚು), ವಿಕಾಶ್ ಕ್ರಿಶನ್ (ಕಂಚು, 2011), ಶಿವ ಥಾಪಾ (ಕಂಚು, 2015), ಗೌರವ್ ಬಿಧುರಿ (ಕಂಚು, 2017), ಅಮಿತ್ ಪಂಘಲ್ (ಬೆಳ್ಳಿ, 2019) ಮತ್ತು ಮನೀಷ್ ಕೌಶಿಕ್ (ಕಂಚು, 2019) ಈ ಹಿಂದಿನ ಆವೃತ್ತಿಗಳಲ್ಲಿ ಪದಕಗಳನ್ನು ಮುಡಿಗೇರಿಸಿಕೊಂಡವರು.

ಕುಸ್ತಿಪಟುವಾಗಿದ್ದ ತಂದೆ, 2008ರಲ್ಲಿ ಆಕಾಶ್ ಅವರನ್ನು ಬಾಕ್ಸಿಂಗ್ ರಿಂಗ್‌ಗೆ ಕರೆತಂದರು. ತಂದೆಯ ನಿಧನದ ಬಳಿಕ ಅವರಿಗೆ ಚಿಕ್ಕಪ್ಪನ ಆಶ್ರಯ ಸಿಕ್ಕಿತು. ಹರಿಯಾಣದ ಭಿವಾನಿಯವರಾದ ಆಕಾಶ್, ತಮ್ಮದೇ ಜಿಲ್ಲೆಯ ವಿಜೇಂದರ್ ಸಿಂಗ್ 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದಿದ್ದನ್ನು ಕಣ್ತುಂಬಿಕೊಂಡು ಅವರಿಂದ ಪ್ರೇರಣೆ ಪಡೆದವರು.

ಪುಣೆಯಲ್ಲಿರುವ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆದಿರುವ ಆಕಾಶ್, ಸೆಪ್ಟೆಂಬರ್‌ನಲ್ಲಿ ಕರ್ನಾಟಕದ ಬಳ್ಳಾರಿಯಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ್ದರು. ಇದೇ ಸಂದರ್ಭದಲ್ಲಿ ಅವರ ತಾಯಿ ಕೊನೆಯುಸಿರೆಳೆದಿದ್ದರು. ಆದರೆ ಸ್ಪರ್ಧೆ ಮುಗಿಸಿಕೊಂಡು ಬರುವವರೆಗೆ ಈ ವಿಷಯ ಆಕಾಶ್ ಕಿವಿಗೆ ಬೀಳದಂತೆ ಅವರ ಸಂಬಂಧಿಗಳು ನೋಡಿಕೊಂಡಿದ್ದರು.

ವಿಶ್ವ ಚಾಂಪಿಯನ್‌ಷಿಪ್‌ಗೆ ಆಯ್ಕೆ ಟ್ರಯಲ್ಸ್ ಕೂಡ ಆಗಿದ್ದ ರಾಷ್ಟ್ರೀಯ ಕೂಟದಲ್ಲಿ ಆಕಾಶ್ ಚಾಂಪಿಯನ್ ಆಗಿದ್ದರು. ಇದು ಅವರಿಗೆ ಚೊಚ್ಚಲ ವಿಶ್ವ ಚಾಂಪಿಯನ್‌ಷಿಪ್ ಆಗಿತ್ತು.



ಟಾಲಿವುಡ್

ಮಹೇಶ್ ಬಾಬು ‘ಸರ್ಕಾರು ವಾರಿ ಪಾಟ’ ಚಿತ್ರದ ಬಿಡುಗಡೆ ದಿನಾಂಕ ಘೋಷಣೆ

ಟಾಲಿವುಡ್ ಸೂಪರ್ ಸ್ಟಾರ್ ಮಹೇಶ್ ಬಾಬು ಅಭಿನಯದ ಬಹು ನಿರೀಕ್ಷಿತ ‘ಸರ್ಕಾರು ವಾರಿ ಪಾಟ’ ಚಿತ್ರದ ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ಚಿತ್ರತಂಡ ದೀಪಾವಳಿ ಪ್ರಯುಕ್ತ ಈ ವಿಷಯವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದೆ.

ಮುಂದಿನ ವರ್ಷ ಏಪ್ರಿಲ್ 1 ರಂದು ಚಿತ್ರಮಂದಿರಗಳಲ್ಲಿ ‘ಸರ್ಕಾರು ವಾರಿ ಪಾಟ’ ಬಿಡುಗಡೆಯಾಗಲಿದೆ.

ತಮ್ಮ 45ನೇ ವರ್ಷದ ಹುಟ್ಟುಹಬ್ಬದಂದು (ಆ.9) ಚಿತ್ರದ ಮೋಷನ್ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಅಭಿಮಾನಿಗಳನ್ನು ಖುಷಿಪಡಿಸಿದ್ದ ಮಹೇಶ್ ಬಾಬು ಕೆಲ ದಿನದ ನಂತರ ಸಿನಿಮಾದ ಫಸ್ಟ್‌ಲುಕ್ ಪೋಸ್ಟರ್ ಬಿಡುಗಡೆ ಮಾಡಿ ‘ಬರುವ ವರ್ಷ ಜೊತೆಯಾಗೋಣ’ ಎಂದು ಬರೆದುಕೊಂಡಿದ್ದರು. ಈ ಮೊದಲು ‘ಸರ್ಕಾರು ವಾರಿ ಪಾಟ’ 2022ರ ಜನವರಿ 13ರಂದು ತೆರೆಗೆ ಬರಲಿದೆ ಎನ್ನಲಾಗಿತ್ತು.

ಕೊರೊನಾ ಕಾರಣದಿಂದಾಗಿ ಚಿತ್ರೀಕರಣ ದೀರ್ಘಕಾಲದವರೆಗೆ ಮುಂದೂಡಲ್ಪಟ್ಟಿತ್ತು. ಈಗಾಗಲೇ ಎರಡೂ ಹಂತದ ಶೂಟಿಂಗ್ ಮುಕ್ತಾಯವಾಗಿದ್ದು ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆಯುತ್ತಿದೆ.

‘ಸರ್ಕಾರು ವಾರಿ ಪಾಟ’ ಸಿನಿಮಾಕ್ಕೆ ಗೀತಾ ಗೋವಿಂದಂ ಖ್ಯಾತಿಯ ಪರಶುರಾಮ್ ಅವರ ಚಿತ್ರಕಥೆ, ನಿರ್ದೇಶನವಿದೆ. ಈ ಸಿನಿಮಾವನ್ನು ಮೈತ್ರಿ ಮೂವಿ ಮೇಕರ್ಸ್‌ನವರು ನಿರ್ಮಾಣ ಮಾಡುತ್ತಿದ್ದಾರೆ. ಎಸ್‌ಎಸ್ ತಮನ್ ಸಂಗೀತ ನಿರ್ದೇಶನವಿದೆ. ಮಹೇಶ್ ಬಾಬುಗೆ ಜೋಡಿಯಾಗಿ ಮಹಾನಟಿ ಖ್ಯಾತಿಯ ಕೀರ್ತಿ ಸುರೇಶ್ ನಟಿಸುತ್ತಿದ್ದಾರೆ.

ತೆಲುಗು ನಟರಾದ ರಾಮ್ ಚರಣ್, ಅಲ್ಲು ಅರ್ಜುನ್ ಮನೆಯಲ್ಲಿ ದೀಪಾವಳಿ ಸಂಭ್ರಮ

ಟಾಲಿವುಡ್ ನಟರಾದ ರಾಮ್ ಚರಣ್ ಮತ್ತು ಅಲ್ಲು ಅರ್ಜುನ್ ಕುಟುಂಬಸ್ಥರೊಂದಿಗೆ ಸಂಭ್ರಮದಿಂದ ದೀಪಾವಳಿ ಹಬ್ಬವನ್ನು ಆಚರಿಸಿದ್ದಾರೆ.

ರಾಮ್ ಚರಣ್ ಮತ್ತು ಅಲ್ಲು ಅರ್ಜುನ್ ಸೋದರ ಸಂಬಂಧಿಗಳು. ಹಾಗಾಗಿ ಕುಟುಂಬದವರೆಲ್ಲರೂ ಸೇರಿ ದೀಪಾವಳಿ ಹಬ್ಬವನ್ನು ಒಟ್ಟಿಗೆ ಆಚರಿಸಿದ್ದಾರೆ. ಹಬ್ಬದ ಸಂಭ್ರಮದ ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿವೆ.



ರಾಮ್ ಚರಣ್ ಹಾಗೂ ಪತ್ನಿ ಉಪಸನಾ ಕೊನಿಡೆಲಾ, ಅಲ್ಲು ಅರ್ಜುನ್ ಹಾಗೂ ಅವರ ಪತ್ನಿ ಸ್ನೇಹಾ, ಇತ್ತೀಚೆಗೆ ಮದುವೆಯಾದ ನಿಹಾರಿಕಾ ಕೊನಿಡೆಲಾ ಪತಿ ಚೈತನ್ಯ ಸೇರಿದಂತೆ ಕುಟುಂಬದ ಹಲವರು ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅಲ್ಲು ಅರ್ಜುನ್ ಅಭಿನಯದ ಬಹು ನಿರೀಕ್ಷಿತ ಸಿನಿಮಾ ‘ಪುಷ್ಪ’ ಡಿ.17 ರಂದು ದೇಶದಾದ್ಯಂತ ಬಿಡುಗಡೆಯಾಗಲಿದೆ. ಆಗಸ್ಟ್ 13 ಕ್ಕೆ ಬಿಡುಗಡೆಯಾಗಬೇಕಿದ್ದ ಪುಷ್ಪ ಕೋವಿಡ್ ಕಾರಣದಿಂದ ಬಾರಿ ಮುಂದೂಡಲಾಗಿತ್ತು.

ಆಂಧ್ರಪ್ರದೇಶದ ರಕ್ತಚಂದನ ಚೋರರ ಕಥೆ ಹೊಂದಿರುವ ‘ಪುಷ್ಪ’ದಲ್ಲಿ ಅಲ್ಲು ಅರ್ಜುನ್ ಮುಖ್ಯಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಇವರಿಗೆ ಜೊತೆಯಾಗಿ ರಶ್ಮಿಕಾ ಮಂದಣ್ಣ ನಟಿಸಿದ್ದಾರೆ. ಅಲ್ಲದೇ ಡಾಲಿ ಧನಂಜಯ್, ಫಹಾದ್ ಫಾಸಿಲ್, ಜಗಪತಿ ಬಾಬು, ವೆನಿಲಾ ಕಿಶೋರ್ ತಾರಾಗಣದಲ್ಲಿದ್ದಾರೆ.

2022 ರ ಜನವರಿ 7 ರಂದು ಎಸ್.ಎಸ್. ರಾಜಮೌಳಿ ನಿರ್ದೇಶನದ ‘ಆರ್‌ಆರ್‌ಆರ್’ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರದಲ್ಲಿ ರಾಮ್ ಚರಣ್ ಅಲ್ಲೂರಿ ಸೀತಾರಾಮರಾಜು ಪಾತ್ರದಲ್ಲಿ, ಜೂನಿಯರ್ ಎನ್‌ಟಿಆರ್ ಕೋಮರಂ ಭೀಮ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಬಾಲಿವುಡ್ ನಟರಾದ ಅಜಯ್ ದೇವ್‌ಗನ್ ಮತ್ತು ಆಲಿಯಾ ಭಟ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.